**ಕರ್ನಾಟಕ ವಿಧಾನ ಪರಿಷತ್ತು**

**ಸೋಮವಾರ, 15ನೇ ಶುಕ್ರವಾರ**

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಮಧ್ಯಾಹ್ನ 11 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಎಚ್.ಶಂಕರಮೂರ್ತಿ) ಅವರ ಪೀಠದಲ್ಲಿ ಉಪಸ್ಥಿತರಿದ್ದರು.**

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ರಾತ್ರಿ ಅಧಿವೇಶನ ನಡೆಯುವ ಸಂದರ್ಭದಲ್ಲಿ ಒಂದು ಮಹತ್ವದ ಚರ್ಚೆ ಬಂದಂತಹ ಸಂರ್ಭದಲ್ಲಿ ನಾನು ಉದ್ವೇಗಕ್ಕೆ ಒಳಗಾಗಿ ಸದನದಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ಮತ್ತು ಸದನವನ್ನು ಬಹಿಷ್ಕರಿಸಿ ಹೊರನಡೆಯುವ ಸಂದರ್ಭದಲ್ಲಿ ಉದ್ವೇಗಕ್ಕೆ ಒಳಗಾಗಿ "ಸರ್ಕಾರಕ್ಕೆ ದಿಕ್ಕಾರ" ಎಂದು ಹೇಳುವ ಬದಲು "ಸದನಕ್ಕೆ ದಿಕ್ಕಾರ" ಎಂದು ಹೇಳಿ ಸದನದಿಂದ ಹೊರ ನೆಡೆದಿದ್ದೇನೆ. ಇದು ಸತ್ಯ. ಇದು ನಮ್ಮ ನಿಯಮಾವಳಿ ಸಂಪ್ರದಾಯದ ಪ್ರಕಾರ ತಪ್ಪು. ಅದಕ್ಕಾಗಿ ನಾನು ಈ ಸದನದಲ್ಲಿ ಸಭಾಪತಿಯವರಾದ ತಮಗೆ ಮತ್ತು ಗೌರವಾನ್ವಿತ ಎಲ್ಲಾ ಸದಸ್ಯರಲ್ಲೂ ಸಹ ಕ್ಷಮೆಯಾಚಿಸುತ್ತೇನೆ. ಇನ್ನು ಮುಂದೆ ಈ ರೀತಿ ತಪ್ಪುಗಳನ್ನು ತಿದ್ದುಕೊಳ್ಳುವಂತಹ ಪ್ರಯತ್ನವನ್ನು ನಾನು ಮಾಡುತ್ತೇನೆ.

**ಶ್ರೀ ವಿ. ಸೋಮಣ್ಣ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಮಾನ್ಯ ಹೊಟ್ಟಿಯವರಿಗೆ ನಿನ್ನೆ ದಿವಸ ಮಾನ್ಯ ಮಧುಸೂದನ್‌ರವರು ಒಂದು ಪ್ರಶ್ನೇಯನ್ನು ಪ್ರಸ್ತಾಪಿಸಿದಾಗ ಇದಕ್ಕೆ ಸಂಬಂಧಪಟ್ಟಂತಹ ಕಂದಾಯ ಸಚಿವರ ಹತ್ತಿರ ಅಥವಾ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಉತ್ತರವನ್ನು ಕೊಡಿಸುತ್ತೇನೆಂದು ಹೇಳಿದ್ದೆ. ಮಾನ್ಯ ಕಂದಾಯ ಸಚಿವರು ಕೆಳಮನೆಯಲ್ಲಿದ್ದಾರೆ. ಅವರು ಬಂದ ಕೊಡಲೆ ಉತ್ತರವನ್ನು ಕೊಡಿಸುತ್ತೇನೆ.

**ಸಭಾಪತಿಯವರು:-** ಇಂಗ್ಲಿಷ್‌ನಲ್ಲಿ ಒಂದು ಮಾತಿದೆ. **"All is well that ends well"** ಎಂದು. ಸದನದಲ್ಲಿ ಒಂದು ತಿಳಿಯಾದ ವಾತಾವರಣ ನಿರ್ಮಾಣ ಆಗುವುದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸಭಾ ನಾಯಕರು ಸಹಕಾರ ಕೊಟ್ಟಿದ್ದಾರೆ. ಅದೇ ರೀತಿ ಕೆಲವು ಹಿರಿಯ ಸದಸ್ಯರುಗಳು ಸಹಕಾರ ಕೊಟ್ಟಿದ್ದಾರೆ. ಗೌರವಾನ್ವಿತ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಈ ವಿಷಯವನ್ನು ಇಲ್ಲಿಗೆ ಮುಗಿಸಿಬಿಡೋಣ. ಸುಖಾಂತ್ಯವಾದರೆ ಎಲ್ಲರಿಗೂ ಒಳ್ಳೆಯದು.

ಸದನದಲ್ಲಿ ನಮ್ಮ ಕೆಲಸವನ್ನು ನಾವು ಮಾಡೋಣ ಸಂತೋಷವಾಗಿ, ಸಮಾಧಾನವಾಗಿ ಎಲ್ಲರು ಇರೋಣ ಎಂಬ ಮಾತನ್ನು ಹೇಳಬಯಸುತ್ತೇನೆ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ನನ್ನ ವರದಿ ಏನಾಯಿತು ಎಂಬುದರ ಬಗ್ಗೆ ತಿಳಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಅದನ್ನು ನಾನು ನೋಡಿ ಹೇಳುತ್ತೇನೆ. ಅದನ್ನು ನಾನೂ ನೋಡಿದ್ದೇನೆ. ನೀವು ಹೇಳುವುದು ಸರಿ ಇದೆ. It is a copy marked to you by the concerned Officer with a covering letter. Therefore it is your property. I will give it back to you.

**Sri G. MADHUSUDAN**: Thank you very much Sir.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಇವತ್ತು ಅಧಿವೇಶನದ ಕೊನೆಯ ದಿಸವಾಗಿದೆ. ಆದುದರಿಂದ ತಾವು ದಯಮಾಡಿ ಹೇಳಿಕೆಯನ್ನು ಮಾಡಿಸಿಬಿಡಿ.

**ಸಭಾಪತಿಯವರು:–** ಕೆಲವು ಪ್ರಕಟಣೆಗಳು ಇವೆ

**1) ಪ್ರಕಟಣೆ**

**ಮಾನ್ಯ ಸಭಾಪತಿಯವರು:–**

ವಿಧಾನ ಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳಿಗೆ ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡುವಳಿಕೆಯ ನಿಯಮ 121ರ ಮೇರೆಗೆ ವಿಧಾನ ಸಭೆಯು ದಿನಾಂಕ:14.02.2013 ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅನುಮೋದಿಸಿತೆಂದು ಸದನದ ಗಮನಕ್ಕೆ ತರಲಾಗಿದೆ.

01. ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ವಿಧೇಯಕ, 2013

02. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2013

03. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ಎರಡನೇ ತಿದ್ದುಪಡಿ) ವಿಧೇಯಕ, 2013

04. ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ ವಿಧೇಯಕ, 2013

**2) ಪ್ರಕಟಣೆ**

ಮಾನ್ಯ ಸಭಾಪತಿಯವರು:–

ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ:–

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ: 14/02/2013 ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರುತ್ತಾರೆ.

01. ಕರ್ನಾಟಕ ಧನವಿನಿಯೋಗ ವಿಧೇಯಕ, 2013

02. ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 2013

03. ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2013

04. ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2013

05. ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ವಿಧೇಯಕ, 2013

06. ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ, 2013

07. ವಿದ್ಯಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2013

08. ಮೈಸೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕ, 2013

09. ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2013

10. ಕರ್ನಾಟಕ ಕೆಲವು ಅಧಿನಿಯಮಗಳು ಮತ್ತು ಪ್ರಾದೇಶಿಕ ಕಾನೂನುಗಳನ್ನು ನಿರಸನಗೊಳಿಸುವ ವಿಧೇಯಕ, 2013

11. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ (ತಿದ್ದುಪಡಿ) ವಿಧೇಯಕ 2013

12. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2013

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ ನಿನ್ನೆ ದಿವಸ ಮಾನ್ಯ ಮಧುಸೂದನ್‌ರವರು ನಿಮ್ಮ ಬಳಿ ಒಂದು ವರದಿಯನ್ನು ಕೊಟ್ಟಿದ್ದರು ಅದು ಅವರದೇ ಎಂದು ನಮಗೆ ತಿಳಿಯಬೇಕಲ್ಲವೆ.

**ಸಭಾಪತಿಯವರು:–** ನಾನು ಹೇಳಿದ್ದು ನಿಮಗೆ ಕೇಳಿಸಲಿಲ್ಲವೇ ಅದರೊಳಗೆ ಒಂದು Covering letter ಇದೆ. That copy is marked to Sri. G.Madhusudan, MLC with a covering letter from the concerned Officer. ಆದುದರಿಂದ ಅದು ಅವರ ಫೈಲ್ ಆಗುತ್ತದೆ ಅದನ್ನು ಅವರಿಗೆ ವಾಪಸ್ಸು ಕೊಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ ನಾನು ನಿನ್ನೆ ದಿವಸ ಈ ವಿಷಯದ ಬಗ್ಗೆ ಒಂದು ಮಾತನ್ನು ಹೇಳಿದ್ದೆ. ಏನೆಂದರೆ, ಸರ್ಕಾರ ಅದನ್ನು ಅಧಿಕೃತವಾಗಿ ಪ್ರಕಟಣೆ ಮಾಡಿಲ್ಲ. ಆದುದರಿಂದ ಆ ರೀತಿ ಕೊಡುವುದಕ್ಕೆ ಬರುವುದಿಲ್ಲ ಎನ್ನುವಂತಹ ಮಾತನ್ನು ಹೇಳಿದ್ದೆ, ಅದನ್ನು ಎಲ್ಲರೂ ಒಪ್ಪಿದಿರಿ.

**ಸಭಾಪತಿಯವರು:–** ಅದರ ಬಗ್ಗೆ ಸರ್ಕಾರದಿಂದ ಹೇಳಿಕೊಳ್ಳುತ್ತಾರೆ. ಅವರು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ಈಗ ವಿಧೇಯಕಗಳು. ಶ್ರೀ ಸಿ.ಟಿ. ರವಿ, ಉನ್ನತ ಶಿಕ್ಷಣ ಸಚಿವರು ವೈದೇಹಿ ವಿಶ್ವವಿದ್ಯಾಲಯ ವಿಧೇಯಕ 2013ರ ಪ್ರಸ್ತಾನೆಯನ್ನು ಸೂಚಿಸುವುದು

## 2) ಶಾಸನ ರಚನೆ

## ವಿಧೇಯಕಗಳ ಮಂಡನೆ ಮತ್ತು ಪರ್ಯಾಲೋಚನೆ

## (ಅ) ವೈದೇಹಿ ವಿಶ್ವವಿದ್ಯಾಲಯ ವಿಧೇಯಕ, 2013

## ಮಂಡನೆಗೆ ಅನುಮತಿ ಕೋರಿಕೆ

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, 2013ರ ವೈದೇಹಿ ವಿಶ್ವವಿದ್ಯಾಲಯ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"2013ರ ವೈದೇಹಿ ವಿಶ್ವವಿದ್ಯಾಲಯ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, 2013ರ ವೈದೇಹಿ ವಿಶ್ವವಿದ್ಯಾಲಯ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:–** ವಿಧೇಯಕವನ್ನು ಮಂಡಿಸಲಾಯಿತು.

**ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗು ಅಂಗೀಕರಿಸುವುದು**

**ವೈದೇಹಿ ವಿಶ್ವವಿದ್ಯಾಲಯ ವಿಧೇಯಕ, 2013**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, 2013ರ ವೈದೇಹಿ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳ ಬಗ್ಗೆ ಸುಮಾರು 3 ಗಂಟೆ 15 ನಿಮಿಷಗಳ ಕಾಲ ಚರ್ಚೆ ಮಾಡಲಾಯಿತು. ಹಾಗಾಗಿ ಖಾಸಗಿ ವಿಶ್ವವಿದ್ಯಾಲಯಗಳ ರೂಪರೇಷಗಳನ್ನು ವಿವರಿಸುವುದಕ್ಕೆ ಹೋಗುವುದಿಲ್ಲ. ವೈದೇಹಿ ಖಾಸಗಿ ವಿಶ್ವವಿದ್ಯಾಲಯ 2001ರಿಂದ ಕರ್ನಾಟಕದಲ್ಲಿ Srinivasa Education Trust ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದು ಪೂರ್ವದಲ್ಲಿ ಆಂಧ್ರಪ್ರದೇಶದಲ್ಲಿ ಬೇರೆ ಬೇರೆ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದೆ. ಕರ್ನಾಟಕದಲ್ಲಿ 9 ವಿವಿಧ ಶಿಕ್ಷಣ ಸಂಸ್ಥೆಗಳನ್ನು ನೆಡೆಸುತ್ತದೆ. ಇವರ ಕೇಂದ್ರ ಸ್ಥಾನ ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿದೆ. Vydehi Hospital, Vydehi Institute of Medical

Sciences and Research Centre, Vydehi Dental College, Vedehi Nursing College, Vedehi Institute of Paramedical Sciences, Vedehi Institute of Bio-tech Sciences ಇತ್ಯಾದಿ 9 ವಿವಿಧ Institutions ನ್ನು ನಡೆಸುತ್ತಿದೆ. ಈ ಎಲ್ಲಾ ವಿದ್ಯಾಸಂಸ್ಥೆಗಳಲ್ಲಿ ಸುಮಾರು 2,500 ಜನ ವಿದ್ಯಾರ್ಥಿಗಳಿದ್ದಾರೆ. ಹೆಚ್ಚಿನವರು ಕರ್ನಾಟಕ ಮತ್ತು ದೇಶದ ವಿವಿಧ ರಾಜ್ಯಗಳ ವಿದ್ಯಾರ್ಥಿಗಳು ಇದ್ದಾರೆ ಎಂಬ ಮಾಹಿತಿಯನ್ನು Local Inspection Committee ಕೊಟ್ಟಿದೆ. 360 ಜನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಸದರಿ ಸಂಸ್ಥೆಯ ಅಧ್ಯಕ್ಷರು ಶ್ರೀ ಬಿ.ಕೆ.ಆದಿಕೇಶವಲು. ಪ್ರಸ್ತಾವಿಕ ಕ್ಯಾಂಪಸ್ ಮೊದಲೇ ತಿಳಿಸಿದಂತೆ ವೈಟ್‌ಫೀಲ್ಡ್‌ನಲ್ಲಿದೆ. ಇದರ ಕ್ಯಾಂಪಸ್ ಸುಮಾರು 65 ಎಕರೆ ವಿಸ್ತೀರ್ಣವುಳ್ಳಂತಹ ಜಾಗವನ್ನು ಹೊಂದಿದೆ. ನಾವು ಬಿಬಿಎಂಪಿ ವ್ಯಾಪ್ತಿಯೊಳಗೆ 25 ಎಕರೆ ಮತ್ತು ಹೊರಗಡೆ 40 ಎಕರೆ ಎಂದು ಹೇಳಿದ್ದೇವೆ. ಹಾಗಾಗಿ ಒಟ್ಟು 65 ಎಕರೆ ಜಾಗವನ್ನು ಹೊಂದಿದೆ. ಅವರ ಉದ್ದೇಶವಿರುವಂತಹ ಕೋರ್ಸ್‌ಗಳು B.A., B.Sc., B.Sc (Agriculture) ಮೊದಲಾದ ಪದವಿ ಕೋರ್ಸ್‌ಗಳ ಜೊತೆಗೆ Diploma Courses, M.B.A., B.B.A., B.B.M Courses, Engineering, Medical ಮತ್ತು Ph.D ಮೊದಲಾದ Research Courses ನ್ನು ಪ್ರಾರಂಭ ಮಾಡುವಂತಹ ಉದ್ದೇಶವನ್ನು ಈ ಸಂಸ್ಥೆ ಹೊಂದಿದೆ. ಆಂಧ್ರಪ್ರದೇಶದ ಚಿತ್ತೂರಿನಲ್ಲಿ L.K.G ಯಿಂದ Engineering College, Medical College ವರೆಗೂ ಒಟ್ಟು ಐದು ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದೆ. ಈ ಸಂಸ್ಥೆಯಲ್ಲಿ ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ಕೊಡುವಂತಹ ವ್ಯವಸ್ಥೆಯನ್ನು ಸಹ ಈ ಸಂಸ್ಥೆ ಮಾಡುತ್ತಿದೆ. ಎಲ್.ಕೆ.ಜಿ ಯಿಂದ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳ ವರೆಗೆ ನಡೆಸುತ್ತಿದೆ. ಈ ಸಂಸ್ಥೆಯಲ್ಲಿ ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡತಕ್ಕ ವ್ಯವಸ್ಥೆಯಿದೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ಖಾಸಗಿ ವಿಶ್ವವಿದ್ಯಾನಿಯಲಗಳ ಬಗ್ಗೆ ಮತ್ತು ಅದರ ರೂಪುರೇಷಗಳ ಬಗ್ಗೆ ನಾವು ಸುಧೀರ್ಘವಾಗಿ ಚರ್ಚೆಯನ್ನು ಮಾಡಿದ್ದೇವೆ. ಈ ಹಿಂದೆ ಸದನದಲ್ಲಿ ತಂದಂತಹ ಖಾಸಗಿ ವಿಶ್ವವಿದ್ಯಾನಿಲಯದ ವಿಧೇಯಕಗಳ ಬಗ್ಗೆ ಅದರ ಆಗುಹೋಗುಗಳ ಬಗ್ಗೆ ಬಹಳ ಮುಂಚಿತವಾಗಿಯೇ ನಮಗೆ ಬಿಲ್ ಪ್ರತಿ ನೀಡಿದ ಕಾರಣ ಅಧ್ಯಯನವನ್ನು ಮಾಡಿದ್ದೇವೆ. ಇವತ್ತು ಅಧಿವೇಶನ ಮುಗಿಯುವಂತಹ ಸಂದರ್ಭದಲ್ಲಿ ಕೊನೆಯ ದಿನದಂದು ನಮಗೆ ಬಿಲ್ ಬಗ್ಗೆ ಅಧ್ಯಯನ ನಡೆಸಲು ಸಮಯ ಇಲ್ಲದಿರುವಾಗ ವಿಧೇಯಕಗಳನ್ನು ತರುತ್ತಾ ಹೋದಲ್ಲಿ ಶಾಸನ ರಚನೆ, ಶಾಸಕರೆಂದರೆ ಏನು Legislators. What is the definition of Legislator? A Legislator has to legislate the enactment. ಶಾಸಕನಾಗಿ ಶಾಸನ ರಚನೆ ಮಾಡುವುದಕ್ಕಾಗಿ ಇಲ್ಲಿ ಬಂದಿದ್ದೇವೆ. ತಾವೇ ವಿಧೇಯಕಗಳನ್ನು ಮಂಡಿಸುವುದಕ್ಕೆ ಎರಡು ದಿವಸ ಮೊದಲಿಗೆ ಒದಗಿಸಲಾಗುದೆಂದು ಹೇಳಿದ್ದೀರಿ. ಇವತ್ತು ಕೊನೆಯ ದಿವಸ ವಿಧೇಯಕ ತಂದಿರುವುದಿಂದ ನಮಗೆ ಅದರ ಅಧ್ಯಯನ ಮಾಡಲು ಮತ್ತು ಅದರ ಮೇಲೆ ಪರಿಣಾಮಕಾರಿಯಾಗಿ ಚರ್ಚೆ ನಡೆಸಲು ಸಮಯಾವಕಾಶವಿಲ್ಲ. ಸರ್ಕಾರದ ಈ ಧೋರಣೆ ಸರಿಯಾದುದಲ್ಲ. ಕಳೆದ ಬಾರಿ ಬೆಳಗಾವಿ ಅಧಿವೇಶನದಲ್ಲಿ 13 ಇದೇ ರೀತಿ ಕೊನೆಯ ಗಳಿಗೆಯಲ್ಲಿ ತಂದು ಪಾಸ್ ಮಾಡಿಕೊಂಡು ಹೋಗಲಾಯಿತು. ಇಂದು ಸಹ ಬಹುತರವಾಗಿ ಸದನ ಮುಗಿಯತಕ್ಕ ಸಂದರ್ಭದಲ್ಲಿ ವಿಧೇಯಕಗಳನ್ನು ತಂದು ಅದನ್ನು ಪಾಸ್ ಮಾಡಿಕೊಂಡು ಹೋಗತಕ್ಕ ಪ್ರವೃತ್ತಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಭೂಷಣವಾಗುವಂತಹದ್ದಲ್ಲ. ನಾವಿಲ್ಲಿ ಏಕೆ ಬಂದಿದ್ದೇವೆ ಎಂದರೆ ರಾಜ್ಯದ ಸಮಸ್ಯೆಗಳನ್ನು ಚರ್ಚೆ ಮಾಡುವುದರ ಜೊತೆಗೆ ಈ ರಾಜ್ಯದ ಜನತೆಯ ಒಳತಿಗಾಗಿ, ಉನ್ನತಿಗಾಗಿ ಶ್ರೇಯೋಭಿವೃದ್ಧಿಗಾಗಿ ಅನೇಕ ಶಾಸನಗಳನ್ನು ರಚನೆ ಮಾಡುವ ವಿಚಾರದಲ್ಲಿ ಜನರು ನಮಗೆ ಜವಾಬ್ದಾರಿಯನ್ನು ಹೊರಿಸಿ ಜನರು ನಮ್ಮ ಆಯ್ಕೆ ಮಾಡಿ ಇಲ್ಲಿಗೆ ಕಳುಹಿಸಿದ್ದಾರೆ. ಆದರೆ ಇವತ್ತು ಈ ವಿಧೇಯಕಗಳ ಬಗ್ಗೆ ಚರ್ಚೆ ಮಾಡಲು

ಸಮಯವೇ ಇಲ್ಲ. ಶಾಸನ ರಚನೆಯ ವಿಚಾರದಲ್ಲಿ 2–3 ದಿವಸಗಳಿಗೆ ಮೊದಲೇ ಬಿಲ್ ಅನ್ನು ಅಧ್ಯನಕ್ಕಾಗಿ ಕೊಡುತ್ತೇವೆಂದು ಹೇಳಿ ಇಂದು ಏಕಾಏಕಿ ಬಿಲ್ ತಂದಿರುವುದನ್ನು ನಾನು ಒಪ್ಪುವುದಿಲ್ಲ. It is not good on the part of the Government. It is very bad. ಸದನ ಮುಗಿಯುವುದಕ್ಕೆ ಒಂದು 10 ನಿಮಿಷ ಮೊದಲಿಗೆ ಇನ್ನೂ 10 ಬಿಲ್ಲುಗಳನ್ನು ತಂದು ಸದನದಲ್ಲಿ ಪಾಸ್ ಮಾಡಿಕೊಂಡು ಹೋಗುವುದು ಎಷ್ಟರಮಟ್ಟಿಗೆ ಸರಿ? ಇದು ಸರ್ಕಾರಕ್ಕೆ ಭೂಷಣವೇ ನಾನು ಈ ಸದನಕ್ಕೆ ಬರುವ ಅವಶ್ಯಕತೆಯೇ ಇಲ್ಲ. ಎಲ್ಲವನ್ನೂ ಸರ್ಕಾರ ನಡೆಸುವವರೆ ಮಾಡಿಕೊಳ್ಳಲಿ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಗಳೇ, ಅಧಿವೇಶನ ಪ್ರಾರಂಭಗೊಂಡ ಮೊದಲ ದಿನಗಳಲ್ಲಿಯೇ ವಿಧೇಯಕಗಳನ್ನು ತಂದಲ್ಲಿ ಹೆಚ್ಚು ಚರ್ಚೆಯನ್ನು ಮಾಡಬಹುದು. ಮೊದಲ ದಿವಸಗಳಲ್ಲಿ ಬೇರೆ ಬೇರೆ ವಿಚಾರಗಳ ಬಗ್ಗೆ ಚರ್ಚೆಯನ್ನು ನಡೆಸುತ್ತೇವೆ.,

**ಶ್ರೀ ಎಸ್.ಆರ್. ಪಾಟೀಲ್:–** ಹಾಗೆ ಮಾಡಬೇಡಿ ಎಂದು ಯಾರು ಹೇಳಿದ್ದಾರೆ.

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೇ, ಖಾಸಗಿ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ವಿವರವಾಗಿ ಸದನದಲ್ಲಿ ಮಾಹಿತಿಯನ್ನು ಈಗಾಗಲೇ ನೀಡಿದ್ದೇನೆ. ಸದನ ಕೂಡ ಅದಕ್ಕೆ ಒಪ್ಪಿ, ಸರ್ವಾನುಮತದಿಂದ ಬಿಲ್ಲನ್ನು ಪಾಸ್ ಮಾಡಿಕೊಟ್ಟಿದೆ. ಯಾವುದೇ ನಿಯಮವನ್ನು ಉಲ್ಲಂಘನೆ ಮಾಡಿಲ್ಲ. ಅದೇ ನಿಯಮಗಳನ್ನು ಈ ವಿಧೇಯಕಕ್ಕೂ ಕೂಡ ಅಪ್ಲೈ ಮಾಡಿದ್ದೇವೆ. ನಾನು ಸದನಕ್ಕೆ 14 ರಾಜ್ಯಗಳಲ್ಲಿ ಯಾವ ರೀತಿ ಖಾಸಗಿ ವಿಶ್ವವಿದ್ಯಾನಿಲಯಗಳನ್ನು ಮಾಡಿದ್ದಾರೆ ಎನ್ನುವ ಪ್ರತಿಯನ್ನು ಕೊಡುತ್ತೇನೆ. ಅದರಲ್ಲಿ ಒಂದು ಅಂಶ ಅವರಿಗಿಂತ ಕಡಿಮೆ ಇದ್ದಲ್ಲಿ ನಾನು ಈ ವಿಧೇಯಕಗಳನ್ನು ಹಿಂದಕ್ಕೆ ಪಡೆಯುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ಈ ಹಿಂದೆ ತಂದಂತಹ ಖಾಸಗಿ ವಿಶ್ವವಿದ್ಯಾನಿಲಯಗಳ

ರೂಪುರೇಷೆಗಳನ್ನು ನಾವು ಒಪ್ಪಿದ್ದೇವೆ. ಆದರೆ ಬೇಕಾದ ಹಾಗೆ ಎಲ್ಲಾ ಖಾಸಗಿ ವಿಶ್ವವಿದ್ಯಾನಿಲಯಗಳ ಮಸೂದೆಗೂ ನಾವು ಒಪ್ಪಿಗೆಯನ್ನು ಕೊಡುತ್ತೇವೆ ಎಂದು ಇದರರ್ಥವಲ್ಲ. ಒಂದು ಖಾಸಗಿ ವಿಶ್ವವಿದ್ಯಾನಿಲಯಕ್ಕೂ ಮತ್ತೊಂದು ಖಾಸಗಿ ವಿಶ್ವವಿದ್ಯಾನಿಲಯಕ್ಕೂ ಬಹಳಷ್ಟು ವ್ಯತ್ಯಾಸ ಇರುತ್ತದೆ. ಶಿಕ್ಷಣ ಸಂಸ್ಥೆಗಳ ಹಿನ್ನಲೆ, ಅದರ track record ಎನಿದೆ, ಉದಾತ್ತವಾದ ವಿಚಾರದ ಹಿನ್ನಲೆಯಲ್ಲಿ ಶಿಕ್ಷಣವನ್ನು ಪ್ರಸಾರ ಮಾಡುತ್ತಿದ್ದಾರೆಯೋ ಅಥವಾ ವಾಣಿಜ್ಯ ದೃಷ್ಟಿಯಿಂದ ಆ ಶಿಕ್ಷಣ ಸಂಸ್ಥೆ ನಡೆಯುತ್ತಿದೆಯೋ ಅದರ ಬಗ್ಗೆ ನಾವು ಕೂಲಂಕುಷವಾಗಿ ಒಂದಾದ ಮೇಲೆ ಒಂದರಂತೆ threadbare ಅದರ ಬಗ್ಗೆ ಅಧ್ಯಯನವನ್ನು ನಡೆಸಬೇಕು. ಹಿಂದೆ ತಂದಂತಹ ಖಾಸಗಿ ವಿಶ್ವವಿದ್ಯಾನಿಲಯಗಳನ್ನು ನಾವು ಒಪ್ಪಿದ್ದೇವೆ ಎಂದರೆ ವಾಣಿಜ್ಯ ದೃಷ್ಟಿಯಿಂದ ಆ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭ ಮಾಡಿದವರನ್ನೂ ಸಹ ನಾವು ಒಪ್ಪಿದಂತಾಗುತ್ತದೆ. ಒಟ್ಟಾರೆ ಖಾಸಗಿ ವಿಶ್ವವಿದ್ಯಾನಿಲಯಗಳ ರೂಪುರೇಷೆಗಳಿಗೆ ಈ ಸದನ ಒಪ್ಪಿದರೆ ಅದರ ಹಿನ್ನಲೆಯನ್ನು ನಾವು ಅಧ್ಯಯನ ಮಾಡಬೇಕಾಗುತ್ತದೆ. ಆ ಶಿಕ್ಷಣ ಸಂಸ್ಥೆಯ ಸಾಮಾಜಿಕ ಕೊಡುಗೆ ಏನು? ಶೈಕ್ಷಣಿಕ ಕೇಂದ್ರದಲ್ಲಿ ಅವರು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ; ಶಿಕ್ಷಣ ಪ್ರಸಾರ ಮಾಡುವ ಉದಾತ್ತದಿಂದ ಸಂಸ್ಥೆಯನ್ನು ನಡೆಸುತ್ತಿದ್ದಾರೋ ಇಲ್ಲವೋ ಅಥವಾ ಹಣ ಗಳಿಸಲು ಸಂಸ್ಥೆಯನ್ನು ತೆಗೆದಿದ್ದಾರೆಯೇ ಎನ್ನುವುದನ್ನು ಕೂಡ ನಾವು ವಿಚಾರ ಮಾಡಬೇಕಾಗುತ್ತದೆ. One by one, individually we have to think of it, we have to discuss it; we have to go deep into the subject. ಅದರ ಬಗ್ಗೆ threadbare ಚರ್ಚೆಯನ್ನು ಮಾಡಬೇಕು. ಅಧಿವೇಶನ ಮುಗಿಯುವ ಕೊನೆಯ ಹಂತದಲ್ಲಿ ಈ ವಿಧೇಯಕಗಳನ್ನು ತಂದಲ್ಲಿ ಅದರ ಬಗ್ಗೆ ನಮಗಂತೂ ಒಪ್ಪಿಗೆಯಿಲ್ಲ, ನಾವು ಈ ಚರ್ಚೆಯಲ್ಲೂ ಕೂಡ ಭಾಗಿಯಾಗುವುದಿಲ್ಲ. ಇದರ ಬಗ್ಗೆ ಜೆಡಿಎಸ್ ನಾಯಕರೂ ಸಹ ಮಾತನಾಡುತ್ತಾರೆ, ನಾವಂತೂ ಈ ರೀತಿ ವಿಧೇಯಕ ತಂದಿದ್ದನ್ನು ಖಂಡಸಿ, ಸಭೆಯಿಂದ ಹೊರಕ್ಕೆ ಹೋಗುತ್ತೇನೆ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದವರು ಸಭಾತ್ಯಾಗವನ್ನು ಮಾಡಲಿಲ್ಲ.)**

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಇದು ಬಹಳ ನೋವಿನ ಸಂಗತಿ. ಈ ಬಿಲ್ಲುಗಳ ಒಂದು ಕಥೆಯನ್ನು ಹೇಳುತ್ತೇನೆ. 13ನೇ ತಾರೀಖಿನಂದು ಖಾಸಗಿ ವಿಶ್ವವಿದ್ಯಾನಿಲಯಗಳ ಬಿಲ್ಲನ್ನು ತರುತ್ತಾರೆ, ಅಂದರೆ ಕುವೆಂಪು ವಿಶ್ವವಿದ್ಯಾನಿಲಯದ ಒಬ್ಬ ಮಾಜಿ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿಗಳು, ಈಗ ಇದ್ದಂತಹ ಸಂಸ್ಕೃತ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿಗಳು, ಮಹಿಳಾ ವಿಶ್ವವಿದ್ಯಾನಿಲಯದವರು, ಶ್ರೀ ಕಾವೇರಿಯಪ್ಪ ಎನ್ನುವವರು ನಿಮ್ಮ ಸೆಕ್ರೆಟರಿ, ಶ್ರೀ ಕುಟಿನೋ ಮತ್ತು ಕೆಲವು ಇನ್ನಿತರ ಮಾಜಿ ಕುಲಪತಿಗಳು, 13ನೇ ತಾರೀಖಿನಂದು ಇವರೆಲ್ಲರಿಗೂ ಕಾರನ್ನು ಕೊಟ್ಟು, ಬೆಂಗಳೂರಿನ ಹೊಟೆಲ್ ಒಂದರಲ್ಲಿ ರೂಮುಗಳನ್ನು ಮಾಡಿ ಹರಿಬರಿಯಲ್ಲಿ ಚರ್ಚಿಸಿ, ಈ ಮಸೂದೆಯನ್ನು ತರಲಾಗಿದೆ. ಇದು ಸುಳ್ಳಲ್ಲ ಎನ್ನುವುದನ್ನು ನಾನು ಎಲ್ಲಿಯಾದರೂ challenge ಮಾಡುತ್ತೇನೆ. ಮತ್ತು ಅವರಿದ್ದ ರೂಮುಗಳ ನಂಬರ್‌ಗಳನ್ನು ಸಹ ನಾನು ಕೊಡುತ್ತೇನೆ. ಈ ರೀತಿ ಆ ಜನರನ್ನೆಲ್ಲ ಕರೆದುಕೊಂಡು ಬಂದು ತರಾತುರಿಯಲ್ಲಿ ಬಿಲ್ಲನ್ನು ತರುವ ಅವಶ್ಯಕತೆ ಏನಿದೆ? 5 ನಿಮಿಷಕ್ಕೊಂದು ಬಿಲ್ಲನ್ನು ತರುವಂತಹ ಅವಶ್ಯಕತೆ ಏನಿದೆ ಎನ್ನುವುದನ್ನು ಸರ್ಕಾರ ಹೇಳಬೇಕಾಗುತ್ತದೆ. ಸದನ ಸರ್ವಾನುಮತದ ಒಪ್ಪಿಗೆ ನೀಡಿದೆ ಎಂದರೆ ಕೆಲವು ಬಿಲ್ಲುಗಳನ್ನು ಪ್ರತ್ಯೇಕವಾಗಿ ಮಂಡಿಸಲಾಗಿತ್ತು. ಅದಕ್ಕೆ ಸಚಿವರು ನಮ್ಮನ್ನು convince ಮಾಡಿದರು, ಅದಕ್ಕೆ ನಾವು ಒಪ್ಪಿಗೆಯನ್ನು ನೀಡಿದೆವು. ಹಾಗಾದಲ್ಲಿ ನಾವು ಸರ್ಕಾರ ತರತಕ್ಕ ಎಲ್ಲಾ ಬಿಲ್‌ಗಳಿಗೂ ಒಪ್ಪುತ್ತೇವೆ ಎನ್ನುವ ಅರ್ಥವಲ್ಲ. ಮಾನ್ಯ ಸಭಾಪತಿಗಳೇ, ಇದೆಲ್ಲ ವ್ಯಾಪಾರೀಕರಣ, ನಾನು ಇಲ್ಲಿಯತನಕ ಹೇಳಬಾರದಿತ್ತು. ಆದರೆ ಅದನ್ನು ನಾನು challenge ಮಾಡುತ್ತೇನೆ. 13ನೇ ತಾರೀಖಿನಂದು ಅವರೆಲ್ಲರೂ ಬಂದಿಲ್ಲವೆನ್ನುವುದನ್ನು ಸರ್ಕಾರ ಒಪ್ಪಿಕೊಳ್ಳಲಿ. ಇದಕ್ಕೆಲ್ಲ ಯಾರು ವ್ಯವಹಾರ ಮಾಡುತ್ತಿದ್ದಾರೆಂದು ನಮಗೆ ಗೊತ್ತಿಲ್ಲ. ಅದರೆ ವ್ಯವಹಾರ ಇಲ್ಲದೆಯೇ ಇದು ಯಾವುದು ನಡೆಯುವುದಿಲ್ಲ. ಈ ಅಧಿವೇಶನ ಮುಗಿಯತಕ್ಕ ಸಮಯದಲ್ಲಿ ಈ ಖಾಸಗಿ ವಿಶ್ವವಿದ್ಯಾನಿಲಯಗಳ ಬಿಲ್‌ಗಳನ್ನು ತರತಕ್ಕ ಅವಶ್ಯಕತೆ ಏನಿತ್ತು?

ಸರ್ಕಾರ ಒಂದು ಕೆಲಸ ಮಾಡಲಿ, ಯಾವ ಶಿಕ್ಷಣ ಸಂಸ್ಥೆಗಳಿಗೆ 25 ಎಕರೆ ಭೂಮಿಯಿರುತ್ತದೆ, ಅದನ್ನೆಲ್ಲ ವಿಶ್ವವಿದ್ಯಾನಿಲಯವನ್ನು ಮಾಡಿ, ನಮ್ಮನ್ನು ಕೇಳುವುದೇ ಬೇಡ. ಸದನಕ್ಕೆ ಮಸೂದೆಗಳನ್ನು ತರುವುದೇ ಬೇಡ, ಹಾಗೆಯೇ ಎಲ್ಲವನ್ನು ಪಾಸ್ ಮಾಡಿಕೊಳ್ಳಲಿ. ನಾನು ಅನೇಕ ಸರ್ಕಾರಗಳನ್ನು ನೋಡಿದ್ದೇನೆ, ಆದರೆ ಇಂತಹ ಸರ್ಕಾರವನ್ನು ನಾನು ಎಂದಿಗೂ ನೋಡಿಲ್ಲ. ಇಂತಹ ಅವಸರದಲ್ಲಿ ಮಸೂದೆಗಳನ್ನು ತರುವ ಅವಶ್ಯಕತೆ ಏನಿದೆ? ಜಗತ್ತು ಕಡಿದುಕೊಂಡು ಬೀಳುವುದೇ? ಮುಂದಿನ ಅಧಿವೇಶನದಲ್ಲಿ ಇದನ್ನೆಲ್ಲ ತರಬಹುದಲ್ಲವೇ? ಅಧಿವೇಶನ ಮುಗಿಯುವ ಸಮಯದಲ್ಲಿ ಏಕೆ ಈ ಬಿಲ್‌ಗಳನ್ನು ತರಬೇಕು; ಈ ಸಮಯದಲ್ಲಿ ಬಿಲ್ ತಂದಲ್ಲಿ ಅನೇಕ ರೀತಿಯ ಸಂಶಯಗಳು ಉದ್ಭವವಾಗುತ್ತವೆ. ಇದರಿಂದ ಸರ್ಕಾರದ ಹೆಸರು ಕೆಡುತ್ತದೆ, ಇದು ಆಗಬಾರದೆಂದು ನಾನು ಹೇಳುತ್ತೇನೆ. ಇದು ವಿಶ್ವವಿದ್ಯಾನಿಲಯವೇ ಇಲ್ಲ ಧರ್ಮಶಾಲೆಗಳೇ, ಮಾನ್ಯ ಸಭಾಪತಿಗಳೇ, ತಾವು ಸಹ ಮಸೂದೆಗೆ ಎರಡು ದಿಸಗಳ ಕಾಲಾವಕಾಶವನ್ನು ನೀಡುತ್ತೇನೆ ಎನ್ನುವ ಮಾತನ್ನು ಹೇಳಿದಿರಿ, ನಾವು ಇದರ ಬಗ್ಗೆ ಅಧ್ಯಯನ ಮಾಡುವುದು ಬೇಡವೇ? ಇದರ ಬಗ್ಗೆ ಮಾಜಿ ಕುಲಪತಿಗಳನ್ನು ಕೇಳಿದಾಗ ಅವರು ಹೇಳಿದ ಮಾತುಗಳನ್ನು ಸದನದಲ್ಲಿ ಹೇಳುವುದು ಸರಿಯಾದುದಲ್ಲ, ತಪ್ಪಾಗುತ್ತದೆ, ಹರಿಬರಿಯಲ್ಲಿ ಎಲ್ಲೆಲ್ಲೋ ಇದ್ದ, ಮೈಸೂರು ತಮಿಳುನಾಡಿನಲ್ಲಿದ್ದ ಮಾಜಿ ಕುಲಪತಿಗಳನ್ನು ಕರೆಯಿಸಿ, 13ನೇ ತಾರೀಖಿನಂದು ಕೆ.ಆರ್.ಪುರಂನಲ್ಲಿ ಒಂದೆಡೆ ಸೇರಿ ಚರ್ಚೆ ಮಾಡಿ, ವ್ಯವಹಾರ ಮಾಡಿಕೊಂಡು ಈ ಬಿಲ್ಲನ್ನು ತರಲಾಗಿದೆ. Higher Education Council ಎಂದಿದೆ. ಇದಕ್ಕೆ ಮಾನ ಮರ್ಯಾದೆ ಇಲ್ಲವೇ? ಅಲ್ಲೊಬ್ಬ ಉಪಕುಲಪತಿ ಇಲ್ಲೊಬ್ಬ ಉಪಕುಲಪತಿ ಎಂದು ಇರುವ ವ್ಯವಸ್ಥೆಯನ್ನೇ ಹಾಳು ಮಾಡಲಾಗಿದೆ. ಆದ್ದರಿಂದ ಇದನ್ನೆಲ್ಲ ಮಾಡಿ ತಮ್ಮ ಹೆಸರನ್ನು ಕೆಡಿಸಿಕೊಳ್ಳಬಾರದೆಂದು ಮಾನ್ಯ ಸಚಿವರಿಗೆ ಮನವಿಯನ್ನು ಮಾಡಿಕೊಳ್ಳುತ್ತೇನೆ. ಯಾರೋ ಮಾಡುತ್ತಾರೋ ಎನೋ ಎಲ್ಲಾ ಇಲ್ಲಿಯೇ ಕುಳಿತಿರುತ್ತಾರೆ ಹೀಗೆ ಮಾಡುವುದರಿಂದ ಸರ್ಕಾರಕ್ಕೂ ಕೆಟ್ಟ ಹೆಸರು ನಮಗೂ ಸಹ ಕೆಟ್ಟ ಹೆಸರು ಬರುತ್ತದೆ. ದಯಮಾಡಿ ಇದನ್ನೆಲ್ಲ ತಡೆಯಿರಿ. ಈ ಮಸೂದೆಯನ್ನು

ತರಲಿಲ್ಲವೆಂದರೆ ಸರ್ಕಾರದ ಕೆಲಸ ನಿಂತು ಹೋಗುತ್ತದೆಯೇ? ಬಜೆಟ್ ಪಾಸ್ ಮಾಡದಿದ್ದರೆ ಕೆಲಸ ನಿಂತು ಹೋಗುತ್ತದೆ, ಆ ರೀತಿ ಏನಾದರೂ ಇದು ಇದೆಯೇ? ಇದರ ಅವಶ್ಯಕತೆ ಏನಿದೆ? ಏತಕ್ಕೆ ಇಷ್ಟೊಂದು ಅವಸರ? ಇದರಲ್ಲಿ ಸರ್ಕಾದ ಆಸಕ್ತಿ ಏನು? ಈಗಿಂದೀಗಲೇ ಮಸೂದೆಯನ್ನು ತರತಕ್ಕ ಅವಶ್ಯಕತೆ ಏನಿದೆ? ಈ ಸದನದ ಘನತೆ ಗೌರವವನ್ನು ಕಾಪಾಡುವುದು ನನ್ನ ಉದ್ದೇಶ, ಇದರಲ್ಲಿ ಬೇರೆ ಏನೂ ಇಲ್ಲ. ಯಾವ ವಿಶ್ವವಿದ್ಯಾನಿಲಯ ಏನೋ ನನಗೆ ಗೊತ್ತಿಲ್ಲ, ದಿವಸಕ್ಕೆ 2 ವಿಶ್ವವಿದ್ಯಾನಿಲಯಗಳನ್ನು ತಂದಲ್ಲಿ, ನಿಮ್ಮ conscience ಏನು ಹೇಳುತ್ತದೆ ಎನ್ನುವುದನ್ನು ಪ್ರಾಮಾಣಿಕವಾಗಿ ಹೇಳಿ. ಮಾನ್ಯ ಸಭಾಪತಿಗಳೇ, ತಾವು ಸಹ ಉನ್ನತ ಶಿಕ್ಷಣ ಸಚಿವರಾಗಿ ಕೆಲಸ ಮಾಡಿದ್ದೀರಿ, ತಮ್ಮ ಅವಧಿಯಲ್ಲಿ ತಾವೇನಾದರೂ ಈ ರೀತಿಯ ಖಾಸಗಿ ವಿಶ್ವವಿದ್ಯಾನಿಲಯದ ಬಿಲ್ ತಂದಿದ್ದೀರಾ? ಇಂತಹ ಸಂರ್ಭದಲ್ಲಿ ಬಿಲ್ ತಂದರೆ ನಮಗೆ ಅದರ ಮೇಲೆ ಚರ್ಚೆ ಮಾಡಲು ಸಹ ಸಮಯ ಇರುವುದಿಲ್ಲ. ಇದರ ಹಿನ್ನಲೆ ನಮಗೆ ಅರ್ಥವಾಗುವುದಿಲ್ಲ. ಆಂಧ್ರಪ್ರದೇಶದಲ್ಲಿ ಈ ರೀತಿ ತೆಗೆದಿರಬಹುದು, ಬೇರೆ ರಾಜ್ಯದವರು ಏನು ಬೇಕಾದರೂ ಮಾಡಲಿ, ಅವರು ದರೋಡೆ ಮಾಡುತ್ತಾರೆ ನಮ್ಮ ಸರ್ಕಾರವೂ ದರೋಡೆ ಮಾಡುವುದೇ? ಇದು ಸರಿಯಾದುದಲ್ಲ, ನಮಗಂತೂ ಇದರ ಬಗ್ಗೆ ಸಹಮತಿ ಇಲ್ಲ. ದಯಮಾಡಿ, ಈ ಮಸೂದೆಯನ್ನು ತಡೆದು ಮುಂದಿನ ಅಧಿಮೇಶನದಲ್ಲಿ ತರಬೇಕೆಂದು ತಮಗೆ ಒತ್ತಾಯ ಮಾಡುತ್ತೇನೆ.

**ಶ್ರೀ ಸಿ.ಹೆಚ್. ವಿಜಯಶಂಕರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಸದನದಲ್ಲಿ ಖಾಸಗಿ ವಿಶ್ವವಿದ್ಯಾನಿಲಯಗಳ ಬಗ್ಗೆ ಚರ್ಚೆ ನಡೆಯುತ್ತದೆ. ನಾನು ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿಯವರ ಪ್ರವೇಶ ಇರಬಾರದು ಎಂದು ಹೇಳುವುದಿಲ್ಲ. ಅನೇಕ ಖಾಸಗಿ ಸಂಸ್ಥೆಗಳು ಸರ್ಕಾರಿ ಸಂಸ್ಥೆಗಳಿಗೂ ನೂರು ಪಟ್ಟು ಮೇಲ್ಪಟ್ಟು ಸೇವಾ ದೃಷ್ಟಿಯಿಂದ ಕೆಲಸವನ್ನು ಮಾಡುತ್ತಿರುದನ್ನು ನಾವು ಕಾಣುತ್ತಿದ್ದೇವೆ. ಖಾಸಗಿ ಶಿಕ್ಷಣ ಸಂಸ್ಥೆಗಳು ನಮ್ಮ ದೇಶಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾದರಿಯಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಯಾವುದೇ ಖಾಸಗಿ ವ್ಯಕ್ತಿ ಇಂತಹ ಶಿಕ್ಷಣ ಕ್ಷೇತ್ರವನ್ನು ಪ್ರವೇಶ

ಮಾಡುತ್ತಾನೆ ಎಂದರೆ ಶಿಕ್ಷಣದ ಹಿನ್ನೆಲೆ ಮತ್ತು ಸಮಗ್ರ ಸಾಮಾಜಿಕ ಬೆಳವಣಿಗೆಯ ಹಿನ್ನಲೆಗಳ ಬಗ್ಗೆ ನಾವು ಗಮನವಿಟ್ಟು ನೋಡಬೇಕಾಗುತ್ತದೆ. ಯಾವುದೇ ಖಾಸಗಿ ವ್ಯಕ್ತಿ ಈ ಶಿಕ್ಷಣ ಕ್ಷೇತ್ರಕೆ ಬರುತ್ತಾನೆ ಎಂದರೆ ಆತ ನಮ್ಮ ಸಮಾಜಕ್ಕೆ, ಶಿಕ್ಷಣ ವ್ಯವಸ್ಥೆಗೆ, ನಮ್ಮ ಬದುಕಿಗೆ, ನಮ್ಮ ಯುವ ಪೀಳಿಗೆಗೆ ಪೂರಕವಾಗಿದ್ದಾನೆಯೇ; ಅಥವಾ ಮಾರಕವಾಗಿದ್ದಾನೆಯೇ? ಆತನ ಹಿನ್ನೆಲೆ ಮತ್ತು ಉದ್ದೇಶ ಏನು; ಯಾವ ಕಾರಣಕ್ಕಾಗಿ ಈ ರಂಗವನ್ನು ಅವರು ಪ್ರವೇಶ ಮಾಡಿದ್ದಾನೆ? ಸೇವಾದೃಷ್ಟಿಯಿಂದಲೇ ಅಥವಾ ದೇಶದ ಹಿತದೃಷ್ಟಿ ಅಥವಾ ಮುಂದಿನ ಪೀಳಿಗೆಯ ಹಿತದೃಷ್ಟಿಯಿಂದಲೇ ಈತ ಪ್ರವೇಶ ಮಾಡಿದ್ದಾನೆಯೇ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ಸಚಿವರಾದ ಮಾನ್ಯ ಸಿ.ಟಿ.ರವಿಯವರು ಹೇಳಿರುವುದೇನೆಂದರೆ, ಏನು 14 ನಿಯಮಗಳನ್ನು ಅಳವಡಿಸಿಕೊಳ್ಳಲಾಗಿದೆ ಆ ನಿಯಮಗಳಿಗೆ ಪೂರಕವಾಗಿ ನಾವು ಈ ವಿಧೇಯಕಗಳಿಗೆ ಒಪ್ಪಿಗೆಯನ್ನು ಕೊಡುತ್ತಿದ್ದೇವೆ. ಬಹುಶಃ ನಮ್ಮ ಸರ್ಕಾರದ ನಿಯಮ ಏನಿದೆ, ಆ ನಿಯಮಗಳನ್ನು ಅವರು ಪೂರೈಸುತ್ತಿದ್ದಾರೆ, ನಾವು ವಿಧಿಸಿರುವಂತಹ ನಿಯಮಗಳಿಗೆ ಅವರು ಪ್ರಾಯಶಃ ಸಂಪೂರ್ಣ ವ್ಯವಸ್ಥಿತವಾದಂತಹ ದಾಖಲಾತಿಗಳನ್ನು ಒದಗಿಸಿರುವಂಥದ್ದನ್ನು ನಾವು ಕಂಡಿದ್ದೇವೆ ಎನ್ನುವಂತಹ ಮಾತುಗಳನ್ನು ಸಚಿವರು ತಿಳಿಸಿದ್ದಾರೆ. ಆದರೆ ನಾವು ಇಲ್ಲಿ ಸರ್ಕಾರದ ಭಾಗವಾಗಿ, ಜೊತೆಗೆ ಶಾಸನಸಭಾ ಸದಸ್ಯರಾಗಿ ಇಡೀ ರಾಜ್ಯಕ್ಕೆ ಉತ್ತರದಾಯಿತ್ವದ ವ್ಯಕ್ತಿಗಳಾಗಿ ನಮ್ಮ ಜವಾಬ್ದಾರಿ ಏನೆಂದರೆ, ಈ ರೀತಿ ರಂಗ ಪ್ರವೇಶ ಮಾಡುವಂತಹ ವ್ಯಕ್ತಿಗಳ ಹಿನ್ನೆಲೆಯನ್ನು ಅಧ್ಯಯನ ಮಾಡದಿದ್ದರೆ ಬಹುಶಃ ನಾವು ಸಮಾಜಕ್ಕೆ ಎಲ್ಲಿಯೋ ಒಂದು ಹಂತದಲ್ಲಿ ಒಳ್ಳೆಯದನ್ನು ಮಾಡುವುದರ ಬದಲಾಗಿ ಕೆಟ್ಟದ್ದನ್ನು ಕೊಡುವುದಕ್ಕೆ ಹೊರಟಿದ್ದೇವೆಯೇನೋ ಎನ್ನುವಂತಹ ಭಾವನೆ ಸೃಷ್ಟಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ನೀವು ಯಾವುದೇ ವಿಧೇಯಕವನ್ನು ತೆಗೆದುಕೊಂಡು ಬಂದರೂ ನಿಶ್ಚಿತವಾಗಿಯೂ ನಾವು ನಿಮ್ಮ ಜೊತೆಯಲ್ಲಿದ್ದು ಸಹಕಾರ ಕೊಡುತ್ತೇವೆ. ಆದರೆ ಈ ವಿದ್ಯಾಲಯಗಳ ಹಿಂದಿನ ದೃಷ್ಟಿ, ಇವರ ಹಿನ್ನೆಲೆಯನ್ನು ನೀವು ಅಧ್ಯಯನ ಮಾಡದೆ ಕೇವಲ ಸರ್ಕಾರದ ನಿಯಮಗಳನ್ನು ಪೂರೈಸುತ್ತಾರೆ

ಎನ್ನುವಂತಹ ಕಾರಣಕ್ಕೋಸ್ಕರವಾಗಿ ಶಿಕ್ಷಣ ಕ್ಷೇತ್ರವನ್ನು ಈ ರೀತಿ floodgate open ಮಾಡಿದಂತೆ open ಮಾಡಿ ಕೈಬಿಟ್ಟುಬಿಟ್ಟರೆ ನಾಳೆ ಆಗುವಂತಹ ಎಲ್ಲ ಅನಾಹುತಗಳಿಗೆ ಕೂಡ ನಾವು ಜವಾಬ್ದಾರರಾಗುತ್ತೇವೆ ಎನ್ನುವಂತಹ ಮಾತನ್ನು ನಾನು ಹೇಳಬಯಸುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಕರ್ನಾಟಕ ರಾಜ್ಯದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡುತ್ತಿರುವುದನ್ನು ನೋಡಿದರೆ ಒಂದು ದೃಷ್ಟಿಯಲ್ಲಿ ಈ ಸರ್ಕಾರವನ್ನು 'ಖಾಸಗಿ ವಿಶ್ವವಿದ್ಯಾಲಯಗಳ ಪಿತಾಮಹ ಸರ್ಕಾರ' ಎಂದು ಹೇಳಬೇಕಾಗುತ್ತದೆ. ಖಾಸಗಿ ವಿಶ್ವವಿದ್ಯಾಲಯಗಳು ಬರಬೇಕು, ಉನ್ನತ ಶಿಕ್ಷಣದಲ್ಲಿ ಖಾಸಗಿ ಸಹಭಾಗಿತ್ವ ಇರಬೇಕು ಎನ್ನುವುದು ಕೇಂದ್ರ ಸರ್ಕಾರದ UGC ಮತ್ತು AICTE ನಿಯಮಗಳಾಗಿವೆ. ಅಂದರೆ ಸರ್ಕಾರವೇ ಎಲ್ಲಾ ಶಿಕ್ಷಣವನ್ನು ಕೊಡುವುದಕ್ಕಾಗುವುದಿಲ್ಲ, ಆದ್ದರಿಂದ ಖಾಸಗಿ ಸಹಭಾಗಿತ್ವ ಇರಬೇಕು ಎನ್ನುವಂತಹ ಉದ್ದೇಶ ಕೂಡ ಇದೆ. ಆದರೆ ನಮ್ಮ ರಾಜ್ಯದಲ್ಲಿ ಈ ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಸಂಬಂಧಿಸಿದಂತೆ ತರುತ್ತಿರುವಂತಹ ವಿಧೇಯಕಗಳನ್ನು ನೋಡಿದರೆ ಇದು ಆರೋಗ್ಯಕರವಾದಂತಹ ಬೆಳವಣಿಗೆ ಅಲ್ಲ, ನಮ್ಮ ರಾಜ್ಯದ ಶೈಕ್ಷಣಿಕ ವ್ಯವಸ್ಥೆಗೆ ಮತ್ತು ಇಲ್ಲಿಯ ವಾತಾವರಣಕ್ಕೆ ಅನುಗುಣವಾಗಿ ನಾವು ಗಮನಿಸುವುದಾದರೆ ಈ ರೀತಿಯಲ್ಲಿ ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಮುನ್ನ ನಾವು ಅದರ ಹಿನ್ನೆಲೆ, ಈ ಪರಂಪರೆ ಇವೆಲ್ಲವನ್ನೂ ಸಹ ಗಮನಿಸದೆ ಏಕಾಏಕಿ ಈ ವಿಧೇಯಕಗಳಿಗೆ ಮಂಜೂರಾತಿ ಮುದ್ರೆಯನ್ನು ಒತ್ತಿದ್ದೇ ಆದರೆ ಖಂಡಿತವಾಗಿಯೂ ಅದರಿಂದ ಸಾಮಾಜಿಕ ನ್ಯಾಯಕ್ಕೆ ಧಕ್ಕೆಯಾಗುತ್ತದೆ. ಬಡವರ, ಹಿಂದುಳಿದ ವರ್ಗದ ಪ್ರತಿಭಾನ್ವಿತ ಮಕ್ಕಳಿಗೆ ನಿಜಕ್ಕೂ ಸಹ ಈ ಉನ್ನತ ಶಿಕ್ಷಣ ಇನ್ನೂ ಹೆಚ್ಚಿನ ರೀತಿಯಲ್ಲಿ ಗಗನ ಕುಸುಮವಾಗಿ ಉಳಿಯುತ್ತದೆ.

ನಾವು ಖಾಸಗಿ ವಿಶ್ವವಿದ್ಯಾಲಯಗಳಿಗೆ ಏನೆಲ್ಲಾ ಷರತ್ತುಗಳನ್ನು ವಿಧಿಸಿದರೂ ಸಹ ಈ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಅವೆಲ್ಲವನ್ನು ಕೂಡ ಪೂರೈಸುವುದಿಲ್ಲ. ಆ ಷರತ್ತುಗಳು ಕಾನೂನಿನಲ್ಲಷ್ಟೇ ಇರುತ್ತದೆ, ಆದರೆ

ಅವರಿಗಿರುವಂತಹ ದೊಡ್ಡ ಉದ್ದೇಶ ವ್ಯಾಪಾರೀಕರಣವಾಗಿದ್ದು, ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಇವೊತ್ತು ಕರ್ನಾಟಕ ರಾಜ್ಯದಲ್ಲಷ್ಟೇ ಅಲ್ಲ ಇಡೀ ಭಾರತ ದೇಶದಲ್ಲಿಯೇ ಈ ವ್ಯಾಪಾರೀಕರಣ ನಡೆಯುತ್ತಿದೆ. ಆದರೆ ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ತಂದಿರುವಂತಹ ಖಾಸಗಿ ವಿಶ್ವವಿದ್ಯಾಲಯ ವಿಧೇಯಕಗಳಲ್ಲಿ ಬಹುಶಃ ಇದು 18 ಅಥವಾ 19ನೆಯದೆನಿಸುತ್ತದೆ. ಈ ರಾಜ್ಯದಲ್ಲಿ ಎಷ್ಟು ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುಮತಿಯನ್ನು ಕೊಡಬೇಕೆಂಬ ವಿಚಾರದಲ್ಲಿ ಸರ್ವೆ ನಡೆಸಬೇಕು, ಅಷ್ಟೇ ಅಲ್ಲದೆ ಆ ಖಾಸಗಿ ವಿಶ್ವವಿದ್ಯಾಲಯಗಳ ಕಾರ್ಯಕ್ಷೇತ್ರ ಇಡೀ ರಾಜ್ಯಾದ್ಯಂತ ಇದ್ದರೂ ಕೂಡ ಬೆಂಗಳೂರು ನಗರದಲ್ಲಿ ಒಂದು ವಿಶ್ವವಿದ್ಯಾಲಯಕ್ಕೆ ನಾವು ಅನುಮತಿಯನ್ನು ಕೊಟ್ಟರೆ ಇಡೀ ರಾಜ್ಯದ ಯಾವ ಜಿಲ್ಲೆಯಲ್ಲಿ ಬೇಕಾದರೂ ಅವರು ವಿಶ್ವವಿದ್ಯಾಲಯದ ಕೇಂದ್ರಗಳನ್ನು ತೆರೆಯಲಿಕ್ಕೆ ಈ ಕಾನೂನಿನಲ್ಲಿ ಅನುಮತಿ ನೀಡಲಾಗಿರುತ್ತದೆ. ಇವೊತ್ತು ಹೊರ ರಾಜ್ಯ ಅಷ್ಟೇ ಏಕೆ ಹೊರ ರಾಷ್ಟ್ರಗಳಿಂದ ಬಂದು ನಮ್ಮ ಕರ್ನಾಟಕ ರಾಜ್ಯದಲ್ಲಿ ಅವರ ವಿಶ್ವವಿದ್ಯಾಲಯಗಳ ಕೇಂದ್ರಗಳನ್ನು ಪ್ರಾರಂಭಿಸಿ, ಅಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲಾಗುತ್ತದೆ. ನಾವು ಪೈಪೋಟಿ ನಡೆಸಲು ಹೋಗಿ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಇವೊತ್ತು ಒಂದು ಪ್ರಾಥಮಿಕ ಶಾಲೆ ಪ್ರಾರಂಭಿಸಲು ಮಂಜೂರಾತಿ ಕೊಡಬೇಕೆಂದರೆ ನಿರ್ದಿಷ್ಟವಾಗಿ ಇಷ್ಟು ಭೂಮಿ ಇರಬೇಕು, ಅದು ಆ ಟ್ರಸ್ಟ್‌ನ ಹೆಸರಿನಲ್ಲಿರಬೇಕು, ಇಷ್ಟು ಕೊಠಡಿಗಳಿರಬೇಕು, ಇಷ್ಟು ಅಧ್ಯಾಪಕರಿರಬೇಕು ಇವೆಲ್ಲವುಗಳನ್ನೂ ನೋಡಿಕೊಂಡು ಸರ್ಕಾರ ಅಲ್ಲಿಗೆ ಮಂಜೂರಾತಿಯನ್ನು ನೀಡುತ್ತದೆ. ಆದರೆ ಈ ಖಾಸಗಿ ವಿಶ್ವವಿದ್ಯಾಲಯಗಳಿಗೆ ಹಚ್ಚಿನ ಷರತ್ತುಗಳೇನೂ ಇಲ್ಲ, 10 ಕೋಟಿ ರೂಪಾಯಿ deposit ಇಡಬೇಕು, ಬೆಂಗಳೂರಿನಲ್ಲಾದರೆ 10 ಎಕರೆ ಜಮೀನು, ಹೊರಗಡೆಯಾದರೆ 40 ಎಕರೆ ಜಮೀನು ಇರಬೇಕು ಎನ್ನುವುದಷ್ಟೇ ಮಾನದಂಡ. ಇದನ್ನೆಲ್ಲಾ ಗಮನಿಸಿದಾಗ ಎಲ್ಲಿಯೋ ಒಂದು ಕಡೆ ಈ ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆ ವಿಚಾರದಲ್ಲಿ ನಾವು ಆತುರ ಪಡುತ್ತಿದ್ದೇವೆ, ಮುಂದಿನ ದೂರದೃಷ್ಟಿಯನ್ನು, ಈ ಉನ್ನತ ಶಿಕ್ಷಣದ ಮೇಲೆ ಆಗಬಹುದಾದಂತಹ ಪರಿಣಾಮಗಳೇನು ಎಂಬುದನ್ನು ಸರ್ಕಾರ

ಗಮನಿಸಬೇಕಾದಂತಹ ಅಗತ್ಯತೆ ಇದೆ ಎಂಬುದನ್ನು ನಾನು ಈ ಸಂರ್ಭದಲ್ಲಿ ಹೇಳಬಯಸುತ್ತೇನೆ. ಆದ್ದರಿಂದ ಈಗ ತೆಗೆದುಕೊಂಡು ಬಂದಿರುವಂತಹ ಸುಮಾರು 17–18 ಖಾಸಗಿ ವಿಶ್ವವಿದ್ಯಾಲಯಗಳ ವಿಧೇಯಕಗಳಿಗೇನು ಮಂಜೂರಾತಿ ದೊರೆತಿದೆ ಈ ಎಲ್ಲ ವಿಶ್ವವಿದ್ಯಾಲಯಗಳು ಕೂಡ 'accreditation' ಗೆ ಒಂದು ಸಮಿತಿ ಎನ್ನತಕ್ಕಂಥದ್ದನ್ನು ನಾವು ಕಾಯಿದೆಯಲ್ಲಿ ಇದುವರೆಗೂ ನೋಡಿಕೊಂಡು ಬಂದಿದ್ದೇವೆ. 'Accreditation' ಎಂದರೆ ಮೌಲ್ಯಮಾಪನ, ಇಲ್ಲಿ ಶೈಕ್ಷಣಿಕ ವ್ಯವಸ್ಥೆಯ ಗುಣಮಟ್ಟವನ್ನು ಕಾಯ್ದುಕೊಳ್ಳಲಿಕ್ಕೆ ಆ faculties ಬಗ್ಗೆ ಒಂದು NAAC (National Assessment and Accreditation Council) ಎಂಬುದೇನಿದೆ ಆ ರೀತಿ accreditation ಗೆ ಮಾತ್ರ ಈ ಕಾಯಿದೆಯಲ್ಲಿ ಅವಕಾಶಗಳಿವೆ. ಆದರೆ Regulatory Bodies ಯಾವುದೂ ಇಲ್ಲ. Regulatory Bodies ಎಂದರೆ ಮೂಲಭೂತ ಸೌಲಭ್ಯಗಳ ಬಗ್ಗೆ ಒಂದು ವಿಜ್ಞಾನ ಪ್ರಯೋಗಾಲಯ ಇರಬಹುದು, ಬೇರೆ ಯಾವುದೇ ಇರಬಹುದು ಇಂತಿಷ್ಟು ಎಂಬುದು ಎಲ್ಲವೂ ಕೂಡ ನಿರ್ದಿಷ್ಟವಾಗಿ ಮತ್ತು ಇಷ್ಟೇ ಅಧ್ಯಾಪಕರಿರಬೇಕು, ಈ ವಿದ್ಯಾರ್ಹತೆ ಇರುವಂತಹ ಅಧ್ಯಾಪಕರಿರಬೇಕು, ಇಷ್ಟು ಮಟ್ಟದಲ್ಲಿ faculty ಇರಬೇಕು ಎನ್ನುವಂಥದ್ದು ಇವೊತ್ತು ಕೇಂದ್ರ ಸರ್ಕಾರದಲ್ಲಿ ಕೂಡ ಇದೆ. ಇದನ್ನು Regulatory Bodies ಎಂದು ಕರೆಯಲಾಗುತ್ತದೆ. AICTE (All india Council for Technical Education), UGC (University Grants Commission) ಮತ್ತು MCI (Medical Council of India) ನಲ್ಲಿ ಸಹ Regulatory Bodies ಇವೆ. ಸರ್ಕಾರದ ಅಂತಹ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳೇನಿವೆ ಅವು ಈ ಖಾಸಗಿ ವಿಶ್ವವಿದ್ಯಾಲಯಗಳು ಬಂದ ಕೂಡಲೇ ನಾಶವಾಗುವ ಸಾಧ್ಯತೆಗಳಿವೆ. ಏಕೆಂದರೆ ಈ ಖಾಸಗಿ ವಿಶ್ವವಿದ್ಯಾಲಯಗಳು ಆಲದ ಮರದಂತೆ ವಿಶಾಲವಾಗಿ ವ್ಯಾಪಿಸಿ ಬೆಳೆಯುತ್ತವೆ, ಅದರ ಕೆಳಗಡೆ ಸರ್ಕಾರಿ ವಿಶ್ವವಿದ್ಯಾಲಯಗಳೆಲ್ಲವೂ ಕೂಡ ಆಲದ ಮರದ ಕೆಳಗಿರುವ ಕುರುಚಲು ಗಿಡಗಳಂತಾಗಿ ನಾಶದ ಅಂಚಿಗೆ ಹೋಗುತ್ತವೆ.

ಇವೊತ್ತು ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಕಲಿಯುತ್ತಿರುವವರು ಬಡವರು, ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ಆರ್ಥಿಕವಾಗಿ ಹಿಂದುಳಿದಿರುವಂತಹ ಕುಟುಂಬಗಳ ಮಕ್ಕಳು ಮಾತ್ರ. ಅವರು ವಿದ್ಯಾಭ್ಯಾಸ ಮುಗಿಸಿ ಮುಂದೆ ಉದ್ಯೋಗಾಕಾಕ್ಷಿಗಳಾಗಿ ಹೋದಾಗ ಅವರ ಹುದ್ದೆಗೆ ಮಣ್ಣು ಹಾಕುವಂತಹ ಕೆಲಸ ಈ ಖಾಸಗಿ ವಿಶ್ವವಿದ್ಯಾಲಯಗಳಿಂದ ಆಗುತ್ತದೆ. ಖಾಸಗಿ ವಿಶ್ವವಿದ್ಯಾಲಯಗಳ ಪ್ರಾರಂಭಕ್ಕೆ ನಮ್ಮ ಸರ್ಕಾರ ಇದೇ ರೀತಿ ಅನುಮತಿ ಕೊಡುತ್ತಾ ಹೋದರೆ ಮುಂದಿನ ದಿನಗಳಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಉನ್ನತ ಶಿಕ್ಷಣ ಎನ್ನುವುದು ಕೇವಲ ಹಣ ಇರುವಂತಹ ಧನಿಕರ ಸ್ವತ್ತಾಗಿ ಉಳಿಯುತ್ತದೆ. ಇಷ್ಟೆಲ್ಲಾ ಮಾಡಿ ಈ ವಿಧೇಯಕವನ್ನು ತಂದಿರುವಂತಹ ಈ ಸರ್ಕಾರದ ವಾಯಿದೆ ಇನ್ನೇನು ಮುಗಿಯುತ್ತಿರುವುದರಿಂದ ಈ ಸರ್ಕಾರ ಹೋಗಿ ಇನ್ನೊಂದು ಸರ್ಕಾರ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ಅದು ಇಂಥದ್ದೇ ವಿಧೇಯಕಗಳಿಗೆ ಇದೇ ಸದನದಲ್ಲಿ ಹಿಂದೆ ಮಂಜೂರಾತಿ ನೀಡಲಾಗಿದೆ, ಹಾಗಾಗಿ ಈ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಕೂಡ ತಾವು ಒಪ್ಪಿಗೆ ಕೊಡಿ ಎಂದು ಇನ್ನೂ ಸುಮಾರು 100 ಖಾಸಗಿ ವಿಶ್ವವಿದ್ಯಾಲಯಗಳ ವಿಧೇಯಕವನ್ನು ತರಬಹುದು. ಆ ರೀತಿ ಅವುಗಳಿಗೆ ಸಹ ಒಪ್ಪಿಗೆ ದೊರೆತಲ್ಲಿ ಮುಂದೆ ಈ ಉನ್ನತ ಶಿಕ್ಷಣದ ವಿಚಾರದಲ್ಲಿ ಈ ನಾಡಿನಲ್ಲಿರುವ ಬಡವರ, ದೀನದಲಿತರ, ಹಿಂದುಳಿದವರ ಅಲ್ಪಸಂಖ್ಯಾತರ ಮಕ್ಕಳ ಪರಿಸ್ಥಿತಿ ಏನು? ಅವರ ಉದ್ಯೋಗದ ಪರಿಸ್ಥಿತಿ ಏನು? ಇದರಿಂದಾಗಿ ಶೈಕ್ಷಣಿಕ ವ್ಯವಸ್ಥೆಯಲ್ಲಿ ಎಂತಹ ಅಸಮತೋಲನ ಉಂಟಾಗುತ್ತದೆ, ಭವಿಷ್ಯತ್‌ನಲ್ಲಿ ದೊಡ್ಡ ಆಂದೋಲನಕ್ಕೆ ಕಾರಣವಾಗುತ್ತದೆ. ಇದಕ್ಕೆ ಅವಕಾಶ ಕೊಡಬಾರದು. ಈ ಸಂದರ್ಭದಲ್ಲಿ ನನ್ನದೊಂದು ಸಲಹೆ ಏನೆಂದರೆ, ಇವೊತ್ತು ರಾಜ್ಯದಲ್ಲಿ ಎಲ್ಲ ವಿಶ್ವವಿದ್ಯಾಲಯಗಳನ್ನೂ ಒಳಗೊಂಡಂತೆ Karnataka State Higher Education Council ಇದೆ, ಆದರೆ ಅದಕ್ಕೆ ಯಾವುದೇ ಅಧಿಕಾರವಿಲ್ಲ. ಏನಿದ್ದರೂ ಅದು ಸಲಹೆ ಕೊಡಲಿಕ್ಕೆ ಮಾತ್ರ ಇಟ್ಟುಕೊಂಡಿರುವಂಥದ್ದು. ಆ Karnataka State Higher Education Council ಅಸ್ತಿತ್ವಕ್ಕೆ ಬಂದಾಗಿನಿಂದ

ಇಲ್ಲಿಯವರೆಗೆ ನಮ್ಮ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿನ ಶೈಕ್ಷಣಿಕ ವ್ಯವಸ್ಥೆಯನ್ನು ಏಕರೂಪಕ್ಕೆ ತರುವುದಕ್ಕಾಗಿರುವುದಿಲ್ಲ.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೇ, ಈ ವಿಧೇಯಕದ ಬಗ್ಗೆ ಮಾತನಾಡಿ ಎಂದರೆ ನೀವು general policy ಬಗ್ಗೆ ಮಾತನಾಡುತ್ತಿದ್ದೀರಿ. ನಾನೇನಾದರೂ ಮಧ್ಯೆ ಮಾತನಾಡಿದರೆ ಕೋಪ ಮಾಡಿಕೊಳ್ಳುತ್ತೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಇಷ್ಟು ಸಮಯ ತೆಗೆದುಕೊಳ್ಳಲಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, Karnataka State Higher Education Council ನಿಂದ ಯಾವುದೇ ಸುಧಾರಣೆಯನ್ನು ತರುವುದಕ್ಕಾಗುತ್ತಿಲ್ಲ. ಆದ್ದರಿಂದ ಸರ್ಕಾರ ಸಂವಿಧಾನಬದ್ಧವಾದ ಅಧಿಕಾರವನ್ನು ಕೊಟ್ಟು ರಾಜ್ಯ ಮಟ್ಟದಲ್ಲಿ ಒಂದು ಉನ್ನತ ಶಿಕ್ಷಣ ಸಮಿತಿಯನ್ನು ರಚನೆ ಮಾಡಿ, ಅದರ ಮುಖಾಂತರವಾಗಿ ಈ ಖಾಸಗಿ ವಿಶ್ವವಿದ್ಯಾಲಯಗಳು ಮತ್ತು ಸರ್ಕಾರದ ಸಾಮಾನ್ಯ ವಿಶ್ವವಿದ್ಯಾಲಯಗಳೆಲ್ಲವನ್ನು ಕೂಡ ನಿಯಂತ್ರಣ ಮಾಡತಕ್ಕಂತಹ ಒಂದು Regulatory Body ಯನ್ನಾಗಿ ಅದನ್ನು ಸ್ಥಾಪನೆ ಮಾಡಬೇಕೆಂಬುದು ನನ್ನ ಸಲಹೆಯಾಗಿದೆ.

**ಶ್ರೀ ಕೆ.ಬಿ. ಶಾಣಪ್ಪ (ನಾಮನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ತಂದಿರುವಂತಹ ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಈ ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಸರ್ಕಾರ ಅವಕಾಶ ಕೊಡುವಾಗ ಸರ್ಕಾರ ಬಹಳಷ್ಟು ವಿಚಾರ ಮಾಡಬೇಕಾಗುತ್ತದೆ. ಏಕೆಂದರೆ ಈಗಾಗಲೇ ಸಾಕಷ್ಟು ಖಾಸಗಿ ವಿಶ್ವವಿದ್ಯಾಲಯಗಳಿಗೆ ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಸರ್ಕಾರದವರು ತಾವಾಗಿಯೇ ಇಂತಹ ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುಮತಿಯನ್ನು ಕೊಡುವಾಗ are they not creating “have and have not” ? ಶ್ರೀಮಂತರೆಲ್ಲರೂ ದೊಡ್ಡ ದೊಡ್ಡ ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸುತ್ತಾರೆ ಅಲ್ಲಿ ಶ್ರೀಮಂತರಷ್ಟೇ ವಿದ್ಯಾಭ್ಯಾಸ ಮಾಡಲು ಶಕ್ತರಾಗಿರುತ್ತಾರೆ. ಹೀಗಾಗಿ ನಮ್ಮ

ರಾಜ್ಯದ ಬಡ ಕುಟುಂಬಗಳ ಮಕ್ಕಳು ಸರ್ಕಾರಿ ಕಾಲೇಜುಗಳು ಮತ್ತು ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿಯೇ ವಿದ್ಯಾಭ್ಯಾಸವನ್ನು ಮಾಡಬೇಕಾಗುತ್ತದೆ. ರಸ್ತೆ ನಿರ್ಮಾಣದ ಕಾಮಗಾರಿಗಳನ್ನು ನಮ್ಮ ರಾಜ್ಯದಲ್ಲಿ ಖಾಸಗಿಯವರಿಗೆ ಕೊಡುತ್ತೇವೆ, ಅವರು ರಸ್ತೆಗಳನ್ನು ನಿರ್ಮಾಣ ಮಾಡಿ ಸುಂಕವನ್ನು ಸಂಗ್ರಹಿಸುವುದು ಇನ್ನಿತರ ಬೇರೆ ಬೇರೆ ವ್ಯವಸ್ಥೆಗಳನ್ನು ಮಾಡಿಕೊಳ್ಳುತ್ತಾರೆ. ಅದೇರೀತಿ ನಮ್ಮ ರಾಜ್ಯದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಮಾತ್ರ ಖಾಸಗಿ ವ್ಯಕ್ತಿಗಳು ಸಾಕಷ್ಟು ಹಣವನ್ನು ಹೂಡಲು ಸಿದ್ಧರಿದ್ದಾರೆ. ಆದರೆ ಅವರು ವಿದ್ಯುಚ್ಛಕ್ತಿ ಉತ್ಪಾದನೆಗಾಗಲಿ, ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ನಾವು ಹೂಡಿಕೆ ಮಾಡುತ್ತೇವೆ, ನೀವು concession ಕೊಡಿ ಎಂದು ಕೇಳಲು ಮುಂದೆ ಬರುತ್ತಿಲ್ಲ. ಕೇವಲ ಶಿಕ್ಷಣ ಕ್ಷೇತ್ರದಲ್ಲಿ ಮಾತ್ರ ಬಂದು ರಾಜ್ಯದಲ್ಲಿ ಸಾವಿರಾರು ಎಕರೆ ಜಮೀನನ್ನು ಖರೀದಿಸಿ ಶಾಲಾ ಕಾಲೇಜುಗಳು, ವಿಶ್ವವಿದ್ಯಾಲಯಗಳನ್ನೇನು ಪ್ರಾರಂಭ ಮಾಡುತ್ತಾರೆ ಅಲ್ಲಿ ನಮ್ಮ ಬಡ ಕುಟುಂಬಗಳ ಮಕ್ಕಳು ಪ್ರವೇಶ ಪಡೆದು ವಿದ್ಯಾಭ್ಯಾಸ ಮಾಡುವುದಕ್ಕಾಗದಂತಹ ಪರಿಸ್ಥಿತಿ ಇದೆ. It is only helpful to the people who have got lot of money. ದೊಡ್ಡ ಪ್ರಮಾಣದಲ್ಲಿ ಓದಿದ ಮಕ್ಕಳಿಗೆ chance ಕೊಡುತ್ತಾರೆ. ಸರ್ಕಾರವರು ಇದರಲ್ಲಿ division create ಮಾಡುವುದು ಬೇಡ ಎಂದು ನನ್ನ ಅನಿಸಿಕೆ.

**ಶ್ರೀ ಬಿ.ಜಿ. ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 1987–88ರಲ್ಲಿ ನಾನು ಈ ಸದನದಲ್ಲಿ Ph.D., ತೆಗೆದುಕೊಂಡಿರುವ ಒಬ್ಬ Professor ಪ್ರಬಂಧವನ್ನು produce ಮಾಡಿದ್ದೇನು. ಆದರೆ verify ಮಾಡಿದಾಗ ಅವರು ಬೋಗಸ್ ಕೊಟ್ಟಿದ್ದರು. ಆತ ಅಲ್ಲಿ ಓದಿರಲಿಲ್ಲ. ಇವತ್ತು high school ಅಥವಾ primary school license ತೆಗೆದುಕೊಳ್ಳಬೇಕಾದರೆ ವರ್ಷಾನುಗಟ್ಟಲೆ ಶಿಕ್ಷಣ ಇಲಾಖೆಯವರು ಕೇಳುವ ಹಲವಾರು ದಾಖಲೆಗಳನ್ನು ಕೊಟ್ಟು ಕಾಯುವ ಪ್ರತೀತಿ ಇದೆ. ಅಂತಹದ್ದರಲ್ಲಿ ಒಂದು ವಿಶ್ವವಿದ್ಯಾಲಯಕ್ಕೆ ಅವರು ಕೇಳಿದರು ಎಂದು ತೆಗೆದುಕೊಂಡು ಬಂದು 24 ಗಂಟೆಗಳಲ್ಲಿ ಒಪ್ಪಿಗೆ ಕೊಟ್ಟು ಕಳುಹಿಸುವುದು. ಅಂದರೆ ಕಾಯಿದೆಗಳನ್ನು

ಮಾಡುವುದರಲ್ಲಿ ಸ್ವಲ್ಪವೂ ವಿವೇಚನೆ ಇಲ್ಲದೇ ಮಾಡುವುದು ಸಮಾಜದ ದ್ರೋಹ ಎಂದು ನನ್ನ ಅಭಿಪ್ರಾಯವಾಗಿದೆ.

ಇನ್ನು ಒಂದು ವಿಚಾರದ ಬಗ್ಗೆ ಹೇಳಬೇಕೆಂದರೆ ಇವತ್ತು ಬೆಂಗಳೂರಿನಲ್ಲಿ ಧಂದೆಗಳು ಜಾಸ್ತಿಯಾಗುತ್ತಿವೆ. ಮೊದಲು ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಶೇಕಡ 40ರಷ್ಟು ಸಾಮಾಜಿಕ ನ್ಯಾಯ ಕೊಡುತ್ತೇವೆ ಎಂದು ಒಪ್ಪಿಗೆ ಕೊಟ್ಟ ಮೇಲೆ ಸಿಂಡಿಕೇಟ್ ಮಾಡಿ ಸುಪ್ರೀಂಕೋರ್ಟ್‌ಗೆ ಹೋದರು. ಸುಪ್ರೀಂಕೋರ್ಟ್‌ನಲ್ಲಿ ಅವರಂತೆಯೇ ನ್ಯಾಯ ಬಂತು, ಸರ್ಕಾರದ ಪರವಾಗಿ ಸಾಮಾಜಿಕ ನ್ಯಾಯ ಸಿಗಲಿಲ್ಲ. ಅದೇ ರೀತಿ ಇಷ್ಟೊಂದು ವಿಶ್ವವಿದ್ಯಾಲಯಗಳನ್ನು ಕೊಟ್ಟರೆ Universities Association ಆಗುತ್ತದೆ ಮತ್ತು ವಿಶ್ವವಿದ್ಯಾಲಯಗಳ ಧಂದೆ ಆಗುತ್ತದೆ. ನಂತರ ಇವರೆಲ್ಲರೂ ಖಾಸಗಿಯಾಗಿ ಹಣ ಇರುವವರು ಹೊರದೇಶದಿಂದ ಬರಬಹುದು. ಮೂಲಭೂತ ಸೌಕರ್ಯಗಳನ್ನು ಕರ್ನಾಟಕ ಕೊಟ್ಟು ಸರ್ಟಿಫಿಕೇಟ್‌ಗಳನ್ನು ಹೊರದೇಶ ಅಥವಾ ಹೊರರಾಜ್ಯಗಳವರು ತೆಗೆದುಕೊಂಡು ಹೋಗುತ್ತಾರೆ. ಇದೊಂದು 'site mafia' ಇದ್ದಂತೆ 'education mafia' ಎಂದು ಕರೆಯಬಹುದು. ಆದ್ದರಿಂದ ಈ ರೀತಿ ತುರ್ತಾಗಿ ಬಿಲ್ಲುಗಳನ್ನು ತಂದು, ತಕ್ಷಣವೇ ಒಪ್ಪಿಗೆ ತೆಗೆದುಕೊಂಡು ಹೋಗುವುದು ಅಧರ್ಮ ಹಾಗೂ ಇಂತಹ ಪಾಪಕರ್ಮದಲ್ಲಿ ಸದನದಲ್ಲಿ ಭಾಗಿಯಾಗಬಾರದು ಎಂದು ನನ್ನ ಅಭಿಪ್ರಾಯ.

**ಶ್ರೀ ಬಸವರಾಜ ಹೊರಟ್ಟಿ:-** ವೈದೇಹಿಯವರು ಮೆಡಿಕಲ್‌ನಲ್ಲಿ ಮಕ್ಕಳಿಗೆ fraud ಮಾಡಿದ ವಿಚಾರ ಟಿವಿ ಮತ್ತು ಪತ್ರಿಕೆಗಳಲ್ಲಿ ಬಂತು. ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಇದನ್ನು ಸರ್ಕಾರವು clarify ಮಾಡಬೇಕು. ಅವರು ವೈದೇಹಿ ವಿಖ ಅಲ್ಲಿ ಮೆಡಿಕಲ್ ಮತ್ತು ಡೆಂಟಲ್ ಎಲ್ಲವೂ fraud ಆಗಿ ಮಕ್ಕಳು ಬೀದಿಗಿಳಿದು strike ಮಾಡಿದರು. ಇದರ ಬಗ್ಗೆ clarify ಮಾಡಬೇಕು.

**ಶ್ರೀ ರಾಮಚಂದ್ರಗೌಡ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಂಜಿನಿಯರಿಂಗ್‌ಗೆ ಬೇರೆ ವಿಶ್ವವಿದ್ಯಾಲಯವನ್ನು ಮಾಡಿದರು, ಮೆಡಿಕಲ್‌ಗೆ ಬೇರೆ ವಿಶ್ವವಿದ್ಯಾಲಯವನ್ನು ಮಾಡಿದ ಮೇಲೆ ಬೇರೆ ಬೇರೆ ವಿಶ್ವವಿದ್ಯಾಲಯಗಳು ಹಾಗೆಯೇ ಉಳಿದುಕೊಂಡವು. ಈಗ ಅನೇಕ ಖಾಸಗಿ ವಿಶ್ವವಿದ್ಯಾಲಯಗಳು ಬರುತ್ತಿವೆ. "ವಿಶ್ವವಿದ್ಯಾನಿಲಯ" ಎಂದರೆ ವಿಶ್ವದಲ್ಲಿರುವ ವಿದ್ಯೆಗಳನ್ನು ಕಲಿಯುವ ಒಂದು ಆಶ್ರಯ. ಆದರೆ ಅದು ಬೇರೆ ಬೇರೆ ಆಗಿಬಿಟ್ಟಿದೆ. ಇಂಜಿನಿಯರಿಂಗ್‌ಗೆ ಬೇರೆ, ಮೆಡಿಕಲ್‌ಗೆ ಬೇರೆ ಆಯಿತು. ಈಗ ಇಂಜಿನಿಯರಿಂಗ್ ಮತ್ತು ಮೆಡಿಕಲ್‌ಗೆ ಸೇರಿಸಿ ಆಗುತ್ತಿದೆ. Commerce and Arts ಸೇರಿಸಿ ಒಂದಾಗುತ್ತಿದೆ. ಹೀಗೆ ಭಿನ್ನಭಿನ್ನವಾಗಿ ಆಗುತ್ತಿರುವ ಸಂದರ್ಭದಲ್ಲಿ ಸಂಪೂರ್ಣವಾಗಿ ವಿದ್ಯಾಕ್ಷೇತ್ರದಲ್ಲಿ ಚಿಂತನೆ ಮಾಡುವ ಅವಶ್ಯಕತೆ ಇದೆ. ನಾನು ಮೊದಲೆ ಮಾತನಾಡುವಾಗ ಹೇಳಿದಂತೆ ಜಿಲ್ಲೆಗೊಂದು ವಿಶ್ವವಿದ್ಯಾಲಯ ಆಗಬೇಕು ಜಿಲೆಯಲ್ಲಿರುವ ವಿಶ್ವವಿದ್ಯಾಲಯಗಳಿಗೆ ಆ ಜಿಲ್ಲೆಯಲ್ಲಿರುವ ಕಾಲೇಜುಗಳು ಒಟ್ಟಿಗೆ ಇರಬೇಕು ಮತ್ತು ಸರ್ಕಾರದ ಅಧೀನದಲ್ಲಿರುಬೇಕು. ಇವತ್ತು ಖಾಸಗಿ ವಿಶ್ವವಿದ್ಯಾಲಯಗಳು ಬಂದಾಗ ಒಂದೊಂದು ವಿಶ್ವವಿದ್ಯಾಲಯದ standard ಬೇರೆಯಾಗುತ್ತದೆ. ಅವರು assess ಮಾಡುವುದು ಒಂದು ರೀತಿಯಾಗಿರುತ್ತದೆ. ಅಲ್ಲದೇ ಅವರು ವಿದ್ಯಾರ್ಥಿಗಳಿಗೆ ಮಾರ್ಕ್ಸ್ ಕೊಡುವುದು ಒಂದು ರೀತಿಯಾದರೆ ಇನ್ನೊಂದು ವಿಶ್ವವಿದ್ಯಾಲಯದಲ್ಲಿ ಮತ್ತೊಂದು ರೀತಿ ಕೊಡುತ್ತಾರೆ. ಯಾರು ಯಾವ standard ನಲ್ಲಿದ್ದಾರೆ ಎಂದು ಗುರುತು ಹಚ್ಚುವುದು ಹೇಗೆ? ಇದರ ನಿಯಂತ್ರಣವನ್ನು ಹೇಗೆ ತರುತ್ತಾರೆ? ಈ ರೀತಿಯಾಗಿ ಒಬ್ಬರಿಗೊಬ್ಬರಿಗೆ ಸ್ಪರ್ಧೆ ಬಂದು ಅವರವರ ವಿಶ್ವವಿದ್ಯಾಲಯಗಳಲ್ಲಿ ಹೆಚ್ಚು ಅಂಕ ಅಥವಾ grade ತೆಗೆದುಕೊಂಡು ಮತ್ತೊಂದು ವಿಶ್ವವಿದ್ಯಾಲಯದಲ್ಲಿ ಕಡಿಮೆ ಅಂಕ ಬಂದ ಸಂದರ್ಭದಲ್ಲಿ ತುಲನೆ ಮಾಡುವವರು ಯಾರು? ಅಳತೆ ಮಾಡುವವರು ಯಾರು? ಈ ರೀತಿ ಒಂದೇ ರಾಜ್ಯದಲ್ಲಿ ಅನೇಕ ವಿಶ್ವವಿದ್ಯಾಲಯಗಳು ಒಂದು ಹಿಡಿತದಲ್ಲಿ ಇಲ್ಲದೇ ಇರುವಾಗ ಸಮಸ್ಯೆಗಳು ಬಹಳ ಬರುತ್ತವೆ. ಇವರು ತಾತ್ಕಾಲಿಕವಾಗಿ ಏನೋ

ಮಾಡುತ್ತಿದ್ದಾರೆ. ಇದನ್ನು ವಿದ್ಯಾಕ್ಷೇತ್ರದಲ್ಲಿ ಮರುಚಿಂತನೆ ಮಾಡುವ ಅವಶ್ಯಕತೆ ಇದ್ದು, ಇದಾಗದಿದ್ದರೆ ಈ ರೀತಿ ಅಣಬೆಗಳು ಬಂದ ಹಾಗೆ ಬಂದು ಸಮಸ್ಯೆಗಳು ಆಗುತ್ತವೆ. ಆದ್ದರಿಂದ ಸರ್ಕಾರದ ಅಧೀನದಲ್ಲಿ ಬರುವ ವಿಶ್ವವಿದ್ಯಾಲಯಗಳನ್ನು ತಾಲ್ಲೂಕಿಗೆ ಅಥವಾ ಜಿಲ್ಲೆಗೊಂದು ಮಾಡಲಿ. ಆದರೆ ಖಾಸಗಿಯಾಗಿ ಮಾಡಲು ಯಾರನ್ನೂ ಬಿಡಬಾರದು. Engineering, Medical, B.A., B.Sc., B.Com., ಇವೆಲ್ಲವನ್ನೂ ಒಂದೇ ವಿಶ್ವವಿದ್ಯಾಲಯದಲ್ಲಿ ಇಡಲಿ. ಚಿಕ್ಕ ಚಿಕ್ಕ ವಿಶ್ವವಿದ್ಯಾಲಯಗಳಾಗಿ ಮಾಡಿದರೆ ಮಾತ್ರ ಸಮಸ್ಯೆ ಬಗೆಹರಿಯುತ್ತದೆಯೇ ವಿನ: ಸಮಸ್ಯೆ ಬಗೆಹರಿಯುವುದಿಲ್ಲ ಎಂದು ಹೇಳುತ್ತೇನೆ. 'Deemed University' ಎಂದು ಮಾಡಿದ್ದು, most of the universities became 'Doomed Universities' ಇದರ ಬಗ್ಗೆ ಸುಪ್ರೀಂಕೋರ್ಟ್ ತೀರ್ಮಾನವನ್ನು ಕೊಟ್ಟಿದ್ದು, ವಾಪಸ್ಸು ಹೋದವರೆ ಪುನ: ಅವರೇ ಬೇರೆ ಹೆಸರಿನಲ್ಲಿ ಬರುತ್ತಿದ್ದಾರೆ. ಇದನ್ನೂ ಕೂಡ ಚಿಂತನೆ ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಖಾಸಗಿ ಮತ್ತು ಸಾರ್ವಜನಿಕ ವಲಯಗಳು ಒಟ್ಟೊಟ್ಟಿಗೆ ಬೆಳೆಯಬೇಕೆಂದು ಇದ್ದು, ಖಾಸಗಿ ರಂಗ ಹೆಚ್ಚಾಗಿ ಸಾರ್ವಜನಿಕ ರಂಗ ಕಡಿಮೆಯಾದಾಗ ಆರ್ಥಿಕ ಅಸಮಾನತೆಯನ್ನು ಏಳಿಸುತ್ತದೆ. ಒಂದು ಕಡೆ 'ಸಮಾನತೆ (equality)' ಯನ್ನು ensure ಮಾಡಬೇಕೆಂದು ಹೇಳುತ್ತೇವೆ. 'liberty'ಯನ್ನು ensure ಮಾಡಬೇಕೆಂದು ಹೇಳುತ್ತೇವೆ, ಮತ್ತೊಂದು ಕಡೆ socialistic pattern of society ಯನ್ನು establish ಮಾಡಬೇಕೆಂದು ಆಶಯವನ್ನಿಟ್ಟುಕೊಂಡು ಸಂವಿಧಾನವನ್ನು ಒಪ್ಪಿಕೊಂಡಿದ್ದೇವೆ. ಆದರೆ ಖಾಸಗಿ ಸಂಸ್ಥೆಗಳು ಹೆಚ್ಚಾಗಿ ಬಂದು ನಿಜವಾಗಲೂ ಸಾರ್ವಜನಿಕ ರಂಗವನ್ನು ನುಂಗಿಹಾಕುತ್ತದೆ. ಒಂದಲ್ಲ ಒಂದು ದಿನ dominate ಮಾಡುತ್ತಾರೆ ಮತ್ತು ಬಂಡವಾಳ ಶಾಹಿಗೆ ಅಧಿಕಾರ ಕೊಟ್ಟಂತೆ ಆಗುತ್ತದೆ. ಇದು anti-democratic ವ್ಯವಸ್ಥೆಯಾಗಲು ಕಾರಣವಾಗಿರುತ್ತದೆ. ಅಲ್ಲದೇ ಮೀಸಲಾತಿ ಪಾಲಿಸಬೇಕು ಹಾಗೂ regional employment ನಲ್ಲಿ ಆದ್ಯತೆ

ಕೊಡಬೇಕು ಮತ್ತು ಕನ್ನಡದವರಿಗೆ ಆದ್ಯತೆ ಕೊಡಬೇಕೆಂಬ ನಿರ್ಬಂಧ ಇರುವುದಿಲ್ಲ. ಖಾಸಗಿಯವರಿಗೆ ಇಷ್ಟೊಂದು liberty ಕೊಟ್ಟರೆ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳ ಮೇಲೆ ಪರಿಣಾಮ ಬೀರುತ್ತದೆ. ನಾವು ಸಂವಿಧಾನಬದ್ಧವಾಗಿ social fabric and social obligation ಗೆ ಬದ್ಧರಾಗಿದೇವೆ, ಅದರ ವಿರುದ್ಧವಾದ ನೀತಿ ಇದೆ. ಕಾನೂನು ಮಾಡುವಾಗ ಎಲ್ಲಾ ಆಶಯಗಳನ್ನು ಕಾನೂನಿನಲ್ಲಿ ಅಳವಡಿಸಬೇಕು. ಮೀಸಲಾತಿ ಉಲ್ಲಂಘನೆ, regional employment ಉಲ್ಲಂಘನೆ ಹಾಗೂ ಒಂದೇ ವರ್ಗ ಅಥವಾ ಜಾತಿಯ ಸ್ವತ್ತಾಗಬಾರದು. ಈ ರೀತಿ ಆದರೆ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಖಾಸಗಿ ಮತ್ತು ಸಾರ್ವಜನಿಕ ರಂಗಗಳಿಗೆ ಒಂದು ಬೆಲೆ ಇರುತ್ತದೆ, ಇದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಆರ್.ವಿ. ವೆಂಕಟೇಶ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಖಾಸಗಿ ವಿಶ್ವವಿದ್ಯಾಲಯಗಳ ಮೂಲ ಉದ್ದೇಶವೇ ಶಿಕ್ಷಣಕ್ಕಿಂತ ಹೆಚ್ಚಾಗಿ ವಾಣಿಜ್ಯ ಉದ್ದೇಶದಿಂದ ಕೆಲವು ಶ್ರೀಮಂತ ವ್ಯಕ್ತಿಗಳು ಪ್ರಾರಂಭ ಮಾಡುವ ವಿಶ್ವವಿದ್ಯಾಲಯಗಳಾಗಿವೆ. ನಮ್ಮ ರಾಜ್ಯದವರಿಗಿಂತ ಹೆಚ್ಚಾಗಿ ಬೇರೆ ಬೇರೆ ರಾಜ್ಯದವರು ಇಂತಹ ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡುತ್ತಿದ್ದಾರೆ. ಅನೇಕ ಸದಸ್ಯರು ಮಾತನಾಡಿದಂತೆ ಸರ್ಕಾರಿ ಹಾಗೂ ಖಾಸಗಿ ವಿಶ್ವವಿದ್ಯಾಲಯಗಳು ಕ್ರಮವಾಗಿ ಬಡ ಮತ್ತು ಶ್ರೀಮಂತ ವಿಶ್ವವಿದ್ಯಾಲಯಗಳು ಎಂದಾಗುತ್ತವೆ. ಕಾರಣವೇನೆಂದರೆ ಇಂದಿನ ಬಿಲ್ಲಿನಲ್ಲಿ ಇರುವಂತೆ ಅವರು ಎಷ್ಟಾದರೂ ಡೊನೇಷನ್ ಕಲೆಕ್ಟ್ ಮಾಡಬಹುದು, ಗಿಫ್ಟ್ ಕಲೆಕ್ಟ್ ಮಾಡಬಹುದು, ಅವರಿಗೆ ಯಾವುದೇ ನಿಯಂತ್ರಣ ಇಲ್ಲ. ಅವರ ಮುಖ್ಯ ಉದ್ದೇಶವೇ ವಾಣಿಜ್ಯ ಉದ್ದೇಶವಾಗಿದೆ. ಅವರು ಪ್ರಾರಂಭ ಮಾಡುವಾಗ ಸರ್ಕಾರಕ್ಕೆ ಆರ್ಥಿಕವಾಗಿ ಎಷ್ಟರಮಟ್ಟಿಗೆ ಪಾವತಿ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ, ಅದನ್ನು ಹೇಳಿಯೂ ಇಲ್ಲ. ಜೊತೆಗೆ ಸರ್ಕಾರಿ ವಿಶ್ವವಿದ್ಯಾಲಯಗಳು ಗಣಮಟ್ಟ, ಮೂಲಭೂತ ಸೌಕರ್ಯಗಳು ಯಾವರೀತಿ ಇದೆ ಎಂದು ನಮಗೆ ಗೊತ್ತಿದೆ. ಆದರೆ ಈ ವಿಶ್ವವಿದ್ಯಾಲಯಗಳ ಮುಖ್ಯ

ಉದ್ದೇಶವೇ ಆಕರ್ಷಣೆಯಾಗಿದೆ. ಮೂಲಭೂತ ಸೌಕರ್ಯ ಇರುತ್ತದೆ, teaching faculty ಚೆನ್ನಾಗಿರುತ್ತದೆ ಹಾಗೂ ಅಷ್ಟೇ ಡೊನೇಷನ್ ಕಲೆಕ್ಟ್ ಮಾಡುತ್ತಾರೆ. ಒಂದಕ್ಕೆ ನಾಲ್ಕು ಲಾಭ ಪಡೆಯುತ್ತಾರೆ. ಸನ್ಮಾನ್ಯ ಸಭಾಪತಿಯವರೇ, ನಮ್ಮ ವಿಶ್ವವಿದ್ಯಾಲಯಗಳು ಕೂಡ ಆ ಗುಣಮಟ್ಟದಲ್ಲಿಯೇ ಬೆಳೆಯಬೇಕು. ಬೋಧಕ ವರ್ಗದವರಿಗೆ ಸರ್ಕಾರದಿಂದ ಕೊಡುತ್ತಿರುವ ವೇತನ ಯಾವುದೇ ಉನ್ನತ ಮಟ್ಟದ ಬೋಧಕರು ಒಪ್ಪುವಂತಹದು ಅಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ಖಾಸಗಿ ವಿಶ್ವವಿದ್ಯಾಲಯಗಳು ಸಂಗ್ರಹ ಮಾಡುವಂತಹ ವಂತಿಗೆಯಲ್ಲಿ ಎಷ್ಟು ಬೇಕಾದರೂ ಸಂಬಳವನ್ನು ಕೊಟ್ಟು, ಸ್ಪರ್ಧಾತ್ಮಕವಾದ ರೀತಿಯಲ್ಲಿ ಉತ್ತಮ ಗುಣಮಟ್ಟದ ಬೋಧಕರನ್ನು ಸೆಳೆದುಕೊಳ್ಳುತ್ತಾರೆ. ಸರ್ಕಾರಿ ವಿಶ್ವವಿದ್ಯಾಲಯಗಳು ಆ ಮಟ್ಟದಲ್ಲಿ ಸಂಬಳವನ್ನು ಕೊಡಬೇಕಾದರೆ, ಖಾಸಗಿ ವಿಶ್ವವಿದ್ಯಾನಿಲಯಗಳಿಂದ ಪ್ರತಿವರ್ಷ ಒಬ್ಬ ವಿದ್ಯಾರ್ಥಿಗೆ ಇಷ್ಟು ಎಂದು ಹಣವನ್ನು ಸಂಗ್ರಹ ಮಾಡಿ ಅದನ್ನು ಸರ್ಕಾರಿ ವಿಶ್ವವಿದ್ಯಾನಿಲಯಗಳು ಉಪಯೋಗ ಮಾಡಿಕೊಳ್ಳಬೇಕೆನ್ನುವುದು ನನ್ನ ಮನವಿಯಾಗಿದೆ.

**ಸಭಾಪತಿಯವರು:-** ಈಗ ಪುಟ್ಟಣ್ಣನವರು ತಮ್ಮ ಮಾತುಗಳನ್ನು ಪ್ರಾರಂಭ ಮಾಡಬೇಕು. ತಾವು ಶಿಕ್ಷಣ ಕ್ಷೇತ್ರದಲ್ಲಿ ಬಹಳ ಆಸಕ್ತಿಯುಳ್ಳವರು ಶಿಕ್ಷಣಕ್ಕೆ ಸಂಬಂಧಪಟ್ಟ ಎಲ್ಲ ವಿಚಾರಗಳ ಬಗ್ಗೆಯೂ ತಾವು ಮಾತನಾಡುತ್ತೀರಿ. ಆದ್ದರಿಂದ ಮೂಲಭೂತ ಪ್ರಶ್ನೆಗಳ ಬಗ್ಗೆ ತಾವು ಮಾತನಾಡದೇ ಗಹನವಾಗಿರುವಂತಹ ವಿಷಯಗಳ ಬಗ್ಗೆ ಮಾತ್ರ ಪ್ರಸ್ತಾಪ ಮಾಡಿ ಎನ್ನುವುದು ನನ್ನ ಸಲಹೆಯಾಗಿದೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ನಾನು ಆಯುವ್ಯಯದಲ್ಲಿ ಶಿಕ್ಷಣದ ವ್ಯಾಪ್ತಿಯ ಬಗ್ಗೆ ಮಾತನಾಡುತ್ತೇನೆ. ಸದರಿ ಶಿಕ್ಷಣ ಸಂಸ್ಥೆಯವರು ಆಂಧ್ರಪ್ರದೇಶದಲ್ಲಿ 5 ಶಿಕ್ಷಣ ಸಂಸ್ಥೆಗಳನ್ನು ಮತ್ತು ಬೆಂಗಳೂರಿನಲ್ಲಿಯೂ ಸಹ ಕೆಲವು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ ಎನ್ನುವಂತ ಮಾತನ್ನು ಹೇಳಿದರು. ಮುಂದಿನ ದಿನಗಳಲ್ಲಿ ಅವರು ಅಲ್ಲಿಯೂ ವಿಶ್ವವಿದ್ಯಾಲಯವನ್ನು ನಡೆಸುವುದಕ್ಕೆ affiliation ಕೊಡಲಾಗುತ್ತದೆಯೇ

ಎನ್ನುವುದು ನನ್ನ ಪ್ರಶ್ನೆಯಾಗಿದೆ. ತಮಿಳುನಾಡಿನ ಕೆಲವು ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಂಡು ಎಲ್ಲರಿಗೂ ಡಿಗ್ರಿಗಳನ್ನು ಕೊಟ್ಟಿವೆ. ಈ ರೀತಿ ಆಗಬಾರದು ಎಂದು ದೊಡ್ಡ ಗಲಾಟೆ ಆಯಿತು. ಆದ್ದರಿಂದ ಈ ವಿದ್ಯಾ ಸಂಸ್ಥೆಯವರು ಎಲ್ಲಿ ಬೇಕಾದರೂ ಕಾಲೇಜುಗಳನ್ನು ತೆರೆಯಬಹುದೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇವತ್ತು ಬೇರೆ ರಾಜ್ಯದಲ್ಲಿ ಪ್ರಾರಂಭ ಮಾಡುತ್ತೇವೆ ಎನ್ನುತ್ತಾರೆ. ನಂತರ ಬೇರೆ ದೇಶದಲ್ಲಿ ಎಂದು ಹೇಳುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, ಈ ಶಿಕ್ಷಣ ಸಂಸ್ಥೆಗೆ ಬಿ.ಎಸ್ಸಿ(ಕೃಷಿ) ಕೋರ್ಸ್‌ನ್ನು ನಡೆಸಲು ಅನುಮತಿ ಕೊಡುತ್ತೇವೆಂದು ಹೇಳಿದ್ದಾರೆ. ಅವರಿಗೆ ಬಿ.ಎಸ್ಸಿ(ಕೃಷಿ) ಕೋರ್ಸ್ ನಡೆಸುವುದಕ್ಕೆ ಅನುಮತಿಯನ್ನು ನೀಡುವುದು ಒಳ್ಳೆಯದಲ್ಲ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಯಾರೋ ಖಾಸಗಿಯವರು 25 ಎಕರೆ ಜಮೀನನ್ನು ಇಟ್ಟುಕೊಂಡಿದ್ದಾರೆ ಎಂದು ಆ ಕೋರ್ಸ್‌ನ್ನು ನಡೆಸಲು ಅನುಮತಿಯನ್ನು ನೀಡಿದರೆ ಅವರು ಹೇಗೆ ಸಂಶೋಧನೆ ಮಾಡುತ್ತಾರೆ ಮತ್ತು ಎಲ್ಲಿಂದ ಬೋಧಕ ವರ್ಗದವರನ್ನು ತರುತ್ತಾರೆ ಎನ್ನುವುದನ್ನು ನಾವು ಚಿಂತನೆ ಮಾಡಬೇಕಾಗುತ್ತದೆ. ಆದ್ದರಿಂದ ಬಿ.ಎಸ್ಸಿ (ಕೃಷಿ) ಯಂತಹ ಕೋರ್ಸ್‌ಗಳನ್ನು ನಡೆಸಲು ಅವರಿಗೆ ಅನುಮತಿ ಕೊಡುವುದು ಬೇಡ ಎನ್ನುವುದು ನನ್ನ ಸಲಹೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಕಳೆದ 8–10 ವರ್ಷಗಳಿಂದೀಚೆಗೆ ಕೆಲವು ಕಾಲೇಜುಗಳಿಗೆ ಸ್ವಾಯುತ್ತತೆಯನ್ನು ಕೊಟ್ಟಿದ್ದೇವೆ. ಅವರು ಯಾವ ರೀತಿಯಲ್ಲಿ ಕಾಲೇಜುಗಳನ್ನು ನಡೆಸುತ್ತಿದ್ದಾರೆ. ಯಾವ ರೀತಿಯಲ್ಲಿ ಪದವಿಗಳನ್ನು ಕೊಡುತ್ತಿದ್ದಾರೆ ಮತ್ತು ಯಾವ ರೀತಿಯ ಪಠ್ಯಕ್ರಮಗಳನ್ನು ಅನುಸರಿಸುತ್ತಿದ್ದಾರೆ ಎನ್ನುವುದನ್ನು ನಾವು ಗಮನಿಸಿದ್ದೇವೆ. ಇಂತಹ ಖಾಸಗಿ ಸಂಂಸ್ಥೆಗಳಿಗೆ ಪೂರ್ತಿಯಾಗಿ ಸ್ವಾಯತ್ತತೆಯನ್ನು ನೀಡಿದರೆ, ಅವರುಗಳು ತಮಿಳುನಾಡಿನ ಕೆಲವು ವಿಶ್ವವಿದ್ಯಾನಿಲಯಗಳು, ಸ್ವಾಯುತ್ತ ವಿಶ್ವವಿದ್ಯಾಲಯಗಳು ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳು ಯಾವ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸುತ್ತವೆ ಎನ್ನುವುದರ ಬಗ್ಗೆ ಮಾನ್ಯ ರಾಮಚಂದ್ರಗೌಡರು ಮೊನ್ನೆ ಮಾತನಾಡಿದರು. ಮೊನ್ನೆ ಯು.ಜಿ.ಸಿ.ಯವರು ನೂರಾರು ಡೀಮ್ಡ್

ವಿಶ್ವವಿದ್ಯಾಲಯಗಳನ್ನು ಮುಚ್ಚಿಸಿದರು. ಈ ರೀತಿ ಆಗಬಾರದು ಎನ್ನುವುದು ನನ್ನ ಸಲಹೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿ ಒಂದೇ ರೀತಿಯ ಪಠ್ಯಕ್ರಮ ಇರಬೇಕಾಗುತ್ತದೆ. ಒಂದೊಂದು ವಿಶ್ವವಿದ್ಯಾಲಯಗಳು ಒಂದೊಂದು ರೀತಿಯ ಪಠ್ಯಕ್ರಮವನ್ನು ಇಟ್ಟುಕೊಂಡರೆ ಯಾವ ರೀತಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲು ಸಾಧ್ಯವಾಗುತ್ತದೆ ಎನ್ನುವುದನ್ನು ತಾವೇ ಹೇಳಬೇಕಾಗಿದೆ. ಬಿ.ಎಸ್ಸಿ ಮತ್ತು ಬಿ.ಕಾಂ ಕೋರ್ಸ್‌ಗಳಿಗೆ ಸಾಮಾನ್ಯವಾಗಿರುವಂತಹ ಪಠ್ಯಕ್ರಮ ಬೇಕಾಗಿರುತ್ತದೆ, ನಮ್ಮ ಮಕ್ಕಳು ಸೇರುವ ಕಾಲಕ್ಕೆ ಒಂದು ರೀತಿಯ ಪಠ್ಯಕ್ರಮ, ಮಾನ್ಯ ಮರಿತಿಬ್ಬೇಗೌಡರ ಮಕ್ಕಳು ಓದುವ ಕಾಲಕ್ಕೆ ಒಂದು ರೀತಿಯ ಪಠ್ಯಕ್ರಮ ಈ ರೀತಿ ಪಠ್ಯಕ್ರಮಗಳು ವ್ಯತ್ಯಾಸವಾಗುತ್ತಾ ಹೋದರೆ, ಮಕ್ಕಳು ಸಿ.ಇ.ಟಿ. ಪರೀಕ್ಷೆ ಬರೆಯುವುದು ಹೇಗೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇದಕ್ಕೆ ಸರ್ಕಾರದಿಂದ ಉತ್ತರವನ್ನು ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ವಿಶ್ವವಿದ್ಯಾಲಯಗಳಿಗೆ ಸ್ವಾಯುತ್ತೆಯನ್ನು ನೀಡಿದರೆ ಹೇಳುವವರು ಕೇಳುವವರು ಯಾರೂ ಇರುವುದಿಲ್ಲ. ಸರ್ಕಾರದ ಆದೇಶಗಳನ್ನು ಪಾಲನೆ ಮಾಡುವಂತಹ ಅಧಿಕಾರವನ್ನು ಮತ್ತು ಅವರ ಆಡಳಿತಾತ್ಮಕ ವಿಷಯದಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವಂತಹ ಅಧಿಕಾರವನ್ನು ಸರ್ಕಾರ ಇಟ್ಟುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಅವರು ಸರ್ಕಾರವನ್ನು ಲೆಕ್ಕಕ್ಕೆ ಇಟ್ಟುಕೊಳ್ಳುವುದೇ ಇಲ್ಲ. ಕೆಲವು ಸದಸ್ಯರು ಇಷ್ಟೊಂದು ವಿಶ್ವವಿದ್ಯಾಲಯಗಳಿಗೆ ಸರ್ಕಾರ ಅನುಮತಿಯನ್ನು ಕೊಡುತ್ತದೆ ಇದು ಸರಿಯಲ್ಲ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಯಾವುದೋ ಕೆಲವೇ ಕೆಲವು ವಿಶ್ವವಿದ್ಯಾಲಯಗಳಿಗೆ ಅನುಮತಿಯನ್ನು ನೀಡಿದರೆ ಆ ವಿಶ್ವವಿದ್ಯಾಲಯಗಳು ಪದವಿ ನೀಡುವುದನ್ನು ಗುತ್ತಿಗೆಗೆ ತೆಗೆದುಕೊಂಡ ಅವರು ಪೂರ್ಣವಾಗಿ ದಾಖಲಾತಿಗಳನ್ನು ಮಾಡಿಕೊಂಡು ವಿದ್ಯೆಯನ್ನು ವ್ಯಾಪಾರೀಕರಣಗೊಳಿಸುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, ವಿಶ್ವವಿದ್ಯಾಲಯಗಳ ಗುಣಮಟ್ಟವನ್ನು ಕಾಪಾಡುವ ನಿಟ್ಟಿನಲ್ಲಿ ಮತ್ತು ಏಕರೂಪ ಪಠ್ಯಕ್ರಮವನ್ನು ಜಾರಿಗೆ ತರುವ ನಿಟ್ಟಿನಲ್ಲಿ ಒಂದು ಆಡಳಿತಾತ್ಮಕ ಸಮಿತಿಯನ್ನು ರಚನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಶೇಕಡಾ 40ರಷ್ಟು ಸರ್ಕಾರಿ ಕೋಟಾ ಕೊಡುತ್ತೇವೆಂದು ಹೇಳಿದ್ದಾರೆ. ಶೇಕಡಾ 40ರಷ್ಟು ಸರ್ಕಾರಿ ಸೀಟುಗಳನ್ನು ಈ ಕಾಲೇಜಿನಲ್ಲಿ ಯಾವ ರೀತಿಯಲ್ಲಿ ನೀಡಲಾಗುತ್ತದೆ ಹೇಗೆ ದಾಖಲಾತಿಗಳನ್ನು ಮಾಡಿಕೊಳ್ಳಲಾಗುತ್ತದೆ ಎನ್ನುವುದನ್ನು ತಿಳಿಸಬೇಕಾಗುತ್ತದೆ. ವೈದೇಹಿ ದಂತ ವೈದ್ಯಕೀಯ ಕಾಲೇಜಿನಲ್ಲಿ ಇಂತಿಷ್ಟು ಮೆರಿಟ್ ಸೀಟುಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ವೈದ್ಯ, ದಂತವ್ಯದ್ಯ ಮತ್ತು ಇಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ಇರುವಂತಹ ಮೆರಿಟ್ ಸೀಟುಗಳನ್ನು ಹಾಗೆಯೇ ಉಳಿಸಿಕೊಳ್ಳಲಾಗುತ್ತದೆಯೇ ಅಥವಾ ಶೇಕಡಾ 40ರಷ್ಟನ್ನು ತೆಗೆದುಕೊಳ್ಳಲಾಗುತ್ತದೆಯೇ ಎನ್ನುವುದು ನಿರ್ಧಾರವಾಗಬೇಕಾಗುತ್ತದೆ ಶೇಕಡಾ 40ರಷ್ಟು ಮೆರಿಟ್ ಸೀಟ್‌ಗಳಿಗೆ ಸರ್ಕಾರ ಏನು ಶುಲ್ಕವನ್ನು ನಿಗದಿ ಮಾಡಿರುತ್ತದೆ ಅಷ್ಟೇ ಶುಲ್ಕವನ್ನು ಅಲ್ಲಿಯೂ ತೆಗೆದುಕೊಳ್ಳಲಾಗುತ್ತದೆಯೇ ಎನ್ನುವುದರ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕಾಗಿದೆ. ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವಂತಹ ಸಂದರ್ಭದಲ್ಲಿ ಮೀಸಲಾತಿಯನ್ನು ಅನುಸರಿಸಬೇಕಾಗುತ್ತದೆ. ಮತ್ತು ಆಡಳಿತಾತ್ಮಕ ಸಮಿತಿಯನ್ನು ರಚನೆ ಮಾಡಿ ಅದರ ನಿಯಂತ್ರಣವನ್ನು ಸರ್ಕಾರವೇ ಇಟ್ಟುಕೊಳ್ಳಬೇಕಾಗುತ್ತದೆ ಎನ್ನುವ ಸಲಹೆಗಳನ್ನು ಸರ್ಕಾರಕ್ಕೆ ನೀಡುತ್ತಾ ಮಾತನಾಡಲು ನನಗೆ ಅವಕಾಶವನ್ನು ನೀಡದ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಡಾ॥ ದೊಡ್ಡರಂಗೇಗೌಡ (ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರು ಖಾಸಗಿ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಒಂದಾದ ಮೇಲೆ ಒಂದರಂತೆ ಪ್ರವಾಹೋಪಾದಿಯಲ್ಲಿ ತರುತ್ತಿರುವುದನ್ನು ನೋಡಿದರೆ ಅನುಮಾನ ಬರುತ್ತದೆ. ಇದು ನಿಜವಾಗಿಯೂ ಶೋಚನೀಯವಾದ ಸಂಗತಿಯಾಗಿದೆ. ಇದಕ್ಕೊಂದು ಮಿತಿ ಇಲ್ಲವೇ? ಈ ವಿಷಯದಲ್ಲಿ ನಾನು ನನ್ನ ಸ್ಪಷ್ಟವಾದ ವಿರೋಧವನ್ನು

ವ್ಯಕ್ತಪಡಿಸುತ್ತಿದ್ದೇನೆ. ಖಾಸಗಿ ವಿಶ್ವವಿದ್ಯಾನಿಲಯಗಳ ವಿಧೇಯಕ ಜನಪರವಲ್ಲ ಎನ್ನುವುದನ್ನು ನೂರು ಬಾರಿ ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ವಿಶ್ವವಿದ್ಯಾಲಯವೆಂದರೆ ಜ್ಞಾನದ ಅನ್ವೇಷಣೆ ಆಗಬೇಕು, ಜ್ಞಾನದ ದಾಹ ಇರುಬೇಕು. ಆದರೆ, ಇಲ್ಲಿ ಹಣ ದಾಹವನ್ನು ನೋಡುತ್ತಿದ್ದೇವೆ. ಈ ರೀತಿ ಆದರೆ, ಇಡೀ ರಾಷ್ಟ್ರವನ್ನು ಮತ್ತೊಮ್ಮೆ ಗುಲಾಮಗಿರಿಯೆಡೆಗೆ ಕರೆದುಕೊಂಡು ಹೋಗುವಂತಾಗುತ್ತದೆ ಇದರಿಂದ ಅಸಮತೋಲನ ಉಂಟಾಗುತ್ತದೆ. ಇದನ್ನು ಮತ್ತೊಮ್ಮೆ ಸರ್ಕಾರ ಜಾಗೃತ ವಿವೇಚನೆಯಿಂದ ಪರಿಶೀಲಿಸಬೇಕು. ಈ ರೀತಿ ದಿನವೊಂದಕ್ಕೆ ಎರಡು ಮೂರು ಖಾಸಗಿ ವಿಶ್ವವಿದ್ಯಾಲಯಗಳನ್ನು ತೆರೆಯತ್ತಾ ಹೋದರೆ, ಅದಕ್ಕೆ ಮೌಲ್ಯ ಇಲ್ಲದಂತೆ ಆಗುತ್ತದೆ. ಪ್ರಮಾಣ ಬಹಳ ಮುಖ್ಯವಾಗಿರುತ್ತದೆ. ಆದ್ದರಿಂದ ಬಡವರ ಪರವಾಗಿರುವ ಯಾವುದೇ ನಿಲುವಿಗೆ ನನ್ನ ಬೆಂಬಲ ಇರುತ್ತದೆ. ಹಣಕ್ಕೆ ಪ್ರಾಧಾನ್ಯ ಕೊಡುವ ವಿಧೇಯಕಗಳನ್ನು ನಾನು ವಿರೋಧಿಸುತ್ತೇನೆ.

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರೂ ಸೇರಿದಂತೆ ಒಟ್ಟು 11 ಜನ ಸದಸ್ಯರು ಖಾಸಗಿ ವಿಶ್ವವಿದ್ಯಾಲಯಗಳ ಮಸೂದೆಯ ಮೇಲೆ ಬೆಳಕು ಚೆಲ್ಲಿದ್ದಾರೆ. ಖಾಸಗಿ ವಿಶ್ವವಿದ್ಯಾಲಯವನ್ನು ತೆರೆಯಬೇಕೆನ್ನುವುದು ಕರ್ನಾಟಕ ಸರ್ಕಾರದ ನಿರ್ಧಾರವಲ್ಲ. ಇದು ಕೇಂದ್ರ ಸರ್ಕಾರದ 'ಜ್ಞಾನ ಸಮಿತಿ' ಮಾಡಿರುವಂತಹ ಶಿಫಾರಸ್ಸಾಗಿದೆ. ಈ ಸಮಿತಿ, '1500ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡಬೇಕು ಇಲ್ಲದಿದ್ದರೆ ಉನ್ನತ ಶಿಕ್ಷಣದ ಬೇಡಿಕೆಯನ್ನು ಪೂರೈಸುವುದಕ್ಕೆ ಸಾಧ್ಯವಿಲ್ಲ' ಎನ್ನುವಂತಹ ಮಾತನ್ನು ಹೇಳಿದೆ. ಒಂದು ವಿಶ್ವವಿದ್ಯಾಲಯ ಪರಿಪೂರ್ಣವಾಗಿರುವಂತಹ ವಿಶ್ವವಿದ್ಯಾಲಯ ಆಗಬೇಕಾದರೆ, ಒಟ್ಟು 500 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಬೇಕಾಗಿದೆ. ಇಲ್ಲಿ ಹಣಕ್ಕೆ ಮಾತ್ರವಲ್ಲ ಗುಣಮಟ್ಟಕ್ಕೂ ನಾವು ಆದ್ಯತೆಯನ್ನು ನೀಡಿದ್ದೇವೆ. ಮಾನ್ಯ ಸದಸ್ಯರಾದ ದೊಡ್ಡರಂಗೇಗೌಡರು ಹಣ ಇರುವವರು ಮಾತ್ರ ವಿಶ್ವವಿದ್ಯಾಲಯವನ್ನು ತೆರೆಯಬೇಕೇ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಹಣ ಇರುವವರು ಶಿಕ್ಷಣ ಕ್ಷೇತ್ರಕ್ಕೆ ಬರಬೇಕೆನ್ನುವ

ಅಪೇಕ್ಷೆ ನನ್ನದು. ಹಿಂದೆ ಮಹಾರಾಜರ ಕಾಲದಲ್ಲಿ ಯಾವು ಊರಿನಲ್ಲಿ ಒಳ್ಳೆಯ ಕೆಲಸವನ್ನು ಮಾಡುತ್ತಾರೆ, ಅವರನ್ನು ಕರೆದು ಬಿರುದು ಕೊಡುತ್ತಿದ್ದರಂತೆ, ಶ್ರೀಮಂತರು ಸಾರ್ವಜನಿಕ ಕ್ಷೇತ್ರದಲ್ಲಿ ಸಂಸ್ಥೆಗಳನ್ನು ತೆರೆಯುವುದಕ್ಕೆ ಆ ಮೂಲಕ ಪ್ರೇರಣೆ ಕೊಡುತ್ತಿದ್ದರು. ಈ ನಿಟ್ಟಿನಲ್ಲಿ ಹಣ ಇರುವವರು ಐಷಾರಾಮಿ ಬಂಗಲೆಗಳನ್ನು ಕಟ್ಟುವುದಕ್ಕಿಂತ ಮತ್ತು ಬೆಲೆಬಾಳುವ ಕಾರುಗಳನ್ನು ತೆಗೆದುಕೊಳ್ಳುವುದಕ್ಕಿಂತ ಆ ಹಣವನ್ನು ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸುವುದು ಉತ್ತಮ ಎನ್ನುವುದು ನನ್ನ ಭಾವನೆಯಾಗಿದೆ. ಅವರ ದುಡ್ಡಿನಲ್ಲಿ ಶೇಕಡಾ 40ರಷ್ಟು ಮಕ್ಕಳಿಗೆ ನ್ಯಾಯ ಒದಗಿಸಿಕೊಡುತ್ತಿದ್ದೇವೆ ಎಂದು ನಾನು ಮೊನ್ನೆಯೂ ಹೇಳಿದ್ದೆ. ಹಿಂದೆ ತಂದಂತಹ ವಿಧೇಯಕದಲ್ಲಿ ಕರ್ನಾಟಕದ ಮಕ್ಕಳಿಗೆ ಶೂನ್ಯ ಸ್ಥಾನವನ್ನು ನೀಡಲಾಗಿತ್ತು. ಈಗ ಅದನ್ನು ಶೇಕಡಾ 40ಕ್ಕೆ ತೆಗೆದುಕೊಂಡು ಹೋಗಿದ್ದೇವೆ. ಮೊದಲು ಆ ಸಂಸ್ಥೆಯ ಆಡಳಿತ ಮಂಡಳಿಯವರೇ ಶುಲ್ಕ ನಿಗದಿ ಮಾಡುತ್ತಿದ್ದರು. ಈಗ ನಿವೃತ್ತ ಹೈಕೋರ್ಟ್ ಅಥವಾ ಸುಪ್ರೀಂಕೋರ್ಟ್‌ನ ನ್ಯಾಯಾಧೀಶರ ನೇತೃತ್ವದಲ್ಲಿ ಸರ್ಕಾರ ಶುಲ್ಕ ನಿಗದಿ ಮಾಡುತ್ತದೆ. ಇದನ್ನು ಉತ್ತಮವಾಗಿಸುವುದು ಆಡಳಿತ ನಡೆಸುವವರ ಕೈಯಲ್ಲಿ ಇರುತ್ತದೆ. ನಮ್ಮ ಜವಾಬ್ದಾರಿ ತಪ್ಪಿದ್ದಾಗ ಉಳಿದಿರುವುದೆಲ್ಲ ತಪ್ಪಾಗುತ್ತದೆ. ನಾವು ಸರಿಯಾಗಿ ಇದ್ದರೆ ಉಳಿದಿರುವುದೆಲ್ಲ ಸರಿಯಾಗಿ ಇರುತ್ತದೆ. ಆ ಹಿನ್ನೆಲೆಯಲ್ಲಿ ಸರ್ಕಾರ ವಿಶ್ವವಿದ್ಯಾಲಯಗಳಿಗೆ ಅನುಮತಿ ಕೊಟ್ಟಿದೆ. ರಾಜ್ಯಕ್ಕೆ ಎಷ್ಟು ವಿಶ್ವವಿದ್ಯಾನಿಲಯಗಳಿರಬೇಕು, ನಿರ್ದಿಷ್ಟತೆ ಏನು ಎಂದು ಕೇಳಿದ್ದಾರೆ. ರಾಜ್ಯಕ್ಕೆ ಸರ್ಕಾರಿ ವಿಶ್ವವಿದ್ಯಾನಿಲಯವು ಸೇರಿ ನಾವು ಒಂದೊಂದು ದೇಶದ modelನ್ನು ತೆಗೆದುಕೊಂಡರೆ ಒಂದೊಂದು ಸಂಖ್ಯೆಯ ವಿಶ್ವವಿದ್ಯಾನಿಲಯ ಬೇಕಾಗುತ್ತದೆ. ನಾವು ಚೀನಾ ದೇಶವನ್ನು ಆಧರಿಸಿ ಹೋದರೆ ನಮಗೆ 63 ವಿಶ್ವವಿದ್ಯಾನಿಲಯಗಳು ಬೇಕು. ಚೀನಾ ದೇಶದಲ್ಲಿ ಇವತ್ತು 1,192 ವಿಶ್ವವಿದ್ಯಾನಿಲಯಗಳಿದ್ದಾವೆ. ಚೀನಾ ಸರ್ಕಾರ ಇನ್ನು ಒಂದೂವರೆ ಸಾವಿರ ವಿಶ್ವವಿದ್ಯಾನಿಲಯಗಳನ್ನು ತೆರೆಯಬೇಕೆಂದು ತೀರ್ಮಾನ ಮಾಡಿದೆ. ಅಮೆರಿಕಾದಲ್ಲಿ 2,049 ವಿಶ್ವವಿದ್ಯಾನಿಲಯಗಳಿದ್ದಾವೆ. ಅಮೆರಿಕಾದ ಜನಸಂಖ್ಯೆಗೆ ಅನುಗಣವಾಗಿ ಯೋಚನೆ ಮಾಡಿದರೆ ನಮ್ಮ

ರಾಜ್ಯಕ್ಕೆ ಇನ್ನು 100 ರಿಂದ 125 ವಿಶ್ವವಿದ್ಯಾನಿಲಯಗಳು ಬೇಕಾಗುತ್ತದೆ. ಅವರು ಹೇಳಿದ್ದನ್ನು ನಾನು ಬರೆದುಕೊಂಡಿದ್ದೇನೆ. ದಯಮಾಡಿ ಅವರು ನನ್ನ ಮಾತುಗಳನ್ನು ಕೇಳಲಿ. ಚಿಕ್ಕ ಚಿಕ್ಕ ವಿಶ್ವವಿದ್ಯಾನಿಲಯಗಳು ಏಕೆ ಬೇಕು? ಈ ಚಿಕ್ಕ ಚಿಕ್ಕ ವಿಶ್ವವಿದ್ಯಾನಿಲಯಗಳಲ್ಲಿ flexibility ಇರುತ್ತದೆ. ತಂತ್ರಜ್ಞಾನದ ಬಗ್ಗೆ ಹೇಳುವುದಾದರೆ, ನೋಕಿಯಾ ಕಂಪನಿಯನ್ನು ಉದಾಹರಣೆಗೆ ತೆಗೆದುಕೊಂಡರೆ ವರ್ಷಕ್ಕೆ 6 ರಿಂದ 10 model ಮೊಬೈಲ್ ಫೋನ್‌ಗಳನ್ನು ತಯಾರು ಮಾಡಿಕೊಡುತ್ತಾರೆ. ನಿನ್ನೆಯ ದಿವಸ advanced ಎನ್ನುವುದು ಇವತ್ತು ಹಳೆಯದಾಗಿರುತ್ತದೆ. ಇವತ್ತು advanced ಇರುವುದು ನಾಳೆಗೆ ಹಳೆಯದಾಗಿರುತ್ತದೆ. ತಂತ್ರಜ್ಞಾನ ಎಂಬುದು ನಿಂತ ನೀರಲ್ಲ. ಅದು ವೇಗವಾಗಿ ಬೆಳೆಯುತ್ತಿರುವುದನ್ನು ನೀವು ನೋಡುತ್ತಿದ್ದೀರಿ. ಆದರೆ ಅವಶ್ಯಕತೆಗೆ ತಕ್ಕಂತೆ ಖಾಸಗಿ ವಿಶ್ವವಿದ್ಯಾನಿಲಯಗಳು syllabusನ್ನು ತಕ್ಷಣವೇ ಬದಲಾವಣೆ ಮಾಡಿಕೊಳ್ಳುತ್ತವೆ. ನಮ್ಮ ಸರ್ಕಾರದಲ್ಲಿ ಅದಕ್ಕೆ ಒಂದು ಕಮಿಟಿನ್ನು ನೇಮಕ ಮಾಡಿಕೊಳ್ಳಬೇಕು, ಅದು ತನ್ನ ವರದಿಯನ್ನು ಕೊಡಬೇಕು, ಸರ್ಕಾರ ಅದನ್ನು ಸ್ವೀಕಾರ ಮಾಡಿಕೊಳ್ಳಬೇಕು ಮತ್ತೆ ನೇಮಕ ಮಾಡಿಕೊಳ್ಳಬೇಕು ಎನ್ನುವುದರೊಳಗೆ ಒಂದು procedureಗೆ ಹತ್ತಾರು ವರ್ಷಗಳು ಕಳೆದು ಹೋಗಿರುತ್ತವೆ. ಸುಮಾರು ಒಂದೂವರೆ ಸಾವಿರ ವಿದ್ಯಾರ್ಥಿಗಳನ್ನೊಳಗೊಂಡಿರತಕ್ಕಂಥ ಒಂದು ವಿಶ್ವವಿದ್ಯಾನಿಲಯವಿದೆ. ಅದು ಯಾವುದೋ ಒಂದು multi-national company ಜೊತೆಗೆ tie-up ಮಾಡಿಕೊಳ್ಳುತ್ತದೆ. ಆ ಕಂಪನಿಗೆ ಬೇಕಾದಂಥ ಕೌಶಲ್ಯಾಧಾರಿತ manpowerನ್ನು ಇದು ತಯಾರು ಮಾಡಿಕೊಡುತ್ತದೆ. ಇದರಿಂದ ಅವರಿಗೆ job security ಆಯಿತು. Campus selection ಆಗುತ್ತದೆ. ಪದವಿಯನ್ನು ಮುಗಿಸಿದ ತಕ್ಷಣವೇ ಆತ ಅಲ್ಲಿಗೆ ಹೋಗುತ್ತಾನೆ. ನಾವೀಗ ಏನು ಯೋಜನೆಯನ್ನು ಮಾಡುತ್ತಿದ್ದೇವೆಂದರೆ, K.P.S.C selection ಗೆ ಏನು ಎಂದು ಯೋಚನೆ ಮಾಡುತ್ತಿದ್ದೇವೆ.

**ಸಭಾಪತಿಯವರು:–** ಅವರು ಉತ್ತರ ಹೇಳುವುದನ್ನು ಕೇಳಿ. ನಿಮಗೆ ಅವಕಾಶವನ್ನು ಕೊಟ್ಟಿದ್ದೇನೆ. ಮಧ್ಯದಲ್ಲಿ ಬಾಯಿ ಹಾಕಬೇಡಿ. ಅವರು ಉತ್ತರವನ್ನು ಕೊಡಲಿ.

**ಶ್ರೀ ಸಿ.ಟಿ. ರವಿ:–** ನಮ್ಮ ಸರ್ಕಾರ 10 ಸರ್ಕಾರಿ ವಿಶ್ವವಿದ್ಯಾನಿಲಯಗಳನ್ನು ಸಹ ತೆರೆದಿದೆ. ಅದನ್ನು strengthen ಮಾಡಬೇಕು, ಅದಕ್ಕೆ ಹೆಚ್ಚಿನ ಹಣಕಾಸನ್ನು ಒದಗಿಸಬೇಕು ಎನ್ನುವುದರಲ್ಲಿ ಎರಡನೆಯ ಮಾತಿಲ್ಲ. ನಾನು ಮುಂಗಡ ಪತ್ರದ pre-budget meetingನ್ನು ಮಾನ್ಯ ಮುಖ್ಯಮಂತ್ರಿಗಳು ಕರೆದಾಗಲೂ ಸಹ ನಮ್ಮ ವಿಶ್ವವಿದ್ಯಾನಿಲಯಗಳಿಗೆ ಏನು ಮಾಡಬೇಕೆನ್ನುವ ಬೇಡಿಕೆ ಪಟ್ಟಿಯನ್ನು ಇಟ್ಟಿದೇನೆ. ಹಾಗಾಗಿ ಇದರಲ್ಲಿರುವಂಥ ಅನುಕೂಲತೆಗಳು ಏನು, ಅನಾನುಕೂಲತೆಗಳು ಏನು ಎನ್ನುವುದನ್ನು ಪಟ್ಟಿ ಮಾಡಿದ್ದೇವೆ. ಪೂರ್ಣ ಖಾಸಗೀಕರಣ ಆಗಬಾರದು ಎನ್ನುವ ಕಾರಣಕ್ಕೋಸ್ಕರವೇ ಶೇಕಡ 40ರಷ್ಟನ್ನು ಮೆರಿಟ್ ಆಧಾರದ ಮೇಲೆ, ನಾವಿಲ್ಲಿ ಸಿಇಟಿ ಆಧಾರದ ಮೇಲೆ ಪರಿಕ್ಷೆಯನ್ನು ನಡೆಸಿ ಅವರಿಗೆ ಭರ್ತಿ ಮಾಡಿಕೊಡಬೇಕು. ಮೆಡಿಕಲ್‌ಗೆ ಶೇಕಡ 33ರಷ್ಟಿದೆ, ನಾನು ಶೇಕಡ 40ರಷ್ಟು ಮಾಡಿದ್ದೇವೆ. ಇದನ್ನು ಸರ್ಕಾರ ಗಳಿಸಿಕೊಳ್ಳುವುದು. ಮುಂದೆ ಇದನ್ನು ಶೇಕಡ 50ಕ್ಕೆ, ಶೇಕಡ 70ಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಅವಕಾಶವಿದೆ. ನಾನು ಶೂನ್ಯದಿಂದ ಶೇಕಡ 40ಕ್ಕೆ ತಂದಿದ್ದೇನೆ. ನಾಳೆಯ ದಿವಸ ಇದನ್ನು ಶೇಕಡ 70ಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಅವಕಾಶವಿದೆ. ಇದನ್ನು ಮಾಡುತ್ತಿದ್ದ ಹಾಗೆ ಸರ್ಕಾರ ಅಸಹಾಯಕವಾಗಬೇಕಾಗಿದಲ್ಲ, ಮತ್ತೆ ಇದನ್ನು ಪರಿಷ್ಕರಣೆ ಮಾಡುವಂಥ ಅಧಿಕಾರ ಈ ಸದನಕ್ಕೆ ಇದೆ. ಇದರ ಸಾಧಕ–ಬಾಧಕಗಳನ್ನು ನೋಡಿಕೊಂಡು ಇದರಲ್ಲಿ ಏನಾದರೂ ಸಮಾಜಿಕ ನ್ಯಾಯ ಪರಿಪಾಲನೆಯಾಗುತ್ತಿಲ್ಲ, ವಿದ್ಯಾರ್ಥಿಗಳ ಹಿತಾಸಕ್ತಿಗೆ ಅನುಗುಣವಾಗಿ ಆಗುತ್ತಿಲ್ಲವೆಂದರೆ withdraw ಮಾಡಿಕೊಳ್ಳುವುದಕ್ಕೂ ಅಧಿಕಾರವಿದೆ, ನಿಯಂತ್ರಣ ಹೇರುವುದಕ್ಕೂ ಅಧಿಕಾರವಿದೆ. ಎಲ್ಲದಕ್ಕೂ ಅಧಿಕಾರ ಈ ಸದನಕ್ಕೆ ಇದೆ. ಈ ಸದನವೇ ಸಾರ್ವಭೌಮ. ಹಾಗಾಗಿ ಇದರ ಬಗ್ಗೆ ನಾವು ಹೇಳುವಂಥಾದ್ದನ್ನು ಹೇಳಿದ್ದೇವೆ. ನಾನು point to point ಹೇಳುತ್ತಿದ್ದೇನೆ.

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರು ಕೇಳುವುದಕ್ಕೆ ನನ್ನದೇನು ಅಭ್ಯಂತರವಿಲ್ಲ. ಮತ್ತೆ 20 ಜನರು ಮಾತನಾಡಲು ಕೈಯನ್ನು ಎತ್ತಿದರೆ ನಾನು ಅಸಹಾಯಕನಾಗುತ್ತೇನೆ. ನಾನೇನು ಮಾಡಬೇಕು. ಮಾನ್ಯ ವಿರೋಧ ಪಕ್ಷದ ನಾಯಕರನ್ನು ಕೇಳಿ, ಅವಕಾಶ ಕೊಡುತ್ತೇನೆ. ಅದಕ್ಕಾಗಿಯೇ ನಿಮಗೆ ಆ ಸ್ಥಾನ ಕೊಡುವುದು, ಜವಾಬ್ದಾರಿಯನ್ನು ಕೊಡುವುದ, ಸವಲತ್ತುಗಳನ್ನು ಕೊಡುವುದು ತಾವು ಈ ಚರ್ಚೆಯಲ್ಲಿ ಭಾಗವಹಿಸಬೇಕು ಎಂದು. ಅದಲ್ಲದೇ ಈ ಸದನವನ್ನು ಸಹ ನಡೆಸಬೇಕಲ್ಲಾ. ಎರಡೂ extremeಗೆ ಹೋಗಬಾರದು. ಸಮತೋಲನ ಮಾಡಿಕೊಂಡು ಹೋಗೋಣ. ಅವರು ಕೇಳಿದ್ದಾರೆ. ನೀವು ಮತ್ತೆ ಏನಾದರೂ ಕೇಳುವುದಿದ್ದರೆ ಕೇಳಬಹುದು.

**Sri C.T. RAVI:-** The Harvard, Yale, Stanford and Chicago Universities are top 10 universities of the world. ಇವು ಸರ್ಕಾರಿ ಅಲ್ಲ, ಖಾಸಗಿ ವಿಶ್ವವಿದ್ಯಾನಿಲಯಗಳು. ನಾವು ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ನಮ್ಮಲ್ಲಿ ಅಂತರಾಷ್ಟ್ರೀಯ ಮಟ್ಟದ ಸಂಶೋಧನೆ ಆಗುವುದು ನಮ್ಮ ದೇಶದ್ದು ಸರಾಸರಿ 153. ಪ್ರಂಪಂಚದ ಜನಸಂಖ್ಯೆಯಲ್ಲಿ ನಾವು ಎರಡನೆಯ ಸ್ಥಾನದಲ್ಲಿದ್ದೇವೆ. ಆದರೆ ಸಂಶೋದನೆಯಲ್ಲಿ ನಾವು ಬಹಳ ಹಿಂದಿದ್ದೇವೆ. ಅದೇ ಅಮೆರಿಕಾದಲ್ಲಿ ಒಂದು ವರ್ಷಕ್ಕೆ ಎರಡೂವರೆ ಸಾವಿರಕ್ಕೂ ಹೆಚ್ಚಿನ ಸಂಶೋಧನೆಯಾಗುತ್ತದೆ. ಏಕೆಂದರೆ, ಹೆಚ್ಚು ವಿಶ್ವವಿದ್ಯಾನಿಲಯಗಳಿರುವುದರಿಂದ ಹೆಚ್ಚು research centreಗಳಿರುತ್ತವೆ. Research Centerನಲ್ಲಿ ಒಂದೊಂದು ಬೇಡಿಕೆಯನ್ನಿಟ್ಟುಕೊಂಡು ಅವರು ಸಂಶೋಧನೆಯನ್ನು ಮಾಡುತ್ತಾರೆ. ಆ ಸಂಶೋಧನೆಯ ಕಾರಣದಿಂದಾಗಿ ಅಮೆರಿಕಾ ದೇಶ ಇವತ್ತು ರಿಜಿಸ್ಟರ್ ಆಗುವಂಥ patent ವಿಷಯದಲ್ಲಿ ಮೊದಲನೆಯ ಸ್ಥಾನದಲ್ಲಿರುತ್ತದೆ. ಏಕೆಂದರೆ ಅಲ್ಲಿ ಹೆಚ್ಚೆಚ್ಚು ಸಂಶೋಧನೆಗಳಾಗುತ್ತವೆ. ಇವತ್ತು ಹೆಚ್ಚು ವಿಶ್ವವಿದ್ಯಾನಿಲಯಗಳು ಏಕೆ ಬೇಕೆಂದರೆ ಹೆಚ್ಚು ಸಂಶೋಧನೆಗಳಿಗೆ ಅವಕಾಶವಾಗಬೇಕು. ಕೇವಲ ವ್ಯಾಪಾರೀಕರಣವಲ್ಲ. ಒಂದು ವಿಚಾರವೆಂದರೆ, ನಮ್ಮ ಮನೆಯಲ್ಲಿ ಮದುವೆ ವಯಸ್ಸಿಗೆ ಬಂದಿರುವ ಹೆಣ್ಣುಮಕ್ಕಳಿದ್ದಾರೆ ಎಂದರೆ ದಾರಿಯಲ್ಲಿ ಹೋಗುವ

ಗಂಡಿಗೆಲ್ಲಾ ಇವತ್ತು ನಾವು ಕರೆದು ಹೆಣ್ಣನ್ನು ಕೊಡುವುದಿಲ್ಲ. ಹುಡುಗನ ಯೋಗ್ಯತೆಯ ಬಗ್ಗೆಯೂ ಸಹ ಯೋಚನೆಯನ್ನು ಮಾಡುತ್ತೇವೆ. ಹಾಗೆಯೇ ನೂರಾರು ವಿಶ್ವವಿದ್ಯಾನಿಲಯಗಳಿದ್ದರೆ ವಿದ್ಯಾರ್ಥಿಗಳನ್ನು ಅಲ್ಲಿಗೆ ಸೇರಿಸುವಾಗ ವಿಶ್ವವಿದ್ಯಾನಿಲಯದ ಯೋಗ್ಯತೆಯನ್ನು ನೋಡುತ್ತಾರೆ. ಈಗ ಎಲ್ಲರೂ ಎಲ್ಲಾ ಕಾಲೇಜುಗಳಿಗೂ ಹೋಗಿ admission ಮಾಡುವುದಿಲ್ಲ. ನನಗೆ ಗೊತ್ತಿರುವ ಹಾಗೆ ಬೆಂಗಳೂರಿನಲ್ಲಿ ನೂರು ಇಂಜಿಯರಿಂಗ್ ಕಾಲೇಜುಗಳಿದ್ದರೆ, ಬೇಡಿಕೆ ಇರುವುದು ಕೇವಲ 10 ಕಾಲೇಜುಗಳಿಗೆ ಮಾತ್ರ. ಇನ್ನುಳಿದ 90 ಕಾಲೇಜುಗಳಿಗೆ ಬೇಡಿಕೆ ಇರುವುದಿಲ್ಲ. ಈ 10 ಕಾಲೇಜುಗಳಿಗೆ ಏಕೆ ಬೇಡಿಕೆ ಇರುತ್ತದೆ ಎಂದರೆ, ಕಾಲೇಜಿನ ಯೋಗ್ಯತೆಯ ಮೇಲೆ ಅದಕ್ಕೆ ಬೇಡಿಕೆ ಇರುತ್ತದೆ.

**ಸಭಾಪತಿಯವರು:-** ಮಧ್ಯದಲ್ಲಿ ಮಾತನಾಡಬೇಡಿ. ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ. ಈಗ ಶೇಕಡ 50ರಷ್ಟು reservation ಅಲ್ಲಿಯೂ ಸಹ ಇದೆ. ನೀವು ತಪ್ಪು ತಿಳಿದಿದ್ದೀರಿ. ಸರ್ಕಾರಿ ಸೀಟುಗಳಿಗೆ ಆ ಕಾಲೇಜಿನವರು ಹೆಚ್ಚಿನ ಶುಲ್ಕವನ್ನು ವಿಧಿಸುವ ಹಾಗಿಲ್ಲ. ಅದನ್ನು ಸಹ ನಿಗದಿಗೊಳಿಸಲಾಗಿದೆ. ನಾನು ಉನ್ನತ ಶಿಕ್ಷಣ ಸಚಿವನಾಗಿದ್ದಾಗ ಸಿಇಟಿ ಬಗ್ಗೆ ತೀರ್ಮಾನ ಮಾಡಿದ್ದೆ. ಇವತ್ತಿಗೂ ಸಹ ಅದನ್ನು ನಡೆಸಿಕೊಂಡು ಬಂದಿದ್ದಾರೆ, ದೊಡ್ಡ ದೊಡ್ಡ ಕಾಲೇಜುಗಳಲ್ಲಿ ಸರ್ಕಾರಿ ಸೀಟ್‌ಗಳನ್ನೇನು ತುಂಬುತ್ತೇವೆ, ಅವುಗಳಿಗೆ ಸರ್ಕಾರ ನಿಗಿದಿ ಪಡಿಸಿದ ಶುಲ್ಕವನ್ನೇ ವಿಧಿಸುತ್ತಾರೆ. ಅವರು ಹೆಚ್ಚಿನ ಶುಲ್ಕವನ್ನು ನಿಗದಿಗೊಳಿಸುವುದಕ್ಕೆ ಬರುವುದಿಲ್ಲ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಇನ್ನೊಂದು ಆತಂಕವನ್ನು ಅವರು ಏನು ವ್ಯಕ್ತಪಡಿಸಿದರು ಎಂದರೆ, ಗುಣಮಟ್ಟಕ್ಕೆ ಖಾತ್ರಿ ಏನು ಎಂದು ಕೇಳಿದರು. ಈಗ ನಾನು ಪೀಠಿಕೆಯಲ್ಲಿದ್ದೇನೆ, ವಿವರಗಳನ್ನು ಹೇಳುತ್ತೇನೆ. ಗುಣಮಟ್ಟದ ಬಗ್ಗೆ ನಾನು ಹೇಳಿದೆ. ಸದನ ಈ ವಿಧೇಯಕವನ್ನು ಮಂಜೂರು ಮಾಡಿದ ತಕ್ಷಣವೇ ಬಾರಾಕೂನ್ ಮಾಫ್ ಇಲ್ಲ. ಗುಣಮಟ್ಟದ ಬಗ್ಗೆ ಯುಜಿಸಿ ಹೇಳಿರುವಂಥ ಮಾರ್ಗದರ್ಶಿ ಸುತ್ರವನ್ನು ಪಾಲಿಸಬೇಕು. ಇಂಜಿನಿಯರಿಂಗ್ ಕಾಲೇಜ್‌ಗಳಿಗೆ A.I.C.T.E. ಹೇಳಿರುವಂಥ ಮಾರ್ಗದರ್ಶಿ

ಸೂತ್ರವನ್ನು ಪಾಲಿಸಬೇಕು ಮತ್ತು ಅವರು N.O.C.ಯನ್ನು ಕೊಡಬೇಕು. ಅವರ N.O.C. ಮೇಲೆ ಸರ್ಕಾರ N.O.C. ಯನ್ನು ಕೊಡಬೇಕು. ಮೆಡಿಕಲ್ ಕಾಲೇಜ್‌ನ್ನು ಮಾಡಬೇಕೆಂದರೆ M.C.I. (Medical Council of Indai) ಹೇಳಿರುವಂಥ ಮಾರ್ಗದರ್ಶಿ ಸೂತ್ರವನ್ನು ಪಾಲಿಸಬೇಕು. ಹಾಗಿದ್ದಾಗ ಮಾತ್ರ ಅದಕ್ಕೆ ಅಧಿಕಾರವಿರುತ್ತದೆ. ಇನ್ನು ನಾನು ಮೊದಲೇ ಹೇಳಿದಂತೆ, ಮಾನ್ಯ ಪುಟ್ಟಣ್ಣನವರು affiliation ಇದೆಯೇ ಎಂದು ಕೇಳಿದರು. ನಮ್ಮ ಸರ್ಕಾರಕ್ಕೆ ಇರುವ ವ್ಯಾಪ್ತಿಯೇ ನಮ್ಮ ಕರ್ನಾಟಕದ ಒಳಗೆ. Affiliation ಇಲ್ಲ, Distance Education ಇಲ್ಲ ಮತ್ತು ಮೂರು ತಿಂಗಳ ವೃತ್ತಿಪರ ಕೋರ್ಸ್‌ಗಳನ್ನು ನಡೆಸುವುದಕ್ಕೆ ಅವಕಾಶವಿಲ್ಲವೆಂದು ನಾನು ಮೊನ್ನೆಯೇ ಬಹಳ ಸ್ಪಷ್ಟ ಪಡಿಸಿದ್ದೇನೆ. ಐದು ವರ್ಷಗಳ ನಂತರ constituent collegeಗಳನ್ನು ಹೊಂದಬಹುದು. ರಾಜ್ಯದಲ್ಲಿ ಎಲ್ಲಾದರೂ ಇನ್ನೊಂದು ಕಾಲೇಜ್‌ನ್ನು ಈ ಒಡೆತನದಲ್ಲಿ ಹೊಂದಬಹುದು. Affiliation ಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲದೇ ಇರುವುದರಿಂದ ಸರ್ಕಾರದ ವಿಶ್ವವಿದ್ಯಾನಿಲಯಗಳು ಸೊರಗುವುದಿಲ್ಲ. Affiliation ಇದ್ದರೆ ಎಲ್ಲಾ ಕಾಲೇಜ್‌ಗಳನ್ನು ಇವರೇ affiliation ಮಾಡಿಕೊಂಡು ಸರ್ಕಾರಿ ವಿಶ್ವವಿದ್ಯಾನಿಲಯಗಳನ್ನು ಖಾಲಿ ಮಾಡಬಹುದಾಗಿತ್ತು. ಗುಣಮಟ್ಟದ ಬಗ್ಗೆ ಹೇಳಿದ್ದೇನೆ. ಮಾನ್ಯ ಸದಸ್ಯರು ಪ್ರತ್ಯೇಕ ನಿಯಂತ್ರಣ ಪ್ರಾಧಿಕಾರದ ಬಗ್ಗೆ ಇನ್ನೊಂದು ಸಲಹೆಯನ್ನು ಕೊಟ್ಟರು. Higher Education Council ಅನ್ನು ಶಾಸನಬದ್ಧವಾಗಿ strengthen ಮಾಡಿ ಶಿಕ್ಷಣ ತಜ್ಞರ ಜೊತೆಗೆ ಸಮಾಲೋಚನೆ ಮಾಡಿ ಅದಕ್ಕೆ ಸರಿಯಾದ ವ್ಯಕ್ತಿಗಳನ್ನು ಜೋಡಿಸಬೇಕು ಎನ್ನುವ ಬಗ್ಗೆ ನನ್ನ ಒಂದು ಚಿಂತನೆ ಇದೆ. ಈಗ ಮೊದಲನೆಯ ಬಾರಿಗೆ ಇಷ್ಟು ವಿಶ್ವವಿದ್ಯಾನಿಲಯಗಳು ರಾಜ್ಯದಲ್ಲಿ ಬರುತ್ತಿವೆ. ಮುಂಚೆ ಇದ್ದದ್ದು ಕೇವಲ ಎರಡು. ಎರಡು ಇರುವಾಗ ಯೋಚನೆ ಮಾಡಿರಲಿಲ್ಲ. ಈಗ 20ಕ್ಕೂ ಹೆಚ್ಚು ವಿಶ್ವವಿದ್ಯಾನಿಲಯಗಳು ಆಗುವ ಸಂರ್ಭದಲ್ಲಿ ಇವುಗಳ ನಿಯಂತ್ರಣ ಪ್ರಾಧಿಕಾರವನ್ನು ಹೊಂದುವ ಅವಶ್ಯಕತೆ ಇದೆ. ಅದನ್ನು ಶಿಕ್ಷಣ ತಜ್ಞರ ಜೊತೆಗೆ ಸಮಾಲೋಚನೆ ಮಾಡಿ ಅದರ ಸಾಧಕ–ಬಾಧಕದ ಬಗ್ಗೆ ಚರ್ಚಿಸಿ, ರೂಪುರೇಷೆಗಳು ಹೇಗಿರಬೇಕೆಂದು

ನಿರ್ಧರಿಸಿ ನಿಯಂತ್ರಣ ಪ್ರಾಧಿಕಾರವನ್ನು monitor ಮಾಡುವಂಥ ವ್ಯವಸ್ಥೆಯನ್ನು ಮಾನ್ಯ ಮರಿತಿಬ್ಬೇಗೌಡರು, ಮಾನ್ಯ ಪುಟ್ಟಣ್ಣನವರು ಮತ್ತು ಕೃಷ್ಣಭಟ್‌ರವರು ಸಹ ಮಾತನಾಡುವಾಗ ಹೇಳಿದರು. ಖಂಡಿತವಾಗಿ ಅದನ್ನು ತರುವಂಥ ಒಂದು ಇಚ್ಛೆಯನ್ನು ಹೊಂದಿದ್ದೇವೆ. ಈಗಲೇ ಏಕೆ ಎಂದು ಕೇಳಿದರು. ಈಗ ಎಲ್ಲಾ ಚುನಾವಣಾ ಪ್ರಕ್ರಿಯೆಯಲ್ಲಿ ತೊಡಗುತ್ತೇವೆ. ಈಗ ಈ ಒಂದು ವಿಧೇಯಕವನ್ನು ತರಲಿಲ್ಲವೆಂದರೆ ಅವರು ಒಂದು ವರ್ಷ ಕಾಲ ವಿಶ್ವವಿದ್ಯಾನಿಲಯವನ್ನು ಮಾಡುವುದಕ್ಕಾಗುವುದಿಲ್ಲ. ಮೆ-ಜೂನ್ ತಿಂಗಳಲ್ಲಿ ಶೈಕ್ಷಣಿಕ ವರ್ಷ ಪ್ರಾರಂಭವಾಗುತ್ತದೆ. ಇನ್ನೊಂದು ಅಂಶವನ್ನು ಅವರು ಏನು ಹೇಳಿದರು ಎಂದರೆ, ಸಿಲಬಸ್ ಶೇಕಡ 40ರಷ್ಟು ಹೇಗೆ ಕೊಡುತ್ತಾರೆ ಎಂದು ಕೇಳಿದರು. ಅದಕ್ಕೆ ನಾನು ಉತ್ತರ ಕೊಟ್ಟಿದ್ದೇನೆ. ಈ ವಿಶ್ವವಿದ್ಯಾಲಯ ಅರ್ಜಿ ಸಲ್ಲಿಸಿದ್ದು 8.12.2012 ರಂದು. ಶ್ರೀನಿವಾಸ ಟ್ರಸ್ಟ್ ಇವರ ಬಗ್ಗೆ ಮಾನ್ಯ ಸದಸ್ಯರು ಕೆಲವು ಅಂಶಗಳನ್ನು ಹೇಳಿದರು. ಅದರ ಬಗ್ಗೆ ನನಗೆ ಗೊತ್ತಿಲ್ಲ. ಈ ಸಂಸ್ಥೆ ಅರ್ಜಿ ಸಲ್ಲಿಸಿದ್ದು 8.12.2012ರಂದು. ಇದರ LIC (Local Inspection Committee) Report ಕೊಟ್ಟನಂತರ ಅದು ಕ್ಯಾಬಿನೆಟ್ ಮುಂದೆ ಬಂತು. ಕ್ಯಾಬಿನೆಟ್‌ನಲ್ಲಿ ಬೇರೆ ಕಾರಣಕ್ಕೆ defer ಆಯಿತು. ಕೊನೆಗೆ ಮುಖ್ಯಂತ್ರಿಗಳ ಅನುಮೋದನೆಯೊಂದಿಗೆ . . .

**ಶ್ರೀ ಬಸವರಾಜ ಹೊರಟ್ಟಿ:-** ಗಾರ್ಡನ್ ಸಿಟಿ ಯುನಿವರ್ಸಿಟಿಗೆ ಸಂಬಂಧಪಟ್ಟಂತೆ ವಿವರಣೆ ಕೊಡಿ. ಅವುಗಳ ದಾಖಲೆಗಳನ್ನು ಕೊಡಿ. ಅವರು ಮಾಡಿರುವ fraud ಬಗ್ಗೆ ಹೇಳಿ . . .

**ಶ್ರೀ ಸಿ.ಟಿ. ರವಿ:-** ದಯವಿಟ್ಟು ನನ್ನ ಮಾತು ಕೇಳಿ. ಈ ಸಂಸ್ಥೆ 9 ಸಂಸ್ಥೆಗಳನ್ನು ನಡೆಸುತ್ತಿದೆ.

**ಶ್ರೀ ಇ. ಕೃಷ್ಣಪ್ಪ:-** ಒಂದೇ institution ನಲ್ಲಿ 9 ಕೋರ್ಸುಗಳನ್ನು ನಡೆಸುತ್ತಿದ್ದಾರೆ.

**ಶ್ರೀ ಸಿ.ಟಿ. ರವಿ:-** ಅವರು ನಡೆಸುತ್ತಿರುವುದು Medical, Institute of Dental Science, Institute...

**ಶ್ರೀ ಇ. ಕೃಷ್ಣಪ್ಪ:–** ಎಲ್ಲವೂ ಒಂದೇ ಕಡೆಯಿದ್ದು ಬೇರೆ ಬೇರೆ ಬೋರ್ಡ್‌ಗಳನ್ನು ಹಾಕಿದ್ದಾರೆ.

**ಶ್ರೀ ಸಿ.ಟಿ. ರವಿ:–** ಇರಬಹುದು, ಆದರೆ ಬಯೋಟೆಕ್ನಾಲಜಿಯೇ ಬೇರೆ . . .

**ಶ್ರೀ ಇ. ಕೃಷ್ಣಪ್ಪ:–** ಎಲ್ಲಾ ಒಂದೇ ಕ್ಯಾಂಪಸ್‌ನಲ್ಲಿವೆ. .. .

**ಶ್ರೀ ಸಿ.ಟಿ. ರವಿ:–** ಒಂದೇ ಕ್ಯಾಂಪಸ್‌ನಲ್ಲಿರಬಹುದು, ಆದರೆ ಕಾಲೇಜುಗಳು ಬೇರೆ ಬೇರೆ. ಸಂಸ್ಥೆ ಒಂದು, ಕಾಲೇಜುಗಳು ಬೇರೆ ಬೇರೆ. ಮಾನ್ಯ ಸದಸ್ಯರು, ಬೆಂಗಳೂರಿಗೆ ಎಷ್ಟು ವಿಶ್ವವಿದ್ಯಾಲಯ ಬೇಕು ಎಂದು ಕೇಳಿದರು. ನನಗೂ ಕೂಡ ಬೆಂಗಳೂರು ಕೇಂದ್ರೀಕೃತ ವಿಶ್ವವಿದ್ಯಾಲಯಗಳು ಇರಬಾರದು ಎನ್ನುವ ಇಚ್ಚೆ ಇದೆ. ಆ ಹಿನ್ನೆಲೆಯಲ್ಲಿ ಅವರಿಗೆ ಬಿಗಿ ನಿಲುವನ್ನು ಹಾಕಿದ್ದೇನೆ. 25 ಕೋಟಿ endowrment fund ಎಂದು ಹೇಳಿದ್ದು control ಆಗಲಿ ಎನ್ನುವ ಉದ್ದೇಶದಿಂದ. ಬೆಂಗಳೂರಿನಲ್ಲಿ 25–40 ಎಕರೆ ಜಾಗ ಬೇಕು ಎಂದು ಕೇಳಿರುವ ಉದ್ದೇಶ ಕೂಡ ಕಂಟ್ರೋಲ್ ಆಗಲಿ ಎಂದೇ ಮಾಡಿದ್ದು. ಅಲ್ಲದೆ ಇದಕ್ಕೆ in principle approval ಮಾತ್ರ ಕೊಡಲಾಗುತ್ತದೆ. ಇವುಗಳನ್ನು fulfill ಮಾಡಿದ ನಂತರ, ಮೂರು ಸದಸ್ಯರ ಒಂದು ಸಮಿತಿಯು, ಈ ಸಂಸ್ಥೆಗಳು ಎಲ್ಲಾ ಷರತ್ತುಗಳನ್ನು ಪಾಲಿಸಿದೆ ಎಂದು ವರದಿ ಕೊಟ್ಟಮೇಲೆ ಸರ್ಕಾರ ಅನುಮತಿ ಕೊಡುತ್ತದೆ. AICTE, UGC & MCI ನಿಯಮಗಳನ್ನು ಪಾಲಿಸಿದ್ದಾರೆ, 25 ಕೋಟಿ ರೂಪಾಯಿಗಳನ್ನು deposit ಇಟ್ಟಿದ್ದಾರೆ, 25 ರಿಂದ 40 ಎಕರೆಯಷ್ಟು ಜಾಗವನ್ನು ಹೊಂದಿದ್ದಾರೆ ಎನ್ನುವುದಾದರೆ ಅದರ sketch, ಸಂಬಂಧಪಟ್ಟ ದಾಖಲೆಗಳನ್ನು ಒದಗಿಸಿ ಕೊಟ್ಟ ನಂತರ ಅವರಿಗೆ ಅನುಮತಿ ಕೊಡಲಾಗುತ್ತದೆ. ಇಲ್ಲದಿದ್ದರೆ ಅವರಿಗೆ ಅನುಮತಿ ಸಿಗುವುದಿಲ್ಲ. In principle approval ಸಿಕ್ಕಿದ ಮಾತ್ರಕ್ಕೆ ಅನುಮತಿ ಸಿಕ್ಕಿತು ಎನ್ನುವ ಅರ್ಥವಲ್ಲ. ಹಾಗಾಗಿ ಸದರಿ ವಿಧೇಯಕಕ್ಕೆ ಸದನ ಅನುಮತಿ ಕೊಡಬೇಕೆಂದು ಕೋರುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ತಮ್ಮ ಪೀಠದ ಬಗ್ಗೆ, ತಮ್ಮ ಮಾತುಗಳ ಬಗ್ಗೆ, ತಮ್ಮ

ವಿಚಾರಗಳಿಗೆ ನಾವು ಗೌರವ ಕೊಡುತ್ತೇವೆ. ತಾವು ಸದನದಲ್ಲಿ ಯಾವುದಾದರೂ ಒಂದು ವಿಧೇಯಕವನ್ನು ತರಬೇಕಾದರೆ ಕನಿಷ್ಠ 3 ದಿವಸಗಳ ಮುಂಚೆ ತರಬೇಕು ಎಂದು ಹೇಳಿದ್ದೀರಿ. ಅದನ್ನು ನಾವು ನಂಬಿದ್ದೆವು. ಅದರ ಬಗ್ಗೆ ಮಾನ್ಯ ಸಚಿವರು ಏನನ್ನೂ ಹೇಳಿಲ್ಲ. ತರಾತುರಿಯಲ್ಲಿ, ಪ್ರಯಶಃ ಸರ್ಕಾರದ ಕೊನೆಯ ಅಧಿವೇಶನದಲ್ಲಿ, ಕೊನೆಯ ಘಳಿಗೆಯಲ್ಲಿ ಈ ವಿಧೇಯಕಗಳನ್ನು ತಂದಿದ್ದಾರೆ. ಇಂತಹ ವಿಧೇಯಕಗಳ ಮೇಲೆ ಪರಿಣಾಮಕಾರಿಯಾಗಿ ಚರ್ಚೆ ಆಗಬೇಕು, ಎಲ್ಲಾ ಸದಸ್ಯರು ಪಾಲ್ಗೊಳ್ಳಬೇಕು, ಅದರ ಸಾಧಕ–ಬಾಧಕಗಳ ಬಗ್ಗೆ ಚಿಂತನೆ ಮಾಡುವಂತಹ ಸಂದರ್ಭದಲ್ಲಿ in the interst of all the membes of this August House. ತಾವು ವಿಧೇಯಕಗಳನ್ನು 3 ದಿವಸಗಳ ಮುಂಚೆಯೇ ತರಬೇಕೆಂದು ಹೇಳಿದ್ದೀರಿ. ಆದರೆ ತಮ್ಮ ಹೇಳಿಕೆ ಪ್ರಕಾರ ಈ ಸರ್ಕಾರ ನಡೆದುಕೊಳ್ಳುತ್ತಿಲ್ಲ. ಕೊನೆಯ ನಿಮಿಷದಲ್ಲಿ ಇದನ್ನು ಕೊಟ್ಟು, study ಮಾಡುವುದಕ್ಕೂ ಅವಕಾಶ ಕೊಡದೇ ಇರುವುದು ಸರಿಯಲ್ಲ. ಮಾನ್ಯ ಹೊರಟ್ಟಿಯವರು ಮಾತನಾಡುತ್ತಾ, ಇವರೇ ನಡೆಸುವಂತಹ ವೈದೇಹಿ ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಪ್ರವೇಶದ ಬಗ್ಗೆ fraudulent activities ನಡೆದಿದೆ ಎಂದು ಹೇಳಿದರು. ಇದರ ಬಗ್ಗೆ ಪ್ರಿಂಟ್ ಮಿಡಿಯಾದಲ್ಲಿ ಬಂದಿದೆ, ದೂರದರ್ಶನದಲ್ಲೂ ಬಂದಿದೆ. ಇಷ್ಟೊಂದು ವ್ಯಾಪಕವಾಗಿ ಪ್ರಚಾರವಾಗಿದೆ. This institute involved in fraudulent activities. ಈ ರೀತಿ fraud ಮಾಡಿದಂತಹ ಸಂಸ್ಥೆಗೆ ಖಾಸಗಿ ವಿಶ್ವವಿದ್ಯಾಲಯ ಮಾಡುವುದಕ್ಕೆ ಕೊಡುತ್ತೇವೆ ಎಂದು ಹೇಳುತ್ತಿರುವುದನ್ನು ನೋಡಿದರೆ ಸರ್ಕಾರ fraud ಮಾಡುವವರ ಪರವಾಗಿದೆ ಎನ್ನುವ ಸಂದೇಶ ಹೋಗುತ್ತದೆ. ಮತ್ತೆ, ಮಾನ್ಯ ಜಗದೀಶ್‌ಶೆಟ್ಟರ್‌ರವರ ಸರ್ಕಾರದಲ್ಲಿ, ಯಾರ್ಯಾರು ಖಾಸಗಿ ವಿಶ್ವವಿದ್ಯಾಲಯ ಮಾಡುವವರಿದ್ದಾರಿ ಎಲ್ಲರೂ ಬನ್ನಿ ಬನ್ನಿ, ಈಗಲೇ ಮಾಡಿಕೊಂಡು ಹೋಗಿ ಎಂದು ಹೇಳುವಂತಹ ಪದ್ಧತಿ ಪ್ರಾರಂಭವಾಗಿದೆ ಎಂದು ತಪ್ಪು ಸಂದೇಶ ರಾಜ್ಯದ ಜನತೆಗೆ ಹೋಗುತ್ತದೆ. ಈಗಾಗಲೇ ಈ ರೀತಿಯ 18 ವಿಶ್ವವಿದ್ಯಾಯಗಳನ್ನು ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ಮತ್ತೆ ಈಗ, ನೀವು ತೆಗೆದುಕೊಳ್ಳಿ ನೀವು ತೆಗೆದುಕೊಳ್ಳಿ ಎಂದು

ಕರೆದು ಕೊಡುತ್ತಿರುವುದನ್ನು ನೋಡಿದರೆ ಇದು ರಾಜ್ಯದ ಜನರ ಹಿತದೃಷ್ಟಿಯಿಂದಲ್ಲ, ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡುವಂಥವರ ಪರವಾಗಿದ್ದೀರಿ ಎನ್ನುವುದು ಗೊತ್ತಾಗುತ್ತದೆ. ರಾಜ್ಯದ ಸಮಸ್ತ ಮಕ್ಕಳ ವಿದ್ಯಾರ್ಜನೆಗಾಗಿ, ಮಕ್ಕಳ ಶೈಕ್ಷಣಿಕ ಮಟ್ಟ ಹೆಚ್ಚು ಮಾಡಬೇಕು, ಅವರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವ ವಿಚಾರದಿಂದ ಈ ವಿಶ್ವವಿದ್ಯಾಲಯಗಳು ಪ್ರಾರಂಭವಾಗುತ್ತಿಲ್ಲ. ಖಾಸಗಿ ವಿಶ್ವವಿದ್ಯಾಲಯಗಳನ್ನು ತೆಗೆಯವಂಥವರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವ ಉದ್ದೇಶದಿಂದ, ಅವರಿಗೆ ಸಹಾಯ ಮಾಡಬೇಕು ಎನ್ನುವ ಉದ್ದೇಶದಿಂದ ಕೊನೆ ಘಳಿಗೆಯಲ್ಲಿ ಇಂಥದ್ದನ್ನು ಮಾಡುತ್ತಿದ್ದೀರಿ. ಇದರಿಂದ ಸರ್ಕಾರದ ಹೆಸರು ಕೆಡುತ್ತದೆ. ಸರ್ಕಾರಕ್ಕೆ ಇದು ಭೂಷಣವಲ್ಲ. ಹಾದಿ–ಬೀದಿಯಲ್ಲಿ ಹೋಗುವವರಿಗೆ ಒಂದೊಂದು ವಿಶ್ವವಿದ್ಯಾಲಯ ಕೊಟ್ಟ ಹಾಗಾಗುತ್ತದೆ. ಮಾನ್ಯ ಸಭಾಪತಿಗಳೆ, ಇವರು ಇದನ್ನು ಪ್ರಾರಂಭ ಮಾಡಿಲ್ಲ, Knowledge Commission ನವರು ಶಿಫಾರಸ್ಸು ಮಾಡಿದ್ದಾರೆ ಎನ್ನುವುದನ್ನು ನಾನು ಒಪ್ಪುತ್ತೇನೆ. 1500 ವಿಶ್ವವಿದ್ಯಾಲಯಗಳ ಕೊರತೆ ಇದೆಯೆಂದು ಹೇಳಿದ್ದಾರೆ. ಹಾಗಾದರೆ ವಿಶ್ವವಿದ್ಯಾಲಯಗಳನ್ನು ತೆರೆಯವುದಕ್ಕೆ ಯಾರಿಗೆ ಅವಕಾಶ ಕೊಡಬೇಕು? ಎಂಥವರಿಗೆ ಕೊಡಬೇಕು? ಅವರ track record ಏನು? ಅವರು ನಿಜವಾಗಲೂ ಶೈಕ್ಷಣಿಕ ಕ್ಷೇತ್ರದಲ್ಲಿ ಅತ್ಯುತ್ತಮವಾಗಿ ಸೇವೆ ಮಾಡುವಂಥವರಾಗಿದ್ದಾರೆಯೇ? ಪ್ರಾಂಜಲ ಮನಸ್ಸಿನಿಂದ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡುತ್ತಿದ್ದಾರೆಯೇ? ಉದಾತ್ತ ವಿಚಾರಗಳ ಹಿನ್ನೆಲೆಯಲ್ಲಿ ಶಿಕ್ಷಣವನ್ನು ಪ್ರಚಾರ ಮಾಡುವುದಕ್ಕೆ ಅವರು ಕಟಿಬದ್ಧರಾಗಿದ್ದಾರೆಯೂ ಎನ್ನುವುದರ ಬಗ್ಗೆ ಚಿಂತನೆ ಮಾಡಬೇಕು. ಅಪರಾಧದಲ್ಲಿ ಸಿಲುಕಿದಂಥವರಿಗೆ, fraud ಮಾಡಿದಂಥವರಿಗೆ ವಿಶ್ವವಿದ್ಯಾಲಯ ಮಾಡುವುದಕ್ಕೆ ಕೊಡುವುದು ಎಷ್ಟು ಸರಿ? ಮಾನ್ಯ ಸಚಿವರು ಮಾತನಾಡುತ್ತಾ, ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ syllabus change ಮಾಡಬೇಕಾದರೆ ಬಹಳ ಸಮಯ ಹಿಡಿಯುತ್ತದೆ, ಆದರೆ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ತತಕ್ಷಣ ಮಾಡುತ್ತಾರೆ ಎಂಬ ಮಾತನ್ನು ಹೇಳಿದರು. ಈ ಮಾತನ್ನು ಉನ್ನತ ಸಚಿವರು

ಹೇಳಬಾರದು. ಬೇಕಾದರೆ ಈ ಪ್ರಕ್ರಿಯೆಯಲ್ಲಿ ಬದಲಾವಣೆ ತರಲಿ. ನೀವು ಶಿಕ್ಷಣ ಸಚಿವರಾಗಿ, ಶಿಕ್ಷಣದಲ್ಲಿ ಏನೂ ಸುಧಾರಣೆ ಮಾಡುವುದಕ್ಕಾಗುವುದಿಲ್ಲ, ಅಸಹಾಯಕನಾಗಿದ್ದೇನೆ, ಸರ್ಕಾರಿ ವಿಶ್ವವಿದ್ಯಾಲಯಗಳು ಒಳ್ಳೆಯದಲ್ಲ, ಖಾಸಗಿ ವಿಶ್ವವಿದ್ಯಾಲಯಗಳು ಒಳ್ಳೆಯದು ಎಂದು ಹೇಳುವುದು ಸರಿಯಲ್ಲ. ನಮ್ಮಲ್ಲಿ syllabus ಬದಲಾವಣೆ ಮಾಡಬೇಕಾದರೆ ಬಹಳಷ್ಟು ಸಮಯ ಹಿಡಿಯುತ್ತದೆ ಎಂದು ಹೇಳುವುದಾದರೆ you change the rules. ಬೇಗ ಆಗುವಂತಹ, ಸರಳೀಕರಣ ಮಾಡುವಂತಹ ಅಧಿಕಾರ ನಿಮಗಿದೆ. Fraud ಮಾಡಿದಂಥವರಿಗೆ, fraudulent activities ನಲ್ಲಿ ಭಾಗವಹಿಸಿದಂತವರಿಗೆ ಖಾಸಗಿ ವಿಶ್ವವಿದ್ಯಾಲಯ ಪ್ರಾರಂಭ ಮಾಡುವುದಕ್ಕೆ ಅವಕಾಶ ಕೊಡುವುದು ಸರಿಯಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ಮತ್ತೆ, ಮಾನ್ಯ ಸಭಾಪತಿಗಳೆ, ವಿಧೇಯಕಗಳನ್ನು ಮಂಡಿಸುವುದಕ್ಕೆ ಸಂಬಂಧಪಟ್ಟಂತೆ we will go according to their words ಎಂದು ಹೇಳಿದ್ದರು. ನೀವು ಹೇಳಿದ್ದನ್ನು, ನಿಮಗೆ ವ್ಯತಿರಿಕ್ತವಾಗಿ, ಪೀಠಕ್ಕೆ ಗೌರವ ಕೊಡದೇ ಕೊನೆಯ ಘಳಿಗೆಯಲ್ಲಿ ವಿಧೇಯಕಗಳನ್ನು ತರುವುದು ನೋಡಿದರೆ ತಮ್ಮ ಮಾತಿಗೂ ಈ ಸರ್ಕಾರದಲ್ಲಿ ಬೆಲೆ ಇಲ್ಲ ಎನ್ನುವ ಭಾವನೆ ಉಂಟಾಗಿದೆ. ತರಾತುರಿಯಲ್ಲಿ ವಿಧೇಯಕಗಳನ್ನು ತರುವುದರಿಂದ ನಾವು ಅವುಗಳ ಬಗ್ಗೆ ಅಧ್ಯಯನ ನಡೆಸಲು ಅಸಹಕಾಯಕರಾಗುತ್ತೇವೆ. ಮಾನ್ಯ ವಿಜಯಶಂಕರ್‌ರವರು, flood gate open ಮಾಡಿದ ಹಾಗಾಗಿದೆ ಎಂದು ಹೇಳಿದರು. ಮಾನ್ಯ ಸಭಾಪತಿಗಳೆ, ನಮ್ಮ ಅಭಿಪ್ರಾಯದಲ್ಲಿ ಸದರಿ ವಿಧೇಯಕವನ್ನು ಸರ್ಕಾರ ವಾಪಸ್ಸು ತೆಗೆದುಕೊಳ್ಳುವುದು ಯೋಗ್ಯ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, it is in the interst of education and in the interest of people of Karnataka.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ವಿಚಾರದ ಬಗ್ಗೆ ಮೊಕದ್ದಮೆಯಂತೂ ದಾಖಲಾಗಿಲ್ಲ. ಕೇವಲ ಮಾಧ್ಯಮಗಳಲ್ಲಿ ಬಂದಿದೆ. ಮಾಧ್ಯಮಗಳ ವರದಿಯನ್ನು ಆಧಾರಿಸಿ ನಿರ್ಣಯ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮೊಕದ್ದಮೆ ಯಾವುದೂ ಕೂಡ ದಾಖಲಾಗಿಲ್ಲ. ಅಲ್ಲದೇ, ಈ ಮೆಡಿಕಲ್ ಕಾಲೇಜಿಗೆ ಅನುಮತಿ ಕೊಟ್ಟಿದ್ದು

ನಮ್ಮ ಸರ್ಕಾರವಲ್ಲ. ಈಗ ನೀವು ಮಾತನಾಡಿರುವುದೆಲ್ಲಾ ನಾನು ಮೌನವಾಗಿ ಕೇಳಿದ್ದೇನೆ. ಈಗ ನಾನು ಸತ್ಯ ಹೇಳಿದರೆ ಉರಿಯುತ್ತೆ ಎಂದರೆ ಏನು ಮಾಡುವುದಕ್ಕಾಗುತ್ತದೆ?

(ಗೊಂದಲ)

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಈಗ ಬಸವರಾಜ ಹೊರಟ್ಟಿಯವರನ್ನು ಕೆಟ್ಟವರು ಎಂದು ಯಾರೋ ಹೇಳಿದ ಮೇಲೆ ಅವರು ಕೆಟ್ಟವರು ಆಗುವುದಿಲ್ಲ. ನಮ್ಮ ಸಂವಿಧಾನದ ಪ್ರಕಾರ ಅವರ ಮೇಲೆ ಎಫ್.ಐ.ಆರ್. ದಾಖಲಾಗಿರಬೇಕು. ಅವರು ರೇಪ್ ಮಾಡಿದ್ದಾರೆಯೋ, ಕಳ್ಳತನ ಮಾಡಿದ್ದಾರೆಯೋ ಎಂದು ರೆಕಾರ್ಡ್ ಆಗಿರಬೇಕು. ಆಗಿದ್ದರೆ ಮಾತ್ರ ಕೆಟ್ಟವರು ಎಂದು ಆಗುತ್ತದೆ. ಸುಮ್ಮನೆ ಹೇಳಿಬಿಟ್ಟರೆ ಒಪ್ಪಿಕೊಳ್ಳುವುದಕ್ಕಾಗುತ್ತದೆಯೇ? ಅವರು ಒಳ್ಳೆಯವರಲ್ಲವೆ? ಯಾರೋ ಹಾದಿ ಬೀದಿಯಲ್ಲಿ ಹೋಗುವವರ ಮಾತನ್ನು ಕೇಳುವುದಕ್ಕಾಗುತ್ತೆಯೇ?

**ಸಭಾಪತಿಯವರು:–** ಈಗ ನಾನು ಏನು ಮಾಡಬೇಕು ಎಂಬುದನ್ನು ಹೇಳಿ?

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಚರ್ಚೆಯಾಗಿದೆ. ವೈದೇಹಿ ಡೆಂಡಲ್ ಕಾಲೇಜಿನ ವಿದ್ಯಾರ್ಥಿನಿಯರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಹೋಗಿದ್ದರು.

**ಸಭಾಪತಿಯವರು:–** ಈ ವಿಧೇಯಕದ ಬಗ್ಗೆ ಮುಂದಕ್ಕೆ ಹೋಗಬೇಕೋ ಬೇಡವೋ ಎಂಬುದನ್ನು ಹೇಳಿ?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಕೇಸ್ ದಾಖಲಾಗಿಲ್ಲ ಎಂದ ಮಾತ್ರಕ್ಕೆ ಅಪರಾಧವೇ ಆಗಿಲ್ಲ ಎನ್ನುವ ಅರ್ಥ ಅಲ್ಲ. ಈ ರಾಜ್ಯದಲ್ಲಿ ಕೆಲವೊಂದು ಸಂದರ್ಭದಲ್ಲಿ ಕೇಸ್ ದಾಖಲಾಗದ ಹಾಗೆ ನೋಡಿಕೊಳ್ಳುವಂತಹ ಶಕ್ತಿಶಾಲಿಗಳಿದ್ದಾರೆ. ಅಂದರೆ ಅದರರ್ಥ ಅವರು ಸಾಚಾ ಎಂದು ಹೇಳಿಕೊಳ್ಳುವುದಕ್ಕಾಗುವುದಿಲ್ಲ.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ರವಿಯವರೇ, ನಿಮಗೆ ಆತುರ ಏಕೆ? ಇವತ್ತೇ ಮಂಡನೆ ಮಾಡಬೇಕೆನ್ನುವುದು ಏನಿದೇ?

**ಸಭಾಪತಿಯವರು:–** ಸಚಿವರೇ, ನಿಮ್ಮ ಅಭಿಪ್ರಾಯ ಹೇಳಿ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಈಗ ಹಾದಿ–ಬೀದಿ ಖಾಸಗಿಯವರಿಗೆ ಅನುಮತಿ ಕೊಡುತ್ತಾರೆಂದು ಹೇಳಿದರು. ನಾನು ಮೊನ್ನೆ ಹೇಳಿದ್ದೆ, 181 ಇಂಜಿನಿಯರಿಂಗ್ ಕಾಲೇಜುಗಳನ್ನು ಖಾಸಗಿಯವರಿಗೆ ಕೊಟ್ಟಿದ್ದಾರಲ್ಲಾ, ಒಂದೇ ಒಂದು ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಇದ್ದಾಗ ನೂರು ಇಂಜಿನಿಯರಿಂಗ್ ಕಾಲೇಜು ತೆರೆಯಬೇಕೆಂದು ಅನಿಸದೆ ಇರುವುದು ಈ ರಾಜ್ಯದ ದುರ್ದೈವ. ಅವೊತ್ತು ಬಡವರ ಮಕ್ಕಳಿಗೆ ಅನ್ಯಾಯವಾಗಲಿಲ್ಲವೇ? ನಮ್ಮ ಸರ್ಕಾರ 14 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ತೆರೆಯಿತು.

**ಶ್ರೀ ಬಸವರಾಜ ಹೊರಟ್ಟಿ:–** ನಿಮ್ಮ ಸರ್ಕಾರ ಅಲ್ಲ. ಸಮ್ಮಿಶ್ರ ಸರ್ಕಾರ ಇದ್ದಾಗ.

**ಶ್ರೀ ಮರಿತಿಬ್ಬೇಗೌಡ:–** 14 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಯಾರು ತೆರೆದವರು ಸ್ವಾಮಿ? ಸಮ್ಮಿಶ್ರ ಸರ್ಕಾರ, ಕುಮಾರಸ್ವಾಮಿ ನೇತೃತ್ವದ ಸರ್ಕಾರ.

**ಶ್ರೀ ಸಿ.ಟಿ. ರವಿ:–** ಬಿಜೆಪಿ–ಜೆಡಿಎಸ್ ಸರ್ಕಾರ ತೆರೆಯಿತು.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:–** ನಮ್ಮ ಸರ್ಕಾರ ಎಂದು ನೀವು ಯಾವ ರೀತಿ ಹೇಳುತ್ತಿರಿ? ನಿಮಗೆಲ್ಲಾ ನಾಚಿಕೆಯಾಗಬೇಕು.

(ಗೊಂದಲ)

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ನಾನು ಅವೊತ್ತು ಹೇಳಿದ್ದೆ. ತಾವು ಉನ್ನತ ಶಿಕ್ಷಣ ಸಚಿವರಾಗಿದ್ದಾಗ.....

**ಶ್ರೀ ಬಸವರಾಜ ಹೊರಟ್ಟಿ:–** ಸಮ್ಮಿಶ್ರ ಸರ್ಕಾರ ಎಂದು ಹೇಳಿ. ನಮ್ಮ ಸರ್ಕಾರ ಎಂದು ಹೇಳಬೇಡಿ.

**ಶ್ರೀ ಸಿ.ಟಿ. ರವಿ:–** ಹೇಳುತ್ತೇನೆ.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:–** ನೀವು ಏಕೆ ಬೇರೆ ಮಗುವನ್ನು ಎತ್ತಿ ಮುದ್ದಾಡುತ್ತಿದ್ದೀರಿ?

(ಗೊಂದಲ)

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ನಾನು ಪ್ರಯತ್ನ ಪೂರ್ವಕವಾಗಿ ಹೇಳುತ್ತಿದ್ದೇನೆ. ತಾವು ಉನ್ನತ ಶಿಕ್ಷಣ ಸಚಿವರಾಗಿದ್ದಾಗ ತೆರೆದಷ್ಟು ಕಾಲೇಜುಗಳನ್ನು ರಾಜ್ಯದಲ್ಲಿ ಐವತ್ತು ವರ್ಷಗಳಿಂದ ಇದ್ದ ಯಾವುದೇ ಸರ್ಕಾರಗಳು ತೆರೆದಿರಲಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿರುವುದಲ್ಲ. ಜೆಡಿಎಸ್, ಜನತಾ ಪಕ್ಷ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿರುವುದಲ್ಲ. ಬಿಜೆಪಿ ಯಾವತ್ತೂ ಅಧಿಕಾರ ಪಕ್ಷದ ಪಾಲುದಾರವಾಯಿತೋ ಅವೊತ್ತು ಶೈಕ್ಷಣಿಕ ಕ್ರಾಂತಿಯಾಯಿತು.

**ಶ್ರೀ ಎಸ್.ಆರ್. ಪಾಟೀಲ್:–** ಅವೊತ್ತೇ ರಾಜ್ಯದ ದುರಂತ. ಅಧಿಕಾರಕ್ಕೆ ಬಂದ ಕೂಡಲೇ ಈ ರಾಜ್ಯದ ದುರಂತ ಪ್ರಾರಂಭವಾಯಿತು.

(ಗೊಂದಲ)

**ಶ್ರೀ ಸಿ.ಟಿ. ರವಿ:–** ಬಿಜೆಪಿ ಯಾವತ್ತೂ ಅಧಿಕಾರ ಪಕ್ಷದ ಪಾಲುದಾರವಾಯಿತೋ ಅವೊತ್ತು ಶೈಕ್ಷಣಿಕ ಕ್ರಾಂತಿಯಾಯಿತು. ಅದಕ್ಕೆ ನೀವು ಕಾರಣೀಭೂತರು. ಈ ಸದನದ ಪರವಾಗಿ ನಾನು ನಿಮಗೆ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಅಭಿನಂದನೆಯಲ್ಲ. ನೀವು ಬಂದದ್ದು ಈ ರಾಜ್ಯದ ದುರ್ದೈವ.

(ಗೊಂದಲ)

**ಸಭಾಪತಿಯವರು:-** ಇದರ ಬಗ್ಗೆ ಚರ್ಚೆಗೆ ಹೋಗಿಬಿಟ್ಟರೆ ಹೇಗೆ?

**ಶ್ರೀ ದಯಾನಂದ:-** ಮಾನ್ಯ ಸಭಾಪತಿಯವರೇ, ನಮ್ಮ ವಿರೋಧ ಪಕ್ಷದ ಕಾಳಜಿ ಏನೆಂದರೆ, ಬೆಳೆ ಆಗಬೇಕು ಎಂದರೆ ಮಳೆ ಬೇಕು. ಆದರೆ, ಇವರು ಅತಿವೃಷ್ಟಿ ಮಾಡುತ್ತಿದ್ದಾರಲ್ಲಾ? ಅತಿವೃಷ್ಟಿಯಾದರೆ ಪ್ರವಾಹವಾಗುತ್ತದೆ. ಪ್ರವಾಹ ಆಗಿರುವುದನ್ನೇ ನಾವು ಇನ್ನೂ ಸರಿ ಮಾಡುವುದಕ್ಕಾಗುವುದಿಲ್ಲ. ಇವರು ಅತಿವೃಷ್ಟಿ ಏಕೆ ಮಾಡುತ್ತಿದ್ದಾರೆ?

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ದಯಾನಂದರವರಿಗೆ ಆತಂಕ ಬೇಡ. ನಾವು ಎಷ್ಟೇ ಮಹಾಪೂರ ಬಂದರೂ ಅದನ್ನು ನಿಯಂತ್ರಿಸತಕ್ಕಂಥ ಡ್ಯಾಮ್ ಕಟ್ಟಿ, ರಾಜ್ಯದ ಮಕ್ಕಳಿಗೆ ಅನುಕೂಲವಾಗುವಂತಹ ಚಾನಲ್‌ಗಳನ್ನು ತೋಡಿ ಆ ಮೂಲಕ ರಾಜ್ಯಕ್ಕೆ ಅನುಕೂಲ ಮಾಡುವಂಥದ್ದನ್ನು ಮಾಡಿದ್ದೇವೆ. ಶುಲ್ಕ ನಿಯಂತ್ರಣಕ್ಕೆ Fee Fixation Committee ಮಾಡಿದ್ದೇವೆ. 40 ಪರ್ಸೆಂಟ್ ರಾಜ್ಯದ ಮಕ್ಕಳಿಗೆ ಅನುಕೂಲ ಮಾಡುವಂತಹ reservation ಕೊಟ್ಟಿದ್ದೇವೆ. ಹಾಗಾಗಿ ನಾವು ಇದೆಲ್ಲಾ ತಂದುಕೊಟ್ಟಿದ್ದೇವೆ. ಪಾಟೀಲ್‌ರವರು ಹೇಳಿದ ಹಾಗೆ ನಾನು ಯಾವತ್ತೂ ಅಸಹಾಯಕನಲ್ಲ. ನೀವು ಇದೆಲ್ಲಾ ಬದಲಾವಣೆ ತಂದು ನಮಗೆ ಅನುಕೂಲ ಮಾಡಿ ಕೊಟ್ಟು ಹೋಗುತ್ತಿದ್ದೀರಿ ಎಂದು ಮೊನ್ನೆ ನಾನು State University Act ಗೆ ತಿದ್ದುಪಡಿ ತಂದಾಗ ಅವರೇ ಹೇಳಿದ್ದರು.

**ಶ್ರೀ ಎಸ್.ಆರ್. ಪಾಟೀಲ್:-** ನೀವು ಮಂತ್ರಿಗಳಾಗಿ ಅಸಹಾಯಕತೆಯನ್ನು ವ್ಯಕ್ತ ಮಾಡಿದ್ದೀರಿ. ನಮ್ಮ ಸರ್ಕಾರ ವಿಶ್ವವಿದ್ಯಾಲಯಗಳಲ್ಲಿ syllabus ಬೇಗನೆ ಕೈಗೆತ್ತಿಕೊಳ್ಳುವುದಕ್ಕೆ ಅಸಹಾಯಕರಾಗಿದ್ದೇವೆ ಎಂದು ಹೇಳಿದ್ದೀರಿ. I feel very sorry for you. ಒಬ್ಬ ಮಂತ್ರಿಯಾಗಿ ನೀವು ಅಸಹಾಯಕತೆಯನ್ನು ವ್ಯಕ್ತ ಮಾಡಿದ್ದೀರಿ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

**"2013 ರ ವೈದೇಹಿ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು"**

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:–** ನಾವು ಒಪ್ಪುವುದಿಲ್ಲ.

**(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಜನತಾದಳ(ಎಸ್) ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿ ಸದನದಿಂದ ಹೊರನಡೆದರು)**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು ಖಂಡ 2 ರಿಂದ 61ರವರೆಗೆ**

**ಸಭಾಪತಿಯವರು:–** "ಖಂಡ 2 ರಿಂದ 61 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 61 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, "2013 ರ ವೈದೇಹಿ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಸಬೇಕೆಂದು ಕೋರುತ್ತೇನೆ"

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"2013 ರ ವೈದೇಹಿ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಸಭಾಪತಿಯವರು:–** ಮಾನ್ಯ ಸಚಿವರೇ, ಗಾರ್ಡನ್ ಸಿಟಿ ವಿಶ್ವವಿದ್ಯಾಲಯ ವಿಧೇಯಕವನ್ನು ಮಂಡನೆ ಮಾಡಬೇಕು.

**(ಆ) ಗಾರ್ಡನ್ ಸಿಟಿ ವಿಶ್ವವಿದ್ಯಾಲಯ ವಿಧೇಯಕ, 2013 ಮಂಡನೆಗೆ ಅನುಮತಿ ಕೋರಿಕೆ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, 2013ರ ಗಾರ್ಡನ್ ಸಿಟಿ ವಿಶ್ವವಿದ್ಯಾಲಯ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"2013ರ ಗಾರ್ಡನ್ ಸಿಟಿ ವಿಶ್ವವಿದ್ಯಾಲಯ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, 2013ರ ಗಾರ್ಡನ್ ಸಿಟಿ ವಿಶ್ವವಿದ್ಯಾಲಯ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:–** ವಿಧೇಯಕವನ್ನು ಮಂಡಿಸಲಾಗಿದೆ.

**ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

**ಗಾರ್ಡನ್ ಸಿಟಿ ವಿಶ್ವವಿದ್ಯಾಲಯ ವಿಧೇಯಕ, 2013**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, 2013ರ ಗಾರ್ಡನ್ ಸಿಟಿ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"2013ರ ಗಾರ್ಡನ್ ಸಿಟಿ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು ಖಂಡ 2 ರಿಂದ 61ರವರೆಗೆ**

**ಸಭಾಪತಿಯವರು:–** "ಖಂಡ 2 ರಿಂದ 61 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಕಲ್ಪಟ್ಟಿತು**

(ಖಂಡ 2 ರಿಂದ 61 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, 2013ರ ಗಾರ್ಡನ್ ಸಿಟಿ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"2013ರ ಗಾರ್ಡನ್ ಸಿಟಿ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(1 ಘಂಟೆ)**

**(ಇ) ಜೆಎಸ್ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ವಿಧೇಯಕ, 2013 ಮಂಡನೆಗೆ ಅನುಮತಿ ಕೋರಿಕೆ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, 2013ರ ಜೆಎಸ್ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"2013ರ ಜೆಎಸ್ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, 2013ರ ಜೆಎಸ್ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:–** ವಿಧೇಯಕವನ್ನು ಮಂಡಿಸಲಾಗಿದೆ.

**(ಈ) ಶ್ರೀನಿವಾಸ ವಿಶ್ವವಿದ್ಯಾನಿಲಯ ವಿಧೇಯಕ, 2013 ಮಂಡನೆಗೆ ಅನುಮತಿ ಕೋರಿಕೆ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, 2013ರ ಶ್ರೀನಿವಾಸ ವಿಶ್ವವಿದ್ಯಾನಿಲಯ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"2013ರ ಶ್ರೀನಿವಾಸ ವಿಶ್ವವಿದ್ಯಾನಿಲಯ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, 2013ರ ಶ್ರೀನಿವಾಸ ವಿಶ್ವವಿದ್ಯಾನಿಲಯ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:–** ವಿಧೇಯಕವನ್ನು ಮಂಡಿಸಲಾಗಿದೆ.

**ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

**ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ವಿಧೇಯಕ, 2013 ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, 2013ರ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

<u>ಪ್ರಸ್ತಾವವನ್ನು ಮಂಡಿಸಲಾಯಿತು.</u>

**ಸಭಾಪತಿಯವರು:-** ಪ್ರಸ್ತಾವ ಏನೆಂದರ,

"2013ರ ಜೆಎಸ್‌ಎಸ್ ವಿಜ್ಞಾನ ಮತ್ತು
ತಂತ್ರಜ್ಞಾನ ವಿಶ್ವವಿದ್ಯಾನಿಲಯ
ವಿಧೇಯಕವನ್ನು
ಪರ್ಯಾಲೋಚಿಸುವುದು"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

<u>**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**</u>

<u>**ಖಂಡ 2 ರಿಂದ 61**</u>

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಖಂಡ 2 ರಿಂದ 61 ರವರೆಗೆ ಎರಡೂ
ಸೇರಿದಂತೆ ಈ ವಿಧೇಯಕದ
ಅಂಗವಾಗಿರುತ್ತದೆ"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

**(ಖಂಡ 2ರಿಂದ 61ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, 2013ರ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"2013ರ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಶ್ರೀನಿವಾಸ ವಿಶ್ವವಿದ್ಯಾನಿಲಯ ವಿಧೇಯಕ, 2013**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, 2013ರ ಶ್ರೀನಿವಾಸ ವಿಶ್ವವಿದ್ಯಾನಿಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"2013ರ ಶ್ರೀನಿವಾಸ ವಿಶ್ವವಿದ್ಯಾನಿಲಯ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 61**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಖಂಡ 2 ರಿಂದ 61 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2ರಿಂದ 61ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

ಖಂಡ 1 ಇತ್ಯಾದಿ

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, 2013ರ ಶ್ರೀನಿವಾಸ ವಿಶ್ವವಿದ್ಯಾನಿಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"2013ರ ಶ್ರೀನಿವಾಸ ವಿಶ್ವವಿದ್ಯಾನಿಲಯ
ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**3. ಆಯುವ್ಯಯದ ಮೇಲೆ ಚರ್ಚೆ**

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡಲು ಪ್ರಾರಂಭ ಮಾಡಿದ ನಂತರ ನಿಮಗೆ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ನಿನ್ನೆ ಇಡೀ ದಿವಸ ನಾನು ಸದನದಲ್ಲಿ ಕುಳಿತಿದ್ದೇನೆ. ನನಗೆ 10 ನಿಮಿಷಗಳ ಕಾಲ ಮಾತನಾಡಲು ಅವಕಾಶವನ್ನು ಕೊಡಿ. ನಾನು ಎರಡು ವಿಚಾರಗಳನ್ನು ಮಾತ್ರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕು. ನಿನ್ನೆಯ ದಿವಸ ತಾವು ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಡುತ್ತೇನೆಂದು ಹೇಳಿದ್ದೀರಿ. ನಾನು ಇಡೀ ದಿವಸ ಕಾದು ಕುಳಿತಿದ್ದೇನೆ.

**ಸಭಾಪತಿಯವರು:–** ಕೆಲವು ಸದಸ್ಯರು ನಾನು ಬಜೆಟ್ ಮೇಲೆ ಮಾತನಾಡಲು ಆಗಲಿಲ್ಲ. ಸ್ವಲ್ಪ ಸಮಯವಾದರೂ ಮಾತನಾಡಲು ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ಆದರೆ ನಾನು ನಿಮಗೆ ಅವಕಾಶ ಕೊಡಬೇಕು ಎಂದು ಹೇಳುತ್ತೇನೆ. ಆದರೆ ನನ್ನ ಒಂದು ಮನವಿ ಏನೆಂದರೆ, ನಿನ್ನೆಯ ದಿವಸವೂ ಸಹ ಹೇಳಿಕೊಂಡು ಬಂದಿದ್ದೇನೆ, ಒಬ್ಬರು ಮಾತನಾಡಲು

ಪ್ರಾರಂಭ ಮಾಡಿ ಅದು 8 ನಿಮಿಷಗಳು ದಾಟಿದರೆ ನಾನು ಮಧ್ಯದಲ್ಲಿ ಬಾಯಿ ಹಾಕುತ್ತೇನೆ. ಮಾನ್ಯ ಸದಸ್ಯರು ದಯಾಮಾಡಿ 8 ನಿಮಿಷಗಳೊಳಗಾಗಿ ತಮ್ಮ ಮಾತುಗಳನ್ನು ಮುಗಿಸಬೇಕು ಆ ಒಂದು ಷರತ್ತಿನ ಮೇಲೆ ನಾನು ಅವಕಾಶವನ್ನು ಕೊಡುತ್ತೇನೆ, ಮಾನ್ಯ ಮೋಟಮ್ಮನವರಿಗೆ ನಾನು 'ನಿಮಗೆ 10 ನಿಮಿಷಗಳ ಕಾಲಾವಕಾಶವನ್ನು ಕೊಡುತ್ತೇನೆ, ಮಾತನಾಡಿ. ನಿನ್ನೆಯ ದಿವಸ ನೀವು ಮಾತನಾಡಿಲ್ಲ' ಎಂದು ನಿನ್ನೆಯ ದಿವಸವೇ ಹೇಳಿದೆ ಈಗ ಮೊದಲಯದಾಗಿ ಮಾನ್ಯ ಪುಟ್ಟಸ್ವಾಮಿಯವರು ಮಾತನಾಡುತ್ತಾರೆ, ನಂತರ ಮೋಟಮ್ಮನವರು ಮತ್ತು ಸಿದ್ದರಾಮಣ್ಣನವರು ಮಾತನಾಡಿದ ನಂತರ ಇದನ್ನು ಮುಗಿಸುತ್ತೇನೆ.

**ಶ್ರೀ ಸಿ.ಹೆಚ್. ವಿಜಯಶಂಕರ್:–** ಮಾನ್ಯ ಸಭಾಪತಿಯವರೇ, ನಾವು ನಿನ್ನೆಯ ದಿವಸ ಯೋಚನೆ ಮಾಡಿದ ಹಾಗೆ ಈ ಕಡೆಯಿಂದ ನಾವು ಬಹಳಷ್ಟು ಜನ ಮಾತನಾಡಬೇಕೆಂದು ತಮ್ಮಲ್ಲಿ ಅಧಿಕೃತವಾಗಿ ಮನವಿಯನ್ನು ಮಾಡಿದ್ದೇವೆ.

**ಸಭಾಪತಿಯವರು:–** ನಾನು ನಿನ್ನೆಯ ದಿವಸ ರಾತ್ರಿ 10.00 ಗಂಟೆಯವರೆವಿಗೂ ಕುಳಿತುಕೊಳ್ಳುವುದಕ್ಕೆ ತಯಾರಿದ್ದೆವು. ಆದರೆ ತಾವುಗಳು ತಯಾರಿರಲಿಲ್ಲ. ಅದಕ್ಕೆ ನಾನೇನು ಮಾಡಲಿ. ನಾನು ಕೆಲವರನ್ನು ಕರೆದಾಗ ಮಾತನಾಡುವುದಿಲ್ಲವೆಂದು ಹೇಳಿದರು. ಹಾಗಾಗಿ ಸದನವನ್ನು ಮುಂದೂಡಿದೆ. ರಾತ್ರಿ 10.00 ಗಂಟೆಯವರೆವಿಗೂ ಮಾತನಾಡುವುದಕ್ಕೆ ಇನ್ನು 5 ಜನರಿಗೆ ಅವಕಾಶವಿತ್ತು. ನಿನ್ನೆಯ ದಿವಸ 5 ಜನರಿಗೆ ಅವಕಾಶವನ್ನು ಕಡಿದುಬಿಟ್ಟರಿ.

**ಶ್ರೀ ಸಿ.ಹೆಚ್. ವಿಜಯಶಂಕರ್:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಇವತ್ತು ಅವಕಾಶವನ್ನು ಮಾಡಿಕೊಡಿ.

**ಸಭಾಪತಿಯವರು:–** ಕಷ್ಟವಾಗುತ್ತದೆ, ಮಾನ್ಯ ಮುಖ್ಯಮಂತ್ರಿಗಳು ಒಪ್ಪಿದರೆ ನನ್ನದೇನು ಅಭ್ಯಂತರವಿಲ್ಲ. ಎಲ್ಲರಿಗೂ ಮಾತನಾಡಲು ಅವಕಾಶವನ್ನು ಕೊಡುತ್ತೇನೆ. ಇನ್ನು 20 ಜನವರಿಗೆ ಮಾತನಾಡಲು ಅವಕಾಶವನ್ನು ಕೊಡಲು ನಾನು ತಯಾರಿದ್ದೇನೆ.

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿ):–** ಮಾನ್ಯ ಸಭಾಪತಿಯವರೇ, ಮೊನ್ನೆಯ ದಿವಸ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿಯೂ ನಾನು ಹೇಳಿದ್ದೆ. ಆವತ್ತು ನಿರ್ಣಯವಾಗಿದ್ದು ಏನೆಂದರೆ, ನಿನ್ನೆಯ ದಿವಸ ವಿಧಾನ ಸಭೆಯಲ್ಲಿ ಮಧ್ಯಾಹ್ನ ಬಜೆಟ್ ಮೇಲೆ ಉತ್ತರವನ್ನು ಕೊಡುತ್ತೇನೆ, ಸಾಯಂಕಾಲ ಬಜೆಟ್‌ನ್ನು ಮಂಜೂರು ಮಾಡಿಸುವುದು. ಅಲ್ಲಿವರೆವಿಗೂ ಚರ್ಚೆಯಾಗಲಿ ಮತ್ತು ವಿಧಾನ ಪರಿಷತ್ತಿನಲ್ಲಿ ಮಧ್ಯಾಹ್ನ 12.00 ಗಂಟೆಗೆ ಬಂದು ನಾನು ಉತ್ತರವನ್ನು ಕೊಡುತ್ತೇನೆ ಎನ್ನುವುದನ್ನು ಹೇಳಿದ್ದೆ. ಆ ರೀತಿ ಒಂದು understanding ಆಗಿತ್ತು. ಅದಕ್ಕಾಗಿ ನಾನು ತಮ್ಮ discretionಗೆ ಬಿಡುತ್ತೇನೆ. ನಾವು ಉತ್ತರವನ್ನು ಕೊಟ್ಟ ನಂತರವೂ ಸಹ ಅವರಿಗೆ ಸ್ಪಷ್ಟೀಕರಣವನ್ನು ಕೇಳುವುದಕ್ಕೆ ಅವಕಾಶವಿರುತ್ತದೆ. ಆ ದೃಷ್ಟಿಯಿಂದ ಅದನ್ನು ಸಂಕ್ಷಿಪ್ತ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಭಾವಿಸುತ್ತೇನೆ. ನಾನು ತಮ್ಮ ಡಿಸ್ಕ್ರೀಷನರಿಗೆ ಬಿಡುತ್ತೇನೆ. ಆದರೂ ಕೂಡ ಒಂದು ನಿಗದಿತ ಅವಧಿಯಲ್ಲಿ ಮಾತನಾಡಿದರೆ ಒಳ್ಳೆಯದು. ನಾನು ಉತ್ತರ ಕೊಟ್ಟ ಮೇಲೂ ಅವರಿಗೆ ಸ್ಪಷ್ಟೀಕರಣವನ್ನು ಕೇಳುವುದಕ್ಕೆ ಅವಕಾಶ ಇರುತ್ತದೆ. ಆ ದೃಷ್ಟಿಯಿಂದ ಇದನ್ನು ಸಂಕ್ಷಿಪ್ತ ಮಾಡಿದರೆ ಒಳ್ಳೆಯದು.

**ಸಭಾಪತಿಯವರು:–** 8 ರಿಂದ 10 ನಿಮಿಷದ ಹಾಗೆ ಮೂವರು ಜನರಿಗೆ ಅವಕಾಶವನ್ನು ಮಾಡಿಕೊಡುತ್ತೇನೆ. ನಂತರ ತಾವು ಉತ್ತರವನ್ನು ನೀಡಬಹುದು.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ನಮ್ಮ ಕಡೆಯವರು ಸ್ವಲ್ಪ ಮಾತನಾಡಲಿ.

**ಸಭಾಪತಿಯವರು:–** ತಮಗೆ ಅವಕಾಶವನ್ನು ಮಾಡಿಕೊಡುತ್ತೇನೆಂದು ಹೇಳಿದೆನಲ್ಲ.

**ಶ್ರೀ ಬಿ.ಜೆ. ಪಟ್ಟಸ್ವಾಮಿ** (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೆ, ಇದರ ವ್ಯಾಪ್ತಿ ಹೆಚ್ಚಿನ ಮಟ್ಟಿಗೆ ಬೇಕಾಗುತ್ತದೆ. 1 ಲಕ್ಷ ಕೋಟಿ ಚಿಲ್ಲರೆ ಹಣವನ್ನು ನಮ್ಮ ಅಧಿಕಾರಿಗಳ ಕೈಗೆ ಕೊಟ್ಟಾಗ ಅದು ಯಾವ

ರೀತಿ ಖರ್ಚಾಗಿದೆ ಅದು ಜನರಿಗೆ ಯಾವ ರೀತಿ ತಲುಪಿದೆ ಎಂಬ ಬಗ್ಗೆ ವಿಸ್ತೃತವಾಗಿ ಈ ಸದನದಲ್ಲಿ ಚರ್ಚೆ ಆಗುವುದು ಅವಶ್ಯಕತೆ ಇದೆ. 24 ವರ್ಷವಾದ ನಂತರ ಈ ಸದನಕ್ಕೆ ಬಂದೆ. ಹಿಂದೆ 1982 ರಿಂದ 88 ರವರೆಗೆ ದಿವಂಗತ ರಾಮಕೃಷ್ಣ ಹೆಗಡೆಯವರ ಸರ್ಕಾರ ಇತ್ತು. ಅವರು ಅಲ್ಲಿ ಇದ್ದರು ನಾನು ಈ ಕಡೆಯಲ್ಲಿ ಕುಳಿತಿದ್ದೆ. 100 ರಿಂದ 120 ದಿವಸ ಸದನ ನಡೆಯುತ್ತಿತ್ತು. ಆಯವ್ಯಯ ಮತ್ತು ವಿಧೇಯಕಗಳ ಬಗ್ಗೆ ಬಹಳ ಮಹತ್ತರವಾದ ವಿಚಾರಗಳಲ್ಲಿ ಬಹಳ ವಿಶಾಲವಾಗಿ ಚರ್ಚೆಯನ್ನು ಮಾಡುತ್ತಿದ್ದೆವು. ಮಾನ್ಯ ನಜಿರ್ ಸಾಬ್ ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದಾಗ ಪಂಚಾಯತ್ ರಾಜ್ ಮಸೂದೆಯನ್ನು ಇಲ್ಲಿ ಮಂಡಿಸಿದ್ದರು. ನಾವು ಆ ವಿಧೇಯಕಕ್ಕೆ ಸಂಬಂಧಿಸಿದಂತೆ 18 ತಿದ್ದುಪಡಿಯನ್ನು ಮೂವ್ ಮಾಡಿದ್ದೆವು. Graceful ಆಗಿ ಮಾನ್ಯ ನಜೀರ್ ಸಾಬ್ ಅವರು ಒಪ್ಪಿ ಅದನ್ನು ಮಾಡಿದ್ದರಿಂದ ಅದು ಒಂದು ಉತ್ತಮ ಕಾಯಿದೆಯಾಯಿತು. ಈ ಕಾಯಿದೆ ಮಾಡತಕ್ಕಂಥಾದ್ದು ಮತ್ತು ವಿಧಾನ ಸಭೆ ನಡೆಯುತ್ತಿದೆ ಎಂದರೆ, ಹಣವನ್ನು ದುರುಪಯೋಗ ಮಾಡಿರತಕ್ಕಂತಹ ಮಂತ್ರಿಗಳು ಇರಬಹುದು ಅಧಿಕಾರಿಗಳು ಇರಬಹುದು, ಎಲ್ಲರೂ ಎಂದು ನಾನು ಹೇಳುವುದಿಲ್ಲ.

**(ಈ ಹಂತದಲ್ಲಿ ಉಪ ಸಭಾಪತಿಯವರಾದ ಶ್ರೀಮತಿ ವಿಮಲಾಗೌಡ ಅವರು ಪೀಠವನ್ನು ಅಲಂಕರಿಸಿದರು)**

ಯಾರು ತಪ್ಪನ್ನು ಮಾಡಿದ್ದಾರೆ, ಅವರಿಗೆ ಭಯ ಇರಬೇಕು. ಇವತ್ತು ನಾವು ನಮ್ಮ ಗೌರವವನ್ನು ಕಡಿಮೆ ಮಾಡಿಕೊಂಡಿದ್ದೇವೆಯೋ ಆ ಮೂಲಕ ಈ ಸದನದ ಗೌರವವನ್ನು ಎಲ್ಲಿ ಕಡಿಮೆ ಮಾಡಿಕೊಳ್ಳುತ್ತಿದ್ದೇವೆಯೋ ಏನೋ ಎಂಬ ಒಂದು ಆತಂಕ ನನ್ನಲ್ಲಿ ಇದೆ. ಈ ಸದನದಲ್ಲಿ ಚರ್ಚೆ ಮಾಡತಕ್ಕಂಥ ಹಕ್ಕನ್ನು ಮೊಟಕುಗೊಳಿಸಿ ಕೇವಲ ಕೈ ಎತ್ತತಕ್ಕಂತಾದ್ದಕ್ಕೆ ಮಾತ್ರ ಈ ಸದನವನ್ನು ಸೀಮಿತ ಮಾಡಿರತಕ್ಕಂತಾದ್ದು ದುರ್ದೈವ. ಇಂತಹ ಪರಿಸ್ಥಿಯಲ್ಲಿ ಕಾನೂನನ್ನು ಮಾಡತಕ್ಕಂಥಹವರು ನಾವಾಗಿದ್ದೇವೆ. ಈ ಕಾನೂನಿಗೆ

ಬೆಲೆಯನ್ನು ಕೊಡತಕ್ಕಂಥಹವರು ಮತ್ತು ಈ ಕಾನೂನನ್ನು ಮಾಡಿದ ಮೇಲೆ ಎಷ್ಟರ ಮಟ್ಟಿಗೆ ಜಾರಿಯಾಗಿದೆ ಎಂದು ನೋಡಿಕೊಳ್ಳತಕ್ಕಂಥಾದ್ದರಲ್ಲಿ ನಾವು ವಿಫಲವಾಗುತ್ತಿದೇವೆ ಎಂದು ಅನ್ನಿಸುತ್ತಿದೆ. ಹಿಂದೆ ಇದ್ದಂಥ ಶಾಸಕರಿಗೂ ಈಗ ಇರತಕ್ಕಂಥಹ ಶಾಸಕರಿಗೂ ಬಹಳ ವ್ಯತ್ಯಾಸಗಳನ್ನು ನಾವು ಕಾಣುತ್ತಿದ್ದೇವೆ ಕಳೆದ ಆರು ತಿಂಗಳಲ್ಲಿ ನಾನು ಈ ಮನೆಯ ಶಾಸಕನಾದ ಮೇಲೆ ನನಗೆ ಒಂದು ರೀತಿಯ ಜಿಗುಪ್ಸೆ ಬಂದಿದೆ. ಯಾವುದಾದರೂ ಸಾರ್ವಜನಿಕ ಸಮಸ್ಯೆಗಳನ್ನು ಅಧಿಕಾರಿಗಳ ಗಮನಕ್ಕೆ ತಂದರೆ ಆ ಸಮಸ್ಯೆ ಅವರಿಗೆ ಅರ್ಥವಾಗುವುದಕ್ಕಿಂತ ಹೆಚ್ಚಾಗಿ ಮೊದಲು ಅವರು ಅಟ್ಟಹಾಸವನ್ನು ತೋರಿಸತಕ್ಕಂತಾದ್ದು ಮತ್ತು ಅವರು ತಮ್ಮ ಅಧಿಕಾರದ ಮದವನ್ನು ತೋರಿಸತಕ್ಕಂಥಾದ್ದನ್ನು ಕಾಣುತ್ತಿದೇವೆ. ಕೆಲವು ಒಳ್ಳೆಯ ಅಧಿಕಾರಿಗಳು ಇದ್ದಾರೆ. ಇಲ್ಲವೆಂದು ಹೇಳುವುದಿಲ್ಲ. ಶಾಸಕರಾಗಿ ಅವರು ಸಾರ್ವಜನಿಕರ ಕೆಲಸವನ್ನು ಮಾಡತಕ್ಕಂಥಾ ಕಾಲದಲ್ಲಿ ಅವರಿಗೆ ಮಾನಸಿಕವಾದ ಹಿಂಸೆ ಆಗಬಾರದು. ಅದಕ್ಕೇ ನಾನು ಎರಡು ಉದಾಹರಣೆಗಳನ್ನು ಕೊಡುವುದಕ್ಕೆ ತಮ್ಮಲ್ಲಿ ನಾನು ಹೆಚ್ಚಿನ ಒಂದು ಪ್ರಯತ್ನವನ್ನು ಪಟ್ಟೆ. ಕಳೆದ 5 ವರ್ಷಗಳಲ್ಲಿ ಸಾಮಾಜಿಕ ಭದ್ರತೆಗೆ ನಮ್ಮ ಸರ್ಕಾರ ಹೆಚ್ಚಿನ ಒತ್ತನ್ನು ಕೊಟ್ಟಿದೆ. ನಾನು ಒಂದೇ ಒಂದು ನಿದರ್ಶನಗಳನ್ನು ಹೇಳಿ ನಂತರ ಕೆಲವು ವಿಚಾರಗಳಿಗೆ ಬರುತ್ತಾನೆ. 2005–06 ರಲ್ಲಿ ಸಮಾಜ ಕಲ್ಯಾಣ ಇಲಾಖೆಗೆ 517.74 ಕೋಟಿ ರೂಪಾಯಿಯನ್ನು ಕೊಡಲಾಗಿತ್ತು. 2006–07 ರಲ್ಲಿನ ಸಮ್ಮಿಶ್ರ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಮತ್ತು ಹಣಕಾಸಿನ ಸಚಿವರೂ ಆಗಿದ್ದ ಮಾನ್ಯ ಯಡಿಯೂರಪ್ಪನವರು 500 ಕೋಟಿ ರೂಪಾಯಿಯಿಂದ 1063 ಕೋಟಿಗೆ ಏರಿಸಿದರು. 2011–12 ರಲ್ಲಿ 3262 ಕೋಟಿ ರೂಪಾಯಿಗೆ ಅದನ್ನು ಏರಿಸಿದರು. ಇವತ್ತು ನಮ್ಮ ಇಂದಿನ ಮುಖ್ಯಮಂತ್ರಿಗಳಾದ ಮಾನ್ಯ ಜಗದೀಶ್ ಶೆಟ್ಟರ್ ಅವರು 4698 ಕೋಟಿ ರೂಪಾಯಿಯನ್ನು ಕೊಟ್ಟಿದ್ದಾರೆ. ಇದು ಬಹಳ ಸಂತೋಷ. ಆದರೆ ಇದರ implementation ಎಷ್ಟರ ಮಟ್ಟಿಗೆ ಆಗುತ್ತದೆ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. 2011–12 ರವರೆಗೆ ಶೇಕಡ 98 ಪರ್ಸೆಂಟ್ ಹಣ ಖರ್ಚಾಗಿದೆ. ಕಳೆದ ವರ್ಷ 4239 ಕೋಟಿ ರೂಪಾಯಿ

ಕೊಟ್ಟಿದ್ದರೂ ಕೂಡ ಆ ಪೈಕಿ ಕೇವಲ 42 ಪರ್ಸೆಂಟ್ implement ಆಗಿದೆ. ಅಂದರೆ ಇದರಲ್ಲಿ ನಿರ್ಲಕ್ಷ್ಯ ಯಾರದ್ದು ಏತಕ್ಕೋಸ್ಕರ ಆಯಿತು? ಈ ಸಾಮಾಜಿಕ ನ್ಯಾಯಕ್ಕೆ ನ್ಯಾಯ ಸಿಕ್ಕಿದೆಯೇ ಎನ್ನುವುದನ್ನು ಪರಾಮರ್ಶಿಸಿ ಮಾಡಬೇಕಾದ ಅವಶ್ಯಕತೆ ಇದೆ. ಈ ವರ್ಷ ಈ ರೀತಿ ಆಗಬಾರದು ಎನ್ನುವ ಮನವಿಯನ್ನು ಮಾಡುತ್ತಿದ್ದೇನೆ. ನಮ್ಮ ಮಾನ್ಯ ಗೋ ಮಧುಸೂದನ್ ಅವರು ನಿನ್ನೆಯ ದಿವಸ ಮಾತನಾಡುತ್ತಾ ಒಂದು ವಿಚಾರವನ್ನು ಹೇಳಿದರು. **ಸಕಾಲ** ಯೋಜನೆಯಲ್ಲಿ ನಾವು ಒಳ್ಳೆಯ ಪ್ರಗತಿಯನ್ನು ಸಾಧಿಸಿದ್ದೇವೆಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಇದ್ದಾರೆ ನಾನು ತಮ್ಮ ಮೂಲಕ ಅವರಲ್ಲಿ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಈ **ಸಕಾಲ** ಯೋಜನೆ ಏನು ಇದೆ ಇದು ಜಿಲ್ಲೆ ಮತ್ತು ತಾಲ್ಲೂಕು ಮಟ್ಟಕ್ಕೆ ಸೀಮಿತ ಮಾತ್ರ ಇದೆಯೇ? ಇಲ್ಲವೇ ಈ ಬೆಂಗಳೂರಿನಲ್ಲಿ ಇರತಕ್ಕಂಥಹ ಎಲ್ಲಾ ಕಚೇರಿಗಳಿಗೆ ಹಾಗೂ ಮೊದಲನೆಯದಾಗಿ ವಿಧಾನ ಸೌಧದಲ್ಲಿ ಕೆಲಸ ಮಾಡತಕ್ಕಂಥಹವರಿಗೂ ಸಕಾಲ ಇದೆಯೇ? ಮುಖ್ಯಮಂತ್ರಿಗಳ ಕಚೇರಿಗೆ ಆ **ಸಕಾಲ** ದ ವ್ಯಾಪ್ತಿ ಏನಾದರೂ ಇದೆಯೇ ಎಂದು ಕೇಳಬಯಸುತ್ತೇನೆ. ಅದಕ್ಕೆ ಕಾರಣ ಒಂದು ನಿದರ್ಶನವನ್ನು ನಾನು ಕೊಡುತ್ತೇನೆ. ದಿವಂಗತ ಲಾಲ್ ಬಹಾದ್ದೂರ್ ಶಾಸ್ತ್ರಿಯವರ ಮಗ ಅನಿಲ್ ಶಾಸ್ತ್ರಿಯವರು ಸ್ನೇಹಿತರು. ನಾನು ರಾಜಕೀಯ ಕಾರ್ಯದರ್ಶಿಯಾಗಿದ್ದಾಗ ಎಲ್ಲೋ ಇದ್ದ ಆ ಪ್ರತಿಮೆಯನ್ನು ತರಿಸಿ ಇಲ್ಲಿ install ಮಾಡಿ ಎರಡು ವರ್ಷವಾಯಿತು. ಆಗ ಮುಖ್ಯಮಂತ್ರಿಯಾಗಿದ್ದ ಮಾನ್ಯ ಯಡಿಯೂಪ್ಪನವರು ಇದನ್ನು ಉದ್ಘಾಟನೆ ಮಾಡಬೇಕಾಗಿತ್ತು ಆದರೆ ಸರ್ಕಾರ ಬದಲಾವಣೆಯಾದ ಕಾರಣದಿಂದಾಗಿ ಇದು ಸಾಧ್ಯವಾಗಲಿಲ್ಲ. ಮಾನ್ಯ ಸದಾನಂದಗೌಡರವರು ಮುಖ್ಯಮಂತ್ರಿಯಾದರು ನಾನು ಅವರಿಗೆ ಈ ಬಗ್ಗೆ ಎರಡುಬಾರಿ ಹೇಳಿದೆ. ಈಗ ಮಾನ್ಯ ಜಗದೀಶ್ ಶೆಟ್ಟರ್ ಅವರು ಮುಖ್ಯಮಂತ್ರಿಯಾಗಿದ್ದಾರೆ ಅವರಿಗೂ ಕೂಡ ಎರಡು ಸಾರಿ ಹೇಳಿದೆ. ಅವರು ಸ್ವಾತಂತ್ರ್ಯ ದಿನಾಚರಣೆಯಂದು ಇದರ ಉದ್ಘಾಟನೆಯನ್ನು ಮಾಡೋಣ ಎಂದು ಸಮಯವನ್ನು ಕೊಟ್ಟರು. ಅಧಿಕಾರಿಗಳು ಮಾಡುತ್ತೇವೆ, ಮಾಡುತ್ತೇವೆ ಎಂದು ಹೇಳುತ್ತಲೇ ಬಂದರು. ಆದರೂ ಇದುವರೆಗೆ ದಿವಂಗತ ಲಾಲ್

ಬಹಾದ್ದೂರ್ ಶಾಸ್ತ್ರಿಯವರ ಪ್ರತಿಮೆಯನ್ನು ಉದ್ಘಾಟನೆ ಮಾಡಿಲ್ಲ. ಈಗ ಇದಕ್ಕೆ ಕೋರ್ಟಿನ ತಡೆಯಾಜ್ಞೆ ಇದೆ ಎಂದುಹೇಳುತ್ತಾರೆ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸದಸ್ಯರು ನಮ್ಮ ಮುಖ್ಯಮಂತ್ರಿ ಎಂದು ಹೇಳುತ್ತಿದ್ದಾರೆ. ನಿಮ್ಮ ಮುಖ್ಯಮಂತ್ರಿ ಇವರಲ್ಲವೇ? ಹೆಸರು ತೆಗೆದುಕೊಂಡು ಹೇಳಿ.

**ಶ್ರೀ ಬಿ.ಜೆ. ಪಟ್ಟಸ್ವಾಮಿ:–** ನಮ್ಮ ಮುಖ್ಯಮಂತ್ರಿಗಳು ಮಾನ್ಯ ಜಗದೀಶ್ ಶೆಟ್ಟರ್ ಅವರು. ಇಲ್ಲಿ ಎಲ್ಲಾ ಮಂತ್ರಿಗಳು ನೋಡುತ್ತಿದ್ದಾರೆ. ಇಲ್ಲಿ ಏನು ತೊಂದರೆ ಇದೆ ಅದನ್ನು clear ಮಾಡಿ. ಲಾಲ್‌ಬಹಾದ್ದೂರ್ ಶಾಸ್ತ್ರಿಯಂತಹ ಒಬ್ಬ ಪ್ರಾಮಾಣಿಕ ಮಾಜಿ ಪ್ರಧಾನ ಮಂತ್ರಿಯವರ ಪ್ರತಿಮೆಯನ್ನು ವಿಧಾನ ಸೌಧದ ಪಕ್ಕದಲ್ಲಿ ಬಟ್ಟೆ ಸುತ್ತಿ ನಿಲ್ಲಿಸಿದ್ದಾರಲ್ಲಾ, ಇದಕ್ಕೆ **ಸಕಾಲ** ಇಲ್ಲವೇ? ನಾವೆಲ್ಲಾ ರಾಜಕಾರಣಿಗಳಾಗಿದ್ದೇವೆ. ಇಲ್ಲಿ ಅನೇಕರು ಮಂತ್ರಿಗಳಾಗಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಎರಡು ಸಲ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಹೇಳಿದರೂ ಕೂಡ ಅದಕ್ಕೆ ಸರಿಯಾಗಿ ಸ್ಪಂದಿಸದೇ ಇರತಕ್ಕಂಥಾದ್ದು ಸರಿಯೇ? ಇವರೆಲ್ಲರಿಗೂ ಜವಾಬ್ದಾರಿ ಇಲ್ಲವೆ ಎಂಬುದು ನನ್ನ ಒಂದು ಪ್ರಶ್ನೆ. ಇವತ್ತು ಎಲ್ಲಾ ಜನಾಂಗಗಳಿಗೂ ಕೂಡ ಒಂದು ಮಠ ಮಾನ್ಯಗಳು ಇರುತ್ತವೆ. ನಾನು ಒಂದು ಸಣ್ಣ ಗಾಣಿಗ ಸಮುದಾಯಕ್ಕೆ ಸೇರಿದವನು. ನಮ್ಮ ಗಾಣಿಗ ಸಮುದಾಯಕ್ಕೆ 2010–11 ರಲ್ಲಿ ಮಾನ್ಯ ಯಡಿಯೂರಪ್ಪನವರು ದಿನಾಂಕ 20.09.2009 ರಲ್ಲಿ 10 ಎಕರೆ ಜಮೀನು ಮತ್ತು 5 ಕೋಟಿ ರೂಪಾಯಿ ಹಣವನ್ನು ಕೊಟ್ಟರು. ನಾವು ಇದಕ್ಕೆ ಅಗತ್ಯವಾದ ನೀಲಿ ನಕ್ಷೆಯನ್ನು ತಯಾರು ಮಾಡಿ ದಿನಾಂಕ 18.01.2012 ರಲ್ಲಿ ಬಿ.ಎಂ.ಆರ್.ಡಿ. ನಗರಾಭಿವೃದ್ಧಿ ಇಲಾಖೆಗೆ ಕೊಟ್ಟಿದ್ದೆನು. ಅಲ್ಲಿ ಸಿ.ಡಿ.ಪಿ. ಪ್ಲಾನ್ ಪ್ರಕಾರ ಭೂಮಿ ಬದಲಾವಣೆ ಆಗಬೇಕೆಂದು ಹೇಳಿದರು. ಸರ್ಕಾರ ಕೊಟ್ಟಿರತಕ್ಕಂತಹ ಉದ್ದೇಶಕ್ಕೆ ಈ ಭೂಮಿ ಬದಲಾವಣೆ ಬೇಕಿಲ್ಲವೆಂದು ಎಷ್ಟು ಹೇಳಿದರೂ ಕೂಡ ಮಾಡಲಿಲ್ಲ. ಒಂದಾದ ಮೇಲೆ ಒಂದು ವಿಚಾರವನ್ನು ಹೇಳುತ್ತಲೇ ಬರುತ್ತಿದ್ದರು. ಇವತ್ತು ಎರಡು ವರ್ಷಗಳು ಆಗಿವೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ಒಂದು ವಿಚಾರವನ್ನು ತರಬಯಸುತ್ತಾನೆ. ಖಾಸಗಿಯವರು ಕೊಟ್ಟಂಥಹ ಭೂ

ಬದಲಾವಣೆಗೆ, ಇಂಡಸ್ಟ್ರಿಯಲಿಸ್ಟ್‌ಗೆ ಎಲ್ಲರಿಗೂ ಬಿ.ಎಂ.ಆರ್.ಡಿ.ಯಲ್ಲಿ ಮಹೇಂದ್ರ ಎನ್ನುವ ಅಡಿಷನಲ್ ಡೈರೆಕ್ಟರ್ ಏನು ಇದ್ದರು ಅವರು ಬದಲಾವಣೆಯನ್ನು ಮಾಡಿದರು. ಆದರೆ ಇದನ್ನು ಒಂದು ಜನಾಂಗಕ್ಕೆ ಕೊಡಬೇಕಲ್ಲಾ ಇದರಲ್ಲಿ ಏನೂ ಸೂಟ್‌ಕೇಸ್ ಬರುವುದಿಲ್ಲ ಇನ್ಯಾವುದೂ ಬರುವುದಿಲ್ಲವೆಂದು ಹೀಗೆ adamant ಮಾಡಿ 6–8 ತಿಂಗಳು ಹಾಗೆ ಇಟ್ಟಿದ್ದರು. ಇವತ್ತಿನವರೆಗೂ ಅದು clear ಆಗಿಲ್ಲ. 5 ಕೋಟಿ ಕೊಟ್ಟಿದ್ದರು ಅದರಲ್ಲಿ ಈಗ 3 ಕೋಟಿ ಕಟ್ ಆಗಿದೆ. ಬರತಕ್ಕಂಥ 2 ಕೋಟಿ ಹಣವನ್ನು ಉಪಯೋಗ ಮಾಡಬೇಕು ಒಂದು ನಕ್ಷೆಯನ್ನು ಮಾಡಿ ಕೊಡಿ ಎಂದು ಹೇಳಿದರೆ, ಇದಕ್ಕೆ ಒಂದರ ಮೇಲೊಂದು ಆಕ್ಷೇಪಣೆಯನ್ನು ಹಾಕಿ ತೊಂದರೆಯನ್ನು ಕೊಡುತ್ತಿದ್ದಾರೆ. ಈ ನಮ್ಮ ಸಂಸ್ಥೆಗೆ ಕೊಟ್ಟಿರತಕ್ಕಂಥಾದ್ದಕ್ಕೆ, ಜಿಲ್ಲಾಧಿಕಾರಿಗಳು, ಕಂದಾಯ ಇಲಾಖೆ ಇವರು **"ಸರ್ಕಾರದ ಆದೇಶದ ಪ್ರಕಾರ ಈ ಆದೇಶ ಭಾಗದಲ್ಲಿರುವ ಶೈಕ್ಷಣಿಕ ಉದ್ದೇಶಕ್ಕಾಗಿ ಎಂಬುದರ ಜೊತೆಗೆ ಗುರುಪೀಠ ಸ್ಥಾಪನೆ, ಶೈಕ್ಷಣಿಕ ಸಂಸ್ಥೆಗಳು, ವಿದ್ಯಾರ್ಥಿ ನಿಲಯ, ಸಮುದಾಯ ಭವನ, ಧಾರ್ಮಿಕ ಚಟುವಟಿಕೆ, ಆಸ್ಪತ್ರೆ ಇತ್ಯಾದಿಯನ್ನು ನಿರ್ಮಾಣ ಮಾಡುವುದರಿಂದ, ಈ ಸಂಸ್ಥೆ ಧಾರ್ಮಿಕ ಉದ್ದೇಶಿತ ಹಾಗೂ ಚಾರಿಟಬಲ್ ಟ್ರಸ್ಟ್ ಆಗಿರುವುದರಿಂದ ಕರ್ನಾಟಕ ಭೂ ಕಂದಾಯ ನಿಲುವಳಿ 1966ರ ನಿಯಮ 108 ರ ಮೇರೆಗೆ ಭೂ ಪರಿವರ್ತನಾ ಪ್ರಕ್ರಿಯೆಗೆ ಕಟ್ಟಬೇಕಾದ ಭೂ ಪರಿವರ್ತನಾ ಶುಲ್ಕವನ್ನು ಈ ಟ್ರಸ್ಟ್‌ನವರಿಗೆ ಮನ್ನಾ ಮಾಡಲಾಗಿದೆ."** ಎಂದು ಸರ್ಕಾರ ಹೇಳುತ್ತದೆ. ನಾನು plan sanctionಗೆ ಕೊಟ್ಟರೆ layout charges ಅನ್ನು ಕಟ್ಟಬೇಕೆಂದು ಆ ಅಧಿಕಾರಿ ಹೇಳುತ್ತಾರೆ. ಇದರಲ್ಲಿ ಸರ್ಕಾರದ ಆದೇಶ ಇದೆ.

**(ಈ ಹಂತದಲ್ಲಿ ಕೆಲವು ಸದಸ್ಯರು ಮಾನ್ಯ ಮುಖ್ಯಮಂತ್ರಿಗಳ ಬಳಿ ಬಂದು ಮಾತನಾಡುತ್ತಿದ್ದರು)**

**ಶ್ರೀ ಬಿ.ಜೆ ಪುಟ್ಟಸ್ವಾಮಿ:–** ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಯಾರೂ ಬಿಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇದನ್ನು ತರುತ್ತಿದ್ದೇನೆ. ಇದು ಬಹಳ ಮುಖ್ಯವಾದ ವಿಚಾರ ಇದೆ. ಇದರಲ್ಲಿ 4 ಐಟಂ

ಇದೆ. ಮೊದಲನೆಯದಾಗಿ Residential Rs.20/- Per Square Meter, Industrial Rs.40/- Per Square Meter, Commercial Rs. 75/- Per Square Meter and Others Rs.20/- Per Square Meter. ಒಂದು ಧರ್ಮಸಂಸ್ಥೆಯನ್ನ Religiors Charitable Institution ಎಂದು ಕಂದಾಯ ಇಲಾಖೆಯವರು allot ಮಾಡುತ್ತದೆ. ಆದರೆ ಈ ಹಿಂದೆ ಇದ್ದಂತಹ Additional Director, Mahendra ರವರು Rs.75/- Per Square Meter ರಂತೆ Commercial rate ಹಾಕಿದ್ದಾರೆ. ಈ ರೀತಿ ಎಲ್ಲಿದೆ ತೋರಿಸಿ ಎಂದು ಕೇಳಿದರೆ ಅದಕ್ಕೆ ಆ ಅಧಿಕಾರಿ ಹೇಳುತ್ತಾರೆ ನಾನು ಹಾಕಿದ್ದೇನೆ, ನೀವು ಬೇಕಾದರೆ ಎಲ್ಲಿಯಾದರು ಮಾಡಿಸಿಕೊಳ್ಳಿ ಎಂದು ಹೇಳುತ್ತಾರೆ. ಹಾಗಾದರೆ ಇದು ಭ್ರಷ್ಟಾಚಾರ ಅಲ್ಲವೆ? ಆ ಅಧಿಕಾರಿ ಇನ್ನೂ ಸಹ ಅಧಿಕಾರದಲ್ಲಿ ಇರುತ್ತಾರೆಂದರೆ ಏನರ್ಥ? ನಾನು ಈ ವಿಷಯದ ಬಗ್ಗೆ HUD Secretary ಯವರಿಗೆ ದೂರು ಕೊಟ್ಟಿದ್ದೇನೆ. As a Minister, Chief Secretary ಅವರ ಗಮನಕ್ಕೂ ಸಹ ತಂದಿದ್ದೇನೆ. ಯಾರ ಗಮನಕ್ಕೂ ತಂದರೂ ಸಹ ಯಾವುದೇ ರೀತಿಯಾದಂತಹ ಕ್ರಮವನ್ನು ತೆಗೆದುಕೊಂಡಿಲ್ಲ. ಇವತ್ತಿನ ದಿವಸ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಮಠಮಾನ್ಯಗಳಿಗೂ ಸಹ ಅನುದಾನವನ್ನು ಕೊಟ್ಟಿದ್ದಾರೆ. ಹಾಗಾದರೆ ಮಠ-ಮಾನ್ಯಗಳೆಲ್ಲವೂ commercial ಏನು? ನಮಗೆ ಮಾತ್ರ commercial ಎಂದು ಹೇಳಿ ಪ್ಲಾನ್ ಸ್ಯಾಂಕ್ಷನ್‌ಗೆ ನಲವತ್ತು ಲಕ್ಷ ರೂ. ಕಟ್ಟಬೇಕೆಂದು ಹೇಳಿ ಒಂದು ಪತ್ರವನ್ನು ಕೊಟ್ಟಿದ್ದಾರೆ. ಈ ರೀತಿ ಯಾರಾದರು ಕಟ್ಟಿದ್ದಾರೆಯೇ ನೋಡೋಣವೆಂದು ಎಲ್ಲ ಕಡೆಗೂ ಪತ್ರವನ್ನು ಬರೆದೆವು. ಆದರೆ ಯಾರಿಗೂ ಸಹ ಈ ರೀತಿ ಕೊಟ್ಟಿಲ್ಲವೆಂಬ ಉತ್ತರ ಬಂತು. ಆದರೆ ನಮ್ಮ ಒಂದು ಸಂಸ್ಥೆಗೆ ನಲವತ್ತು ಲಕ್ಷ ರೂ.ಕಟ್ಟಿ ಎಂದು ಹೇಳಿದರೆ ಏನರ್ಥ? ಸರ್ಕಾರ ಹಿಂದುಳಿದ ವರ್ಗಗಳ ಧಾರ್ಮಿಕ ಸಂಸ್ಥೆಗಳಿಗೆ ಅನುದಾನವನ್ನು ಕೊಟ್ಟು, ಸಾಕಷ್ಟು ಪ್ರೋತ್ಸಾಹವನ್ನು ಸಹ ಕೊಟ್ಟಿದೆ. ಆದರೆ ಅಧಿಕಾರಿಗಳ adamant ಅಥವಾ ರಾಜಕೀಯ ಮಾಡುವಂಥದ್ದು ಅಥವಾ ಅವರು ಭ್ರಷ್ಟಾಚಾರದಲ್ಲಿ ಭಾಗಿಯಾಗುವುದಾದರೆ ಧಾರ್ಮಿಕ ಸಂಸ್ಥೆಗಳಲ್ಲಿ ಹೇಗೆ ಕೆಲಸವನ್ನು ಮಾಡಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಸುಮಾರು ಆರು ತಿಂಗಳ ಹಿಂದೆ ಈಗಿರುವಂತಹ ಮಾನ್ಯ ಮುಖ್ಯಮಂತ್ರಿಗಳ ಕೈಯಲ್ಲಿಯೇ ಅಡಿಗಲ್ಲನ್ನೂ ಸಹ ಹಾಕಿಸಲಾಗಿದೆ. ಆರು ತಿಂಗಳಿನಿಂದಲೂ ಪ್ರಯತ್ನ ಪಡುತ್ತಿದ್ದೇವೆ ಆದರೆ ಅದು ಇವತ್ತಿನವರೆವಿಗೂ ಈಡೇರುತ್ತಿಲ್ಲ. ಈಗ ಆ ಅಧಿಕಾರಿಯನ್ನು ಇನ್ನೂ ಒಳ್ಳೆಯ ಸ್ಥಳಕ್ಕೆ ವರ್ಗಾವಣೆ ಮಾಡಲಾಗಿದೆ. ಅಂದರೆ ಬಿಎಂಆರ್‌ಡಿಗೆ ವರ್ಗಾವಣೆ ಮಾಡಿದ್ದಾರೆ. ಇಲ್ಲಿ ಎಂಟು ವರ್ಷ ಚೆನ್ನಾಗಿ ಮೇಯ್ದಿದ್ದು ಆಯಿತು, ಈಗ ಅಲ್ಲಿಗೆ ವರ್ಗಾವಣೆ ಮಾಡಿದ್ದಾರೆ. ಅದೇನಾದರು ಆಗಲಿ. ಅವರ ನಂತರ ಆ ಜಾಗಕ್ಕೆ ಶ್ರೀ. ಶಿವರಾಂ ಎಂಬ ಒಳ್ಳೆಯ ಆಯುಕ್ತರು ಬಂದರು. He is committed to teh social justice and society. ನಾವು ಈ ವಿಷಯದ ಬಗ್ಗೆ ವಿವರಿಸಿದಾಗ ಅವರು ತಕ್ಷಣವೇ ಈ ಹಿಂದಿನ ಸರ್ಕಾರದ ಆಜ್ಞೆ ಯಾವ ರೀತಿ ಇದೆ ಅದರಂತೆ ಶಿಫಾರಸ್ಸು ಮಾಡಿದರು. ಅವರು ಶಿಫಾರಸ್ಸು ಮಾಡಿದ ಮೇಲೆ HUD Secretary ಯವರೇ ಮಾಡಬಹುದಾಗಿತ್ತು. ಆದರೆ ಅದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿದರು. ನಾನು ಈ ವಿಷಯವಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಮೂರು ಸಲ ಭೇಟಿ ಮಾಡಿದೆ. ಈಗ ನನಗೆ ಅವರ ಮನಸ್ಸನ್ನು ನೋಯಿಸುವಂತಹ ಪರಿಸ್ಥಿತಿ ಬಂದಿದೆಯೆಲ್ಲಾ ಎಂದು ವ್ಯಥೆ ಆಗುತ್ತಿದೆ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳೇ ಅವರ ಕಾರ್ಯದರ್ಶಿಯವರಾದ ಶ್ರೀ ಲಕ್ಷ್ಮೀನಾರಾಯಣ್‌ರವರಿಗೆ ಅದು community file, ಆ file ತೆಗೆದುಕೊಂಡು ಬನ್ನಿ ಅದಕ್ಕೆ ನಾನೇ ಹೋಗಿ ಅಡಿಗಲ್ಲನ್ನು ಹಾಕಿರುವುದರಿಂದ ಆ ಫೈಲನ್ನು clear ಮಾಡಿಕೊಡುತ್ತೇನೆಂದು ನನ್ನ ಎದುರಿಗೆ ಇದರ ಬಗ್ಗೆ ಮೂರು ಸಲ ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಸಂಸ್ಥೆಗೆ ಬಂದಿದ್ದರು. ಅವರು ಬಂದಾಗ ಸುಮಾರು ಒಂದು ಲಕ್ಷ ಜನ ಸೇರಿದ್ದರು. ನಾನು ಈ file ಬಗ್ಗೆ ಸುಮಾರು ಹತ್ತು ಸಲ ಅಧಿಕಾರಿಗಳನ್ನು ಕೇಳಿದ್ದೇನೆ, ಕೇಳಿದಾಗಲೆಲ್ಲ file ಇಲ್ಲ ಹುಡುಕಬೇಕು ಎಂದೇ ಹೇಳುತ್ತಿದ್ದರು. ಹಾಗಾದರೆ ಸಕಾಲ ನಿಮ್ಮ ಕಛೇರಿಗೆ ಅನ್ವಯವಾಗುವುದಿಲ್ಲವೆ? ನಿಮ್ಮ ಕಛೇರಿಯಲ್ಲಿ ಸಕಾಲ ಇಲ್ಲವೆ? ಅಥವಾ ತಮ್ಮ ನಿರ್ದೇಶನವನ್ನು ಅಧಿಕಾರಿಗಳು ಕೇಳುತ್ತಾರೆಯೇ ಇಲ್ಲವೆ ಎಂಬುದನ್ನಾದರು ಸ್ಪಷ್ಟಪಡಿಸಬೇಕು.

**ಉಪ ಸಭಾಪತಿಯವರು:–** ಮಾನ್ಯ ಪುಟ್ಟಸ್ವಾಮಿಯವರೇ, ನಾನು ನಿಮಗೆ ಕೊಟ್ಟಿರುವ ಸಮಯ ಹತ್ತು ನಿಮಿಷ. ಆದರೆ ಈಗಾಗಲೇ ಎಂಟು ನಿಮಿಷ ಕಳೆದಿದೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ನಿರ್ದೇಶನ ಕೊಟ್ಟರೂ ಸಹ...

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾಗಿ ಅವರು ಕೇಳಿದರೂ ಸಹ ಈ ರೀತಿ ಆದರೆ ಇನ್ನು ಸಾಮಾನ್ಯ ಜನರ ಗತಿ ಏನು.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಒಬ್ಬ ಸಚಿವರಿಗೇ ಈ ರೀತಿ ಆದರೆ ಇನ್ನು ಶಾಸಕರ ಗತಿ ಏನಾಗಬೇಕು? ಶಾಸಕರು ಎಲ್ಲಿಗೆ ಹೋಗಬೇಕು? What is the next alternative for me?

(ಗೊಂದಲ)

**ಉಪ ಸಭಾಪತಿಯವರು:–** ಮಾನ್ಯ ಸಭಾಪತಿಯವರು ನಿಮಗೆ ಎಂಟು ನಿಮಿಷ ಮಾತನಾಡಲು ಅವಕಾಶ ಕೊಟ್ಟಿದ್ದರು. ಆದರೆ ನಾನು ನಿಮಗೆ ಇನ್ನೂ ಎರಡು ನಿಮಿಷ ಜಾಸ್ತಿ ಕೊಟ್ಟಿದ್ದೇನೆ. ಎಲ್ಲರೂ ಮಾತನಾಡಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಲ್ಲವೆ? ನಿಮ್ಮ ಸಮಯ ಮುಗಿದಿದೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಸಾರ್ವಜನಿಕವಾದಂತಹ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಹೇಳಬೇಕು file ಇಲ್ಲ ಎಂದರೆ ಏನರ್ಥ? ಹಾಗಾದರೆ ಅಲ್ಲಿ ಎಷ್ಟು file ಇದೆ? ಆಮೇಲೆ ನಿಮ್ಮ ಪಿ.ಎ. ಕಳಿಸಿಕೊಡಿ ಹುಡುಕಿಸಿಕೊಡುತ್ತೇನೆ ಎಂದು ಹೇಳಿದರು. ನಂತರ ನನ್ನ ಪಿ.ಎ. ಕಳಿಸಿದೆ.

ಅವರನ್ನು ಕಳಿಸಿದ ಮೇಲೆ file ಸಿಕ್ಕಿದೆ ಅದನ್ನು ನಾಡಿದ್ದು ಮಾಡಿಕೊಡುತ್ತೇನೆ ಎಂದು ಹೇಳಿದರು.

**ಶ್ರೀ ಗೋ. ಮದುಸೂಧನ್:-** ಮಾನ್ಯ ಸಭಾಪತಿಯವರೇ, ಯಾವುದೋ ಒಂದು file, ಅಧಿಕಾರಿ sign ಮಾಡಿಲ್ಲ ಎಂದು ಈ ರೀತಿ ಸಣ್ಣಪುಟ್ಟ ವಿಷಯವನ್ನೇ....

(ಗೊಂದಲ)

**ಶ್ರೀ ಬಿ.ಜೆ. ಪುಟ್ಟಸ್ವಾಮಿ:-** ನೀವು ಸುಮ್ಮನೆ ಕುಳಿತುಕೊಳ್ಳಿ ಮೂರು ತಿಂಗಳಿನಿಂದ file ಎಲ್ಲಿಗೆ ಹೋಗಿದೆ? ನಾಚಿಕೆ ಆಗುವುದಿಲ್ಲವೆ ನಿಮಗೆ? File ಇಟ್ಟುಕೊಂಡು ಏನ್ರೀ ಮಾಡುತ್ತೀರಾ?

(ಗೊಂದಲ)

**ಉಪ ಸಭಾಪತಿಯವರು:-** ಕುಳಿತುಕೊಳ್ಳಿ ಎಂದು ಹೇಳುತ್ತಿದ್ದೇನೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:-** ಇದಕ್ಕೆ ಏನಾದರು ಹಣ ಕೊಡಬೇಕೆ?

(ಗೊಂದಲ)

**ಶ್ರೀ ದಯಾನಂದ:-** ಮಾನ್ಯ ಸಭಾಪತಿಯವರೇ, ಇಲ್ಲಿ ಎರಡು ನಿಮಿಷದ ಪ್ರಶ್ನೆ ಅಲ್ಲ. ಮಾನ್ಯ ಸದಸ್ಯರು ರಾಜ್ಯದ ಆಡಳಿತ ವ್ಯವಸ್ಥೆ ಯಾವ ರೀತಿ ನಡೆಯುತ್ತಿದೆ ಎಂಬುದರ ಬಗ್ಗೆ ಮಾತನಾಡುತ್ತಿದ್ದಾರೆ.

(ಗೊಂದಲ)

**ಉಪ ಸಭಾಪತಿಯವರು:-** ದಯಾನಂದ್‌ರವರೆ ದಯವಿಟ್ಟು ಕುಳಿತುಕೊಳ್ಳಿ. ನಾನು ನೋಡುತ್ತಿದ್ದೇನೆ ನೀವು ಪೀಠಕ್ಕೆ ಸ್ವಲ್ಪ ಕೂಡ ಗೌರವ ಕೊಡುತ್ತಿಲ್ಲ. ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ನಮಗೇ ಈ ರೀತಿ ಆದರೆ ಇನ್ನು ಸಾರ್ವಜನಿಕರು ಎಲ್ಲಿಗೆ ಹೋಗಬೇಕು?

**ಶ್ರೀಮತಿ ಭಾರತಿಶೆಟ್ಟಿ:–** ಮಾನ್ಯ ಸಭಾಪತಿಯವರೇ, ಕಳೆದ ಆಯವ್ಯಯದಲ್ಲಿ ಆ ಸಮಾಜಕ್ಕೋಸ್ಕರ ದುಡ್ಡನ್ನು ಇಟ್ಟಿದ್ದರು. ಆದರೆ ಅದು utilize ಆಗುತ್ತಿಲ್ಲ. ಈ ಆಯವ್ಯಯದಲ್ಲಾದರು utilize ಆಗಲಿ ಎಂದು ಕೇಳುತ್ತಿದ್ದಾರೆ. ಆ ಸಮಾಜಕ್ಕೆ ಅವಕಾಶ ಮಾಡಿಕೊಡಿ ಆ ಸಮಾಜಕ್ಕೆ ನ್ಯಾಯ ಒದಗಿಸಿ ಕೊಡಿ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಹಾಗಾದರೆ ಸಾಮಾಜಿಕ ನ್ಯಾಯಕ್ಕೆ ಏತಕ್ಕೆ ಹಣ ಕೊಡುತ್ತೀರಿ? ಮಾನ್ಯ ಮುಖ್ಯಮಂತ್ರಿಗಳೇ ಈ ಯೋಜನೆಯನ್ನು ಮಂಜೂರು ಮಾಡಿಕೊಡುವಂತೆ ತಿಳಿಸಿ ಮೂರು ವರ್ಷವಾದರೂ ಆ ಅಧಿಕಾರಿ ಮಾಡುವುದಿಲ್ಲವೆಂದಮೇಲೆ ಅಂತಹ ಅಧಿಕಾರಿ ಮಾನ್ಯ ಮುಖ್ಯಮಂತ್ರಿಗಳ ಕಛೇರಿಯಲ್ಲಿ ಇರಬೇಕೆ? ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತಹ instructions ಜಾರಿ ಮಾಡಲಿಲ್ಲವೆಂದಮೇಲೆ ಇನ್ನು ಶಾಸಕರ ಗತಿ ಏನಾಗಬೇಕು? ನಾವು ಎಲ್ಲಿಗೆ ಹೋಗಿ ಯಾರ ಬಳಿ ದೂರನ್ನು ಕೊಡಬೇಕು? ನಾನು ಅಧಿಕಾರಿಗಳೆಲ್ಲರೂ ಇದೇ ರೀತಿ ಎಂದು ಹೇಳುವುದಿಲ್ಲ. ಎಲ್ಲಾ ಅಧಿಕಾರಿಗಳು ಹೇಳಿದ ಕೂಡಲೆ ಸ್ಪಂದಿಸುತ್ತಾರೆ ನಾನು ಇಲ್ಲವೆಂದು ಹೇಳುವುದಿಲ್ಲ.

**ಉಪ ಸಭಾಪತಿಯವರು:–** ಈಗ ನಿಮ್ಮ ಸಮಯ ಮುಗಿದಿದೆ. ನಾನು ಬೇರೆಯವರನ್ನು ಕರೆಯುತ್ತಿದ್ದೇನೆ. ನೀವು conclude ಮಾಡಿ ಕುಳಿತುಕೊಳ್ಳಿ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದ ಬಗ್ಗೆ ನನಗೆ ಹೇಳಬೇಕು.

**ಉಪ ಸಭಾಪತಿಯವರು:–** ನಿಮ್ಮ ಸಮಯ 12 ನಿಮಿಷ ಆಗಿದೆ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಈ ರೀತಿ ಆಡಳಿತ ನಡೆಸಿದಾಗ ಖಂಡಿತ ಅಧಿಕಾರಿಗಳು ಯಾರೂ ನಮ್ಮ ಮಾತನ್ನು ಕೇಳುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಮಾತನ್ನೇ ಕೇಳುವುದಿಲ್ಲವೆಂದಮೇಲೆ ಇನ್ನು ಶಾಸಕರ ಮಾತು ಎಲ್ಲಿಂದ ನಡೆಯುತ್ತದೆ? ಆದುದರಿಂದ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಸಮಯದಲ್ಲಿ ನನಗೆ ಉತ್ತರ ಕೊಡಬೇಕೆಂದು ತಿಳಿಸುತ್ತಾ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಉಪ ಸಭಾಪತಿಯವರು:–** ಶ್ರೀಮತಿ ಮೋಟಮ್ಮನವರೆ ತಮಗೆ ಹತ್ತು ನಿಮಿಷ ನಿಗದಿಪಡಿಸಿದ್ದಾರೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಹತ್ತು ನಿಮಿಷ ಆದರೆ ನಾನು ಮಾತೇ ಆಡುವುದಿಲ್ಲ, ನೀವು ಯಾರಿಗಾದರು ಅವಕಾಶ ಕೊಡಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಶ್ರೀಮತಿ ಮೋಟಮ್ಮನವರು ನಿಕಟಪೂರ್ವ ಪ್ರತಿಪಕ್ಷದ ನಾಯಕರು. ಆದುದರಿಂದ ಮಹಿಳೆಯರ ಪರವಾಗಿ ಅವರಿಗೆ ಹೆಚ್ಚಿನ ಸಮಯವನ್ನು ಕೊಡಬೇಕು. ತಾವು ಸಮಯದ ನಿರ್ಬಂಧವನ್ನು ಅವರ ಮೇಲೆ ಹಾಕಬೇಡಿ.

**ಶ್ರೀಮತಿ ಮೋಟಮ್ಮ:–** ಸನ್ಮಾನ್ಯ ಸಭಾಪತಿಯವರೇ, ನಿಜವಾಗಿಯೂ ಈ ಸಲ ಬಜೆಟ್ ಮಂಡನೆ ಆಗುತ್ತದೋ ಇಲ್ಲವೋ ಎಂದು ದೊಡ್ಡ ಅನುಮಾನ ಈ ಜನರನ್ನು ಕಾಡುತ್ತಿತ್ತು. ಏಕೆಂದರೆ ಬಜೆಟ್ ಮಂಡನೆ ಮಾಡಿರುವುದು ಮಾನ್ಯ ಜಗದೀಶ್‌ಶೆಟ್ಟರ್‌ರವರ ಅದೃಷ್ಟವೆಂದೇ ಹೇಳಬೇಕು ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನಮಗೆ ಗೌರವ ಇದೆ. ಹಿಂದಿನ ಮುಖ್ಯಮಂತ್ರಿಗಳಾಗಿದ್ದಂತಹ ಸದಾನಂದಗೌಡರಿಗೆ ಬಜೆಟ್ ಮಂಡನೆ ಮಾಡುವಂತಹ ಸಮಯದಲ್ಲಿ ಇದ್ದ ಕಾಟ ನಿಮಗೂ ಬಂತೋ ಏನೋ ಗೊತ್ತಿಲ್ಲ. ಆದರೂ ಆ ಕಾಟದಿಂದ ತಪ್ಪಿಸಿಕೊಳ್ಳುವಂತಹ ಕೆಲಸ ಮಾಡಿ ಇವತ್ತು ಬಜೆಟ್ ಮಂಡನೆ ಮಾಡಿದ್ದೀರಿ. ನಾವು ಅಲ್ಲಿ ಇಲ್ಲಿ ಓಡಾಡುತ್ತಿರುವಂಥ ಸಮಯದಲ್ಲಿ ಜನರು ಸರ್ಕಾರ ಬಿದ್ದು ಹೋಗುತ್ತದೆಯೇ

ಅಥವಾ ಬಜೆಟ್ ಮಂಡನೆ ಆಗುತ್ತದೆಯೇ ಎಂಬ ಪ್ರಶ್ನೆಯನ್ನು ನಮ್ಮನ್ನು ಕೇಳುತ್ತಿದ್ದರು. ಅದಕ್ಕೆ ಸರ್ಕಾರ ಈಗಾಗಲೆ ಎರಡು ವರ್ಷದಿಂದ ventilator ನಲ್ಲಿದೆ. ಸರ್ಕಾರ ಬಿದ್ದು ಹೋದರೂ ಹೋಗಬಹುದು ಅಥವಾ ಬಜೆಟ್ ಮಂಡನೆ ಮಾಡಿದರೂ ಮಾಡಬಹುದು ಎಂದು ಹೇಳುತ್ತಿದ್ದೆ. ಅಂತು ತಮ್ಮ ಗುಂಪಿನವರ ಕಾಟ ತಡೆದುಕೊಂಡು ತಾವು ಬಜೆಟ್ ಮಂಡನೆ ಮಾಡಿದಿರಲ್ಲ ಅದಕ್ಕೆ ನಾವು ನಿಜವಾಗಿ ನಿಮಗೆ ಶಹಭಾಸ್‌ಗಿರಿ ಹೇಳಲೇ ಬೇಕಾಗುತ್ತದೆ. ಕೆಜೆಪಿ, ಬಿಜೆಪಿ ಎನ್ನುವವರ ಕಾಟದಿಂದ ತಪ್ಪಿಕೊಂಡು ನೀವು ಬಜೆಟ್ ಮಾಡಿರುವುದು ಒಂದು ದೊಡ್ಡ ಸಹಾಸನೆ ಸರಿ. ಆದರೆ ತಾವು ಮಂಡಿಸಿರುವಂತಹ ಬಜೆಟ್ ತಂಬಾ ನಿರಾಶದಾಯವಾಗಿದೆ. ನಾನು ವಿರೋಧ ಪಕ್ಷದಲ್ಲಿದ್ದೇನೆಂದು ಟೀಕೆ ಮಾಡುತ್ತಿಲ್ಲ. ತಾವುಗಳು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿರಬಹುದು. ಅದರಲ್ಲಿ "ಬೇಜವಾಬ್ದಾರಿ ಬಜೆಟ್" ಎಂದು ಹೇಳಿದ್ದಾರೆ. ಅದೇ ರೀತಿ ಕನ್ನಡ ಪ್ರಭದಲ್ಲಿ "ಇದು ಮತ ಮತ" ಬಜೆಟ್ ಎಂದು ಹೇಳಿದ್ದಾರೆ. ಇನ್ನೊಬ್ಬ ಹಿರಿಯರನ್ನು ಮಾನ್ಯ ಜಗದೀಶ್‌ಶೆಟ್ಟರ್‌ರವರ ಬಜೆಟ್ ಹೇಗಿದೆ ಎಂದು ಕೇಳಿದಾಗ ಇದು ಒಂದು ದಿವಾಳಿಯಾದ ಕಂಪನಿಯ balance sheet ಇದ್ದ ಹಾಗೆ ಇದೆ ಎಂದು ಹೇಳಿದರು. ಒಟ್ಟಿನಲ್ಲಿ ಜನ ಹೀಗೆ ಕೇಳುತ್ತಿದ್ದರು, ಈ ಸಾಲಿನ ಬಜೆಟ್ ಮಂಡನೆಯ ನಂತರ ಪತ್ರಿಕೆಗಳ ಸಂಪಾದಕೀಯ ವಿಭಾಗದಲ್ಲಿ ಯಾವ ರೀತಿಯ ವಿಮರ್ಷೆಗಳು ಬಂದಿವೆ ಎಂದರೆ ಕನ್ನಡಪ್ರಭ ಪತ್ರಿಕೆಯಲ್ಲಿ ಮತ–ಮತ ಬಜೆಟ್ ಎಂಬುದನ್ನು ದೊಡ್ಡ ಶೀರ್ಷಿಕೆಯಲ್ಲಿ ಪ್ರಕಟಿಸಿದ್ದಾರೆ. ಅಂದರೆ ಈ ಸಾಲಿನ ಬಜೆಟ್ ಕೇವಲ ಮತ ಯಾಚನೆಗೋಸ್ಕರ ಮಾತ್ರ ಎಂಬಂತಿದೆ ಎಂಬುದು ಅವರ ಅಭಿಮತ.

**ಡಾ|| ಎಸ್.ಆರ್. ಲೀಲಾ:–** ಮಾನ್ಯ ಸಭಾಪತಿಯವರೇ, ಮಾನ್ಯ ಮೋಟಮ್ಮನವರು ಕೇವಲ editorial columnನಲ್ಲಿ ಬಂದಿರುವುದನ್ನು ಮಾತ್ರ ಹೇಳದೆ ಬಜೆಟ್‌ನ ಬಗ್ಗೆ ತಮ್ಮ ಅಭಿಪ್ರಾಯವನ್ನು ಕೂಡ ಹೇಳಬೇಕಾಗುತ್ತದೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ನನ್ನ ಅಭಿಪ್ರಾಯವನ್ನು ಈಗಾಗಲೇ ನಾನು ವ್ಯಕ್ತಪಡಿಸಿದ್ದೇನೆ. ಈ ಸಾಲಿನ ಬಜೆಟ್ ನಿರಾಶಾದಾಯಕವಾದ ಬಜೆಟ್ ಎಂಬುದಾಗಿ ನಾನು ಮೊದಲೇ ತಿಳಿಸಿದ್ದೇನೆ.

ಕಳೆದ ವರ್ಷ ಬಜೆಟ್ ಮಂಡನೆ ಮಾಡುವಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಡಿ.ವಿ.ಸದಾನಂದಗೌಡರಿಗೆ ಒಂದು ರೀತಿಯ ಕಾಟ ಎದುರಾಗಿದ್ದರೆ, ಈ ಸಾಲಿನ ಬಜೆಟ್ ಮಂಡನೆಯ ಸಂದರ್ಭದಲ್ಲಿ ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರಿಗೆ ಇನ್ನೊಂದು ರೀತಿಯ ಕಾಟ ಎದುರಾಗಿದೆ. ಮಾನ್ಯ ಸದಾನಂದಗೌಡರು ಬಜೆಟ್ ಮಂಡನೆ ಮಾಡುವ ಸಂದರ್ಭದಲ್ಲಿ ಯಾವ ರೀತಿಯ ಕಾಟ ಇತ್ತೆಂದರೆ, ಎಲ್ಲರೂ ಹೋಗಿ ಗೋಲ್ಡನ್ ರೆಸಾರ್ಟ್‌ನಲ್ಲಿ ಕುಳಿತರು. ಬಜೆಟ್ ಮಂಡನೆಯನ್ನು ಮಾನ್ಯ ಸದಾನಂದಗೌಡರು ಮಾಡುತ್ತಾರೆಯೋ ಅಥವಾ ಮಾನ್ಯ ಯಡಿಯೂರಪ್ಪನವರು ಮಾಡುತ್ತಾರೆಯೋ ಎನ್ನುವಂತಹ ಗೊಂದಲ ಇತ್ತು. ಈ ಸಾಲಿನ ಬಜೆಟ್‌ನ್ನು ಮಾನ್ಯ ಜಗದೀಶ್ ಶೆಟ್ಟರ್‌ರವರು ಮಂಡನೆ ಮಾಡುವಂತಹ ಸಂದರ್ಭದಲ್ಲಿ ಮಾನ್ಯ ಯಡಿಯೂರಪ್ಪನವರು ಮತ್ತೆ ಸರ್ಕಾರವನ್ನು ಉಳಿಸಬೇಕೋ-ಬೀಳಿಸಬೇಕೋ ಎಂದು ತಮ್ಮ ರಾಜಕಾರಣವನ್ನು ಪ್ರಾರಂಭ ಮಾಡಿದರು.

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮೋಟಮ್ಮನವರು ಈ ಸಾಲಿನ ಬಜೆಟ್ ನಿರಾಶಾದಾಯಕವಾದ ಬಜೆಟ್ ಎಂದು ಹೇಳಿದರು. ಅದು ನಿಜಕ್ಕೂ ಅವರ ಪಾಲಿಗೆ ನಿರಾಶಾದಾಯಕವೇ, ಆದರೆ ರಾಜ್ಯದ ಪಾಲಿಗೆ ಅದು ಆಶಾದಾಯಕ ಬಜೆಟ್.

**ಶ್ರೀಮತಿ ಮೋಟಮ್ಮ:-** ಅದು ನಿರಾಶಾದಾಯಕವೋ-ಆಶಾದಾಯಕವೋ ಎಂಬುದು ಮುಂದೆ ಗೊತ್ತಾಗುತ್ತದೆ. ಎಲ್ಲರ ಮೂಗಿಗೂ ತುಪ್ಪ ಹಚ್ಚಿ, ಮಕ್ಕಳಿಗೆ ಚಾಕೊಲೇಟ್ ಕೊಟ್ಟು ಕೂರಿಸದಂತೆ ಕೂರಿಸಿದ್ದೀರಿ. ಮುಂದಿನ ಚುನಾವಣೆಯಲ್ಲಿ ಗೊತ್ತಾಗುತ್ತದೆ. ಮುಂದಿನ ಚುನಾವಣೆ ಬೇಗನೆ

ಬರಲಿ, ಏಕೆಂದರೆ ಯಾವ ರೀತಿ ಉತ್ತರ ನೀಡಬೇಕೆಂದು ಜನ ಕಾಯುತ್ತಿದ್ದಾರೆ. ಏನೇ ಆಗಲಿ, ಒಂದು ಸರ್ಕಾರ ಈ ರೀತಿಯ ಒಂದು ಕೆಳಮಟ್ಟಕ್ಕೆ ಕುಸಿಯಬಾರದು. ಮುಖ್ಯಮಂತ್ರಿಗಳಿಗೆ ಬಜೆಟ್ ಮಂಡನೆಗೆ ಕೂಡ ಸ್ವಾತಂತ್ರ್ಯವಿಲ್ಲ, ಬಜೆಟ್ ಮಂಡನೆಗೆ ಮಾಡುವುದಕ್ಕೆ free mind ಇಲ್ಲ ಎಂದರೆ ಹೇಗೇ? ನೆನ್ನೆಯ ದಿವಸ ಮಾನ್ಯ ಶಾಣಪ್ಪನವರು 'ಎಂತಹ ಕಷ್ಟ, ಎಂತಹ ದುಗುಡ, ಎಂತಹ ಪೇಚಾಟದಲ್ಲಿ ನಮ್ಮ ಮುಖ್ಯಮಂತ್ರಿಗಳು ಬಜೆಟ್ ಮಂಡನೆ ಮಾಡಿದ್ದಾರ, "ಭೂ ಚೇತನ" ಇದರ ಅರ್ಥ ನಿಮಗೆ ಗೊತ್ತೇ' ಎನ್ನುವಂತಹ ಮಾತನ್ನು ಹೇಳಿಕೊಂಡು ಬಹಳ ಅಭಿನಂದಿಸಿದರು. ಸರ್ಕಾರ ಮಾಡಿರುವಂತಹ ಒಳ್ಳೆಯ ಕೆಲಸಗಳನ್ನು ಮೆಚ್ಚುವುದು ಬೇರೆ ವಿಚಾರ. ಆದರೆ ಜನಪರವಾದ ಇಡೀ ಕಾರ್ಯಕ್ರಮಗಳಿಗೆ ಸರ್ಕಾರ ಎಷ್ಟರಮಟ್ಟಿಗೆ ಒತ್ತು ಕೊಟ್ಟಿದೆ ಎಂಬುದನ್ನು ಹೇಳಬೇಕಾಗುತ್ತೆ 'ಇದೊಂದು ದಿವಾಳಿಯಾದ ಕಂಪನಿಯ ಬ್ಯಾಲೆನ್ಸ ಶೀಟ್' ಎಂಬುದಾಗಿ ಹಿರಿಯರೊಬ್ಬರು ಈ ಸಾಲಿನ ಬಜೆಟ್ ಬಗ್ಗೆ ವ್ಯಾಖ್ಯಾನ ಮಾಡಿದ್ದಾರೆ. ಒಂದು ರೀತಿಯಲ್ಲಿ ಸರ್ಕಾರ ಕೊನೆಯ 2 ತಿಂಗಳ ಹಂತದಲ್ಲಿ ಆ ರೀತಿಯಲ್ಲಿ ದಿವಾಳಿತನವನ್ನೇ ಹೊಂದಲಿಕ್ಕೆ ನಿಂತಿದೆ ಎಂದರೆ ಬಹುಶಃ ತಪ್ಪಾಗಲಿಕ್ಕಿಲ್ಲ. ಮಾನ್ಯ ಬಿ.ಜೆ.ಪುಟ್ಟಸ್ವಾಮಿಯವರು ತಿಳಿಸಿರುವಂತಹ ಮಾತುಗಳಿರಬಹುದು ಅಥವಾ ಬೇರೆ ಸದಸ್ಯರು ವ್ಯಕ್ತಪಡಿಸಿರುವಂತಹ ಅಭಿಪ್ರಾಯಗಳಿರಬಹುದು, ಅದಕ್ಕೆ ಬೇರೆ ಬೇರೆ ಉದಾಹರಣೆಗಳಿವೆ. ಆಡಳಿತ ವ್ಯವಸ್ಥೆ ಯಾವ ರೀತಿಯಲ್ಲಿದೆ, ಅಲ್ಲಿ ಜನಪರ ಕೆಲಸಗಳು ಹೇಗೆ ಸೊರಗಿವೆ ಎಂಬುದನ್ನು ನಾವು ಮುಂದೆ ಹೇಳಬೇಕಾಗುತ್ತದೆ.

ಸುಮಾರು 12 ಜನ ಶಾಸಕರು ತಮ್ಮ ಸ್ಥಾನಗಳಿಗೆ ರಾಜಿನಾಮೆ ಕೊಡುತ್ತಾರೆ, ಮುಖ್ಯಮಂತ್ರಿಗಳಾಗಿದ್ದವರು ತಮ್ಮ ಪಕ್ಷದ ಸದಸ್ಯತ್ವಕ್ಕೆ ರಾಜಿನಾಮೆ ಕೊಡುವ ಮೂಲಕ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸುತ್ತಾರೆ ಎಂದರೆ ನಮ್ಮ ರಾಜಕಾರಣದ ಸ್ಥಿತಿ ಯಾವ ಮಟ್ಟಕ್ಕೆ ಬಂದು ತಲುಪಿದೆ ಎಂಬುದನ್ನು ನಾವು ಇವೊತ್ತು ವಿಚಾರ ಮಾಡಬೇಕಾಗುತ್ತದೆ. ಏನೇ ಆಗಲಿ, ಇವರು ಅಂತಹ ಒಂದು ಇಕ್ಕಟ್ಟನ್ನೇಲ್ಲ ಎದುರಿಸಿ ಸುಮಾರು 1,17,005 ಕೋಟಿ

ರೂಪಾಯಿಗಳ ಈ ಸಾಲಿನ ಆಯವ್ಯಯವನ್ನೇನು ಮಂಡನೆ ಮಾಡಿದ್ದಾರೆ, ಅದಕ್ಕೆ ಗೊತ್ತುಗುರಿ ಏನೂ ಇಲ್ಲ, ಏನೋ ಎರ್ರಾಬಿರ್ರಿಯಾಗಿ ಸರ್ಕಾರ ಬಜೆಟ್‌ನಲ್ಲಿ ಹಣವನ್ನು ಹಂಚಿಕೆ ಮಾಡಿದೆ. ಇದು ಬಡವರ ಬದುಕಿಗೆ ಎಷ್ಟು ಪೂರಕವಾಗಿದೆ ಮತ್ತು ಭದ್ರತೆ ಕೊಡುತ್ತದೆ ಎಂಬುದನ್ನು ನಾವು ವಿಚಾರ ಮಾಡಿದರೆ ನಿಜವಾಗಿಯೂ ನೀವು ಬಜೆಟ್ ಮಂಡನೆ ಮಾಡಿದನ್ನು ಅನುಷ್ಠಾನಕ್ಕೆ ತರಲಿಕ್ಕೆ ಸಾಧ್ಯವೇ ಇಲ್ಲ. ಆದರೆ ಮಾಡಿದ ತಪ್ಪಿಗೆ ಪ್ರಾಯಃಶ್ಚಿತ್ತ ಮಾಡಿಕೊಳ್ಳುವವರ ಹಾಗೆ ಬಡವರಿಗೆ ಪ್ರತಿ ಕಿಲೋಗ್ರಾಂ ಅಕ್ಕಿಯನ್ನು ರೂ. 2.00/– ರ ದರದಲ್ಲಿ ನೀಡುವುದಾಗಿ ಕೊನೆಯ ಅವಧಿಯಲ್ಲಿ ಇವರು ಪ್ರಕಟಿಸಿದ್ದಾರೆ. 'ಹರಕೆ ಹನ್ನೆರಡು ವರ್ಷ' ಎಂಬುದಾಗಿ ಹೇಳುತ್ತಾರೆ, ಆ ರೀತಿ ದೇವರಿಗೆ ಹೊತ್ತ ಹರಕೆಯನ್ನು ತೀರಿಸುವಂತೆ ಇತ್ತಿಚೆಗಷ್ಟೇ ಇದನ್ನು ಪ್ರಕಟಿಸಲಾಗಿದೆ. ಇವರು ಅಧಿಕಾರಕ್ಕೆ ಬಂದಾಗ ಮಾಡಲಾಗಿದ್ದಂತಹ ಈ ಘೋಷಣೆಯನ್ನು ಇದುವರೆಗೂ ಜಾರಿಗೊಳಿಸಿರಲಿಲ್ಲ. ಆದರೆ ಈ ಹರಕೆಯನ್ನು ತೀರಿಸಿಲ್ಲ, ಮುಂದಿನ ಚುನಾವಣೆಗೆ ನಾವು ಹೇಗೆ ಹೋಗುವುದು, ಈಗ ಈ ಯೋಜನೆಯನ್ನಾದರೂ ನಾವು ಜಾರಿಗೆ ಕೊಟ್ಟರೆ ಕೊನೆಯ ಪಕ್ಷ ಮತ ದೇವರುಗಳು ಅಂದರೆ ಜನರು ಸಮಾಧಾನಗೊಳ್ಳುತ್ತಾರೆ ಎನ್ನುವಂತಹ ದೃಷ್ಟಿಯಿಂದ ಈ ಯೋಜನೆಯನ್ನು ಇವರು ಜಾರಿಗೆ ತಂದಿದ್ದಾರೆ. ಅದನ್ನು ಜಾರಿಗೊಳಿಸುವವರೆಗೆ ಈ ಸರ್ಕಾರ ಅಧಿಕಾರದಲ್ಲಿರುವುದಿಲ್ಲ. ಈ ಮುಂಗಡ ಪತ್ರಕ್ಕೆ ಕೇವಲ ಲೇಖನಾನುದಾನವನ್ನು ತೆಗೆದುಕೊಳ್ಳುತ್ತಿರುವುದರಿಂದ ಪೂರ್ಣ ಪ್ರಮಾಣದ ಬಜೆಟ್‌ನ್ನು ಇವರು ಜಾರಿಗೊಳಿಸಲಿಕ್ಕೆ ಸಾಧ್ಯವಿಲ್ಲ.

ಮಾನ್ಯ ಸಭಾಪತಿಯವರೇ, ನಮ್ಮ ಗ್ರಾಮೀಣ ಭಾಗದಲ್ಲಿ 'ಹಿರಿಯಕ್ಕನ ಛಾಳಿ ಮನೆಮಂದಿಗೆಲ್ಲಾ' ಎನ್ನುವಂತಹ ಒಂದು ನಾಣ್ನುಡಿ ಇದೆ. ಮಾನ್ಯ ಯಡಿಯೂರಪ್ಪನವರು ಮಂಡಿಸಿದಂತಹ ಬಜೆಟ್‌ನಲ್ಲಿ ಮಠಮಾನ್ಯಗಳಿಗೆ ದೇಣಿಗೆಯನ್ನು ನೀಡಿದ್ದರು. ಅದನ್ನೇ ನಮ್ಮ ಸದಾನಂದಗೌಡರು ಪಾಲನೆ ಮಾಡಿದರು. ಈಗ ಮಾನ್ಯ ಜಗದೀಶ್ ಶೆಟ್ಟರ್‌ರವರು ಸಹ ಅದನ್ನೇ ಪಾಲನೆ ಮಾಡಿದ್ದಾರೆ. ಮಠಮಾನ್ಯಗಳ ಬಗ್ಗೆ ಇವರಿಗಿಂತಲೂ ಎರಡುಪಟ್ಟು ಹೆಚ್ಚು

ಗೌರವವಿದೆ. ಅವರಿಗೆ ದೇಣಿಗೆ ಕೊಡಬಾರದು ಎಂದು ನಾವು ಹೇಳುವುದಿಲ್ಲ. ಆದರೆ ಅದನ್ನು ಕೊಡಬೇಕಾದಂತಹ ರೀತಿ–ನೀತಿ ಹೇಗಿರಬೇಕು ಎಂಬುದನ್ನು ಮಾನ್ಯ ಮುಖ್ಯಮಂತ್ರಿಯವರು ಇದರಲ್ಲಿ ತಿಳಿಸಿರುವುದಿಲ್ಲ. ಆ ಮಠಕ್ಕಿಷ್ಟು, ಈ ಮಠಕ್ಕಿಷ್ಟು, ಆ ಜಾತಿಗಿಷ್ಟು, ಈ ಜಾತಿಗಿಷ್ಟು, ಆ ಧರ್ಮಕ್ಕಿಷ್ಟು, ಈ ಧರ್ಮಕ್ಕಿಷ್ಟು ಎನ್ನುವಂತಹ ಮಾತನ್ನು ಹೇಳಲಾಗಿದೆ. ಅದಕ್ಕೆ ಬಜೆಟ್‌ನಲ್ಲಿ ಒಂದು discipline ಇರಬೇಕು ಎನ್ನುವಂತಹ ಮಾತನ್ನು ನಾನು ಹಿಂದೆ ಕೂಡ ಹೇಳಿದ್ದೇನೆ. ಈ ಬಜೆಟ್ discipline ಅನುಸರಿಸದೆ ಇದು ಒಂದು ರೀತಿಯಲ್ಲಿ ಪಾಲುಪಾರೀಕತ್ತು ಮಾಡಿಕೊಂಡಂತಾಗಿದೆ. ನಿಮ್ಮ ಜಾತಿಗಿಷ್ಟು, ಇವರ ಜಾತಿಗಿಷ್ಟು ಬಜೆಟ್ ಇದೆ, ನೀವು ಏನಾದರೂ ಮಾಡಿಕೊಳ್ಳಿ ಎಂದು ಹೇಳಿದಂತಾಗಿದೆ. ಹಾಗಾದರೆ ಇಲಾಖೆಗಳು ಬೇಡವೇ ಬೇಡ, ಆಯಾಯ ಜಾತಿಯವರಿಗೆ ಒಂದೊಂದು ದೊಡ್ಡ ದೊಡ್ಡ ಸಂಘಟನೆ ಅಥವಾ ಸಂಸ್ಥೆಗಳನ್ನು ಮಾಡಿ ಅವರಿಗೆ ಇಷ್ಟಿಷ್ಟು ಹಣ ಎಂದು ಹಂಚಿಕೆ ಮಾಡಿಬಿಡಿ. ಅಲ್ಲಿ ನೀವೇ ಶಿಕ್ಷಣ ವ್ಯವಸ್ಥೆಯನ್ನು ಮಾಡಿಕೊಳ್ಳಿ, ಸಮಾಜಕಲ್ಯಾಣ ಕಾರ್ಯಕ್ರಮಗಳನ್ನೂ ನೀವೇ ಮಾಡಿಕೊಳ್ಳಿ, ರಸ್ತೆ–ನೀರು–ಬೀದಿದೀಪ ಇಂತಹ ವ್ಯವಸ್ಥೆಗಳನ್ನೆಲ್ಲ ನೀವೇ ಮಾಡಿಕೊಳ್ಳಿ ಎಂದು ಬಿಟ್ಟುಬಿಟ್ಟರೆ ಮತ್ತೆ ಈ ಸರ್ಕಾರ ಏಕೆ ಬೇಕು, ಮಂತ್ರಿಗಳೇಕೆ ಇರಬೇಕು ಮುಖ್ಯಮಂತ್ರಿಗಳೇಕೆ ಇರಬೇಕಾಗುತ್ತದೆ? ಇದು ಬಹಳ ಮುಖ್ಯವಾದಂತಹ ವಿಚಾರವಾಗಿದೆ. ಹಾಗೆಂದ ಮಾತ್ರಕ್ಕೆ ಎಲ್ಲರನ್ನೂ ಸಾರಾಸಗಟಾಗಿ ತಳ್ಳಿಹಾಕುವುದಕ್ಕಾಗುವುದಿಲ್ಲ. ಸಚಿವರ ಬಗ್ಗೆ ನಮಗೂ ಗೌರವ ಇದೆ. ಮಠಮಾನ್ಯಗಳ ಪ್ರಶ್ನೆ ಬಂದಾಗ ಮಾನ್ಯ ಸೋಮಣ್ಣನವರು ಬಹಳ defend ಮಾಡಿಕೊಂಡು ಮಾತನಾಡಿದರು. ನಾನು ಅವೊತ್ತು ಸಹ ಹೇಳಿದೆ, ಮಠಮಾನ್ಯಗಳ ಬಗ್ಗೆ ನಮಗೂ ಸಹ ಗೌರವ ಇದೆ, 'ಹಿರಿಯರಿಲ್ಲದ ಮನೆ ಚಂದವಲ್ಲ, ಗುರುವಿಲ್ಲದ ಮಠ ಚಂದವಲ್ಲ' ಎಂದು ದೊಡ್ಡವರು ಹೇಳಿದ್ದಾರೆ. ಗುರುಹಿರಿಯರು ಮತ್ತು ಮಠಗಳಿರಬೇಕು, ಅವರ ಬಗ್ಗೆ ಇವರಿಗಿರುವಷ್ಟೇ ಗೌರವ ನಮಗೂ ಇದೆ. ಹಾಗೆಂದು ಹಿಂದಿನವರು ಸಹಾಯ ಮಾಡಿಲ್ಲ ಎಂದು ಇವರು ಹೇಳುವುದಕ್ಕಾಗುವುದಿಲ್ಲ. ಮಠಮಾನ್ಯಗಳಿಗೆ ಇವೊತ್ತು ಮಾನ್ಯತೆ ಬಂದಿದ್ದರೆ, ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು

ಸಾಧನೆಗಳಾಗಿದ್ದರೆ ಅದರಲ್ಲಿ ಹಿಂದಿನ ಸರ್ಕಾರಗಳ ಕೊಡುಗೆ ಬಹಳ ಇದೆ. ಇಂಜಿನಿಯರಿಂಗ್ ಕಾಲೇಜುಗಳು, ಮೆಡಿಕಲ್ ಕಾಲೇಜುಗಳಿಗೆ ಮಂಜೂರಾತಿ ಕೊಟ್ಟವರು ಯಾರು, ಆ ಕಾಲೇಜುಗಳ ಸ್ಥಾಪನೆಗೆ ಬೇಕಾದಂತಹ ಜಮೀನನ್ನು ಮಂಜೂರು ಮಾಡಿಕೊಟ್ಟವರು ಯಾರು? ಅದನ್ನೆಲ್ಲಾ ಇವರು ಬಂದು ಕೊಟ್ಟಿರಲಿಲ್ಲ, ಇವರು ಮಾಡಿರುವುದಕ್ಕಿಂತ ಎರಡರಷ್ಟು ಸಹಾಯ ಹಿಂದೆ ಆಗಿದೆ.

**ಶ್ರೀಮತಿ ಭಾರತಿಶೆಟ್ಟಿ:–** ಮಾನ್ಯ ಸಭಾಪತಿಯವರೇ, ನಾವು ಇವರಿಗಿಂತ ದೊಡ್ಡ ಪ್ರಮಾಣದಲ್ಲಿ ಮಾಡಿದ್ದೇವೆ. ಹಾಗಾಗಿ ಇವರಿಗೆ ಅಲ್ಪತೃಪ್ತಿ ಇದ್ದರೆ ನಮಗೆ ಮಹಾತೃಪ್ತಿ ಇದೆ. ಇವರ ಪರಿಧಿ ಸಣ್ಣದಿತ್ತು, ನಮ್ಮ ಪರಿಧಿ ದೊಡ್ಡದಿದೆ.

**(ಈ ಹಂತದಲ್ಲಿ ಸಭಾಪತಿಯವರು ಪೀಠವನ್ನಲಂಕರಿಸಿದರು)**

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನೆನ್ನೆಯ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಬಸವರಾಜ ಹೊರಟ್ಟಿಯವರು ಈ ರೀತಿಯಾಗಿ ಬಹುತೇಕ ಸದಸ್ಯರು ಆಯವ್ಯಯದ ಬಗ್ಗೆ ಮಾತನಾಡಿದ್ದಾರೆ. ಈ ಸಂರ್ಭದಲ್ಲಿ ಒಂದು ವಿಚಾರವನ್ನು ನಾನು ಸ್ಪಷ್ಟವಾಗಿ ತಿಳಸಬಯಸುತ್ತೇನೆ. ಸರ್ಕಾರ ಮಾಡುವಂತಹ ಕೆಲಸವನ್ನು ಕೆಲವು ಮಠಮಾನ್ಯಗಳೇನು ಮಾಡುತ್ತಿವೆ ಅದನ್ನು ನಾವೆಲ್ಲರೂ ಮೆಚ್ಚಿಕೊಂಡಿದ್ದೇವೆ. ಆ ವಿಚಾರದಲ್ಲಿ ಯಾವುದೇ ಬಿನ್ನಾಭಿಪ್ರಾಯಗಳಿಲ್ಲ. ನೆನ್ನೆಯ ದಿವಸ ಮಾತನಾಡಿದಂತಹ ಸದಸ್ಯರು ಈ ವಿಚಾರದಲ್ಲಿ ಬಹಳ ಒಳ್ಳೊಳ್ಳೆಯ ಸಲಹೆಗಳನ್ನೇನು ಕೊಟ್ಟಿದ್ದಾರೆ ಅವುಗಳನ್ನು ಸಹ ನಾವು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೇವೆ. ಒಂದು ಸತ್ಯ ಸಂಗತಿ ಎಂದರೆ, ಈ ರಾಜ್ಯಕ್ಕೆ ಒಂದು ಸಂಸ್ಕಾರ–ಸಂಸ್ಕೃತಿ ಇದೆ. ಇದಕ್ಕೆ ಯಾರ್ಯಾರು ಎಷ್ಟೆಷ್ಟು ಮಟ್ಟಿಗೆ ಕೆಲಸ ಮಾಡಿದ್ದಾರೆ, ವಿದ್ಯೆಗೆ ಯಾರು ಆದ್ಯತೆ ಕೊಟ್ಟಿದ್ದಾರೆ, ಹೈದ್ರಾಬಾದ್ ಕರ್ನಾಟಕ ಇರಬಹುದು, ಬಾಂಬೆ ಕರ್ನಾಟಕ ಇರಬಹುದು,

ರಾಜ್ಯದ ಇತರ ಜಿಲ್ಲೆಗಳಲ್ಲಿರತಕ್ಕಂತಹ ಮಠಗಳೇನಿವೆ, ಇವು ಕೇವಲ ಒಂದು ವರ್ಗಕ್ಕಾಗಲೀ, ಒಂದು ಜಾತಿಗಾಗಲೀ ಸೀಮಿತವಾದವುಗಳಲ್ಲ, ರಾಜ್ಯದ ಎಲ್ಲಾ ಜಾತಿಯ, ಎಲ್ಲಾ ವರ್ಗದ ಜನರಿಗೆ ವಿದ್ಯಾದಾನ ಮತ್ತು ಅನ್ನದಾಸೋಹವನ್ನು ನೀಡುತ್ತಿವೆ. ಇದರ ಜೊತೆಯಲ್ಲಿ ನಾವು ಮಾಡುತ್ತಿರುವುದು ಸರ್ಕಾರದ ಕೆಲವು ಕಾರ್ಯಕ್ರಮಗಳನ್ನು ಜಿಲ್ಲಾಧಿಕಾರಿಗಳ ನೇತೃತ್ವದಲ್ಲೇನು ಅನುಷ್ಠಾನಗೊಳಿಸಲಾಗುತ್ತದೆ ಅವುಗಳು ಆ ಮಠದ ವ್ಯವಸ್ಥೆಗೆ ಬರುವಂತಹ ಭಕ್ತರು, ಮತ್ತಿತರ ಸಾರ್ವಜನಿಕರ ಅನುಕೂಲಕ್ಕೋಸ್ಕರವಾಗಿ ಮಾಡಲಾಗುತ್ತಿರುವಂತಹ ಕಾರ್ಯಕ್ರಮಗಳು, ಶಾಲಾ ಕಾಲೇಜುಗಳನ್ನು ನಿರ್ಮಿಸುವುದು, ಆ ಭಾಗದ ಜನರಿಗೆ ಬೇಕಾದಂತಹ ಸವಲತ್ತುಗಳನ್ನು ಕೊಡುವಂಥದ್ದು ಮತ್ತು ವಿದ್ಯಾರ್ಥಿಗಳು ಅಲ್ಲಿ ಉಳಿದಕೊಂಡು ವಿದ್ಯಾಭ್ಯಾಸ ಮಾಡುವುದಕ್ಕೆ ಬೇಕಾದಂತಹ ವ್ಯವಸ್ಥೆಗಳನ್ನು ನಾವು ಮಾಡುತ್ತಿದ್ದೇವೆಯೇ ವಿನಃ take it as granted ಎಂದು ಮಾಡುತ್ತಿಲ್ಲ. ಸರ್ಕಾರದ ಬೊಕ್ಕಸದ ಒಂದು ಪೈಸೆ ಹಣವನ್ನು ಕೂಡ ನಾವು ನಮ್ಮ ಸರ್ಕಾರದ ವ್ಯವಸ್ಥೆಯ ಇತಿಮಿತಿಯಲ್ಲಿಯೇ ಖರ್ಚನ್ನು ಮಾಡುತ್ತಿದ್ದು ಸಾರ್ವಜನಿಕರ ಹಿತವನ್ನು ಕೂಡ ಗಮನಕ್ಕೆ ತೆಗೆದುಕೊಂಡು ಮಠಮಾನ್ಯಗಳು ಸರ್ಕಾರಕಿಂತ ಹೆಚ್ಚಾಗಿ ಒಳ್ಳೆಯ ಕೆಲಸವನ್ನು ಮಾಡತಕ್ಕಂಥದ್ದಕ್ಕೆ ಒಂದು ಹಂತದಲ್ಲಿ ನಾವು ಅವರಿಗೆ ಕೈಜೋಡಿಸಿದ್ದೇವೆಯೇ ವಿನಃ ಇದಕ್ಕೆ ಬೇರೆ ಬೇರೆ ರೂಪಗಳನ್ನು ಕೊಡುವಂಥದ್ದರಲ್ಲಿ ಅರ್ಥವಿಲ್ಲ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ನಾವು ಬೇರೆ ರೂಪವನ್ನು ಕೊಡಲಿಲ್ಲ. ಆದರೆ ಇವರು ಮಠಮಾನ್ಯಗಳಿಗೆ ನಾವೇ ಹೆಚ್ಚು ದೇಣಿಗೆ ಕೊಟ್ಟುಬಿಟ್ಟಿದ್ದೇವೆ ಎಂದು ಬೀಗಬಾರದು. ನಾವು ಇವರಿಗಿಂತ ಹೆಚ್ಚಿನ ರೀತಿಯಲ್ಲಿ ಆ ಮಠಮಾನ್ಯಗಳಿಗೆ permanent sources ಅನ್ನು ಮಾಡಿಕೊಟ್ಟಿದ್ದೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಮೋಟಮ್ಮನವರೇ, ತಾವು ಒಂದು ನಿಮಿಷ ಕುಳಿತುಕೊಳ್ಳಿ. ನೆನ್ನೆಯ ದಿವಸ ಬಜೆಟ್ ವಿಚಾರವಾಗಿ ಮಾತನಾಡಲು

ಸಾಕಷ್ಟು ಜನ ಸದಸ್ಯರಿಗೆ ಅವಕಾಶ ಮಾಡಿಕೊಡಲಾಗಿದೆ. ಕೆಲವರು ಈಗಾಗಲೇ ರಾತ್ರಿಯಾಗಿದ್ದು ಬಹಳ ತಡವಾಗಿರುವುದರಿಂದ ನಮಗೆ ನಾಳೆ ದಿವಸ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ವಿನಂತಿಸಿಕೊಂಡಿದ್ದರಿಂದ ಇವೊತ್ತು ಒಂದಿಬ್ಬರು ಸದಸ್ಯರಿಗೆ ಅವಕಾಶ ಮಾಡಿಕೊಡೋಣ ಎಂಬ ಉದ್ದೇಶದಿಂದ ತಮಗೆ ಅವಕಾಶವನ್ನು ಮಾಡಿಕೊಡಲಾಗಿದೆ. ಈಗಾಗಲೇ ತಾವು 15 ನಿಮಿಷ ಮಾತನಾಡಿದ್ದೀರಿ. ಇನ್ನು ಮೂರು–ನಾಲ್ಕು ನಿಮಿಷಗಳಲ್ಲಿ ತಾವು ತಮ್ಮ ಚರ್ಚೆಯನ್ನು ಮುಗಿಸಿದರೆ ನಾನು ಬೇರೆ ಕಲಾಪಗಳನ್ನು ತೆಗೆದುಕೊಳ್ಳಲು ಅನುಕೂಲವಾಗುತ್ತದೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಆದಷ್ಟು ಬೇಗನೆ ನನ್ನ ಮಾತುಗಳನ್ನು ಮುಗಿಸುತ್ತೇನೆ. ನನ್ನ ವಾದ ಇಷ್ಟೆ, ದೇವರು, ಧರ್ಮ, ಮತ ಇವುಗಳ ವಿಚಾರದಲ್ಲಿ ಇವರಿಗಷ್ಟೇ ಜಾಗೀರುದಾರಿಕೆ ಕೊಟ್ಟಿಲ್ಲ, ಅದು ನಮಗೂ ಸೇರಿದ್ದು. ಅದಕ್ಕಾಗಿ ನಾವಷ್ಟೇ ಹಚ್ಚಿನ ದೇಣಿಗೆಯನ್ನು ನೀಡಿದ್ದೇವೆ ಎಂದು ಇವರು ಹೆಚ್ಚು ಬೀಗುವುದು ಬೇಡ ಎನ್ನುವುದು ಒಂದು ವಿಚಾರ. ಇದರ ಜೊತೆಯಲ್ಲಿ ನೀವು ಮಾಡಬೇಕಾದುದು ಬಹಳ ಇತ್ತು, ಕೆಲವು ಸಣ್ಣಪುಟ್ಟ ಮಠಗಳಿವೆ. ರಾಣೇಬೆನ್ನೂರು ತಾಲ್ಲೂಕಿನ ಸವಣೂರಿನಲ್ಲಿರುವಂತಹ ದೊಡ್ಡ ಹುಣಸೇಮರದ ಮಠವನ್ನು ನೋಡಿದ್ದೀರಾ? ಹಾಗಾದರೆ ಈ ಮಠಕ್ಕೆ ಏಕೆ ಕೊಡಬಾರದಾಗಿತ್ತು? ಆ ಸ್ವಾಮಿಗಳು ಯಾವ ರೀತಿ ಆ ಮಠವನ್ನು ನಡೆಸುತ್ತಿದ್ದಾರೆ ಎಂಬುದು ನಿಮಗೆ ತಿಳಿದಿದೆ. ಅದೇ ರೀತಿ ನಮ್ಮ ಚಿಕ್ಕಮಗಳೂರಿನ ಸಾಣೇಹಳ್ಳಿ ಮಠ, ಕುರುಬರ ಹಳ್ಳಿ ಮಠ ಇಂತಹ ಸಣ್ಣ ಮಠಗಳಿಗೆ ಸಹಕಾರ ನೀಡದೆ ಇರುವುದು ತಪ್ಪು ಎನ್ನುವುದು ನಮ್ಮ ವಾದ.

(ಗೊಂದಲ)

**ಶ್ರೀಮತಿ ಭಾರತೀಶೆಟ್ಟಿ:–** ನಮ್ಮ ಸರ್ಕಾರ ಕೇವಲ ಮಠಗಳಿಗೆ ಮಾತ್ರ ಕೊಟ್ಟಿಲ್ಲ, ಮಸೀದಿ ಹಾಗು ಚರ್ಚಿಗೂ ಸಹ ಕೊಟ್ಟಿದೆ. ಆದರೆ ಕೇವಲ ನೀವು ಮಸೀದಿ ಮತ್ತು ಚರ್ಚ್ ಅನ್ನು ಮಾತ್ರ ನೋಡಿದ್ದೀರಿ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಶ್ರೀಮತಿ ಭಾರತೀಶೆಟ್ಟಿ ಅವರೆ ದಯವಿಟ್ಟು ತಾವು ಕುಳಿತುಕೊಳ್ಳಿ. ಇದರ ಜೊತೆಯಲ್ಲಿ ಕೆಲವು ಆಶ್ರಮಗಳು ಇವೆ.

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೇ, ನನ್ನ ಪತ್ರದ ಮೇಲೆ ಹಾವೇರಿ ಅಲ್ಪಸಂಖ್ಯಾತರಿಗೂ ಸಹ ಕೊಡಿಸಿದ್ದೇವೆ. ಅದೇ ರೀತಿ ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ದೊಡ್ಡ ಹುಣಸೇ ಮಠಕ್ಕೂ ನಿನ್ನೆ ಅಥವಾ ಮೊನ್ನೆ ಸನ್ಮಾನ್ಯ ಮುಖ್ಯಮಂತ್ರಿಗಳು ಅನುದಾನವನ್ನು ಬಿಡುಗಡೆ ಮಾಡಿದ್ದಾರೆ. ಒಟ್ಟು ಹನ್ನೆರಡು ಕೋಟಿಯನ್ನು ಬಿಡುಗಡೆ ಮಾಡಿದ್ದಾರೆ. ದಯಮಾಡಿ ಮಾನ್ಯ ಸದಸ್ಯರು ಆಯವ್ಯಯ ಪುಸ್ತಕವನ್ನು ತೆಗೆದು ಓದಬೇಕೆಂದು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತಿದ್ದೇನೆ.

(ಗೊಂದಲ)

**ಶ್ರೀಮತಿ ಭಾರತೀಶೆಟ್ಟಿ:–** ಮಾನ್ಯ ಸಭಾಪತಿಯವರೇ ....

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಇವರು ಟೆಂಟ್ ಕಿತ್ತುಕೊಂಡು ಹೋಗಿ ಪುನಃ ಈಗ ಮಾನ್ಯ ಶೆಟ್ಟರ್‌ರವರ ಬೆಂಬಲಕ್ಕೆ ನಿಲ್ಲುತ್ತಾರೆ. ನನಗೆ ಭಾರತೀ ಶೆಟ್ಟಿಯವರು ಅರ್ಥವಾಗುತ್ತಿಲ್ಲ. ಇವರದು ಒಂದು ರೀತಿ ವಿತಂಡವಾದ. ಮಾನ್ಯ ಸಭಾಪತಿಯವರೇ, ನನ್ನ ಉದ್ದೇಶವೇನೆಂದರೆ, ಸಣ್ಣ ಪುಟ್ಟ ಮಠಗಳನ್ನು ತಾತ್ಸಾರ ಮಠಬಾರದು. ಇದಕ್ಕಿಂತ ಹೆಚ್ಚಾಗಿ ಸಂಘ–ಸಂಸ್ಥೆಯವರು ಕೆಲಸ ಮಾಡುತ್ತಿದ್ದಾರೆ. ಉದಾಹರಣೆಗೆ ಹೇಳಬೇಕೆಂದರೆ ಸುಮಂಗಲಿ ಸೇವಾಶ್ರಮ. ಈ ಸೇವಾಶ್ರಮವನ್ನು ನಡೆಸುತ್ತಿರುವಂಥವರು ಒಬ್ಬ ಹೆಣ್ಣುಮಗಳು. ಅವರ ಹೆಸರು ಸುಶೀಲಮ್ಮ. ಇವರು ಅನಾಥಾಶ್ರಮ ಮತ್ತು ವೃದ್ಧಾಶ್ರಮವನ್ನು ನಡೆಸುತ್ತಿದ್ದಾರೆ. ಕಳೆದ ವರ್ಷ ಈ ಸೇವಾಶ್ರಮಕ್ಕೆ ಐವತ್ತು ಲಕ್ಷ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿತ್ತು. ಆದರೆ ಈ

ವರ್ಷ ಈ ಆಶ್ರಮಕ್ಕೆ ಎಲ್ಲಿ ಕೊಟ್ಟಿದ್ದೀರಿ? ಅದೇ ರೀತಿ ಕಳೆದ ಸಲ ಶ್ರೀಮತಿ ಯಶೋಧಮ್ಮ ದಾಸಪ್ಪ ಅವರ ಬಗ್ಗೆಯೂ ಸಹ ಹೇಳಿದೆ.

**ಶ್ರೀ ವಿ. ಸೋಮಣ್ಣ (ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಸುಮಂಗಲಿ ಸೇವಾಶ್ರಮ ನಡೆಸುತ್ತಿರುವಂಥ ಶ್ರೀಮತಿ ಸುಶೀಲಮ್ಮನವರನ್ನು ಕರೆದು ಸನ್ಮಾನ ಸಹ ಮಾಡಲಾಗಿದೆ. ಅವರ ಜೊತೆ ಮೊನ್ನೆ ದಿವಸ ತಾನೆ ಮಾತನಾಡಿದ್ದೇನೆ. ಅವರು ಇವತ್ತು ಸಾಯಂಕಾಲದೊಳಗೆ ನನ್ನನ್ನು ಭೇಟಿ ಸಹ ಮಾಡುತ್ತಾರೆ. ಆ ರೀತಿಯ ಬಹುತೇಕ ಸಮಸ್ಯೆಗಳನ್ನು ತಾವೇನು ಹೇಳಿದಿರಿ ಸಣ್ಣ–ಪುಟ್ಟ ಮಠ–ಮಾನ್ಯಗಳು ಎಂದು ನಿಮಗೆ ಒಂದು ಪಟ್ಟಿ ಕಳಿಸಿಕೊಡುತ್ತೇವೆ. ಶ್ರೀಮತಿ ಮೋಟಮ್ಮನವರೇ, ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸ್ಪಷ್ಟಪಡಿಸುತ್ತೇನೆ. ಇದೂವರೆವಿಗೆ ಸರ್ಕಾರದ ಹಣವನ್ನು ಯಾರದೋ ಜೇಬಿಗೆ ಕೊಡುವಂತಹ ಕೆಲಸವನ್ನು ನಾವ್ಯಾರು ಮಾಡುವುದಿಲ್ಲ. ಎಲ್ಲೆಲ್ಲಿ ಸಾರ್ವಜನಿಕರ ಹಿತವನ್ನು ಬಡವರಿಗೆ, ಸಾಮಾನ್ಯ ಜನರಿಗೆ, ಧ್ವನಿ ಇಲ್ಲದವರಿಗೆ ಆಸರೆಯಾಗಿ ಕೆಲಸ ಮಾಡುವಂತಹ ಸಂಘ–ಸಂಸ್ಥೆಗಳಿರಬಹುದು, ಮಠ–ಮಾನ್ಯಗಳಿರಬಹುದು ಇದಕ್ಕೆ ಯಾವುದೇ ಒಂದು ಜಾತಿಯ ಲೇಪವನ್ನು ನಾವಾಗಲಿ, ನೀವಾಗಲಿ ಹಚ್ಚಿಲ್ಲ. ಎಲ್ಲೆಲ್ಲಿ ಒಳ್ಳೆಯ ಕೆಲಸಗಳು ನಡೆಯುತ್ತವೋ ಅಂಥವುಗಳನ್ನು ಗುರುತಿಸಿ ಸನ್ಮಾನ್ಯ ಮುಖ್ಯಮಂತ್ರಿಗಳ ಸೂಚನೆಯ ಮೇಲೆ ಮಾಡುತ್ತಿದ್ದೇವೆ.

**ಶ್ರೀ ಕೆ.ಬಿ. ಶಾಣಪ್ಪ:–** ಸನ್ಮಾನ್ಯ ಸಭಾಪತಿಯವರೇ, ಬಸವಣ್ಣನವರ, ಬುದ್ಧ ಮತ್ತು ಡಾ||ಅಂಬೇಡ್ಕರ್‌ರವರ ತತ್ವವನ್ನು ಪ್ರಚಾರ ಮಾಡುತ್ತಾ, ದಲಿತರನ್ನು ಮತ್ತು ಜಾತಿರಹಿತವಾದಂತಹ ಸಮಾಜವನ್ನು ನಿರ್ಮಾಣ ಮಾಡಲು ಶರಣರು ಹೊರಟಿದ್ದಾರೆ. ಅವರು ಬಂದು ಕೇಳಿದಾಗ ಒಂದು ಅನುದಾನವನ್ನು ಕೊಟ್ಟಿದ್ದಾರೆ. ಅದನ್ನು ನಾವು ಸ್ವಾಗತ ಮಾಡಬೇಕು.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ನಾವೇನು ಸ್ವಾಗತ ಮಾಡಲಿಲ್ಲವೆ? ಮಾನ್ಯ ಸದಸ್ಯರು ನಾವು ಹೇಳುವುದನ್ನು ಅರ್ಥ ಮಾಡಿಕೊಳ್ಳದೆ ಮಾತನಾಡಿದರೆ ಹೇಗೆ? "ಕನ್ನಡ ಪ್ರಭ" ಪತ್ರಿಕೆಯಲ್ಲಿ ಮಠಗಳ ದಾರಿ ತಪ್ಪಿಸುತ್ತಿರುವ ರಾಜಕಾರಣಿಗಳು ಎಂದು ತ್ಯಾಗರಾಜ್ ಎಂಬ ಉತ್ತಮ

ಬರಹಗಾರರು ಬರೆದಿರುವುದನ್ನು ಓದಿದ್ದೀರಾ? ಇದನ್ನು ನೀವು ಓದಬೇಕು, ಅಮ್ಮಿನ್‌ಕಟ್ಟಿ ಅವರು ಬರೆಯುವಂತಹ ಬರವಣಿಗೆಯನ್ನು ಸಹ ನೀವು ಓದಬೇಕು. ಈಗ ನಾನು ಹೇಳುತ್ತಿರುವುದೇನೆಂದರೆ, ಶ್ರೀಮತಿ ಯಶೋಧಮ್ಮ ದಾಸಪ್ಪ ನವರ ಭಾರತೀಯ ಗ್ರಾಮೀಣ ಮಹಿಳಾ ಸಂಘದ ಬಗ್ಗೆ ಕಳೆದ ಸಲವು ನಾನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ರಾತ್ರಿ ಊಟವನ್ನು ಹೋಟೆಲ್‌ನಲ್ಲಿ ಉಳಿದಿರುವಂತಹ ಅನ್ನವನ್ನು ತಂದು ಅನಾಥ ಹೆಣ್ಣು ಮಕ್ಕಳನ್ನು ವೃದ್ಧರನ್ನು ಸಾಕುತ್ತಿದೇವೆಂದು ಹೇಳಿದ್ದರು. ರಮಣಮಹರ್ಷಿ ಆಶ್ರಮಕ್ಕೆ ಕೊಟ್ಟಿದ್ದೀರಾ? ಈ ರೀತಿಯ ಆಶ್ರಮಗಳು ತುಂಬಾ ಇವೆ. ಅದಕ್ಕೂ ಸಹಾಯ ಮಾಡಬಹುದಾಗಿತ್ತು, ಕೇವಲ ಕಣ್ಣಿಗೆ ಕಾಣುವಂತಹ ದೊಡ್ಡ ದೊಡ್ಡವರಿಗೆ ಕೊಡುವುದರಲ್ಲಿ ಅರ್ಥವಿಲ್ಲವೆಂದು ನಾವು ಹೇಳಿದ್ದು.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಅನೇಕ ಮಠದಲ್ಲಿ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಂತಹ ಗದಗಿನ ತೋಂಟದಾರ್ಯ ಮಠಕ್ಕೆ ಅನುದಾನವನ್ನು ಬಿಡುಗಡೆ ಮಾಡಿದ್ದೀರಾ?

**ಶ್ರೀ ವಿ. ಸೋಮಣ್ಣ:–** ಗದಗಿನ ತೋಂಟದಾರ್ಯ ಮಠಕ್ಕೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

**ಶ್ರೀ ಎಸ್.ಆರ್. ಪಾಟೀಲ್:–** ಒಳ್ಳೆಯ ಕೆಲಸ ಮಾಡಿದ್ದೀರಿ. ಧನ್ಯವಾದಗಳು.

**ಸಭಾಪತಿಯವರು:–** ಶ್ರೀಮತಿ ಮೋಟಮ್ಮನವರೇ, ನಿಮಗೆ ಮಾತನಾಡಲು ಹತ್ತು ನಿಮಿಷಗಳ ಕಾಲಾವಕಾಶವನ್ನು ಕೊಟ್ಟಿದ್ದೆ. ಆದರೆ ನೀವು ಇಪ್ಪತ್ತೆರಡು ನಿಮಿಷ ಮಾತನಾಡಿದ್ದೀರಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಶ್ರೀಮತಿ ಮೋಟಮ್ಮನವರು ಮಾತನಾಡುವಂತಹ ಸಮಯದಲ್ಲಿ ಬಹಳ ಜನ ಸದಸ್ಯರು interfere ಮಾಡಿದ್ದಾರೆ. ಅದರಲ್ಲೂ ಭಾರತೀಶೆಟ್ಟಿ ಮತ್ತು ಡಾ||ಲೀಲಾರವರು.

**ಸಭಾಪತಿಯವರು:–** ನನ್ನ ಭಾವನೆಗಳನ್ನು ತಾವು ಗೌರವಿಸಬೇಕು ಎಂದು ಅನ್ನಿಸುತ್ತಿದೆ. ನಿನ್ನೆ ದಿವಸ ಶ್ರೀಮತಿ ಮೋಟಮ್ಮನವರು ಮಾತನಾಡಬೇಕಾಗಿತ್ತು. ಅವರು ನನಗೆ ನಾಳೆ ಬೆಳಿಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಸಣ್ಣದೊಂದು ಪತ್ರವನ್ನು ಬರೆದು ನನಗೆ ಕಳಿಸಿದ್ದರು. ಹಾಗಾಗಿ ಕಾಂಗ್ರೆಸ್ ಪಕ್ಷದವರ ಪೂರ್ಣ quota ಮುಗಿದಿದ್ದರೂ ಸಹ ನಾನು ಅವರ ಹಿರಿತನಕ್ಕೆ ಮತ್ತು ನನ್ನ ಅವರ ಸ್ನೇಹಕ್ಕೆ ಕಟ್ಟುಬಿದ್ದು ಅವರು ಮಾತನಾಡಲು ಅವಕಾಶ ಕೊಟ್ಟೆ. ಅವಕಾಶ ಕೊಡುವಾಗಲೇ ನಿಮಗೆ ಮಾತನಾಡಲು ಎಂಟರಿಂದ ಹತ್ತು ನಿಮಿಷಗಳು ಮಾತ್ರ ಕಾಲಾವಕಾಶ ನೀಡಲಾಗುತ್ತದೆ ಎಂದು ತಿಳಿಸಿದ್ದೆ. ಆದರೆ ಈಗ ಇಪ್ಪತ್ತೆರಡು ನಿಮಿಷ ಕಾಲಾವಕಾಶವನ್ನು ತೆಗೆದುಕೊಂಡಿದ್ದರೂ ಸಹ ಇನ್ನು ಮುಗಿಸುವುದಿಲ್ಲ ಎಂದರೆ ನಾನೇನು ಮಾಡಲಿ?

**ಶ್ರೀಮತಿ ಮೋಟಮ್ಮ:–** ಇವರಿಗೆಲ್ಲರಿಗೂ ಮಧ್ಯದಲ್ಲಿ ಮಾತನಾಡಬಾರದು ಎಂದು ಹೇಳಿ. ನಾನು ಮಾತನಾಡುತ್ತೇನೆ.

**ಸಭಾಪತಿಯವರು:–** ಹೋಗಲಿ ಇನ್ನು ಎಷ್ಟು ಸಮಯ ಮಾತನಾಡುತ್ತೀರೆಂದು ಅದನ್ನಾದರು ಹೇಳಬೇಕಲ್ಲವೆ? ಇನ್ನು ಅರ್ಧ ಗಂಟೆ ಮಾತನಾಡುತ್ತೀರೋ, ಒಂದು ಗಂಟೆ ಮಾತನಾಡುತ್ತೀರೋ ಎನ್ನುವುದನ್ನು ತಿಳಸಬೇಕಲ್ಲವೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಇನ್ನು ಅರ್ಧಗಂಟೆ ಕಾಲಾವಕಾಶವನ್ನು ಕೊಟ್ಟರೆ ಅಷ್ಟರಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಆದರೆ ಮಧ್ಯದಲ್ಲಿ ಯಾರೂ interfere ಆಗಬಾರದೆಂದು ಮಾನ್ಯ ಸದಸ್ಯರಿಗೆ ತಿಳಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಹಾಗಾದರೆ ಇನ್ನು ಎಷ್ಟು ಸಮಯ ಮಾತನಾಡುತ್ತಿರಿ

**ಶ್ರೀಮತಿ ಮೋಟಮ್ಮ:–** ಇನ್ನು ಇಪ್ಪತ್ತೈದು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಅಷ್ಟೊಂದು ಸಮಯ ಕೊಡುವುದಕ್ಕೆ ಆಗುವುದಿಲ್ಲ. ನೋಡಿ ನಾನು ನನ್ನ ಕಷ್ಟವನ್ನು ಹೇಳುತ್ತೇನೆ ಕೇಳಿ. ನೀವು ಇನ್ನು 25 ನಿಮಿಷ ಮಾತನಾಡುತ್ತೇನೆಂದು ಕಾಲಾವಕಾಶ ಕೋರಿದ್ದಿರಿ. ನಾನು time allot ಮಾಡಿದ್ದೇನೆ. ಈಗ ನೀವು 22 ನಿಮಿಷ ಮಾತನಾಡಿದ್ದೀರಿ. ಹಾಗಾಗಿ ಇನ್ನು ಮೂರು ನಿಮಿಷದೊಳಗೆ ನಿಮ್ಮ ಮಾತನ್ನು ಮುಗಿಸಬೇಕಾಗುತ್ತದೆ. ಯಾರು ಎಷ್ಟು ಸಮಯ ಕೇಳುತ್ತಾರೋ ಅಷ್ಟು ಸಮಯವನ್ನು ಎಲ್ಲರಿಗೂ ಕೊಡುವುದಕ್ಕೆ ಖಂಡಿತವಾಗಿಯೂ ಅಷ್ಟೊಂದು ಸಮಯ ಇಲ್ಲ, ಇದ್ದಿದ್ದರೆ ಖಂಡಿತವಾಗಿ ಕೊಡುತ್ತಿದ್ದೆ. ಅಥವಾ ನಿನ್ನೆ ದಿವಸ ಮಾತನಾಡಿದ್ದರೆ ನೀವು ಕೇಳುವಷ್ಟು ಕೊಡಬಹುದಾಗಿತ್ತು. ನಿನ್ನೆ ದಿವಸ ಮಾನ್ಯ ದಯಾನಂದ್‌ರವರಿಗೆ 45 ನಿಮಿಷ ಕಾಲಾವಕಾಶವನ್ನು ಕೊಟ್ಟೆ. ಹಾಗಾಗಿ ನೀವು ನಿನ್ನೆ ದಿವಸ ಮಾತನಾಡಿದ್ದರೆ ನಿಮಗೂ ಸಹ ಅವಕಾಶ ಕೊಡುತ್ತಿದ್ದೆ. ಆದರೆ ಈಗ ನನ್ನ ಬಳಿ ಸಮಯ ಇಲ್ಲ. ಅದಕ್ಕೆ ಕಾರಣವನ್ನೂ ಸಹ ತಿಳಿಸುತ್ತೇನೆ. ಮಾನ್ಯ ವಿಧಾನ ಸಭೆಯ ಗೌರವಾನ್ವಿತ ಅಧ್ಯಕ್ಷರಾದಂತಹ ಶ್ರೀ ಕೆ.ಬಿ.ಬೋಪಯ್ಯನವರು ನಮ್ಮೆಲ್ಲರನ್ನೂ ಒಂದೂವರೆ ಗಂಟೆಗೆ ಊಟಕ್ಕೆ ಆಹ್ವಾನ ನೀಡಿದ್ದಾರೆ. ಹಾಗಾಗಿ ನಾನು ಕನಿಷ್ಠಪಕ್ಷ ಎರಡು ಗಂಟೆಗಾದರು ಸದನವನ್ನು ಮುಂದೂಡದಿದ್ದರೆ ಅವರಿಗೆ ನಾನು ಗೌರವ ಕೊಟ್ಟಂತೆ ಆಗುವುದಿಲ್ಲ. ಆದುದರಿಂದ ಇನ್ನು ಎರಡು ನಿಮಿಷದಲ್ಲಿ ಮುಗಿಸಿದರೆ ಮಾನ್ಯ ಸಿದ್ದರಾಮಣ್ಣನವರು ಎಂಟು ನಿಮಿಷ ಮಾತನಾಡಿದರೆ ಅಲ್ಲಿಗೆ ಮುಗಿಸುತ್ತೇನೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಎರಡು ನಿಮಿಷದಲ್ಲಿ ಮುಗಿಸುವುದಕ್ಕೆ ಆಗುವುದಿಲ್ಲ. ನೀವು ಕುಳಿತುಕೊಳ್ಳಿ ಎಂದು ಹೇಳಿದರೆ ಕುಳಿತುಕೊಳ್ಳುತ್ತೇನೆ.

**ಸಭಾಪತಿಯವರು:–** ಹಾಗಾದರೆ ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸಿದ್ದರಾಮಣ್ಣನವರು ಮಾತನಾಡುತ್ತಾರೆ.

**ಶ್ರೀಮತಿ ಮೋಟಮ್ಮ:–** ಮಧ್ಯದಲ್ಲಿ ಇಷ್ಟೊಂದು ಜನರು interfere ಆದರೆ ನಾನೇನು ಮಾಡಲಿ.

**ಸಭಾಪತಿಯವರು:–** ಅದಕ್ಕೆ ನಾನೇನು ಮಾಡುವುದಕ್ಕೂ ಆಗುವುದಿಲ್ಲ. ಏಕೆಂದರೆ ನನ್ನ ಬಳಿ ಸಮಯವಿಲ್ಲ. ನಾನೇನು ಮಾಡಲಿ. ನೀವು ಎರಡು, ಮೂರು ನಿಮಿಷದಲ್ಲಿ conclude ಮಾಡುವುದಾದರೆ ಮಾಡಿ. ಇಲ್ಲವೆಂದರೆ ಮಾನ್ಯ ಸಿದ್ದರಾಮಣ್ಣನವರು ಮಾತನಾಡುತ್ತಾರೆ. ಅವರೂ ಸಹ ಕೇವಲ ಎಂಟು ನಿಮಿಷ ಮಾತ್ರ ಮಾತನಾಡಬೇಕು.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಕೃಷಿ ಆಯವ್ಯಯವನ್ನು ಪ್ರತ್ಯೇಕವಾಗಿ ಮಂಡನೆ ಮಾಡಿದರು. ಅದರಿಂದ ಏನು ಪ್ರಯೋಜನ ಆಗಿದೆ. ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. 1,400 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬರಗಾಲ ಮತ್ತು ಜಲಪ್ರಳಯವನ್ನು ಸರಿಯಾಗಿ ನಿಭಾಯಿಸುವುದರಲ್ಲಿ ಬಹಳ ಹಿಂದೆ ಬಿದ್ದು ಇವತ್ತು ಎಷ್ಟೋ ಜನ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಕಾರಣವಾಯಿತು. ಮುಖ್ಯವಾಗಿ ಹೇಳಬೇಕೆಂದರೆ ಆಡಳಿತದ ವ್ಯವಸ್ಥೆಯ ಬಗ್ಗೆ. ಆಡಳಿತ ವ್ಯವಸ್ಥೆ ಅಂತು ಕುಸಿದು ಕುಲಗೆಟ್ಟು ಹೋಗಿದೆ. ಇದಕ್ಕೆ ಕಾರಣವೇನೆಂದರೆ ಜಾತಿ ವ್ಯಾಮೋಹ. ಈ ಜಾತಿ ವ್ಯಾಮೋಹದಿಂದ ಅವರವರ ಜಾತಿಗೆ ಬೇಕಾದ ಅಧಿಕಾರಿಗಳನ್ನು ಕೆಲವೊಂದು ಇಲಾಖೆಗೆ ಮುಖ್ಯಸ್ಥರನ್ನಾಗಿ ಮಾಡಿಕೊಳ್ಳುವುದರ ಜೊತೆಗೆ ನಿಜವಾಗಿ ಜನಸಾಮಾನ್ಯರ ಕಷ್ಟಕಾರ್ಪಣ್ಯಗಳನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವನ್ನೇ ಕೊಡಲಿಲ್ಲ. ಸರ್ಕಾರ ಮಾಡಿದಂತಹ 'ನೆಮ್ಮದಿ ಕೇಂದ್ರ' ಏನಾಯಿತು? ಅವರು ಏಕೆ ಕೆಲಸ ಮಾಡಲಿಲ್ಲ? 'ಸಕಾಲ' ಏನಾಯಿತು ಅವರು ಏಕೆ ಕೆಲಸ ಮಾಡಲಿಲ್ಲ? ಈಗ ತಂದಿರುವಂತಹ "Atalji Janasnehi Kendra" ನಿಮ್ಮ ಕೇಂದ್ರವೆ ಕೆಟ್ಟು ಕುಲಗೆಟ್ಟು ಹೋದಾಗ ಈ ಕೇಂದ್ರಗಳು ಏನು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಇದರ ಬಗ್ಗೆ ಯೋಚನೆ ಮಾಡಬೇಕಲ್ಲವೆ? ಇನ್ನೊಂದು ಮುಖ್ಯವಾದ ವಿಷಯವೇನೆಂದರೆ, ಅಧಿಕಾರಿಗಳನ್ನು ಮೂರು ತಿಂಗಳಿಗೆ, ಆರು ತಿಂಗಳಿಗೆ ವರ್ಗಾವಣೆ ಮಾಡುತ್ತಿರುವುದರಿಂದ ಅರ್ಧ ಭಾಗದಷ್ಟು ಆಡಳಿತದಲ್ಲಿ ಬಿಗಿ ತಪ್ಪಿದೆ. ನಮ್ಮ ಚಿಕ್ಕಮಗಳೂರಿಗೆ ಇತ್ತೀಚೆಗೆ ಶ್ರೀ ಆಂಜನಮೂರ್ತಿ ಎಂಬ ಒಬ್ಬ D.C., ಬಂದರು. ಅವರು ವಿನಾಃ ಕಾರಣ

ಮೂರೇ ತಿಂಗಳಿಗೆ ಅವರನ್ನು ಅಲ್ಲಿಂದ ವರ್ಗಾವಣೆ ಮಾಡಿದರು. ಈ ರೀತಿ ಮಾಡುವುದರಲ್ಲಿ ಏನರ್ಥವಿದೆ? ಆದರೆ ಚಿಕ್ಕಮಗಳೂರನಲ್ಲಿರುವಂತಹ ಒಬ್ಬ ತಹಶೀಲ್ದಾರರು ಐದು ವರ್ಷದಿಂದ ಇದ್ದಾರೆ. ಆದರೆ D.C., ಬಂದು ಮೂರು ತಿಂಗಳು ಸಹ ಕಳೆದಿಲ್ಲ, ಆದರೂ ಅವರನ್ನು ವರ್ಗಾವಣೆ ಮಾಡಿದ್ದಾರೆ. ಇದಕ್ಕೆ ಕಾರಣವೇನು ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕಲ್ಲವೆ? ಈ ರೀತಿ ಆದರೆ ಆಡಳಿತ ಬಿಗಿಯಾಗಿ ಇರುತ್ತದೆಯೇ? ಇದು ಬಹಳ ಮುಖ್ಯ. ಇನ್ನು ಶಿಕ್ಷಣ ಕ್ಷೇತ್ರದ ಬಗ್ಗೆ ಹೇಳುವುದಾದರೆ.,

**ಸಭಾಪತಿಯವರು:–** ನೀವು ಭಾಷಣ ಮುಗಿಸುತ್ತೇನೆ ಎಂದು ಹೇಳಿ ಬೇರೆ ವಿಷಯದ ಪ್ರಸ್ತಾಪಕ್ಕೆ ಹೋಗುತ್ತಿದ್ದೀರಿ, ನಾನು ಮಧ್ಯೆದಲ್ಲಿ ಬಾಯಿ ಹಾಕಿದರೆ ನಿಮಗೆ ಬೇಸರ ಆಗುತ್ತದೆ. ನಿಮಗೆ ಬೇಸರ ಪಡಿಸಲು ನನಗೆ ಇಷ್ಟವಿಲ್ಲ. Conclude ಮಾಡುತ್ತೇನೆ ಎಂದು ಹೊಸ ವಿಷಯಕ್ಕೆ ನೀವು ಹೋದರೆ ಸಂಜೆ ಆಗುತ್ತದೆ. ಬೇಗ ಮುಗಿಸಿ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಗಳೇ, ಶಿಕ್ಷಣ ಕ್ಷೇತ್ರದಲ್ಲಿ ....

**ಸಭಾಪತಿಯವರು:–** ನಿನ್ನೆಯ ದಿವಸ ದಯಾನಂದನವರು 45 ನಿಮಿಷಗಳಷ್ಟು ಕಾಲ ಮಾತನಾಡಲು ಅವಕಾಶ ಕೇಳಿದರು, ನಾನು ಬರೆದಿಟ್ಟುಕೊಂಡಿದ್ದೇನೆ. 45 ನಿಮಿಷಕ್ಕೆ ಇನ್ನೂ ಹತ್ತು ಸೆಕೆಂಡ್ ಇರುವಾಗಲೇ ಅವರ ಮಾತುಗಳನ್ನು ಮುಗಿಸಿದರು. ಅವರು ನಿಮಿಗಿಂತಲೂ junior, ನೀವು ತುಂಬಾ senior.

**ಶ್ರೀಮತಿ ಮೋಟಮ್ಮ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, seniors ತುಂಬಾ ಮಾತನಾಡಬಾರದು ಎನ್ನುವುದು ನಿಮ್ಮ ಲೆಕ್ಕವೇ?

**ಸಭಾಪತಿಯವರು:–** ಈಗ ಸಮಯ ಇಲ್ಲ, ಬೇಗ ಮುಗಿಸಿ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಗಳೇ, ಈ ಸರ್ಕಾರ ಬಂದ ಮೇಲೆ ಶಿಕ್ಷಣ ಕ್ಷೇತ್ರ ಸಂಪೂರ್ಣ ಖಾಸಗಿಕರಣ ಆಗುವುದರ ಜೊತೆಯಲ್ಲಿ ಕೇಸರಿಕರಣ ಕೂಡ ಆಗಿದೆ. ಎಷ್ಟರಮಟ್ಟಿಗೆ ಕೇಸರಿಕರಣ ಮಾಡಲು ಪ್ರಯತ್ನ

ಮಾಡಿದರೂ ಎಂದರೆ ಪುಣ್ಯಕೋಟಿಯ ಕಥೆ. ಅದು ಸತ್ಯವೇ  ನಮ್ಮ ತಾಯಿ ಬಿಟ್ಟರೆ, ಹುಲಿ ಗೋವಿನ ಮಾಂಸವನ್ನು ತಿನ್ನದೇ ಪ್ರಾಣ ಬಿಟ್ಟಿತು ಎಂದು ಮಕ್ಕಳಿಗೆ ಪಾಠ ಹೇಳುವುದಾದರೆ ಇಲ್ಲಿ ಸತ್ಯವನ್ನು ಮರೆ ಮಾಚಿದಂತೆ ಅಲ್ಲವೇ? ಈ ರೀತಿ ಶಿಕ್ಷಣದಲ್ಲೂ ಕೂಡ ಒಂದು ರೀತಿಯ ಬದಲಾವಣೆ ಖಾಸಗಿಕರಣ ಮತ್ತು ಕೇಸರಿಕರಣದಿಂದ ಶಿಕ್ಷಣ ಕ್ಷೇತ್ರವನ್ನು ಕುಲಗೆಡಿಸಿದರು.

ಇನ್ನು ಕೊನೆಯದಾಗಿ ಸಮಾಜಕಲ್ಯಾಣ ಇಲಾಖೆಯ ಬಗ್ಗೆ ಹೇಳುವುದಾದರೆ ನಮ್ಮ ಮಾನ್ಯ ಪುಟ್ಟಸ್ವಾಮಿಯವರು ಹೇಳಿದ ಹಾಗೆ ಕೇವಲ ಅವರಿಗೆ ಬಜೆಟ್ ತೋರಿಸಿ ಪುಸ್ತಕದಲ್ಲಿ 42% ಖರ್ಚು ಮಾಡಿದ್ದೇವೆ ಎಂದರೆ ಏನರ್ಥ? ಇನ್ನೂ ಈ ದೇಶದಲ್ಲಿ ನಮ್ಮ ರಾಜ್ಯದಲ್ಲಿ untouchability practice ಜೀವಂತವಾಗಿದ್ದು ಇನ್ನೂ ನಡೆಯುತ್ತಲೇ ಇದೆ.

**ಸಭಾಪತಿಯವರು:–** ಮೋಟಮ್ಮನವರೆ, ದಯಮಾಡಿ ಕ್ಷಮಿಸಬೇಕು, ತಮ್ಮ ಅವಧಿ ಮುಗಿದಿದೆ. ಇನ್ನು ನಿಮ್ಮ ಬಳಿ ಹತ್ತು ಹೊಸ ವಿಚಾರಗಳಿವೆ, ನೀವು ಈಗಲೇ ಮುಗಿಸುವುದಿಲ್ಲ. ಇದೊಂದು ಇಲಾಖೆ ಮೇಲೆ ಮಾತನಾಡಿದರೆ ಅರ್ಧಗಂಟೆ ಆಗುತ್ತದೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಗಳೇ, ಸಮಾಜ ಕಲ್ಯಾಣ ಇಲಾಖೆಯ ಎಲ್ಲಾ ವಿಚಾರಗಳನ್ನು ನಾನಿಲ್ಲಿ ಹೇಳುವುದಿಲ್ಲ, ಕೇವಲ ಮುಖ್ಯ ಅಂಶಗಳ ಬಗ್ಗೆ ಮಾತ್ರ ಮಾತನಾಡುತ್ತೇನೆ. ಶೇಕಡ 42% ಮಾತ್ರ ಖರ್ಚು ಮಾಡಿದಲ್ಲಿ ಅವರ ಅಭಿವೃದ್ಧಿ ಹೇಗೆ ಆಗುತ್ತದೆ. ಈ untouchability practice ಎನ್ನುವುದು ಎಷ್ಟು ಜೀವಂತವಾಗಿದೆ ಎಂದರೆ, ಮೊನ್ನೆಯ ದಿವಸ ಅಂಗನವಾಡಿ ಕೇಂದ್ರದಲ್ಲಿ ಪರಿಶಿಷ್ಟರು ಅಡಿಗೆ ಮಾಡಿದ ಕಾರಣ ಅಂಗನವಾಡಿಗೆ ಬರುವ ಮಕ್ಕಳು ಅದನ್ನು ಊಟ ಮಾಡಲು ಬರುವುದಿಲ್ಲ. ಹೀಗಾದಲ್ಲಿ ಸಮಾಜ ಕಲ್ಯಾಣ ಇಲಾಖೆ ಈ ಜನರಿಗೆ ಯಾವ ರೀತಿಯಲ್ಲಿ ಆತ್ಮವಿಶ್ವಾಸವನ್ನು ಮೂಡಿಸುತ್ತದೆ?

**ಸಭಾಪತಿಯವರು:–** ಹೌದು, ಇದು ಸರಿಯಾದ ಪದ್ಧತಿಯಲ್ಲ. ಈ ವಿಷಯ ಇಲ್ಲಿಗೆ ಸಾಕು, ನಿಮ್ಮ ಭಾಷಣ ಮುಗಿಸಿ.

**ಶ್ರೀಮತಿ ಮೋಟಮ್ಮ:–** ಮುಂದಿನ ಸರ್ಕಾರದಲ್ಲಿ ಮುಖ್ಯಮಂತ್ರಿಗಳೇ ಸಮಾಜ ಕಲ್ಯಾಣ ಇಲಾಖೆಯನ್ನು ಇಟ್ಟುಕೊಳ್ಳಬೇಕು. ಆಗ ಮಾತ್ರ ಆ ಖಾತೆಗೆ ಮರ್ಯಾದೆ ಸಿಗುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಅವಕಾಶ ಕೊಟ್ಟ ತಮಗೆ ವಂದಿಸುತ್ತೇನೆ, ನನಗೆ ಮಾತನಾಡಿದ ಹಾಗೆ ಆಗಲಿಲ್ಲ.

**ಸಭಾಪತಿಯವರು:–** ನೀವು 30 ನಿಮಿಗಳ ಕಾಲ ಆಯವ್ಯಯದ ಮೇಲೆ ಮಾತನಾಡಿದ್ದೀರಿ.

**ಶ್ರೀ ಆರ್.ಕೆ. ಸಿದ್ದರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಸನ್ಮಾನ್ಯ ಮುಂಯಮಂತ್ರಿಗಳಿಗೆ ಮತ್ತು ಆರ್ಥಿಕ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಕೇವಲ 2013–14ನೇ ಸಾಲಿನ ಆಯವ್ಯಯವನ್ನು ಮಂಡನೆ ಮಾಡಿಲ್ಲ. ಇದರ ಜೊತೆಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಸರ್ಕಾರ ನಡೆದುಬಂದ ದಾರಿಯನ್ನು ಕೂಡ ಅಭಿವೃದ್ಧಿ ದೃಷ್ಟಿಯಿಂದ ಹೇಳಿದ್ದಾರೆ. ನಾನು ಶಿವಮೊಗ್ಗ ಜಿಲ್ಲೆಯವನಾಗಿ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಲೇಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ಇವತ್ತು ಅಭಿವೃದ್ಧಿ ಆಗಿದೆ. ಆದರೆ ಶಿವಮೊಗ್ಗ ಜಿಲ್ಲೆಯ ದೃಷ್ಟಿಯಿಂದ ಹೇಳುವುದಾದರೆ ಕಳೆದ 60 ವರ್ಷಗಳಲ್ಲಿ ಆಗದೇ ಇದ್ದ ಅಭಿವೃದ್ಧಿಯನ್ನು ಶಿವಮೊಗ್ಗ ಜಿಲ್ಲೆ ಈ ಅವಧಿಯಲ್ಲಿ ಕಂಡಿದೆ. ಅದಕ್ಕೆ ಈ ಹಿಂದಿನ ಮುಖ್ಯಮಂತ್ರಿಗಳು ಕೂಡ ಇದಕ್ಕೆ ಸಹಕಾರವನ್ನು ನೀಡಿದ್ದಾರೆ. ಅವರಿಗೂ ಸಹ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಈ ಆಯವ್ಯಯದ ಮೇಲೆ ಭಾಷಣ ಮಾಡತಕ್ಕ ಸಂದರ್ಭದಲ್ಲಿ ಅನೇಕ ವಿಚಾರಗಳ ಪ್ರಸ್ತಾಪವನ್ನು ಮಾಡಿದ್ದಾರೆ. ಆದರೆ ನಾನು ಎಲ್ಲಾ ವಿಚಾರಗಳ ಪ್ರಸ್ತಾಪಕ್ಕೆ ಹೋಗುವುದಿಲ್ಲ. ಆದರೆ ಕೆರೆಗಳ ಬಗ್ಗೆ ನೀರಿನ ಬಗ್ಗೆ ಅನೇಕ ಚರ್ಚೆಯನ್ನು ನಾವು ಮಾಡಿದ್ದೇವೆ. ನಿನ್ನೆಯೂ ಕೂಡ ಕೆಳಮನೆಯಲ್ಲಿ ಮುಖ್ಯಮಂತ್ರಿಗಳು ಈ ವಿಚಾರವನ್ನು ಪ್ರಸ್ತಾಪಿಸಿರುವ ಹಿನ್ನೆಲೆಯಲ್ಲಿ ಅದರ ವಿವರಗಳಿಗೆ ನಾನು ಹೋಗುವುದಿಲ್ಲ. ಕೆರೆಗಳ ಅಭಿವೃದ್ಧಿ ದೃಷ್ಟಿಯಿಂದ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕೆರೆಗಳಿಗಾಗಿ 100 ಕೋಟಿ ರೂಪಾಯಿಗಳನ್ನು ವ್ಯಯ ಮಾಡುವ ಪ್ರಸ್ತಾಪವನ್ನು ಆಯವ್ಯಯದಲ್ಲಿ

ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟ ಹಾಗೆ ಕೂಡ ಒಂದು ವಿಚಾರವನ್ನು ಪ್ರಸ್ತಾಪಿಸಿದ್ದಾರೆ, ಕೇವಲ ಸರ್ಕಾರದ ಕಡೆಯಿಂದ ಮಾಡುವ ಕೆಲಸವಲ್ಲ, ಸಾಮೂಹಿಕವಾಗಿ ಸಮುದಾಯವನ್ನು ಕೂಡ ಇದರ ಜೊತೆಗೆ ಸೇರಿಸುವ ಅವಶ್ಯಕತೆ ಇದೆ ಎನ್ನುವ ಕಾರಣಕ್ಕೋಸ್ಕರ ಜಲಸಂವರ್ಧನಾ ಸಂಘಗಳು ಯಾವುದಿವೆ, ಅವುಳನ್ನು ಸಹ ಇದಕ್ಕೆ ಜೋಡಿಸುವ ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದಕೋಸ್ಕರ ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆ ರೀತಿಯಾಗಿ ಕೆರೆಗಳು ಉಳಿಯಬೇಕು ಎನ್ನುವುದಾದರೆ ಸಮುದಾಯಬದ್ಧ ಜಾಗೃತಿ ಉಂಟಾಗಬೇಕು, ಸಮುದಾಯಗಳ ಪಾತ್ರ ಹೆಚ್ಚಾಗಬೇಕು. ಆಗ ಮಾತ್ರ ಸಾಧ್ಯವಾಗುತ್ತದೆ. ಹಾಗಾಗಿ ಈ ಕೆಲಸ ಇನ್ನೊಂದಿಷ್ಟು ಹೆಚ್ಚು ಸಾಧ್ಯ ಆದರೆ, ಈ ಆಯವ್ಯಯದಲ್ಲಿ ಅವಕಾಶ ಆಗುವುದಾದರೆ, ಇನ್ನಷ್ಟು ಹಣವನ್ನು ವ್ಯಯ ಮಾಡುವುದು ಒಳ್ಳೆಯದು ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಕೃಷಿ ಬಜೆಟ್‌ನ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದಾರೆ. ಕೃಷಿಯಲ್ಲಿನ ಒಂದು ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಈ ಮೌಲ್ಯವರ್ಧಿತ ತೆರಿಗೆಯಲ್ಲಿ ಅಡಿಗೆ ಸುಲಿಯುವ ಯಂತ್ರದ ಮೇಲಿನ VAT ನ್ನು ಶೇ.14.5 ರಿಂದ ಶೇ.5.5 ಕ್ಕೆ ಇಳಿಸಲಾಗುವುದು ಎನ್ನುವ ಪ್ರಸ್ತಾಪವನ್ನು ಮಾಡಿದ್ದಾರೆ. ಇದು 1–4–2013ರ ನಂತರ ಜಾರಿಗೆ ಬರುತ್ತದೆ, ನನ್ನ ಮನವಿ ಏನೆಂದರೆ ಇವತ್ತು ಯಾಂತ್ರೀಕರಣವನ್ನು ಮಾಡದಿದ್ದರೆ ಮಲೆನಾಡು ಪ್ರದೇಶದಲ್ಲಿ ಅಡಿಕೆ ಕೃಷಿಯನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಹಾಗಾಗಿ ಈಗಾಗಲೇ ನಾವು ಅಡಿಕೆ ಸುಲಿಯುವ ಯಂತ್ರದ ಬಳಕೆಯನ್ನು ಮಾಡುತ್ತಿದ್ದೇವೆ. ಆದ್ದರಿಂದ ಇದನ್ನು ಬಹಳ ಹಿಂದಿನಿಂದಲೂ ಅಂದರೆ 2002ರಿಂದಲೂ retrospective effect ಕೊಡುವ ಅವಶ್ಯಕತೆ ಇದೆ. ದಯಮಾಡಿ ಇದಕ್ಕೆ retrospective effect ನೀಡಬೇಕೆಂದು ನೀಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ನಮ್ಮ ಶಿವಮೊಗ್ಗದಲ್ಲಿ ಸಾಕಷ್ಟು ಅಬಿವೃದ್ಧಿಯಾಗಿದೆ ಎನ್ನುವ ಮಾತನ್ನು ನಾನಾಗಲೇ ಹೇಳಿದೆ, ಅದಕ್ಕೆ ಗರಿ ಕಟ್ಟಿದ ಹಾಗೆ ಇರುವುದು ನಮ್ಮ

ಶಿವಮೊಗ್ಗದ ಮೆಡಿಕಲ್ ಕಾಲೇಜು, ಅದಕ್ಕೆ ಬೇಕಾಗಿರುವ ಹಣವೂ ಸ್ವಲ್ಪ ಇದೆ. ಅದರಲ್ಲಿ ಕ್ಯಾನ್ಸರ್ ಚಿಕಿತ್ಸೆಗೆ ಬೇಕಾಗುವ ಉಪಕರಣಗಳಿಗಾಗಿ 12 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಹಾಗೆಯೇ ಆ ಮೆಡಿಕಲ್ ಕಾಲೇಜು ಸುಸಜ್ಜಿತ ಆಸ್ಪತ್ರೆ ಆಗಬೇಕಾದರೆ 35 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಅದನ್ನು ಕೂಡ ಈ ಆಯವ್ಯಯದಲ್ಲಿಯೇ ಒದಗಿಸುವ ವ್ಯವಸ್ಥೆಯನ್ನು ಮಾಡಬೇಕು.

ಇನ್ನು ನಮ್ಮ ಶಿವಮೊಗ್ಗದಲ್ಲಿ ತಾಲ್ಲೂಕುಗಳು ಸಹ ಬೇಕಾಗಿವೆ. ಹಾಗಾಗಿ ಶಿವಮೊಗ್ಗ ಗ್ರಾಮಾಂತರ ತಾಲ್ಲೂಕನ್ನು ಮತ್ತು ಶಿಕಾರಿಪುರದ ಶಿರಾಳಕೊಪ್ಪ ಕೂಡ ತಾಲ್ಲೂಕಿಗೆ ಯೋಗ್ಯವಾದ ಸ್ಥಳ, ಅದಕ್ಕೆ ಬೇಡಿಕೆ ಸಹ ಇದೆ. ವರದಿಗಳಲ್ಲೂ ಕೂಡ ಇದು ಪ್ರಸ್ತಾಪವಾಗಿದೆ. ಇದರ ಬಗ್ಗೆಯೂ ಕೂಡ ಗಮನ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೋರಲಾಗುವುದು.

ಇನ್ನು ಪಶುಸಂಗೋಪನೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಈಗಾಗಲೇ ಸರ್ಕಾರ ಹೈನುಗಾರಿಕೆಗೆ ಹೆಚ್ಚಿನ ಒತ್ತನ್ನು ನೀಡಲಾಗಿದೆ. ಹೈನುಗಾರಿಕೆ ಜೊತೆಗೆ ಕುರಿ ಮತ್ತು ಮೇಲೆ ಸಾಕಾಣಿಕೆಗೆ ಹೆಚ್ಚು ಒತ್ತನ್ನು ನೀಡಿದರೆ ಅನುಕೂಲ. ಇವತ್ತು ತಳಿ ಅಭಿವೃದ್ಧಿಗಾಗಿ 10 ಕೋಟಿ ರೂಪಾಯಿಗಳನ್ನು ಈ ಆಯವ್ಯಯದಲ್ಲಿ ಮೀಸಲೀಡಲಾಗಿದೆ. ಆದರೆ ಇನ್ನೂ ಹೆಚ್ಚಿನ ಅನುದಾನವನ್ನು ಕೊಟ್ಟು ರೈತರಿಗೆ ಅನುಕೂಲವನ್ನು ಮಾಡಿಕೊಡಬೇಕಾಗಿದೆ. ನಾವು ವಿದೇಶಿ ಪ್ರವಾಸಕ್ಕೆ ಹೋಗಿದಂತಹ ಸಂದರ್ಭದಲ್ಲಿ ಗಮನಿಸಿದ ಹಾಗೆ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ನಲ್ಲಿ ಹೈನುಗಾರಿಕೆಯ ಜೊತೆ ಜೊತೆಯಲ್ಲಿಯೇ ಕುರಿ ಮತು ಮೇಕೆಗಳ ಅಭಿವೃದ್ಧಿಗಾಗಿ ವಿಶೇಷ ಗಮನ ನೀಡಿದ್ದಾರೆ. ಅದು ಕೂಡ ನಮಗೆ ಮಾದರಿ ಎಂದು ನಾನು ಭಾವಿಸುತ್ತೇನೆ. ಈ ಮಾದರಿಯಲ್ಲಿಯೇ ನಮ್ಮ ರಾಜ್ಯದಲ್ಲೂ ಸಹ ಕುರಿ ಮತ್ತು ಮೇಕೆ ಸಾಕಾಣಿಕೆಗೆ ಹೆಚ್ಚಿನ ಗಮನವನ್ನು ನೀಡಬೇಕೆಂದು ಹೇಳಿ, ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಜನಪರವಾದ ಆಯವ್ಯಯವನ್ನು ಕೊಟ್ಟಿರತಕ್ಕ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದಿಸುತ್ತೇನೆ. ತಮ್ಮ ಅನುಮತಿಯ ಮೇರೆಗೆ ನಾನು ಎರಡು ವಿಚಾರಗಳನ್ನು ಮಾತ್ರ ಪ್ರಸ್ತಾಪಿಸಬಯಸುತ್ತೇನೆ. ಕೃಷ್ಣಾ ಕೊಳ್ಳದ 9 ಯೋಜನೆಯಲ್ಲಿ ಕೊಪ್ಪಳ ಏತಾವರಿ ನೀರನ್ನು ಸಹ ಶಂಕುಸ್ಥಾಪನೆಯ ಮೂಲಕ ಆ ಕೆಲಸಕಾರ್ಯಗಳನ್ನು ಪ್ರಾರಂಭಿಸಲು ಅನುವು ಮಾಡಿಕೊಟ್ಟ ಮುಖ್ಯಮಂತ್ರಿಗಳು ಹಾಗೂ ಸಚಿವರಾದ ಬೊಮ್ಮಾಯಿಯವರಿಗೂ ಸಹ ಆ ಭಾಗದ ಪ್ರತಿನಿಧಿಯಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಈ ಪ್ರಾದೇಶಿಕಾ ಸಮತೋಲನವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಹಿಂದರೆ ಜೆ.ಹೆಚ್. ಪಟೇಲ್‌ರವರು ಹೊಸ ಜಿಲ್ಲೆಗಳನ್ನು ಪ್ರಾರಂಭಿಸಿ, ಆಡಳಿತ ಎಲ್ಲಾರಿಗೂ ಅನುಕೂಲವಾಗುವಂತೆ ಮಾಡಿದ ಮುಖ್ಯಮಂತ್ರಿಗಳ ಜೊತೆಗೆ ನಮ್ಮ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್‌ರವರು ಈ ರಾಜ್ಯದಲ್ಲಿ ಹೊಸದಾಗಿ 43 ತಾಲ್ಲೂಕುಗಳನ್ನು ಮಾಡುವುದರ ಜೊತೆಗೆ ಗ್ರಾಮೀಣ ಜನತೆಗೆ ಇನ್ನೂ ಹೆಚ್ಚಿನ ಅನುಕೂಲವನ್ನು ಮಾಡಿಕೊಟ್ಟಿರುವುದನ್ನು ನಾನು ಅತ್ಯಂತ ಸಂತೋಷದಿಂದ ಅಭಿನಂದಿಸುತ್ತೇನೆ. ಕೊಪ್ಪಳ ಜಿಲ್ಲೆಯಲ್ಲಿ ಈಗಾಗಲೇ ಮೂರು ತಾಲ್ಲೂಕುಗಳನ್ನು ಮಾಡಿ ಕೊಟ್ಟಿರುವವರು **ಎಲುಗಲಗುಂಡ ಮತ್ತು ಮಂಗಳೂರನ್ನು** ತಾಲ್ಲೂಕು ಮಾಡಿದಲ್ಲಿ ಪ್ರಾದೇಶಿಕ ಅಸಮತೋಲನವನ್ನು ಕಡಿಮೆಯಾಗುತ್ತದೆ ಎಂದು ಭಿನ್ನವಿಸಿಕೊಳ್ಳುತ್ತೇನೆ.

ಈಗಾಗಲೇ ಸರ್ಕಾರ ಮುಂಗಾರಿನ ಹಂಗಾಮಿಗಾಗಿ ದಾಪುಗಾಲನ್ನು ಹಾಕಿರತಕ್ಕ ಸಂದರ್ಭದಲ್ಲಿ ಸಾಕಷ್ಟು ಆರ್ಥಿಕ ಸಹಾಯವನ್ನು ನೀಡುವುದರ ಮೂಲಕ ಬೇಸಿಗೆಯಲ್ಲಿ ಸುಮಾರು 12 ಲಕ್ಷ ಟನ್ ಗೊಬ್ಬರನ್ನು ಮುಂಗಡವಾಗಿ ಕಾಯ್ದಿರಿಸಲಾಗಿದೆ. ಅಲ್ಲದೆ 1026 ಕೋಟಿ ರೂ.ಗಳನ್ನು ಮಹಾಮಂಡಳದ ಮೂಲಕ ಆರ್ಥಿಕ ಸಹಾಯವನ್ನು ನೀಡಿ ರೈತರಪರ ಇರುವ ಕಾಳಜಿಯನ್ನು ಎತ್ತಿ ತೋರಿಸಿರುವುದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಎಲ್ಲ ಮಂತ್ರಿಗಳನ್ನು ಅಭಿನಂದಿಸಬೇಕಾಗುತ್ತದೆ. ಒಟ್ಟಾರೆ ಗ್ರಾಮೀಣ ಭಾಗದ ಜನರಿಗೆ ಆಯವ್ಯಯದಲ್ಲಿ ಸಾಕಷ್ಟು ಅನುಕೂಲ

ಮಾಡಿಕೊಟ್ಟಂತಹ ಬಜೆಟ್ ಇದು ಎಂದು ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

(2 ಘಂಟೆ)

**ಪ್ರೊ: ಎಂ.ಆರ್. ದೊರೆಸ್ವಾಮಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಗಳೆ, ಮೊದಲನೆಯದಾಗಿ ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತಾ, ಎರಡು ವಿಷಯಗಳನ್ನು ಪ್ರಸ್ತಾಪಿಸಲು ಇಷ್ಟಪಡುತ್ತೇನೆ. ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿತ್ತು, ಆದರೆ ಸಮಯಾವಕಾಶವಿಲ್ಲ ಎಮದು ತಾವು ಹೇಳಿದ್ದೀರಿ. ಮೊದಲನೆಯದಾಗಿ, ಈ ಆಯವ್ಯಯದಲ್ಲಿ ಶಿಕ್ಷಣಕ್ಕೆ ಪ್ರಾಧಾನ್ಯತೆ ಕೊಟ್ಟಿರುವುದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಅಭಿನಂದಿಸುತ್ತೇನೆ. ಈಗ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭ ಮಾಡಲು ಒಂದು ಅಡಚಣೆಯಾಗಿದೆ. ಏನು ಎಂದರೆ, ನಾವು ನೇರವಾಗಿ ಭೂಮಿಯನ್ನು ಕೊಂಡುಕೊಳ್ಳುವಂತಹ ಅವಕಾಶವಿಲ್ಲ. ಶಿಕ್ಷಣ ಸಂಸ್ಥೆಗಾಗಿ ಯಾವ ಭೂಮಿಯನ್ನು ಕೊಂಡುಕೊಳ್ಳಬೇಕೆಂದುಕೊಳ್ಳುತ್ತೇವೆ ಅದನ್ನು ನೇರವಾಗಿ ರೈತರಿಂದ ಅಥವಾ ಬೇರೆಯವರಿಂದ ಕೊಂಡುಕೊಳ್ಳಲು Karnataka Land Revenue Act ಪ್ರಕಾರ ಸಾಧ್ಯಯವಿಲ್ಲ. ನಾವು D.C.ಯವರಿಗೆ ಒಂದು application ಕೊಡಬೇಕಾಗುತ್ತದೆ. D.C. ಯವರು ಅದನ್ನು ತಹಸೀಲ್ದಾರರಿಗೆ refer ಮಾಡುತ್ತಾರೆ. ನಂತರ ಅದು Revenue Inspector ಗೆ ಹೋಗುತ್ತದೆ. ಕೊನೆಗೆ ಗ್ರಾಮ ಲೇಖ್ಯಾಧಿಕಾರಿಯವರಿಗೆ ಹೋಗುತ್ತದೆ. ಈ ಕೆಲಸ ಪೂರ್ತಿಯಾಗಬೇಕಾದರೆ ನಾವು ಸತತವಾಗಿ ಆ ಕಡತದ ಹಿಂದೆ ಓಡಾಡಿದರೆ ಕಡೆ ಪಕ್ಷ ಒಂದುವರೆ ವರ್ಷವಾದರೂ ಬೇಕಾಗುತ್ತದೆ. ನಂತರ ಆ ಭೂಮಿ ನಮಗೆ ಸಿಗುವ ಅವಕಾಶವಿದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುವುದು ಸೆಕ್ಷನ್ 109 ರ ನಿಬಂಧನೆ Karnataka Land Revenue Act ನಲ್ಲಿ ಏನು ಇದೆ, ಈ ನಿಬಂಧನೆಯನ್ನು ತಾವು ದಯಮಾಡಿ delete ಮಾಡಬೇಕು. Delete ಮಾಡುವುದರಿಂದ ತುಂಬಾ ಶಿಕ್ಷಣ ಸಂಸ್ಥೆಗಳಿಗೆ ಸಹಾಯ ಮಾಡಿದ ಹಾಗೆ ಆಗುತ್ತದೆ. ಎರಡನೆಯದಾಗಿ, 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಕರ್ನಾಟಕಕ್ಕೆ ಬರಬೇಕಾದಂತಹ I.I.T.

ಬರಲಿಲ್ಲ ನಮಗೆ. ಮಾನ್ಯ ಬೊಮ್ಮಾಯಿಯವರು ಕೇಂದ್ರ ಮಂತ್ರಿಗಳಾಗಿದ್ದ ಸಮಯದಲ್ಲಿ ಇದೆಲ್ಲವು ಸಿದ್ದವಾಗಿತ್ತು. ಇನ್ನೇನು ಬಂತು ಎನ್ನುವಷ್ಟರಲ್ಲಿ ಆ ಸರ್ಕಾರ ಆಗ ಬಿದ್ದು ಹೋಯಿತು. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಇದರ ಬಗ್ಗೆ ಮುತುರ್ವಜಿ ವಹಿಸಬೇಕು. ಇದು ಬೇರೆಯವರಿಂದ ಆಗುವ ಕೆಲಸವಲ್ಲ. ಮಾನ್ಯ ಪ್ರಧಾನ ಮಂತ್ರಿಗಳ ಮನವೊಲಿಸಬೇಕು. ಮಾನ್ಯ ಪ್ರಧಾನ ಮಂತ್ರಿಗಳಿಗೂ ಕರ್ನಾಟಕಕ್ಕೆ I.I.T. ಕೊಡಬೇಕೆಂದು ಮನಸ್ಸಿದೆ. ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಹೋದಾಗ ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ನೇರವಾಗಿ ಇದನ್ನು ಪ್ರಸ್ತಾಪ ಮಾಡಿದರೆ I.I.T. ಕರ್ನಾಟಕಕ್ಕೆ ಬರಲು ತುಂಬಾ ಸಹಾಯವಾಗುತ್ತದೆ. ಈ ವಿಚಾರದಲ್ಲಿ ನಾನು ಈಗಾಗಲೇ ಸಭೆಯಲ್ಲಿ ಒಂದು ನಿರ್ಣಯವನ್ನು ಮಂಡಿಸಿದ್ದೇನೆ. ಪ್ರಮುಖವಾದ ಎರಡು ಸಲಹೆಗಳನ್ನು ತಮ್ಮ ಮುಖಾಂತರ ಸರ್ಕಾರದ ಮುಂದೆ ಇಟ್ಟು, ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ದಯಾನಂದ:-** ಮಾನ್ಯ ಸಭಾಪತಿಗಳೆ, ಸೆಕ್ಷನ್ 109 ರ ನಿಬಂಧನೆಯನ್ನು ಬದಲಾವಣೆ ಮಾಡಿದರೆ ನಿಮ್ಮ ಸಮಸ್ಯೆ ಪರಿಹಾರವಾಗುವುದಿಲ್ಲ. Section 79A ಮತ್ತು Section 79B ಯನ್ನು ತೆಗೆದರೆ ಮಾತ್ರ ನಿಮ್ಮ ಸಮಸ್ಯೆ ಪರಿಹಾರವಾಗುತ್ತದೆ. ನಿಮ್ಮ ಗಮನಕ್ಕಾಗಿ ತಿಳಿಸುತ್ತಿದ್ದೇನೆ.

**ಶ್ರೀ ಶಿವರಾಜ ಸಜ್ಜನರ (ಸ್ಥಳಿಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಗಳೆ,** ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈ ವರ್ಷದ ಬಜೆಟ್‌ನಲ್ಲಿ 43 ತಾಲ್ಲೂಕುಗಳನ್ನು ಘೋಷಣೆ ಮಾಡಿದ್ದಾರೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಹಾವೇರಿ ಜಿಲ್ಲೆಯಲ್ಲಿ ಯಾವುದೇ ತಾಲ್ಲೂಕನ್ನು ಘೋಷಣೆ ಮಾಡದೆ ಇರುವುದು ಅತ್ಯಂತ ನೋವಿನ ಮತ್ತು ದುರ್ದೈವದ ಸಂಗತಿ. ಹಾವೇರಿ ಜಿಲ್ಲೆಯಲ್ಲಿ 5 ತಾಲ್ಲೂಕುಗಳಾಗುವಂತಹ ನಗರಗಳಿವೆ. ಅವುಗಳನ್ನು ತಾಲ್ಲೂಕುಗಳಾಗಿ ಘೋಷಣೆ ಮಾಡುವ ಅವಶ್ಯಕತೆ ಇದೆ ಎಂದು ನಮಗೆ ಅನ್ನಿಸುತ್ತದೆ.

ಹಾನಗಲ್ ತಾಲ್ಲೂಕಿನ ಅಕ್ಕಿ ಆಲೂರು ಇರಬಹುದು, ಹಿರೇಕೆರೂರ ತಾಲ್ಲೂಕಿನ ರೆಟ್ಟಿಹಳ್ಳಿ ಇರಬಹುದು, ಹಾವೇರಿ ತಾಲ್ಲೂಕಿನಲ್ಲಿಯ ಗುತ್ತಲ ಮತ್ತು ಹೊಸರತ್ತಿ, ಶಿಗ್ಗಾಂವ ತಾಲ್ಲೂಕಿನಲ್ಲಿ ಬಂಕಾಪೂರ. ಹಾವೇರಿ ಜಿಲ್ಲೆಗೆ ಯಾವ ತಾಲ್ಲೂಕನ್ನು ಘೋಷಣೆ ಮಾಡಿರುವುದಿಲ್ಲ ಆದ್ದರಿಂದ ಈ 5 ನಗರಗಳನ್ನು ತಾಲ್ಲೂಕುಗಳಾಗಿ ಘೋಷಣೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಸಿದ್ದರಾಜು (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಗಳೆ,** ನಂಜುಂಡಪ್ಪ ವರದಿಯಲ್ಲಿ ಮೈಸೂರು ಜಿಲ್ಲೆ ಎಚ್.ಡಿ. ಕೋಟೆ 16–17ನೇ ಸ್ಥಾನವನ್ನು ಹೊಂದಿರುಂವಂತಹ ತಾಲ್ಲೂಕು. ಅತ್ಯಂತ ಹಿಂದುಳಿದ, ದೀನ–ದಲಿತರು ಇರುವ, ಕಾಡು ಪ್ರದೇಶವನ್ನು ಹೊಂದಿರುವಂತಹದು. ಆಡಳಿತಾತ್ಮಕ ದೃಷ್ಟಿಯಿಂದ ಸುಮಾರು 100ಕಿ.ಮೀ ವ್ಯಾಪ್ತಿಯನ್ನು ಹೊಂದಿದೆ. ಎಂ.ಪಿ. ಪ್ರಕಾಶ್‌ರವರ ವರದಿಯಲ್ಲಿ ಆ ಹೆಸರು ಉಲ್ಲೇಖವಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮ್ಮ ಮೂಲಕ ಮನವಿ ಮಾಡುವುದು, ಎಚ್.ಡಿ. ಕೋಟೆ ತಾಲ್ಲೂಕಿನ ಸರಗುರನ್ನು ತಾಲ್ಲೂಕಾಗಿ ಘೋಷಣೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಮಾತನಾಡಲು ಅವಕಾಸ ಕೊಟಿದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಎಂ.ವಿ. ರಾಜಶೇಖರನ್ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಗಳೆ,** ದಯಮಾಡಿ ನನ್ನ ಕ್ಷಮಿಸಬೇಕು, ಈಗಾಗಲೇ ಸಾಕಷ್ಟು ಸಮಯವಾಗಿದೆ, ಮಾನ್ಯ ಮುಖ್ಯಮಂತ್ರಿಗಲು ಉತ್ತರ ಕೊಡುವವರಿದ್ದಾರೆ. ಅದಕ್ಕೆ ಮೊದಲು ಒಂದೇರಡು ಸಲಹೆಗಳನ್ನು ಅವರ ಗಮನಕ್ಕೆ ತರಲು ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ಸಂಭಾವಿತರು, ಅನೇಕ ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ. ಅದರಲ್ಲಿಯು ನನಗೆ ಅತ್ಯಂತ ಸಂತೋಷವನ್ನು ತಂದು ಕೊಟ್ಟ ವಿಚಾರ ಎಂದರೆ, ಕರ್ನಾಟಕದಲ್ಲಿ ಮೊಟ್ಟಮೊದಲನೆಯ ಬಾರಿಗೆ Aerospace industries ಗೆ ಸಾಕಷ್ಟು ಒತ್ತನ್ನು ಕೊಟ್ಟು ಹೊಸ policy ಯನ್ನು ಅವರು ಘೋಷಣೆ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಶಹಭಾಸಗೀರಿಯನ್ನು ಕೊಡಲು ಬಯಸುತ್ತೇನೆ.

ಅದರ ಜೊತೆಗೆ ನಾನಾ ಇಲಾಖೆಗಳಲ್ಲಿ ಅತ್ಯಂತ ವಿಶಿಷ್ಟ ರೀತಿಗಳಲ್ಲಿ, ಬದ್ಧತೆಯಿಂದ, ದಕ್ಷತೆಯಿಂದ ಕೆಲಸ ಮಾಡಿದಂತಹ ಅಧಿಕಾರಿಗಳನ್ನು ಗುರುತಿಸಿ ಅವರಿಗೆ ಸಹಭಾಸಗೀರಿಯನ್ನು ಕೊಟ್ಟಿದ್ದಾರೆ. ಇದು ನನಗೆ ಅತ್ಯಂತ ಸಂತೋಷವನ್ನು ತಂದು ಕೊಟ್ಟಿದೆ. ಈ ಪೀಠಿಕೆಯನ್ನು ಏತಕ್ಕಾಗಿ ತಮ್ಮ ಮೂಲಕ ಈ ಸದನದ ಗಮನಕ್ಕೆ ಬರಲು ಬಯಸುತ್ತೇನೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳು 1.17,500ಕೋಟಿ ರೂ.ಗಳ ಬಜೆಟ್‌ನ್ನು ಇವತ್ತು ಕೊಟ್ಟಿದ್ದಾರೆ. ಅದರ ಪೂರ್ಣ ಲಾಭ ಅನುಷ್ಠಾನದ ಮೇಲೆ ನಿಲ್ಲುತ್ತದೆ. ಆ ಅನುಷ್ಠಾನ ಸರಿಯಾದ ರೀತಿಯಲ್ಲಿ ಆಗಬೇಕಾದರೆ, ನಮ್ಮ ಆಡಳಿತಾಂಗ ಹೇಗೆ ಕೆಲಸ ಮಾಡುತ್ತಿದೆ, ಎಷ್ಟು ಬದ್ಧತೆಯಿಂದ ಕೆಲಸ ಮಾಡುತ್ತಿದೆ ಎನ್ನುವುದನ್ನು ಗಮನಿಸಬೇಕಾಗುತ್ತದೆ. ನಾನು ಈ ವಿಚಾರವನ್ನು party ಮುಂದೆ ಇಟ್ಟು ಹೇಳುತ್ತಿಲ್ಲ. This particular problem should be considered above the party. It doesn't matter which party rules but the administration should be made more responsive and more accountable.

ಈ ಅಧಿವೇಶನದಲ್ಲಿ ಏನೇನು ಪ್ರಶ್ನೆಗಳು ಬಂದಿವೆ, ಈ ಪ್ರಶ್ನೆಗಳ ಮೂಲ ಸಮಸ್ಯೆ ಏನು ಇದೆ ಎಂದರೆ, ಅದು ಅನುಷ್ಠಾನದ ಕೊರತೆ. ಮಾನ್ಯ ಮುಖ್ಯಮಂತ್ರಿಗಳು ಅದನ್ನು ಎತ್ತಿ ಹಿಡಿದಿದ್ದಾರೆ. ಈಗಾಗಲೇ ನಮ್ಮ ಸ್ನೇಹಿತರಾದ ಪುಟ್ಟಸ್ವಾಮಿಯವರು ಮಾತನಾಡುತ್ತಾ ಕೆಲವು ಉದಾಹರಣೆಗಳನ್ನು ಕೊಟ್ಟರು. ಅದರ ಸತ್ಯ-ಅಸತ್ಯತೆಗಳ ವಿಚಾರವನ್ನು ಇಲ್ಲಿ ನಾನು ಚರ್ಚೆ ಮಾಡುತ್ತಿಲ್ಲ. ಆದರೆ ಇಲ್ಲಿ ಒಂದು ವಿಚಾರ ಎದ್ದು ಕಾಣುತ್ತಿದೆ. ನಮ್ಮ ಆಡಳಿತಾಂಗದಲ್ಲಿ ಜವಾಬ್ದಾರಿ ಇರುವ ಕಡೆಗಳಲ್ಲಿ ಕೊರತೆ ಎದ್ದು ಕಾಣುತ್ತಿದೆ. ಅದನ್ನು ಸರಿಪಡಿಸುವ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಅತ್ಯಂತ ವಿನಯದಿಂದ, ಕಳಕಳಿಯಿಂದ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲು ಬಯಸುತ್ತೇನೆ. ಇವತ್ತಿನ ದಿವಸ ಸಲಹೆ ಕೊಡುವುದೇನೆಂದರೆ administrative efficiency and accountability is most important. ಮಾನ್ಯ ಮುಖ್ಯಮಂತ್ರಿಗಳು ಹಾಗೂ, ಸಚಿವ ಸಂಪುಟದ ಸದಸ್ಯರು ತೀರ್ಮಾನವನ್ನು ಕೈಗೊಳ್ಳುತ್ತಾರೆ. ಆದರೆ ಈ ಕೈಗೊಂಡ

ತೀರ್ಮಾನವು ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ಬರುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. It has to be done within a time frame. ಕಡತಗಳು ತಿಂಗಳಾನುಗಟ್ಟಲೆ ಒಮದು ಕಡೆಯಿಂದ ಮತ್ತೊಂದು ಕಡೆ ಹೋಗುತ್ತವೆ. ಅದೇ ಸಚಿವಾಲಯದಲ್ಲಿ ಮೇಲಿನಿಂದ ಕೆಳಗೆ ಪುನಃ ಕೆಳಗಿನಿಂದ ಮೇಲಕ್ಕೆ ಹೋಗುತ್ತವೆ. ಇದು ಬದಲಾವಣೆ ಮಾಡಬೇಕು. ಇದನ್ನು ಬದಲಾಯಿಸದಿದ್ದರೆ ಜನರು ಇರುವ ವ್ಯವಸ್ಥೆಯನ್ನು ಬದಲಾವಣೆ ಮಾಡಲು ಏನು ಮಾಡಬೇಕು ಎಂದು ಜನರು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ಸಂಭಾವಿತರಾಗಿದ್ದು, ರಾಜ್ಯದ ಅಭಿವೃದ್ಧಿ ಮಾಡಬೇಕೆಂಬ ಕಳಕಳಿಯನ್ನು ಹೊಂದಿದ್ದಾರೆ. ಆದರೆ ಅಭಿವೃದ್ಧಿ ಆಗಬೇಕಾದರೆ ಅನುಷ್ಠಾನ ಎಷ್ಟರಮಟ್ಟಿಗೆ ನಡೆಯುತ್ತದೆ ಎಂಬುದು ಬಹಳ ಮುಖ್ಯ, ಆದ್ದರಿಂದ ಇದನ್ನು ಮಾಡಬೇಕು. ನಾನು ಹಿಂದೆ ಒಂದು ಸಲಹೆಯನ್ನು, ಕೊಟ್ಟಿದ್ದೆನು. ಇವತ್ತಿನ ದಿವಸ ನಮ್ಮ ಮಾಹಿತಿ ತಂತ್ರಜ್ಞಾನ ಇಡೀ ವಿಶ್ವಕ್ಕೆ ಮಾದರಿಯಾಗಿದ್ದು, ವಿಶ್ವದ ನಾನಾ ಭಾಗಗಳ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಕೋಟ್ಯಾಂತರ ರೂಪಾಯಿಗಳ equipmentಗಳನ್ನು ಕಳುಹಿಸುತ್ತಿದ್ದೇವೆ. ದಯವಿಟ್ಟು ಈ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು, ಮಾನ್ಯ ಸಚಿವರು ಹಾಗೂ ಸಚಿವಾಲಯದವರು ತೆಗೆದುಕೊಳ್ಳುವ ನಿರ್ಧಾರಗಳನ್ನು you please put on a time frame. Please find out how the file is moving and how the decision is being reviewed at various levels. ಇದನ್ನು monitor ಮಾಡದಿದ್ದರೆ ಮುಂದೆ ಬಹಳ ಕಷ್ಟವಾಗುತ್ತದೆ ಎಂದು ನನಗನಿಸಿತ್ತಿದೆ. ಆದ್ದರಿಂದ ಈ ಬಗ್ಗೆ ನಾನು ಕಳಕಳಿಯಿಂದ ವಿನಂತಿಸುತ್ತೇನೆ. I don’t consider myself as a party man. I would like to make this suggestion in the interest of development of the State which has got so much of natural resources. ಇದು ಬಹಳ ಮುಖ್ಯವಾಗಿದೆ. 2400 ವರ್ಷಗಳ ಹಿಂದೆ ತಿರುವಳ್ಳವರ್ ಅವರು ‘ನಮ್ಮಲ್ಲಿ ಎಷ್ಟೇ ಮಾನವ ಹಾಗೂ ಪ್ರಾಕೃತಿಕ ಸಂಪತ್ತು ಇರಬಹುದು, ಆದರೆ ಅದನ್ನು ದಕ್ಷತೆಯಿಂದ

ನಡೆಸುವವರ ಕೊರತೆಯಾದರೆ ಎಲ್ಲವೂ ನಿಷ್ಫಲ' ಎಂದು ಹೇಳಿದ್ದಾರೆ. ಆದ್ದರಿಂದ ಇದರ ಕಡೆ ಹೆಚ್ಚು ಗಮನ ಕೊಡಬೇಕೆಂದು ಕೋರುತ್ತೇನೆ.

ಇನ್ನು ಕೊನೆಯದಾಗಿ ನಮ್ಮ ವಿಧಾನ ಸೌಧ ಸಮುಚ್ಛಯದಲ್ಲಿ ಶ್ರೀಯುತ ಲಾಲ್ ಬಹಾದ್ದೂರ್ ಶಾಸ್ತ್ರಿಯವರ ಪ್ರತಿಮೆ ನಿರ್ಮಾಣವಾಗಿ ಇನ್ನೂ ತೆರೆದಿಲ್ಲ. ಆದಷ್ಟು ಜಾಗ್ರತೆ ಇದನ್ನು ತೆರೆಸಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ಕಳಕಳಿಯಿಂದ ವಿನಂತಿ ಮಾಡುತ್ತೇನೆ. ಏಕೆಂದರೆ ಇದು ಸರಿಯಲ್ಲ. ಇಡೀ ರಾಷ್ಟ್ರ ಮತ್ತು ವಿಶ್ವಕ್ಕೆ ಹೆಸರಾದ ಒಬ್ಬ ಒಳ್ಳೆಯ ದಕ್ಷ ಪ್ರಧಾನ ಮಂತ್ರಿಯವರ ಪ್ರತಿಮೆಯು ನಿರ್ಮಾಣವಾಗಿ ಎರಡು ವರ್ಷಗಳು ಕಳೆದರೂ ನಮ್ಮ ಸಮುಚ್ಛಯದಲ್ಲಿ ನರಳುತ್ತಾ ಬಿದ್ದಿದೆ. ಇದನ್ನು ಆದಷ್ಟು ಬೇಗ ಮಾಡಿಸಬೇಕೆಂದು ವಿನಂತಿಸುತ್ತೇನೆ.

ಇನ್ನು ಕೊನೆಯದಾಗಿ ಆಡಳಿತಾತ್ಮಕವಾದ ಸುಧಾರಣೆಗಳನ್ನು ತರಲು ಒಳ್ಳೊಳ್ಳೆಯ ಅಧಿಕಾರಿಗಳಿದ್ದಾರೆ. ಜನವರಿ 26ನೇ ತಾರೀಖು ನಾನಾ ಇಲಾಖೆಗಳಲ್ಲಿ ದಕ್ಷವಾಗಿ ಕೆಲಸ ಮಾಡಿರುವವರನ್ನು ಗುರುತಿಸಿ ಶಹಭಾಸ್‌ಗಿರಿ ಕೊಟ್ಟಿದ್ದಾರೆ. ಅನೇಕ ಇಲಾಖೆಗಳಲ್ಲಿ ಆಡಳಿತಾತ್ಮಕವಾದ ಸುಧಾರಣೆಗಳನ್ನು ತರಲು ಒಳ್ಳೆಯ ಅಧಿಕಾರಿಗಳಿದ್ದಾರೆ. ಅವರನ್ನು ಗುರುತಿಸಿ ಶಹಭಾಸ್‌ಗಿರಿ ಕೊಡಲಿ. ಅವರಿಗೆ ಆವಾರ್ಡ್ ಕೊಟ್ಟು ಕೆಲಸ ಮಾಡಿಸಲಿ. ಈ ನಮ್ಮ ರಾಜ್ಯದಲ್ಲಿ the most important thing is administrative reforms.

ಇನ್ನು ಸಾರಾಯಿ ಮಾರಾಟದ ಆದಾಯದಿಂದ ರಾಜ್ಯದ ಅಭಿವೃದ್ಧಿ ಮಾಡುವುದಕ್ಕೆ ಹೊರಟಿದ್ದಾರೆ. ಅಬಕಾರಿ ಇಲಾಖೆಯಿಂದ ಎಷ್ಟು ಆದಾಯ ಬರುತ್ತದೆ. ದಯವಿಟ್ಟು ಅದನ್ನು ಮಾಡುವುದಕ್ಕೆ ಹೋಗಬಾರದು. ಈ ರೀತಿ ಮಾಡಬಾರದೆಂದು ತಮ್ಮಲ್ಲಿ ಅತೀವ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈ ರೀತಿ ಆದರೆ ನಮ್ಮ ಮಕ್ಕಳು ಏನಾಗುತ್ತಿದ್ದಾರೆ? ನಮ್ಮ ಮೊಮ್ಮಕ್ಕಳು ಎನಾಗುತ್ತಿದ್ದಾರೆ? ಸಾರಾಯಿ ಮಾರಾಟದಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಆರೂವರೆ ಗಂಟೆ ನಂತರ ಯಾವ ಹಳ್ಳಿಗೂ

ಹೋಗುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇದನ್ನು ನಿಲ್ಲಿಸಬೇಕೆಂದು ಮನವಿ ಮಾಡುತ್ತೇನೆ. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿ ಹೆಜ್ಜೆ ಗುರುತನ್ನು ಬಿಟ್ಟು ಹೋಗುವುದು ಮುಖ್ಯ. ಆದ್ದರಿಂದ ಕೊನೆಯದಾಗಿ ಇದನ್ನು ಮಾಡಬೇಕೆಂದು ವಿನಂತಿಸುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಸಭಾಪತಿಯವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರುವ ಈ ಬಜೆಟ್ ಅನ್ನು ಸ್ವಾಗತ ಮಾಡುತ್ತೇನೆ. ಕುಡಿಯುವ ನೀರಿಗಾಗಿ ಮಾನ್ಯ ಮುಖ್ಯಮಂತ್ರಿಯವರು ಎಷ್ಟು ಹಣ ಬೇಕಾದರೂ ಬಿಡುಗಡೆ ಮಾಡಲು ತಯಾರಿದ್ದಾರೆ. ಕುಡಿಯುವ ನೀರಿನ ಟ್ಯಾಂಕರ್‌ಗಳಿಗೆ ಐದುನೂರು ರೂಪಾಯಿಗಳಿಂದ ಒಂದು ಸಾವಿರ ರೂಪಾಯಿಗಳವರೆಗೂ ಕೊಡುವುದಕ್ಕೆ ರೆಡಿ ಇದ್ದಾರೆ. ಆದರೆ ನೀರನ್ನು ತರುವುದು ಎಲ್ಲಿಂದ? ಕೋಲಾರ ಮತ್ತು ಚಿಕ್ಕಬಳ್ಳಾಪುರದ ಭಾಗಗಳಲ್ಲಿ ನೀರೇ ಸಿಗುತ್ತಿಲ್ಲ. ಹಣ ಕೊಡುವುದಕ್ಕೆ ತಯಾರಿದ್ದರೂ ನೀರು ಸಿಗುತ್ತಿಲ್ಲ. ಜಲವು ಕರಗುತ್ತಾ ನಡೆದಿದೆ. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳು Red Zone ಬಂದಿವೆ. There is 70% exploitation of groundwater. ಈ ಭಾಗಗಳಲ್ಲಿ ಸುಮಾರು ಒಂದು ಲಕ್ಷ ಕೊಳವೆ ಬಾವಿಗಳು ಇವೆ. ಭೂಮಿಯನ್ನು cross sectionನಲ್ಲಿ ನೋಡಿದಾಗ ಬರೀ ತೂತುಗಳೇ ಕಾಣುತ್ತವೆ. ಸುಮಾರು 1200 ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವ ಎದ್ದು ಕಾಣುತ್ತಿದೆ. ಕೆಲವು ಕಡೆ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರನ್ನು ಪೂರೈಕೆ ಮಾಡುತ್ತಿದ್ದಾರೆ. ಬೇಸಿಗೆ ಬಂದಾಗ ಬಹಳಷ್ಟು ನೀರಿನ ಅಭಾವ ಕಂಡು ಬರುತ್ತದೆ. ಇದನ್ನು ಸಮರೋಪಾದಿಯಲ್ಲಿ ನಿವಾರಣೆ ಮಾಡಬೇಕು. ದಯವಿಟ್ಟು ಈ ಭಾಗಗಳಲ್ಲಿ ಹೆಚ್ಚಿನ ಹಣವನ್ನು ಒದಗಿಸಿ, ನೀರಿನ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಾನು ಕಳಕಳಿಯಿಂದ ವಿನಂತಿ ಮಾಡುತ್ತೇನೆ. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ 1000 ಕೋಟಿ ರೂಪಾಯಿಗಳನ್ನು earmark ಮಾಡಬೇಕೆಂದು ವಿನಂತಿಸುತ್ತೇನೆ.

ಇನ್ನು ತುಮಕೂರಿನಲ್ಲಿ ಸುಮಾರು ನೂರು ವರ್ಷಗಳ ಹಿಂದೆ ಪ್ರಾರಂಭವಾದ ಮಹಿಳಾ ಕಾಲೇಜು ಇದೆ. Empress Girls' Government Pre-University College ನಲ್ಲಿ ಸುಮಾರು ಮೂರು ಸಾವಿರ ಹೆಣ್ಣು ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ನೂರು ವರ್ಷಗಳ ಹಿನ್ನೆಲೆಯಲ್ಲಿ ಶತಮಾನೋತ್ಸವ ಆಚರಣೆ ಮಾಡುವುದಕ್ಕೆ ಹೊರಟಿದ್ದಾರೆ. ಆದ್ದರಿಂದ ಈ ಕಾಲೇಜಿಗೆ ಉದಾರವಾಗಿ ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ವಿನಂತಿ ಮಾಡುತ್ತಾ, ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಈಗ ಸದನವನ್ನು 3–30ರವರೆಗೆ ಮುಂದೂಡುತ್ತೇನೆ.

**(ಭೋಜನ ವಿರಾಮಕ್ಕಾಗಿ ಸಭೆಯು 2 ಗಂಟೆ 28 ನಿಮಿಷಗಳಿಗೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3 ಗಂಟೆ 30 ನಿಮಿಷಗಳಿಗೆ ಸೇರಲು ನಿಶ್ಚಯಿಸಿತು)**

(ಭೋಜನ ವಿರಾಮದ ನಂತರ ಸದನವು 3.55 ಗಂಟೆಗೆ ಸಮಾವೇಶಗೊಂಡಿತ್ತು. ಪೀಠದಲ್ಲಿ ಸಭಾಪತಿಗಳು ಆಸೀನರಾದರು)

## 3 A. ಪ್ರಕಟಣೆ

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ 15.2.2013ರಂದು ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ 2013ಅನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಸ್ವೀಕರಿಸಿತು ಹಾಗೂ ಸದರಿ ವಿಧೇಯಕ್ಕೆ ವಿಧಾನ ಪರಿಷತ್ತು ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

## 3 B. ಆಯವ್ಯಯದ ಮೇಲೆ ಮುಂದುವರೆದ ಚರ್ಚೆ

**ಸಭಾಪತಿಯವರು:–** ಈಗ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮೇಲೆ ಉತ್ತರವನ್ನು ಕೊಡುತ್ತಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ಭೋಜನ ಮುಗಿಸಿ ಬಂದನಂತರ ಮೊದಲು ಮಾನ್ಯ ಮಧುಸೂದನ್‌ರವರು ಎತ್ತಿದ ವಿಚಾರಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡಿಸುತ್ತೇನೆ ಎಂದು ಹೇಳಿದ್ದಿರಿ.

**ಸಭಾಪತಿಯವರು:–** ಈ ಕುರಿತು ಕಂದಾಯ ಮಂತ್ರಿಗಳು ಪ್ರಸ್ತಾಪ ಮಾಡುತ್ತೇನೆ ಎಂದು ಸ್ಲಿಪ್ ಕಳುಹಿಸಿದ್ದರು. ಆದರೆ ಅದಕ್ಕೆ ಅವಕಾಶವಾಗಲಿಲ್ಲ. ಅವರು ಮತ್ತೆ ಸದನಕ್ಕೆ ಬರುತ್ತಾರೆ. ಬಂದಮೇಲೆ ಪ್ರತಿಕ್ರಿಯೆಗೆ ಅವಕಾಶ ಕೊಡುತ್ತೇನೆ.

**ಶ್ರೀ ಪಟೇಲ್ ಶಿವರಾಂ:–** ಮಾನ್ಯ ಸಭಾಪತಿಗಳೆ, ಮೂಡಿಗೆರೆ ತಾಲ್ಲೂಕಿನಲ್ಲಿ ನಡೆದ ಕೊಲೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೆ. ಅದಕ್ಕೆ ಉತ್ತರ ಬರಲಿಲ್ಲ.

**ಸಭಾಪತಿಯವರು:–** ಶೂನ್ಯವೇಳೆಗೆ ಸಂಬಂಧಪಟ್ಟಂತೆ ಉತ್ತರಗಳನ್ನು ಎಲ್ಲರಿಗೂ ಕಳುಹಿಸಕೊಡಬೇಕು ಮತ್ತು ಅದು ರೆಕಾರ್ಡ್‌ಗೂ ಹೋಗಬೇಕು.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮುಖ್ಯ ಮಂತ್ರಿಗಳ ಹೇಳಿಕೆ ಆದತಕ್ಷಣವೇ ಉತ್ತರವನ್ನು ಕಳುಹಿಸಿಕೊಡುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಗಳೆ, 2013–14ನೇ ಸಾಲಿನ ಆಯವ್ಯಯದ ಬಗ್ಗೆ ಈಗಾಗಲೇ ವಿಧಾನಸಭೆಯಲ್ಲಿ ಚರ್ಚೆಯಾಗಿ, ಅಲ್ಲಿ ಬಹಳಷ್ಟು ಜನ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ಸಲಹೆ–ಸೂಚನೆಗಳನ್ನು ಕೊಟ್ಟರು. ನಂತರ ಬಜೆಟ್‌ಗೆ ಒಪ್ಪಿಗೆಯನ್ನೂ ಕೊಟ್ಟರು. ವಿಧಾನ ಪರಿಷತ್ತಿನಲ್ಲೂ ಸಹಿತ ಈ ಒಂದು ಆಯವ್ಯಯದ ಮೇಲೆ ವಿರೋಧ ಪಕ್ಷದ ನಾಯಕರಾದ ಮಾನ್ಯ ಪಾಟೀಲರು, ಜೆಡಿಎಸ್ ನಾಯಕರಾದ ಮಾನ್ಯ ಹೊರಟ್ಟಿಯವರು, ಮಾನ್ಯ ಅರುಣಷಹಪುರ, ಮಾನ್ಯ ಘೊಟ್ನೇಕರ, ಮಾನ್ಯ ಶಾಣಪ್ಪನವರು, ಮಾನ್ಯ ಪುಟ್ಟಣ್ಣನವರು, ಮಾನ್ಯ ಲೆಹೆರ್‌ಸಿಂಗ್, ಮಾನ್ಯ ದಯಾನಂದ, ಮಾನ್ಯ ಭಾಂಡಗೆ, ಮಾನ್ಯ ಮರಿತಿಬ್ಬೇಗೌಡ, ಮಾನ್ಯ ಮಧುಸೂಧನ್, ಮಾನ್ಯ ದೊಡ್ಡರಂಗೇಗೌಡ, ಮಾನ್ಯ ಪುಟ್ಟಸ್ವಾಮಿ, ಶ್ರೀಮತಿ ಮೋಟಮ್ಮ, ಮಾನ್ಯ ಸಿದ್ರಾಮಣ್ಣ, ಮಾನ್ಯ ನಾರಾಯಣಸ್ವಾಮಿ, ಮಾನ್ಯ ಹಾಲಪ್ಪ ಆಚಾರ್, ಮಾನ್ಯ ರಾಜಶೇಖರನ್, ಮಾನ್ಯ ಪಟೇಲ್ ಶಿವರಾಂ, ಮಾನ್ಯ ದೊರೆಸ್ವಾಮಿ, ಮಾನ್ಯ ಶಿವರಾಜ್ ಸಜ್ಜನ್ ಹೀಗೆ ಸುಮಾರು 16 ಜನ ಸದಸ್ಯರು ಮಾತನಾಡಿದ್ದಾರೆ ಮತ್ತು ಹಲವಾರು ಸಲಹೆ–ಸೂಚನೆಗಳನ್ನು ಕೊಟ್ಟಿದ್ದಾರೆ. ಈ ಒಂದು ಬಜೆಟ್ ಮಂಡನೆ ಮಾಡುವಂತಹ ದಿನಾಂಕ 8ನೇ ಫೆಬ್ರವರಿ ಎಂದು ನಿಗದಿ ಆದಮೇಲೆ ಅದರ ಬಗ್ಗೆ ಸಾರ್ವಜನಿಕ ಚರ್ಚೆ ಕೂಡ ಆಯಿತು. ಮುಖ್ಯಮಂತ್ರಿಗಳು ಬಜೆಟ್ ಮಂಡನೆ ಮಾಡುತ್ತಾರೋ, ಇಲ್ಲವೋ? ಅಲ್ಲಿಯವರೆಗೆ ಸರ್ಕಾರ ಇರುತ್ತದೆಯೋ ಇಲ್ಲವೋ ಎನ್ನುವ ಬಗ್ಗೆ ಸಾರ್ವಜನಿಕವಾಗಿ ಚರ್ಚೆಯಾಯಿತು. ನಾನು ಎಲ್ಲಿಯೂ ಬಜೆಟ್ ಮಂಡನೆ ಮಾಡುತ್ತೇನೆ ಎಂದು ಹೇಳಿರಲಿಲ್ಲ. ಆದರೆ ಯಾವುದೋ ಒಂದು ಪ್ರವಾಸಕ್ಕೆ ಹೋದಾಗ ನಮ್ಮ ಮಾಧ್ಯಮ ಮಿತ್ರರು, ಬಜೆಟ್ಟನ್ನು ಫೆಬ್ರವರಿ 8ನೇ ತಾರೀಖು ಮಂಡಿಸುತ್ತೀರಾ ಎಂದು ಕೇಳಿದಾಗ ನಾನು, ಹೌದು ಮಂಡಿಸುತ್ತೇನೆ ಎಂದು ಸಹಜವಾಗಿ ಹೇಳಿದೆ. ಅದು ಪತ್ರಿಕೆಗಳಲ್ಲಿ ಬರತೊಡಗಿತು.

(4 ಘಂಟೆ)

**ಶ್ರೀ ಜಗದೀಶ್ ಶೆಟ್ಟರ್:–** ಹಿಂದೆಲ್ಲಾ ಮುಖ್ಯಮಂತ್ರಿಗಳಿದ್ದಾಗ ಬಜೆಟ್ ಮಂಡನೆ ಮಾಡುತ್ತಾರೆಯೋ ಇಲ್ಲವೋ ಎಂದು ಯೋಚನೆ ಮಾಡುತ್ತಿರಲಿಲ್ಲ. ಬಜೆಟ್ ಯಾವ ರೀತಿ ಇರುತ್ತದೆಯೋ ಎಂದು ಚರ್ಚೆಯಾಗುತ್ತಿತ್ತು.

**ಶ್ರೀ ಬಸವರಾಜ ಹೊರಟ್ಟಿ:–** ನೀವು ಹೇಗೆ ಬಾಲ್ ಹೊಡೆದರು ಸಿಕ್ಸರ್ ಹೊಡೆಯುತ್ತೀರಿ.

**ಶ್ರೀ ಜಗದೀಶ್ ಶೇಟ್ಟರ್:–** ಜನರ ಆಶೀರ್ವಾದ ಇರುವುದರಿಂದ ಅದೆಲ್ಲಾ ನಡೆದಿದೆ. ಹೀಗಾಗಿ ಒಂದು ವಿಸ್ವಾಸ ಇದ್ದರೆ ಆಗೇಆಗುತ್ತದೆ. ನಮ್ಮ ಶಾಸಕರ ಮೇಲೆ, ನಮ್ಮ ಸಚಿವರ ಮೇಲೆ, ಜನರ ಮೇಲೆ ನನಗೆ ವಿಶ್ವಾಸ ಇತ್ತು. ಹೀಗಾಗಿ ನಾನು ಆ ವಿಶ್ವಸದ ಆಧಾರದ ಮೇಲೆ ಹೇಳುತ್ತಿದ್ದೆ, ಈ ಸರ್ಕಾರಕ್ಕೆ ಏನು ಆಗುವುದಿಲ್ಲ, 8ನೇ ತಾರೀಖು ಬಜೆಟ್ ನಿಗದಿಯಾಗಿದೆ, ಅವತ್ತು ಮುಂಡನೆ ಮಾಡೇ ಮಾಡುತ್ತೇವೆನ್ನುವ ಧೈರ್ಯ ನನಗೆ ಏಕೆ ಬಂತು ಎಂದರೆ, ಎಲ್ಲರ ಸಹಕಾರ ಮತ್ತು ಜನರ ಆಶೀರ್ವಾದ ಇದೆ ಎನ್ನುವ ಕಾರಣಕ್ಕಾಗಿ ಆ ಧೈರ್ಯ ಬಂತು.

**ಶ್ರೀ ದಯಾನಂದ:–** ವಿರೋಧ ಪಕ್ಷದವರ ಮೇಲೂ ನಿಮಗೆ ವಿಶ್ವಾಸ ಇತ್ತು.

**ಶ್ರೀ ಜಗದೀಶ್ ಶೇಟ್ಟರ್:–** ಮುಖ್ಯಮಂತ್ರಿಗಳು ಒಂದು ಸಲ ಬಜೆಟ್ ಮಂಡನೆ ಮಾಡಲಿ ಎಂದು ವಿರೋಧ ಪಕ್ಷದವರು ಹೇಳುತ್ತಿದ್ದರು.

**ಶ್ರೀ ಮಾನೆ ಶ್ರೀನಿವಾಸ್:–** ಎಲ್ಲರಿಗಿಂತ ಹೆಚ್ಚಿನ ಶಕ್ತಿ ವಿರೋಧ ಪಕ್ಷದವರು ಕೊಟ್ಟಿದ್ದಾರೆ.

**ಶ್ರೀ ಜಗದೀಶ್ ಶೆಟ್ಟರ್:–** ಹೀಗಾಗಿ ಬಜೆಟ್ ಮಂಡನೆ ಆಯಿತು. ಆಮೇಲೆ ವಿಧಾನಸಭೆಯಲ್ಲಿ ಅಪ್ರೂವಲ್ ಆಯಿತು. ಈಗ ವಿಧಾನ ಪರಿಷತ್ತಿನಲ್ಲಿ ಅಪ್ರೂವಲ್‌ಗೆ ಬಂದಿದೆ. ನಾನು ಒಂದು ಮಾತನ್ನು ಹೇಳುತ್ತೇನೆ, ಈ ವಿಷಯದಲ್ಲಿ ನಾನು ಏನು ಆರ್ಥಿಕ ತಜ್ಞನಲ್ಲ ಮತ್ತು ಈ ಬಜೆಟ್ ಲೆಕ್ಕಾಚಾರದಲ್ಲಿ ಬಹಳಷ್ಟು ಆಳವಾಗಿ ಅಧ್ಯಯನ ಮಾಡಿದಂತಹ ವ್ಯಕ್ತಿಯಲ್ಲ.

ಅದು ನನ್ನ ತಿಳುವಳಿಕೆ, ಅನುಭವದ ಹಿನ್ನೆಲೆಯಲ್ಲಿ ನಮ್ಮ ಎಲ್ಲಾ ಅಧಿಕಾರಿಗಳು ಅದು ನಮ್ಮ ಹಣಕಾಸು ಇಲಾಖೆಯ ಅಧಿಕಾರಿಗಳು ಹಣಕಾಸು ಇಲಾಖೆಯ advisors, ಈ ಎಲ್ಲಾ ಅಧಿಕಾರಿಗಳ ಸಹಕಾರವನ್ನು ತೆಗೆದುಕೊಂಡು ಬಜೆಟ್ ಮಂಡನೆ ಮಾಡಿದ ಮೇಲೆ ಇವತ್ತು ಎಲ್ಲಾ ವರ್ಗಗಳಿಂದ ಬಹಳ ಉತ್ತಮವಾದಂತಹ ಪ್ರತಿಕ್ರಿಯೆ ಬಂದಿದೆ. ನಾವು ಎಷ್ಟೇ ಒಳ್ಳೆಯ ಬಜೆಟ್ ಕೊಟ್ಟರೂ ವಿರೋಧ ಪಕ್ಷದವರು ಈ ಬಜೆಟ್ ನಿರಾಶದಾಯಕ, ಇದೊಂದು ಗಿಮಿಕ್ಕು, ಚುನಾವಣೆ ಸ್ಟಂಟ್ ಎಂದು ಅನಿವಾರ್ಯವಾಗಿ ಹೇಳಲೇಬೇಕಾಗುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:-** ನೀವು ವಿರೋಧ ಪಕ್ಷದ ನಾಯಕರಾಗಿದ್ದಾಗ ಇದೇ ಮಾತನ್ನು ಹೇಳಿದ್ದೀರಿ.

**ಶ್ರೀ ಜಗದೀಶ್ ಶೆಟ್ಟರ್:-** ನೀವು ಹೇಳಬೇಕಾಗುತ್ತದೆ, ಹೇಳಿದ್ದೀರಿ. ವಿರೋಧ ಪಕ್ಷದವರು ಹೊಗಳಿದರೆ ಏನು ಇವರಿಬ್ಬರೂ ಶಾಮೀಲಾಗಿದ್ದಾರೆಯೇ ಎನ್ನುವ ಮಾತು ಬರುತ್ತದೆ. ಆ ದೃಷ್ಟಿಯಿಂದ ನಿಮ್ಮ ಅಭಿಪ್ರಾಯವನ್ನು ಹೇಳಿದ್ದೀರಿ. ಆದರೆ, ಸಾರ್ವಜನಿಕ ವಲಯದಲ್ಲಿ ಒಳ್ಳೆಯ ಅಭಿಪ್ರಾಯ ಬಂದಿದೆ. ಅವತ್ತು ನೀವು ಯಾರಾದರೂ electronic mediaದಲ್ಲಿ ನೋಡಿದ್ದರೆ, ನಾನು ನೋಡಿಲ್ಲ, electronic mediaದಲ್ಲಿ ಬಜೆಟ್ ಮಂಡನೆ ಆಗುವಂತಹ ಸಂದರ್ಭದಲ್ಲಿ panel discussion ನಡೆಯುತ್ತಿತ್ತು. ಆ ಸಂದರ್ಭದಲ್ಲಿ Political Persons, ಒಂದೊಂದು ಪಾರ್ಟಿಯಿಂದ ವಕ್ತಾರರು ಹೋಗಿರುತ್ತಾರೆ. ಅವರನ್ನು comments ಮಾಡುವುದಕ್ಕೆ ಬಿಟ್ಟಿದ್ದರು. ಅಲ್ಲಿ ಯಾರು experts ಎಂದು ಬಂದಿರುತ್ತಾರೆ, non-political persons ಬಂದಿರುತ್ತಾರೆ. ಆರ್ಥಿಕ ತಜ್ಞರು ಇರಬಹುದು, ಯಾವುದೋ ಒಂದು ವಾಣಿಜ್ಯೋದ್ಯಮಿ ಸಂಸ್ಥೆಯ ಅಧ್ಯಕ್ಷರು ಇರಬಹುದು, ಮತ್ತೊಬ್ಬರು ಇರಬಹುದು, ಅವರು ಮಾಡಿರುವ comments ಗಳನ್ನು ನೀವು ನೋಡಿಬಿಟ್ಟರೆ, ಇದೊಂದು ಒಳ್ಳೆಯ ಬಜೆಟ್, masterstroke ಮತ್ತೊಂದು, ಮಗದೊಂದು, ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಅಂತಹ non-political persons ನಿಂದ appreciations ಬಂದಿದೆ. ಹೀಗಾಗಿ ಒಂದು Political Partyಗೆ identify

ಆದಾಗ ಅವರ ಒಂದು policy, ಅವರ ಒಂದು ಹಿನ್ನೆಲೆಯಲ್ಲಿ ನಾವು ಟೀಕೆಗಳನ್ನು ಮಾಡುತ್ತೇನೆ. ಆದರೆ, ಇವತ್ತು non-political persons ನಿಂದ ಉತ್ತಮವಾದ ಅಭಿಪ್ರಾಯ ಬಂದಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇ ರೀತಿ ಬೇರೆ ಬೇರೆ ಪತ್ರಿಕೆಯಲ್ಲಿ editorial column ಇರಬಹುದು ಅಥವಾ ಅಲ್ಲಿದ್ದಂತಹ observation ಇರಬಹುದು, ನಾನು ವಿಧಾನಸಭೆಯಲ್ಲಿ ಅವೆಲ್ಲಾ ಹೇಳಿದ್ದೇನೆ. ಕೆಲವೊಂದು ಪತ್ರಿಕೆಯಲ್ಲಿ ಬಂದಿರುವಂತಹ observations ಮತ್ತು ಸಮಾಜದಲ್ಲಿರತಕ್ಕಂಥ ಕೆಲವು ತಜ್ಞರು ಹೇಳುವುದು ಇರಬಹುದು, ಈ ರೀತಿ ಬೇರೆ ಬೇರೆ comments ಗಳು ಬಂದಿರುವುದನ್ನು ನಾನು ವಿಧಾನಸಭೆಯಲ್ಲಿ refer ಮಾಡಿದ್ದೇನೆ. ಸಾರ್ವಜನಿಕ ಅಭಿಪ್ರಾಯ ಬಂದಿದೆ. ಬಜಟೆ ಮಂಡಿಸಿದ ಎರಡು ದಿವಸಗಳಲ್ಲಿ ನಾನು 2–3 ಜಿಲ್ಲೆಗಳಿಗೆ ಪ್ರವಾಸ ಮಾಡಿದಾಗ, ಅಲ್ಲಿನ ಜನಾಭಿಪ್ರಾಯವನ್ನು ನೋಡಿದಾಗ ಇದೊಂದು ಉತ್ತಮವಾದ ಬಜೆಟ್ ಎಂದು ಹೇಳಿದ್ದಾರೆ. ಹೀಗಾಗಿ ನಾನು ಉತ್ತಮವಾದ ಬಜೆಟ್ ಮಂಡನೆ ಮಾಡಿದರೆ ಎಂದು ನನಗೂ ಸಮಾಧಾನವಿದೆ. ಏಕೆಂದರೆ, ನನ್ನ ರಾಜಕೀಯ ಜೀವನದಲ್ಲಿ ಒಬ್ಬ ಹಣಕಾಸು ಸಚಿವನಾಗಿ, ಮೊಟ್ಟ ಮೊದಲ ಚೊಚ್ಚಲ ಬಜೆಟ್‌ನ್ನು ಮಂಡಿಸಿದ್ದೇನೆ. ಆ ಚೊಚ್ಚಲ ಬಜೆಟ್‌ನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ಅದು ಹೇಗಾಗಿರುತ್ತದೆಯೋ ಏನೋ ಎನ್ನುವುದು ನನ್ನ ಮನಸ್ಸಿನಲ್ಲಿತ್ತು. ಅಂತಹ ಸಂದರ್ಭದಲ್ಲೂ ಕೂಡ ಇವತ್ತು ಬಜೆಟ್ ಮಂಡನೆ ಮಾಡಿದಾಗ ಒಳ್ಳೆಯ ಪ್ರತಿಕ್ರಿಯೆ ಬಂದಿದೆ. ಇದಕ್ಕೆ ಸಹಕಾರ ಕೊಟ್ಟಂಥ ಎಲ್ಲರಿಗೂ ನಾನು ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಇವತ್ತು ನಿರಾಶದಾಯಕ, ಗಿಮ್ಮಿಕ್ಕು ಎಂದು ವಿರೋಧ ಪಕ್ಷದ ನಾಯಕರು, ಮೋಟಮ್ಮನವರು ಎಲ್ಲರು ಹೇಳಿದ್ದಾರೆ ಮತ್ತು ಒಳ್ಳೆಯ ಬಜೆಟ್ ಎಂದು ವಿರೋಧ ಪಕ್ಷದಲ್ಲಿರುವ ಕೆಲವರು appreciation ಸಹ ಮಾಡಿದ್ದಾರೆ. ಹೀಗಾಗಿ ವಿರೋಧ ಪಕ್ಷದವರಿಂದ ಎರಡು ರೀತಿಯ ಅಭಿಪ್ರಾಯಗಳು ಬಂದಿವೆ. ಇಡೀ ಎಲ್ಲಾ ವರ್ಗದ ಜನಾಂಗದವರನ್ನು represent ಮಾಡಿರುವಂಥದ್ದು. ನಾನು ಎರಡು–ಮೂರು comments ಮಾಡಿರುವುದನ್ನು ಹೇಳಿಬಿಡುತ್ತೇನೆ.

ಇವತ್ತು ಕನ್ನಡ ಪ್ರಭ ಪತ್ರಿಕೆಯಲ್ಲಿ ಬಂದಿರುವಂಥದ್ದು,

> "ರೈತರ ಜೀವನಮಟ್ಟ ಸುಧಾರಿಸಲು
> ರೈತರ ಆದಾಯ ಆಯೋಗ ರಚಿಸಲು
> ಉದ್ದೇಶಿಸಿರುವುದು ಸರಿ"

ಎಂದು ಡಾ॥ ಮಹಾದೇವಪ್ಪ, ಕೃಷಿ ತಜ್ಞರು ಅಬಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಶ್ರೀ ಎನ್.ಪಿ. ಜವಳಿ, ಕರ್ನಾಟಕ ವಾಣಿಜ್ಯೋದ್ಯಮಿ ಸಂಸ್ಥೆಯ ಅಧ್ಯಕ್ಷರು ಏನು ಹೇಳಿದ್ದಾರೆಂದರೆ,

> "ಶೆಟ್ಟರ್‌ರವರು ಮಂಡಿಸಿರುವ ಚೊಚ್ಚಲ ಬಜೆಟ್
> ಜನಪರವಾಗಿದೆ. ಸಣ್ಣ ವ್ಯಾಪಾರಸ್ಥರಿಗೆ ಈ
> ಬಜೆಟ್ ಬಹಳ ಸಂತಸ ನೀಡಿದೆ"

**THE NEW INDIAN EXPRESS**

> "Bangalore: Notwithstanding low economic growth this fiscal, Chief Minister Jagadish Shettar has managed to present a balanced Budget besides keeping the macroeconomic parameters within limits prescribed in the Karanataka Fiscal Responsibility Act".

By S Rajashekara

ಎನ್ನುವಂಥದ್ದು ಬಂದಿದೆ. ಶ್ರೀ ಟಿ.ವಿ. ಮೋಹನ್‌ದಾಸ್ ಪೈ, ಇವರು ತಜ್ಞರು. ಐ.ಟಿ. ಕ್ಷೇತ್ರದಲ್ಲಿ ಬಹಳಷ್ಟು ಸಾಧನೆ ಮಾಡಿದಂತಹ ಮೋಹನ್‌ದಾಸ್ ಪೈಯವರು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಏನು ಹೇಳಿದ್ದಾರೆಂದರೆ,

> "ಹಿಂದುಳಿದ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಒತ್ತು ನೀಡಿರುವುದನ್ನು ಪ್ರೋತ್ಸಾಹಿಸಬೇಕು. ಕರಾವಳಿ ಭಾಗಕ್ಕೆ ಬಜೆಟ್‌ನಲ್ಲಿ ಹಣದ ನೆರವು ಹರಿದಿದೆ, ಕರಾವಳಿಗೆ ಹೊಂದಿಕೊಂಡಿರುವ ಮಲೆನಾಡು ಜಿಲ್ಲೆಯ ಅಭಿವೃದ್ಧಿಗೆ ಅನುದಾನ ಮೀಸಲಿರಿಸಲು ಬಿಜೆಪಿ ಸರ್ಕಾರ ಮರೆತ್ತಿಲ್ಲ" ಎಂದು ಹೇಳಿದ್ದಾರೆ.

ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಸಂಪಾದಕೀಯದಲ್ಲಿ ಬಂದಿರತಕ್ಕಂಥದ್ದು,

> "ರಾಜ್ಯದ ಯೋಜನೆಯ ಗಾತ್ರ ರೂಪಾಯಿ ಲೆಕ್ಕದಲ್ಲಿ ನಾಲ್ಕು ವರ್ಷಗಳಲ್ಲಿ ದುಪ್ಪಟ್ಟು ಆಗಿರುವುದು ಒಂದು ರೀತಿಯಲ್ಲಿ ಬಜೆಟ್ 'ಸಾಧನೆ' "

ಎನ್ನುವಂಥದ್ದನ್ನು ಅವರು ಈ ಸಂದರ್ಭದಲ್ಲಿ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಪಡೆದಿರುವ Dr Devi Shetty, Chairman Narayana Hrudayalaya. ಅವರು ನಮ್ಮ ಬಜೆಟ್ ಬಗ್ಗೆ ಆರೋಗ್ಯ ಇಲಾಖೆಯ ಬಗ್ಗೆ ಹೇಳಿರುವಂಥದ್ದು

> "The budget allocation for health sector is good this year. There has been an increase of about ` 636 crore compared to the previous year and this will definitely help in developing health care in the State. It is heartening that the government has proposed to come up with a new health insurance scheme by merging the existing Yashaswini

scheme, Arogya Yojane for Rural Co-operative members".

ಈ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮತ್ತೊಬ್ಬರು Kiran Mazumdar Shaw, CMD, Biocon ಎಂಬುವವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರನ್ನು ಪಡೆದವರು ಅವರು DECCAN Chronicle ನಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು ಹೀಗೆ:

> "I think Chief Minister has tried to present a well-rounded budget, encompassing infrastructure, healthcare, education, drinking water, agriculture and rail and road connectivity across the State".

ಈ ರೀತಿ ಬಹಳಷ್ಟು ಅಭಿಪ್ರಾಯಗಳು ಬಂದಿವೆ. ಈ ರೀತಿ ಇವತ್ತು ಮಾಧ್ಯಮ, ತಜ್ಞರು, ಸಾರ್ವಜನಿಕರ ಅಭಿಪ್ರಾಯವನ್ನು ಕ್ರೋಢಿಕರಿಸಿ ಬಹಳಷ್ಟು ಉತ್ತಮವಾದ ಬಜೆಟ್‌ನ್ನು ಮಂಡನೆ ಮಾಡುವಂಥದ್ದನ್ನು ಮಾಡಿದ್ದೇವೆ. ಇವತ್ತು 2013–14 ನೇ ಸಾಲಿನ ಬಜೆಟ್ ಏನು ಮಂಡನೆ ಮಾಡಿದ್ದೇವೆ ಇದು ರಾಜ್ಯದ ಆರ್ಥಿಕ ಬೆಳವಣಿಗೆಗೆ ಮತ್ತು ಸಮಾಜದ ಎಲ್ಲಾ ವರ್ಗಗಳ ಅಭಿವೃದ್ಧಿಗೆ ಪೂರಕವಾದಂತಹ ಬಜೆಟ್. Inclusive growthಗೆ ನಾವು ಒತ್ತು ಕೊಟ್ಟಿದ್ದೇವೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಪ್ರಾದೇಶಿಕ ಅಸಮತೋಲನದ ನಿವಾರಣೆಗೆ ವಿಶೇಷ ಗಮನವನ್ನು ಈ ಬಜೆಟ್‌ನ್ನು ಕೊಟ್ಟಿದ್ದೇವೆ. ಎಲ್ಲಾ ವರ್ಗದ ಜನರ ಆಶಯಗಳಿಗೆ ಸ್ಪಂದಿಸುವ ಸರ್ವಸ್ಪರ್ಶಿ ಮುಂಗಡ ಪತ್ರ ಇದಾಗಿದೆ ಎನ್ನುವ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಇದರಲ್ಲಿ ಪ್ರಮುಖವಾದ ಅಂಶಗಳೇನೆಂದರೆ, ಇಡೀ ರಾಜ್ಯದ ಅಭಿವೃದ್ಧಿಗೆ ಒತ್ತು ಕೊಡುವಂಥದ್ದು. ಎಲ್ಲಾ ರಂಗಕ್ಕೆ ಒತ್ತು ಕೊಡುವಂಥದ್ದು. ಇಡೀ ರಾಜ್ಯದ ಕಲ್ಯಾಣ ಕರ್ನಾಟಕ ನಿರ್ಮಾಣ ಮಾಡುವುದಕ್ಕೆ ಇದು ಹೆಚ್ಚು ಪೂರಕವಾಗಿ

ಕೆಲಸ ಮಾಡುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಇದು ಸುಸ್ಥಿರವಾದಂತಹ ಅಭಿವೃದ್ಧಿ ವಿಕಾಸ ಮುಖಾಂತರ ರಾಜ್ಯದ ಪ್ರತಿ ಪ್ರಜೆಯ ತಲಾ ಆದಾಯವನ್ನು ದ್ವಿಗುಣಗೊಳಿಸುವುದಕ್ಕೆ ಒತ್ತು ಕೊಡುವುದಕ್ಕೆ ಸಾಧ್ಯವಿದೆ. ಪ್ರಮುಖವಾದ ರಂಗಗಳೇನಿವೆ ಕೃಷಿ, ನೀರಾವರಿ, ಶಿಕ್ಷಣ, ಕೌಶಲ್ಯ ಇರಬಹುದು, ಆರೋಗ್ಯ ವಲಯ ಇರಬಹುದು, ಇವೆಲ್ಲದ್ದಕ್ಕೂ ಗುಣಾತ್ಮಕವಾದಂತಹ ಮಾನವ ಸಂಪನ್ಮೂಲವನ್ನು ಸೃಜನೆ ಮಾಡುವಂತಹ ಕೆಲಸ ಈ ಬಜೆಟ್ ಮುಖಾಂತರ ಮಾಡುವುದಕ್ಕೆ ಸಾಧ್ಯವಿದೆ. ಅದೇ ರೀತಿ ಇಂದನ, ರಸ್ತೆ, ರೈಲುಗಳ ಸಂಚಾರ, ಬಂದರುಗಳ ಸಂಪರ್ಕ, ಮುಂತಾದ ಮೂಲ ಸೌಕರ್ಯಗಳ ವಿಕಾಸಕ್ಕೂ ಕೂಡ ಇದು ಒತ್ತು ಕೊಡುತ್ತದೆ. ಕೈಗಾರಿಕಾ ಮತ್ತು ಮಾಹಿತಿ ತಂತ್ರಜ್ಞಾನ ವಲಯದ ವಿಕಾಸದ ಮುಖಾಂತರವೂ ಹೆಚ್ಚಿನ ಉದ್ಯೋಗಾವಕಾಶಕ್ಕೂ ಈ ಬಜೆಟ್ ಮುಖಾಂತರ ಅವಕಾಶ ಕೊಡುವುದಕ್ಕೆ ಸಾಧ್ಯವಿದೆ. ಹಿಂದಿನ ಬಾರಿ ನಾವು ಪ್ರಮುಖವಾದಂತಹ ಇಲಾಖೆಗಳಿಗೆ ಹೆಚ್ಚಿನ ರೀತಿಯ ಅನುದಾನವನ್ನು ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಒಟ್ಟು ಈ ಇಡೀ ಬಜೆಟ್‌ನ outlay, ಗಾತ್ರ ಒಂದು ಲಕ್ಷ ಹದಿನೇಳು ಸಾವಿರ ಐದು ಕೋಟಿ ರೂಪಾಯಿಗಳು. ಕರ್ನಾಟಕ ಇತಿಹಾಸದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಒಂದು outlay ಇರುವಂತಹ ಬಜೆಟ್ ಪ್ರಥಮ ಎನ್ನುವಂಥದ್ದು. ಕಳೆದ ಸಲ ಸದಾನಂದ ಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಒಂದು ಲಕ್ಷ ಐದು ಸಾವಿರ ಕೋಟಿ ರೂಪಾಯಿಗಳಷ್ಟು ಬಜೆಟ್ ಮಂಡನೆ ಮಾಡಿದ್ದರು. ಅದಕ್ಕಿಂತ ಈ ಸಲ ಹೆಚ್ಚಳವಾಗಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ ಪ್ರತ್ಯೇಕವಾದ ಕೃಷಿ ಬಜೆಟ್‌ನ್ನು ನಾವು ಮಂಡನೆ ಮಾಡಿದ್ದೇವೆ. ಇದರ ಗಾತ್ರ ಕೂಡ ಇಪ್ಪತ್ತೆರಡು ಸಾವಿರ ಮುನ್ನೂರು ಹತ್ತು ಕೋಟಿ ರೂಪಾಯಿಗಳು. ಕಳೆದ ಸಲ ಹತ್ತೊಂಬತ್ತು ಸಾವಿರ ಮುನ್ನೂರು ಹತ್ತು ಕೋಟಿ ರೂಪಾಯಿಗಳು. ಕಳೆದ ಸಲ ಹತ್ತೊಂಬತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಇತ್ತು. ಕಳೆದ ವರ್ಷಕ್ಕೆ ಹೋಲಿಕೆ ಮಾಡಿದಾಗ 13.5 ಹೆಚ್ಚಳವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದೇ

ರೀತಿ ವಿಶೇಷ ಘಟಕ ಯೋಜನೆಗೆ 5,800 ಕೋಟಿ ರೂಪಾಯಿಗಳು, ಗಿರಿಜನ ಉಪಯೋಗಕ್ಕೆ 2,350 ಕೋಟಿ ರೂಪಾಯಿಗಳನ್ನು ಇವತ್ತು ಕೊಟ್ಟಿದ್ದೇವೆ. ಅದರ ಜೊತೆಗೆ ಇವತ್ತು ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಅಂದರೆ ಏನು ಪ್ರಾದೇಶಿಕ ಅಸಮತೋಲನವನ್ನು ನಿವಾರಣೆ ಮಾಡಲಿಕ್ಕೆ ಡಾ|| ನಂಜುಂಡಪ್ಪನವರ ವರದಿ ಪ್ರಕಾರ ಏನು ಒಂದು ಹೆಚ್ಚುವರಿ ಗ್ರಾಂಟ್ ಅನ್ನು ಕೊಡುವಲ್ಲಿ ಒತ್ತು ಕೊಡಬೇಕೆನ್ನುವುದು ಇತ್ತು, ಅದಕ್ಕೆ 2,966 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಸುಮಾರು 3,00 ಕೋಟಿ ರೂಪಾಯಿಗಳು ಎಂದು ನಾವು ತಿಳಿದುಕೊಳ್ಳಬಹುದು. ಅಷ್ಟು ಹಣವನ್ನು ನಾವು ಇಲ್ಲಿ ಮುಖ್ಯವಾಗಿ ಕೊಟ್ಟಿದ್ದೇವೆ. ಮತ್ತೆ, ನಾವು ಇಲ್ಲಿ ಬಹಳ ಪ್ರಮುಖವಾಗಿ ಹೇಳುವುದೇನೆಂದರೆ ಶಿಕ್ಷಣ ಇಲಾಖೆಗೆ ಮೊದಲು ಆದ್ಯತೆ ಕೊಟ್ಟಿದ್ದೆವೆ. ಅಂದರೆ, ನಾವು ಶಿಕ್ಷಣ ಇಲಾಖೆಗೆ ಎಷ್ಟು ಒತ್ತು ಕೊಟ್ಟಿದ್ದೇವೆ ಎನ್ನುವುದು ಇಲ್ಲಿ ಮುಖ್ಯವಾಗಿದೆ. ಇವತ್ತು ಬೆಳಿಗ್ಗೆ Private Universities ಬಗ್ಗೆ ಚರ್ಚೆ ಆಗುತ್ತಿತ್ತು. Private Universities ಎಷ್ಟು ಬರುತ್ತವೆ ಎನ್ನುವುದು ಅವರ ವಿಚಾರ. ಆದರೆ, ಸರ್ಕಾರ ನೋಡಿಕೊಳ್ಳುವಂತಹದ್ದು ಅದು ಟೀಚರ್‌ಗಳನ್ನು ತುಂಬುವಂತಹದ್ದು, ಮೂಲಭೂತ ಸೌಕರ್ಯಗಳನ್ನು ಕೊಡುವಂತಹದ್ದು, ಅವರಿಗೆ ವೇತನ ಕೊಡುವಂತಹದ್ದು, ಅನುದಾನ ಕೊಡುವಂತಹದ್ದು ಇವೆಲ್ಲಾ ಪ್ರತಿ ವರ್ಷ ಹೆಚ್ಚಳವಾಗುತ್ತಿದೆ. ಹೀಗಾಗಿ, ಈ ಸಲ ಶಿಕ್ಷಣ ಇಲಾಖೆಗೆ 18,666 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅಂದರೆ, ಸರ್ಕಾರ ಶಿಕ್ಷಣ ಇಲಾಖೆಗೆ ಎಷ್ಟು ಮಹತ್ವ ಕೊಟ್ಟಿದೆ ಎನ್ನುವುದಾಗಿದೆ. ಇಲ್ಲಿ ಮಾನ್ಯ ಸದಸ್ಯರುಗಳು ಮಾತನಾಡುವಾಗ ಒಂದು ಮಾತನ್ನು ಹೇಳಿದರು. ಇವತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಏನು ಗುಣ ಮಟ್ಟದ ಶಿಕ್ಷಣ ಇರುತ್ತದೆ ಅದು ಸರ್ಕಾರದ ಶಾಲೆಗಳಲ್ಲಿ ಬರಬೇಕೆನ್ನುವ ವಿಚಾರವಾಗಿ ಹೇಳಿದರು. ಅದು ನಿಜ. ಇವತ್ತು ಸರ್ಕಾರದ ಶಾಲೆಗಳಿರಬಹುದು, ಅವುಗಳು ಹೈಸ್ಕೂಲ್‌ಗಳಿರಬಹುದು, ಕಾಲೇಜುಗಳಿರಬಹುದು, ತಾಂತ್ರಿಕ ಶಿಕ್ಷಣ ಕಾಲೇಜುಗಳಿರಬಹುದು ಇವುಗಳ ಮತ್ತು ಖಾಸಗಿ ಸಂಸ್ಥೆಗಳು ನಡೆಸುವ ಶಾಲಾ ಕಾಲೇಜುಗಳೊಂದಿಗೆ ಹೋಲಿಕೆ ಆಗುತ್ತಿದೆ. ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಏನೋ ಒಂದು ಉತ್ತಮವಾದ ಶಿಕ್ಷಣ

ಸಿಗುತ್ತದೆ, ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದರೆ ನಮ್ಮ ಮಕ್ಕಳು ಚುರುಕಾಗುತ್ತರೆನ್ನುವುದು ಪೋಷಕರ ಮನೋಭಾವ ಆಗಿದೆ. ಈ ವಿಚಾರದಲ್ಲಿ ನಾವು ಎಷ್ಟೋ ಉದಾಹರಣೆಗಳನ್ನು ನೋಡಿದ್ದೇವೆ. ಸರ್ಕಾರಿ ಶಾಲೆಗಳಲ್ಲಿ ಕಲಿತಂತಹ ವಿದ್ಯಾರ್ಥಿಗಳು ಖಾಸಗಿ ಶಿಕ್ಷಣ ಸಂಸ್ಥೆಗಳ ಶಾಲೆಗಳಲ್ಲಿ ಕಲಿತಂತಹ ವಿದ್ಯಾರ್ಥಿಗಳಿಗಿಂತ ಹೆಚ್ಚು ಬುದ್ಧಿವಂತಿಕೆಯನ್ನು ತೋರಿಸಿದ್ದು, ಮತ್ತು ರ‍್ಯಾಂಕ್‌ಗಳನ್ನು ಗಳಿಸಿದ್ದನ್ನು ನಾವು ನೋಡಿದ್ದೇವೆ. ಆದರೆ, ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಶಾಲೆಗಳು ಎಂದರೆ ಒಂದು ರೀತಿಯ ತಾತ್ಸಾರ ಮನೋಭಾವನೆ ಉಂಟಾಗುತ್ತಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಶಾಲೆಗಳಲ್ಲಿ ಶಿಕ್ಷಣ ಚೆನ್ನಾಗಿರುತ್ತದೆ ಎನ್ನುವ ಒಂದು ಮನೋಭಾವನೆ ಸಮಾಜದಲ್ಲಿ ಬೆಳೆದಿದೆ. ಅದರಿಂದ, ಇವತ್ತು ನಾವು ಹೊರಗಡೆ ಬರಬೇಕಾಗಿದೆ. ಅದರಿಂದ ಹೊರಗಡೆ ಬರುವಲ್ಲಿ ನಾವು ಏನು ಪ್ರಯತ್ನ ಮಾಡಬೇಕಾಗಿದೆ, ಅದನ್ನು ನಾವು ಕಳೆದ 4 ವರ್ಷಗಳಿಂದ ಮಾಡುತ್ತಿದ್ದೇವೆ. ಅದಕ್ಕೆ ಇನ್ನೂ ಹೆಚ್ಚು ಒತ್ತು ಕೊಡಬೇಕಾಗಿದೆ. ಹೆಚ್ಚು ಗುಣಮಟ್ಟದ ಶಿಕ್ಷಣ ಕೊಡಬೇಕಾಗಿದೆ. ಅದಕ್ಕಾಗಿ ಇವತ್ತು ಈ ರೀತಿಯಾದಂತಹ ಅನುದಾನವನ್ನು ಕೊಡುವಂತಹ ಕೆಲಸ ಈ ಬಜೆಟ್ ಮೂಲಕ ಆಗಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಅದರ ಜೊತೆಗೆ ಇಂಧನ ಇಲಾಖೆಗೆ 10,831 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದು ಎರಡನೆಯ ಅತಿ ಹೆಚ್ಚು ಅನುದಾನವಾಗಿದೆ. ಇದಾದಮೇಲೆ ಜಲಸಂಪನ್ಮೂಲ ಇಲಾಖೆಗೆ 9,084 ಕೋಟಿ ರೂಪಾಯಿಗಳು, ಮತ್ತು ಕೇಂದ್ರ ಸರ್ಕಾರದ ಅನುದಾನವನ್ನು ಸಹ ನಾವು ಸೇರಿಸಿದಾಗ ಅದು 11–12 ಸಾವಿರ ಕೋಟಿ ರೂಪಾಯಿಗಳ ಮೇಲೆ ಜಲಸಂಪನ್ಮೂಲ ಇಲಾಖೆಗೆ ಆಗುತ್ತದೆನ್ನುವುದನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇನ್ನು ಗ್ರಾಮೀಣಾಭಿವೃದ್ಧಿಗೂ ಸಹ 7354 ಕೋಟಿ ರೂಪಾಯಿಗಳ ಬಜೆಟ್ ಅನ್ನು ಕೊಟಿದ್ದೇವೆ. ಲೋಕೋಪಯೋಗಿ ಇಲಾಖೆಗೆ 5,321 ಕೋಟಿ ರೂಪಾಯಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ 5,293 ಕೋಟಿ ರೂಪಾಯಿಗಳ ಬಜೆಟ್ ಅನ್ನು ಕೊಟ್ಟಿದ್ದೇವೆ. ಅಂದರೆ, ಏನು ನಮ್ಮ ಆದ್ಯತೆ ಇದೆ, ಅಂದರೆ ಪ್ರಮುಖವಾದಂತಹ

ಇಲಾಖೆಗಳು ಯಾವ್ಯಾವುದು ಇದೆ, ಅವುಗಳಿಗೆ ಮತ್ತು ಯಾವುದು ಜನರಿಗೆ ನೇರವಾಗಿ ತಲುಪಬೇಕು, ಅದಕ್ಕೆ ಹೆಚ್ಚು ಆದ್ಯತೆಯನ್ನು ಕೊಟ್ಟಿದ್ದೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಮತ್ತೆ ಕೃಷಿಗೆ ಸಂಬಂಧಪಟ್ಟಂತೆ ಹಾಗೂ ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟಂತೆ ನಜೆಟ್ ಪೂರ್ವದಲ್ಲಿ ಅಂದರೆ ಒಂದು-ಒಂದೂವರೆ ತಿಂಗಳುಗಳಿಂದ ಒಂದು Review Meeting ಮಾಡಿದ್ದೆ. ಇದರ ಜೊತೆಗೆ ಸಂಘ-ಸಂಸ್ಥೆಗಳ ಜೊತೆಯಲ್ಲೂ ಸಮಾಲೋಚನೆ ಮಾಡಿದ್ದೇನೆ. ಮುಂದೆ ನಮ್ಮ ಬೇರೆ ಬೇರೆ ಅಸೋಸಿಯೇಷನ್, ವಾಣಿಜ್ಯೋದ್ಯಮ ಸಂಘ, FKCCI ಅವರ ಜೊತೆ ಮತ್ತು ಉಳಿದ ಅಸೋಸಿಯೇಷನ್ ಜೊತೆ ಹಾಗೂ ರೈತರ ಸಂಘದವರ ಜೊತೆಯೂ ಸಭೆ ಮಾಡಿದೆ. ರೈತ ನಾಯಕರು ಬಂದಿದ್ದರೂ, ರೈತ ಸಂಘದ ಪ್ರಮುಖರು ಬಂದಿದ್ದರು. ಅವರ ಜೊತೆ ಮಾತನಾಡಿದಾಗ ಅವರ ಕಡೆಯಿಂದ ಒಂದು ಅಭಿಪ್ರಾಯ ಬಂತು. ಅದು ಏನೆಂದರೆ, ನೌಕರರು, ಸಿಬ್ಬಂದಿ ಏನು ಇದ್ದಾರೆ, ಅವರುಗಳಿಗೆ ಪ್ರತಿ ವರ್ಷ ವೇತನ ಪರಿಷ್ಕರಣೆ ಮಾಡಿ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದರು. ಬಹುಶಃ ವಿಧಾನ ಪರಿಷತ್ತಿನಲ್ಲಿ ಶಿಕ್ಷಕರ ಬಗ್ಗೆ ಸಾಕಷ್ಟು ಚರ್ಚೆಗಳಾಗುತ್ತವೆ. ಇದರ ಬಗ್ಗೆ ನಾವೆಲ್ಲಾ ಸಾಕಷ್ಟು ಹೋರಾಟ ಮಾಡುತ್ತೇವೆ. ಇವುಳೆಲ್ಲಾ organized sector ಗಳು. ಆದರೆ, ರೈತರುಗಳು organized sector ಗಳಲ್ಲಿ ಬರುವುದಿಲ್ಲ. ಕೆಲವು ಕಾರ್ಮಿಕರು ಮತ್ತು ಲಕ್ಷಾಂತರ ರೈತ ಕಾರ್ಮಿಕರಿದ್ದಾರೆ. ಅವರ ಬಗ್ಗೆ ನಾವುಗಳ್ಯಾರು ಹೋರಾಟ ಮಾಡುವುದಿಲ್ಲ. Un-organized sector ನಲ್ಲಿ ಕೋಟ್ಯಾಂತರ ಜನರಿದ್ದಾರೆ. ಅದೇ ರೀತಿ ರೈತರು ಏನು ಇದ್ದಾರೆ, ಅವರುಗಳು ಸಹ ಕೋಟ್ಯಾಂತರ ಜನರಿದ್ದಾರೆ. ಇವರುಗಳೆಲ್ಲಾ un-organized sector ನಲ್ಲಿ ಬರುತ್ತಾರೆ. ಇವರುಗಳಿಗೆ ನಿಗದಿತ ವೇತನ ಇರುವುದಿಲ್ಲ. ಇಷ್ಟು ವರಮಾನವೆಂದು ಅವರುಗಳಿಗೆ ಇರುವುದಿಲ್ಲ. ಇವತ್ತು ಯಾವುದೋ ಒಂದು ಬೆಳೆಯನ್ನು ಬೆಳೆಯುತ್ತೇವೆ, ಆ ಬೆಳೆಯನ್ನು ಬೆಳೆಯುವಂತಹ ಸಂದರ್ಭದಲ್ಲಿ ಏನೋ ಒಂದು ಬೆಲೆ ಇರುತ್ತದೆ. ಆ ಬೆಳೆ ಬಂದು ಕೈಗೆ ಬಂದಾಗ ಅದಕ್ಕೆ ಮಾರುಕಟ್ಟೆಯಲ್ಲಿ ಬೆಲೆಯೇ ಇರುವುದಿಲ್ಲ. ಇದರಿಂದಾಗಿ, ಯಾವಾಗಲೂ

ರೈತರು ತೊಂದರೆಗೊಳಗಾಗುತ್ತಾರೆ. ಆ ದೃಷ್ಟಿಯಿಂದ ಇದಕ್ಕೊಂದು ಅಧ್ಯಯನ ಮಾಡಬೇಕು, ಇವತ್ತು ಯಾವ್ಯಾವ ಬೆಳೆಯನ್ನು ಬೆಳೆದಾಗ ಎನೇನು ಅಗುತ್ತದೆ, ಅವರಿಗೆ ವರಮಾನ ಎಷ್ಟು ಆಗಬಹುದು, ಖರ್ಚು ಎಷ್ಟಾಗಬಹುದು, ಇದರ ಬಗ್ಗೆ ಅಧ್ಯಯನ ಮಾಡಲು ಒಂದು ಅಯೋಗ ಬೇಕೆನ್ನುವ ಒಂದು ಬೇಡಿಕೆ ಇತ್ತು. ಹೀಗಾಗಿ, ಕೃಷಿ ತಜ್ಞರಾದ ಡಾ॥ ಸ್ವಾಮಿನಾಥನ್ ರವರು ಇದಕ್ಕೆ ಹೆಚ್ಚು ಒತ್ತು ಕೊಟ್ಟು ಅವರು ತಮ್ಮ ವರದಿಯಲ್ಲಿ ಶಿಫಾರಸ್ಸು ಮಾಡಿದ್ದರು. ಇದರ ಬಗ್ಗೆ ಒಂದು ಆಯೋಗ ಮಾಡಬೇಕೆಂದು ಸದರಿ ವರದಿಯಲ್ಲಿ ತಿಳಿಸಿದ್ದರು. ಆ ದೃಷ್ಟಿಯಿಂದ ಅದನ್ನೆಲ್ಲಾ ಇಟ್ಟುಕೊಂಡು, ಇವತ್ತು ಪ್ರಥಮ ಬಾರಿಗೆ ನನ್ನ ಬಜೆಟ್‌ನಲ್ಲಿ **ಪ್ರತಿಯೊಬ್ಬ ರೈತರ ಆದಾಯ ಆಯೋಗ** ಎನ್ನುವಂತಹದ್ದನ್ನು ಸ್ಥಾಪನೆ ಮಾಡುವುದಕ್ಕೆ ಇವತ್ತು ಹೆಜ್ಜೆಯನ್ನಿಟ್ಟಿದ್ದೇವೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿಲಿಕ್ಕೆ ಬಯಸುತ್ತೇನೆ. ಹೀಗಾಗಿ, ಆ ಮೂಲಕ ಅಲ್ಲಿ ಕೃಷಿ ತಜ್ಞರನ್ನು ನೇಮಕ ಮಾಡಿ, ರೈತರ ಬಗ್ಗೆ ಅಧ್ಯಯನ ಮಾಡಿಕೊಂಡು ಆ ಬೆಳೆ, ಅದಕ್ಕೆ ದರ ಎಷ್ಟು ನಿಗದಿ ಮಾಡಬೇಕು, ಇವೆಲ್ಲಾ ದೃಷ್ಟಿಯಿಂದ ಪ್ರಥಮ ಬಾರಿಗೆ ದೇಶದಲ್ಲಿ ಇದು ಮೊದಲನೆಯದು ಎಂದು ನಾನು ತಿಳಿದುಕೊಂಡಿದ್ದೇನೆ. ಈ ರೀತಿಯಲ್ಲಿ ಬೇರೆ ರಾಜ್ಯದಲ್ಲಿ ಈ ರೀತಿಯ ರೈತರ ಆದಾಯ, ಆಯೋಗ ಎನ್ನುವಂತಹದ್ದು ಇಲ್ಲ. ಹೀಗಾಗಿ, ಮೊದಲ ಬಾರಿಗೆ ನಮ್ಮ ಕರ್ನಾಟಕದಲ್ಲಿ ಇದನ್ನು ಮಾಡಿದ್ದೇವೆ ಎನ್ನುವಂತಹದ್ದನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಮತ್ತೆ ಇದರ ಜೊತೆಗೆ ಕಳೆದ ಬೆಳಗಾವಿ ಅಧಿವೇಶನದಲ್ಲಿ ನಾನು ಅಂದು ಸದನದಲ್ಲಿ promise ಮಾಡಿದ್ದೆ. ಅಲ್ಲಿ ರೈತ ಸಂಘಟನೆ ಹೋರಾಟ ಮಾಡಿದರು. ಕಬ್ಬು ದರ ನಿಗದಿಯಾಗಬೇಕೆಂಬ ವಿಚಾರದಲ್ಲಿ ಆ ಜಿಲ್ಲೆಯಿಂದ ಬಂದಂತಹ ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್. ಪಾಟೀಲ್‌ರವರಿಗೆ ಗೊತ್ತಿದೆ. ಹೀಗಾಗಿ, ಅಲ್ಲಿ ಹೋರಾಟ ನಡೆಯಿತು. ಅಧಿವೇಶನದಲ್ಲಿ ಇದು ಪ್ರಸ್ತಾಪ ಆಯಿತು. ಪ್ರಸ್ತಾಪ ಆದಾಗ ನಾವೆಲ್ಲರೂ ಕೂಡಿಕೊಂಡು promise ಮಾಡಿದ್ದೆವು. ಅದು ಎನೆಂದರೆ, ಆ ದರವನ್ನು ನಿಗದಿ ಮಾಡಲಿಕ್ಕೆ revenue share ನಿಗದಿ ಮಾಡಲಿಕ್ಕೆ SAP (State Advised Price) ಕಾನೂನನ್ನು ತೆಗೆದುಕೊಂಡು ಬರುತ್ತೇವೆಂದು

ಹೇಳಿದ್ದೆವು. ಇವತ್ತು 2–3 ರಾಜ್ಯಗಳು ಇದರ ಬಗ್ಗೆ ಕಾನೂನನ್ನು ತಂದಿವೆ. ನಮ್ಮ ರಾಜ್ಯದಲ್ಲಿ ಪ್ರತಿ ಸಲ ಕಬ್ಬು ಬೆಳೆದ ಮೇಲೆ, ಅದಕ್ಕೆ ಸರಿಯಾದ ದರ ನಿಗದಿಯಾಗಿಲ್ಲ, ಕಾರ್ಖಾನೆಯ ಮಾಲೀಕರು ಅದಕ್ಕೆ ಒಂದು ದರವನ್ನು ನಿಗದಿ ಮಾಡಲಿಲ್ಲ, ಅದಕ್ಕಾಗಿ ಅವರ ಹೋರಾಟ. ಈ ವಿಚಾರವಾಗಿ ಮುಖ್ಯಮಂತ್ರಿಗಳ ತನಕ ಬರುವುದು, ಸಕ್ಕರೆ ಮಂತ್ರಿಗಳ ತನಕ ಬರುವುದು. ಪ್ರತಿ ಸಲ, ಪ್ರತಿ ವರ್ಷವೂ ಹೋರಾಟ. ನಾನು ಹಿಂದೆ ಕಂದಾಯ ಮಂತ್ರಿ ಇದ್ದಾಗ ನನಗೆ ಸಕ್ಕರೆ ಖಾತೆ ಹೆಚ್ಚುವರಿಯಾಗಿತ್ತು. ಅವತ್ತು ಸಹಿತ 2–3 ದಿನಗಳ ಕಾಲ ಮೀಟಿಂಗ್ ಮಾಡಿದೆ. ತದನಂತರ, ನಾನು ಮುಖ್ಯಮಂತ್ರಿಯಾದ ಮೇಲೆ ಇದರ ಬಗ್ಗೆ ದರ ನಿಗದಿ ಮಾಡಿ ಎಂದು ಮತ್ತೆ ರೈತ ಸಂಘದವರು ಬಂದರು. ಬೇರೆ ಬೇರೆ ಜಿಲ್ಲೆಗಳಲ್ಲಿ ಹೋರಾಟ ನಡೆಯಿತು. ಅದರೆ, ನಮಗೆ ಅಧಿಕಾರ ಇಲ್ಲ. ಮುಖ್ಯಮಂತ್ರಿಗಳಿಗೆ ಇರಬಹುದು, ಸರ್ಕಾರಕ್ಕೆ ಇರಬಹುದು. ನಾವು ಮಧ್ಯೆ ಪ್ರವೇಶ ಮಾಡಲಿಕ್ಕೆ ಬರುವುದಿಲ್ಲ. ಇದು ಆ ಕಾರ್ಖನೆಯ ಮಾಲೀಕರು ಮತ್ತು ರೈತರಿಗೆ ಬಿಟ್ಟಂತಹ ವಿಚಾರ. ಅದಕ್ಕೆ ನಮಗೇನೂ ಅಧಿಕಾರವಿಲ್ಲ. ನಾವು ಸುಮ್ಮನೆ ಅವರಿಬ್ಬರ ಮಧ್ಯೆದಲ್ಲಿ ಮದ್ಯವರ್ತಿಗಳಾಗಿ ಒಂದು ಸಮಾಧಾನ ಮಾಡುವಂತಹ ಕೆಲಸವನ್ನು ನಾವು ಮಾಡಬೇಕು. ಅದಕ್ಕೆ ಕಾಮೂಮು ಚೌಕಟ್ಟು ಇರಲಿಲ್ಲ, basic entity ಇರಲಿಲ್ಲ. ಅದಕ್ಕೆ ನಾನು ಪ್ರಥಮ ಭಾರಿಗೆ ಏನು ಮಾಡಿದೆ ಎಂದರೆ ನಮ್ಮ ಕೃಷಿ ಮಂತ್ರಿ ನಮ್ಮ ಶ್ರೀ ಉಮೇಶ್ ಕತ್ತಿಯವರ ಅಧ್ಯಕ್ಷತೆಯಲ್ಲಿ, ಶ್ರೀಯುತ ರವೀಂದ್ರನಾಥ್‌ರವರ ನೇತೃತ್ವದಲ್ಲಿ ಕಾರ್ಖಾನೆಯ ಮಾಲೀಕರು ಮತ್ತು ಅಲ್ಲಿ ರೈತ ಮುಖಂಡರ ಸಮಿತಿಯನ್ನು ಮಾಡಿ ಅವರು ಚರ್ಚೆ ಮಾಡಲಿಕ್ಕೆ ಚಾಲನೆ ನೀಡಿದ್ದೇವೆ. ಅದಕ್ಕೆ ಮೊದಲಿಗೆ ಒಂದು ಕಾನೂನು ಚೌಕಟ್ಟನ್ನು ಕೊಟ್ಟಿದ್ದೇನೆ. ಅದು ಅಷ್ಟೊಂದು ಯಶಸ್ವಿಯಾಗಲಿಲ್ಲ. ಮುಂದೆ ಅದಕ್ಕೆ ಒಂದು ಕಾನೂನು ಚೌಕಟ್ಟು ಸಿಗಲಿಕ್ಕೆ ಅದಕ್ಕೆ ಒಂದು ಕಾನೂನು ಮಾಡಬೇಕೆನ್ನುವ ಒಂದು ಅಭಿಪ್ರಾಯ ಬಂದಾಗ ಬೆಳಗಾಂ ಅಧಿವೇಶನದಲ್ಲಿ ನಾನು ಭರವಸೆಯನ್ನು ಕೊಟ್ಟಿದ್ದೆನು. ಆ ರೀತಿ ಈ ಒಂದು ಅಧಿವೇಶನದಲ್ಲಿ SAP ಕಾನೂನನ್ನು ಬಿಲ್ ಮೂಲಕ ತಂದಿದ್ದು, ಬಹುಶಃ ಆ ಮನೆಯ ಮತ್ತು

ಈ ಮನೆಯ ಎಲ್ಲಾ ಸದಸ್ಯರು ಸರ್ವಾನುಮತದಿಂದ ಆ ಬಿಲ್ ಪಾಸ್ ಮಾಡಿಕೊಟ್ಟಿದ್ದಾರೆ. ಹೀಗಾಗಿ, ಮೊದಲ ಬಾರಿಗೆ ಈ ದರ ನಿಗದಿ ಮತ್ತು ಹಲವಾರು ವಿಚಾರಗಳ ಬಗ್ಗೆ ಕಬ್ಬು ಬೆಳೆಗಾರರದ್ದು ಸೇರಿದಂತೆ ಒಂದು ಕಾನೂನುಬದ್ಧವಾದಂತಹ ಕಾನೂನು ಈ ರಾಜ್ಯದಲ್ಲಿ ಬಂದಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿಲಿಕ್ಕೆ ಬಯಸುತ್ತೇನೆ. ಇದು ರೈತರ ಹಿತಾಸಕ್ತಿ ದೃಷ್ಟಿಯಿಂದ ಒಳ್ಳೆಯದಾಗುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ. ಮತ್ತೆ ಮತ್ತೊಂದು ಪ್ರಮುಖವಾದ ನಿರ್ಧಾರವನ್ನು ಕೈಗೊಂಡಿದ್ದು ಏನೆಂದರೆ, ರೈತರ ಜಮೀನುಗಳಿಗೆ ಸಂಬಂಧಪಟ್ಟಂತೆ ಎಲ್ಲಾ ವಿವರಗಳನ್ನು ಒಳಗೊಂಡಂತೆ ಸಮಗ್ರ ಪಾಸ್ ಬುಕ್ ವಿತರಣೆ ಮಾಡುವಂತಹ ಕ್ರಮವನ್ನು ನಾನು ಇಂದು ಘೋಷಣೆ ಮಾಡಿದ್ದೇನೆ. ಮತ್ತೆ ಅದರ ಜೊತೆಗೆ ರೈತರು ತಮಗೆ ಇಷ್ಟವಾದಂತಹ ಕೃಷಿ ಉಪಕರಣ, ಟ್ರಾಕ್ಟರ್ಸ್ ಇರಬಹುದು, ಟಿಲ್ಲರ್ಸ್ ಇರಬಹುದು, ಭತ್ತ, ಕಬ್ಬು, ಕಟಾವ್ ಯಂತ್ರ ಇರಬಹುದು, ಅವುಗಳನ್ನು ಅವರೇ ಖರೀದಸಲು ಅಥವಾ ಆ ಉಪಕರಣಗಳನ್ನು ಬಾಡಿಗೆ ತೆಗೆದುಕೊಳ್ಳಲಿಕ್ಕೆ ಇವತ್ತು ಅವಕಾಶ ನೀಡುವಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಈ ಪದ್ಧತಿ ಹಿಂದೆಯೂ ಇತ್ತು, ಅದಕ್ಕೆ ಮತ್ತೊಷ್ಟು ಜೋಡಣೆ ಮಾಡಿ, ಅದಕ್ಕೆ ಸಬ್ಸಿಡಿ ಕೊಡುವಂತಹದ್ದು. ಮತ್ತೆ ಆ ಸಬ್ಸಿಡಿಯನ್ನು ಕೊಡುವಾಗ ಅದು ಕಂಪನಿಗೆ ಹೋಗುತ್ತಿತ್ತು. ಈಗ ನೇರವಾಗಿ ಆ ಸಬ್ಸಿಡಿ ಹಣ ಇವತ್ತು ನೆರವಾಗಿ ಆ ರೈತರಿಗೆ ಮುಟ್ಟುವ ರೀತಿಯಲ್ಲಿ ಈ ಯೋಜನೆಯಲ್ಲಿ ಸೇರ್ಪಡೆ ಮಾಡಿದ್ದೇನೆ. ಸಬ್ಸಿಡಿಯ ಲಾಭ ಏನಿದೆ, ಅದು ನೇರವಾಗಿ ರೈತರಿಗೆ ಮುಟ್ಟಬೇಕು. ಆ ರೀತಿಯ ಯೋಜನೆಯನ್ನು ನಾನು ಈ ಬಾರಿ ಪ್ರಕಟಣೆ ಮಾಡಿದ್ದೇನೆ ಎನ್ನುವ ಮಾತನ್ನು ಹೇಳುತ್ತೇನೆ. ಅದೇ ರೀತಿಯಲ್ಲಿ 0% ಬಡ್ಡಿ ದರದಲ್ಲಿ ಏನು 1–00 ಲಕ್ಷದವರೆಗೆ ಸಾಲವನ್ನು ಕೊಡಲಾಗುತ್ತಿತ್ತು, ಅದನ್ನು ಮುಂದುವರಿಸಿದ್ದೇವೆ. ಶೇಕಡ 3 ರಂತೆ ಸೊಸೈಟಿಗಳ ಮೂಲಕ ಸಾಲವನ್ನು ಕೊಡುವಂತಹದ್ದನ್ನು ಸಹ ನಾವು ಇವತ್ತು ಮುಂದುವರಿಸಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ಈ ಹಿಂದೆ ಬೆಂಗಳೂರಿನಲ್ಲಿ ನಡೆದಂತಹ ಅಧಿವೇಶನದಲ್ಲಿ ಅಂದರೆ,

ನಾನು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿದ ಕೆಲವೇ ದಿವಸಗಳಲ್ಲಿ ಎನು ಅಧಿವೇಶನ ಬಂತು, ಅಂದು ಬರಗಾಲದ ಬವಣೆಯನ್ನು ಅನುಭವಿಸುವಂತಹ ಸಂದರ್ಭದಲ್ಲಿ ನಮ್ಮ ರೈತರ ನೆರವಿಗೆ ಬರಬೇಕು ಎನ್ನುವ ದೃಷ್ಟಿಯಿಂದ ತಕ್ಷಣವೇ 25 ಸಾವಿರ ರೂಪಾಯಿಗಳವರೆಗೆ ಎಲ್ಲಾರೈತರ ಸಾಲವನ್ನು ಮನ್ನಾ ಮಾಡಿದ್ದು, ಈಗಾಗಲೇ ಅದು ಘೋಷಣೆಯಾಗಿದ್ದು, ಅದು ಈಗ ಅನುಷ್ಠಾನವಾಗುತ್ತಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಹಿಂದೆ 3,600 ಕೋಟಿ ರೂಪಾಯಿಗಳು ಸರ್ಕಾರದ ಬಜೆಟ್ ಮೇಲೆ ಹೊರೆ ಬಂದಾಗಲೂ ಸಹಿತ ಆ ಒಂದು ದಿಟ್ಟ ನಿರ್ಧಾರವನ್ನು ಆ ಸಂದರ್ಭದಲ್ಲಿ ನಾವು ತೆಗೆದುಕೊಂಡಿದ್ದೇವೆ. ಅದರಿಂದಾಗಿ, 16 ಲಕ್ಷ ರೈತರಿಗೆ ಇವತ್ತು ಅನುಕೂಲವಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇಲ್ಲಿ ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರ ಸದಸ್ಯರು ಚರ್ಚೆ ಮಾಡುವಾಗ ಹಣವನ್ನೇ ಕೊಟ್ಟಿಲ್ಲವೆಂದು ಹೇಳೀದರು. ಹಣ ಬಿಡುಗಡೆ ಮಾಡಿಲ್ಲವೆಂದು ಹೇಳೀದರು. ಈಗಾಗಲೇ ನಾವು 350–400 ಕೋಟಿ ರೂಪಾಯಿಗಳಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಮತ್ತೆ ಕಳೆದ ಅಧಿವೇಶನದಲ್ಲಿ ಪೂರಕ ಅಂದಾಜನ್ನು ಮಂಡನೆ ಮಾಡಿದಾಗ 1,850 ಕೋಟಿ ರೂಪಾಯಿಗಳ ಹಣಕ್ಕೂ ಸಹಿತ ನಿಮ್ಮ ಒಪ್ಪಿಗೆಯನ್ನು ತೆಗೆದುಕೊಂಡಿದ್ದೇವೆ. ಅದನ್ನು ಮರುಪಾವತಿ ಮಾಡಲಿಕ್ಕೆ ಹಣವನ್ನು reserve ಮಾಡಿ ಇಟ್ಟಿದ್ದೇವೆ. ಎಲ್ಲಿ ಸೊಸೈಟಿಗಳ ಮೂಲಕ due ಆಗಿ ಏನು ಹಣ ಬರುತ್ತದೆ, ತಕ್ಷಣವೇ ನಾವು ಅದಕ್ಕೆ ಮಂಜೂರಾತಿ ಕೊಡುವುದಕ್ಕೆ ನಾವು ತಯಾರಿದ್ದೇವೆ. ಅದಕ್ಕೆ ತಕ್ಷಣವೇ ಮಂಜೂರಾತಿಯನ್ನು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ಈಗಾಗಲೇ ಯಾವ ಬಿಲ್ಲುಗಳು ಬಂದಿವೆ ಆ ಬಿಲ್ಲುಗಳ ಹಣವನ್ನು ಸೊಸೈಟಿಗೆ ತುಂಬುವಂಥ ಕೆಲಸವನ್ನು ಸರ್ಕಾರದ ವತಿಯಿಂದ ಮಾಡಿದ್ದೇವೆ. ಅದರಲ್ಲಿ ಯಾವುದನ್ನೂ ತಡ ಮಾಡಲಿಲ್ಲ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬಹಳಷ್ಟು ರೈತರು ಸಾಲವನ್ನು ತೆಗೆದುಕೊಂಡಿದ್ದಾರೆ. ನಾವು ಇವತ್ತು ಸೊಸೈಟಿಗಳ ಮುಖಾಂತರ 25,000 ರೂಪಾಯಿಯವರೆಗೆ ಕೃಷಿ ಸಾಲವನ್ನು ಮನ್ನಾ

ಮಾಡಿದ್ದೇವೆ. ನಾನು ಪ್ರತಿ ಪಕ್ಷದ ಸದಸ್ಯರಲ್ಲಿ ಒಂದು ವಿನಂತಿ ಮಾಡುತ್ತೇನೆ. ದಯವಿಟ್ಟು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ. ಆವತ್ತೂ ನಾನು ಒತ್ತಾಯ ಮಾಡಿದ್ದೆ. ರೈತರು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲವನ್ನು ಏನು ತೆಗೆದುಕೊಂಡಿದ್ದಾರೆ ಅವರಿಗೂ 25,000 ರೂಪಾಯಿಗಳ ಸಾಲವನ್ನು ಮನ್ನಾ ಮಾಡಿಸಿದರೆ ಅನುಕೂಲವಾಗುತ್ತದೆ. ಅಲ್ಲಿಯೂ 18-19 ಲಕ್ಷ ಜನ ರೈತರಿದ್ದಾರೆ ಅವರಿಗೂ ಅನುಕೂಲವಾಗುತ್ತದೆ. ಎಲ್ಲಾ ಹೊರೆಯನ್ನು ರಾಜ್ಯ ಸರ್ಕಾರವೇ ಹೊತ್ತುಕೊಳ್ಳುವುದಿಲ್ಲ. ತಾವೂ ಕೂಡ ಸ್ವಲ್ಪ ಮಟ್ಟಿಗೆ ಆ ಭಾರವನ್ನು ಹೊತ್ತುಕೊಂಡು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಬೇಕೆಂದು ವಿನಂತಿಸುತ್ತೇನೆ. ಹಾಲು ಉತ್ಪಾದನೆ ಮಾಡತಕ್ಕಂಥಹ ವ್ಯಕ್ತಿಗಳಿಗೆ ಪ್ರತಿ ಲೀಟರಿಗೆ 2 ರೂಪಾಯಿ ಸಬ್ಸಿಡಿ ಕೊಡತಕ್ಕಂತಾದ್ದು ಏನು ಇತ್ತು ಆ ಯೋಜನೆಯನ್ನು ಮುಂದುವರೆಸಿದ್ದೇವೆ. ನಾವು 2 ರೂಪಾಯಿ ಸಬ್ಸಿಡಿಯನ್ನು ನಮ್ಮ ರಾಜ್ಯದಲ್ಲಿ ಕೊಡುತ್ತಿರುವುದರಿಂದ ಶೇಕಡ 40 ಪರ್ಸೆಂಟ್‌ನಷ್ಟು ಹಾಲಿನ ಉತ್ಪಾದನೆ ಹೆಚ್ಚಳವಾಗಿದೆ. ಇದನ್ನು ಲೆಕ್ಕಾಚಾರ ಮಾಡಲಾಗಿದೆ. ಬೇರೆ ರಾಜ್ಯದವರು ಇಲ್ಲಿ ಬಂದು ಇಷ್ಟು ಹಾಲಿನ ಉತ್ಪಾದನೆ ಹೇಗೆ ಹೆಚ್ಚಳವಾಗಿದೆ ಎಂದು ಅಧ್ಯಯನ ಮಾಡಿದರು. ಕೆ.ಎಂ.ಎಫ್. ನವರು ಹಾಲಿನ ದರ ಹೆಚ್ಚಳ ಮಾಡಿದ್ದಾರೆ. ಯಾಂತ್ರೀಕೃತ ಮೀನುಗಾರಿಕೆ ನೀಡತಕ್ಕಂಥ ಕರಾರು ರಹಿತ ಡೀಸೆಲ್ ಪ್ರಮಾಣವನ್ನು 1,30,000 ಕಿಲೋ ಲೀಟರಿಗೆ ಈ ಸಲ ನಾವು ಹೆಚ್ಚಳವನ್ನು ಮಾಡಿದ್ದೇವೆ. ಮತ್ತು ಹತ್ತು ಹೆಚ್.ಪಿ. ಕೃಷಿ ಪಂಪ್‌ಸೆಟ್‌ಗೆ ಉಚಿತ ವಿದ್ಯುತ್ ಸೌಲಭ್ಯ ನೀಡುವ ಕೆಲಸವನ್ನು ನಾವು ಕಳೆದ ಎರಡು ವರ್ಷದಿಂದ ಮಾಡಿದ್ದೇವೆ. ಈ ವರ್ಷದ ಆಯವ್ಯಯದಲ್ಲಿ ಹತ್ತು ಹೆಚ್.ಪಿ,ವರೆಗಿನ ಕೃಷಿ ಪಂಪ್‌ಸೆಟ್‌ಗೆ ಉಚಿತ ವಿದ್ಯುತ್ ನೀಡುವುದನ್ನು ಮುಂದುವರೆಸಿದ್ದೇವೆ. ಚಿಕ್ಕೋಡಿ, ಧಾರವಾಡ, ಬಾಗಲಕೋಟೆಯ ಕೆಲವು ಭಾಗಗಳಲ್ಲಿ ಅವರು ಏತ ನೀರಾವರಿ ಸಹಕಾರ ಸಂಘಗಳನ್ನು ಮಾಡಿಕೊಂಡಿದ್ದಾರೆ. ಅಲ್ಲಿ ಬಡ ರೈತರು ಸದಸ್ಯರಾಗಿದ್ದಾರೆ. ಅವರೆಲ್ಲರೂ ಕೂಡಿಕೊಂಡು ಒಟ್ಟಿಗೆ 50 ಹೆಚ್.ಪಿ. ವರೆಗೆ ತಮ್ಮ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಅನ್ನು ಉಪಯೋಗ ಮಾಡುತ್ತಾರೆ. ಅವರು ಈ ಪಂಪ್‌ಸೆಟ್‌ಗೆ ಉಚಿತವಾಗಿ

ವಿದ್ಯುತ್ ನೀಡುವ ಸೌಲಭ್ಯದಿಂದಾಗಿ ವಂಚಿತರಾಗುತ್ತಿದ್ದಾರೆ. ಅವರೆಲ್ಲರೂ ಬಂದು ನನ್ನಲ್ಲಿ ಮನವಿ ಮಾಡಿದರು. ನಾವೆಲ್ಲರೂ ಬಡ ರೈತರಾಗಿದ್ದೇವೆ ನಾವು ಒಂದು ಏತ ನೀರಾವರಿ ಸಂಘವನ್ನು ಮಾಡಿಕೊಂಡು ಪಂಪ್‌ಸೆಟ್ ಮುಖಾಂತರ ನೀರನ್ನು ತೆಗೆದುಕೊಳ್ಳುತ್ತೇವೆ. ಆದರೆ ನಮಗೆ ಸರ್ಕಾರದ ಈ ಸೌಲಭ್ಯವಿಲ್ಲ. ನಾವು ಈ ಪಂಪ್‌ಸೆಟ್‌ಗೆ ಬಳಸುವ ವಿದ್ಯುತ್ ಸರಬರಾಜು ಸಂಸ್ಥೆಗೆ ಬಿಲ್ ಅನ್ನು ಕಟ್ಟುತ್ತಿದ್ದೇವೆ. ಇದು ನಮಗೆ ಆಗುವುದಿಲ್ಲ ತೊಂದರೆಯಾಗುತ್ತದೆ ಎಂದು ಅವರು ಹೇಳಿದರು. ಈ ಸಲದ ಆಯವ್ಯಯದಲ್ಲಿ ನಾನು ಅದಕ್ಕೂ ಒಂದು ಪ್ರಾವಿಜನ್ ಅನ್ನು ಮಾಡಿದ್ದೇನೆ. ರೈತ ಏತ ನೀರಾವರಿ ಸಹಕಾರ ಸಂಘಗಳ ವ್ಯಾಪ್ತಿಯ ಸುಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 50 ಹೆಚ್.ಪಿ ವರೆಗಿನ ಮೋಟಾರು ಪಂಪ್‌ಸೆಟ್‌ಗಳಿಗೆ ಸಂಬಂಧಿಸಿದಂತೆ ವಿದ್ಯುತ್ ಮರುಪಾವತಿಯನ್ನು ಮಾಡುತ್ತೇವೆ ಎಂಬ ಒಂದು ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇವೆ. ಇದರಿಂದಾಗಿ ಲಕ್ಷಾಂತರ ಬಡ ರೈತರಿಗೆ ಅನುಕೂಲವಾಗುವುದಕ್ಕೆ ಸಾಧ್ಯವಾಗಿದೆ. ಇದರ ಜೊತೆಗೆ ಸೋಲಾರ್ ಅನ್ನು ಬಳಸಿಕೊಂಡು ಈ ಪಂಪ್‌ಸೆಟ್‌ಗಳು ಓಡುವುದಕ್ಕೆ ಅಗತ್ಯವಿರುವ ಸೌಲಭ್ಯವನ್ನು ತರುವುದು ಅಗತ್ಯವಾಗಿದೆ. ಈ ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡುತ್ತಿರುವುದರಿಂದಾಗಿ ಸಾವಿರಾರು ಕೋಟಿ ರೂಪಾಯಿಯ burden ಸರ್ಕಾರದ ಮೇಲೆ ಬೀಳುತ್ತಿದೆ. ಬೆಸ್ಕಾಂ, ಹೆಸ್ಕಾಂ ಮೇಲೆ ಈ ಹೊರೆ ಬೀಳುತ್ತಿದೆ. ಆದುದರಿಂದಾಗಿ ಸೌರ ವಿದ್ಯುತ್ ಅನ್ನು ಪಂಪ್‌ಸೆಟ್‌ಗಳಿಗೆ ಬಳಸುವುದು ಅನುಕೂಲವೆಂದು ಅನಿಸುತ್ತಿದೆ. ಬೇರೆ ರಾಜ್ಯಗಳಲ್ಲಿ ಸೌರ ವಿದ್ಯುತ್ ಬಳಕೆಯಲ್ಲಿ ಆಧುನಿಕವಾದ ತಂತ್ರಜ್ಞಾನವನ್ನು ಬಳಸುವ ನಿಟ್ಟಿನಲ್ಲಿ ಒಂದು ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಈ ಒಂದು ಪ್ರಯೋಗವನ್ನು ನಮ್ಮ ರಾಜ್ಯದಲ್ಲೂ ಅನುಕರಣೆ ಮಾಡುವ ಸಲುವಾಗಿ, ಈ ಸಾಲಿನ ಆಯವ್ಯಯದಲ್ಲಿ ಸುಮಾರು 50 ಕೋಟಿ ಹಣವನ್ನು ನಿಗದಿ ಮಾಡಿದ್ದೇವೆ. ಒಂದೊಂದು ಡಿವಿಜನ್‌ಗೆ ಸಂಬಂಧಪಟ್ಟಂತಹ ಒಂದೊಂದು ಜಿಲ್ಲೆಯನ್ನು ಆರಿಸಿ 4 ಜಿಲ್ಲೆಗಳಿಗೆ ಇದನ್ನು ಪ್ರಾಯೋಗಿಕವಾಗಿ ಕೊಡುತ್ತಿದ್ದೇವೆ. ಸೋಲಾರ್ ವಿದ್ಯುತ್ ವ್ಯವಸ್ಥೆಯಿಂದ ಈ ಪಂಪ್‌ಸೆಟ್‌ಗಳನ್ನು

ನಡೆಸುವಂತಾದರೆ ವಿದ್ಯುಚ್ಛಕ್ತಿಯನ್ನು ಬಳಸುವ ಪ್ರಮಾಣ ಕಡಿಮೆಯಾಗುತ್ತದೆ. ಇದರಿಂದಾಗಿ ಸರ್ಕಾರದ ಮೇಲೆ ಅಷ್ಟೊಂದು ಹೊರೆ ಬೀಳುವುದಿಲ್ಲ. ಕಡಿಮೆಯಾಗುತ್ತದೆ. ಇವೆಲ್ಲವನ್ನೂ ಆಲೋಚನೆ ಮಾಡಿಕೊಂಡು ಈ ಸೌರ ವಿದ್ಯುತ್ ಯೋಜನೆಯನ್ನು ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಮಾಡುತ್ತೇವೆ. ಇದರಿಂದಾಗಿ ಬಹಳ ದೊಡ್ಡ ಪ್ರಮಾಣದಲ್ಲಿ ವಿದ್ಯುತ್ ರಂಗದಲ್ಲಿ ಬದಲಾವಣೆ ಆಗುವುದಕ್ಕೆ ಸಾಧ್ಯವಾಗುತ್ತದೆ. ಆ ಒಂದು ಪ್ರಯತ್ನವನ್ನು ನಾವು ಮಾಡುತ್ತೇವೆ. ಇನ್ನೊಂದು ಪ್ರಮುಖವಾದ ವಿಚಾರವನ್ನು ಹೇಳಬಯಸುತ್ತೇನೆ. ಇದರ ಬಗ್ಗೆ ಟೀಕೆಗಳು ಬಂದವು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಇವತ್ತು ಜನ ಸಾಮಾನ್ಯರು ಉಪಯೋಗ ಮಾಡುವಂತಹ ಅಕ್ಕಿಯ ಬೆಲೆ ಜಾಸ್ತಿಯಾಗಿದೆ. ಶ್ರೀಮಂತರು ತಿನ್ನುವಂತಹ ಸೋನಾ ಮಸೂರಿ ಅಕ್ಕಿ ಬೆಲೆ ಜಾಸ್ತಿಯಾಗಿದೆ ಒಪ್ಪಿಕೊಳ್ಳುತ್ತೇನೆ. ಇದನ್ನು ಕಡಿಮೆ ಮಾಡುವುದಕ್ಕೆ, ನಿಯಂತ್ರಣ ಮಾಡುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ನಮ್ಮ ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ಬಡ ಜನರಿಗೆ, ಈ ಬಿ.ಪಿ.ಎಲ್ ಕಾರ್ಡುದಾರರಿಗೆ ಕಡಿಮೆ ದರದಲ್ಲಿ ಅಕ್ಕಿ ವಿತರಣೆ ಮಾಡುವ ಸಲುವಾಗಿ 2 ರೂಪಾಯಿಗೆ ಒಂದು ಕೆ.ಜಿ ಅಕ್ಕಿಯನ್ನು ವಿತರಣೆ ಮಾಡುವ ಒಂದು ನಿರ್ಧಾರವನ್ನು ಕೈಗೊಂಡಿದ್ದೇವೆ.

**(ಈ ಹಂತದಲ್ಲಿ ಸದನದಲ್ಲಿ ಇದ್ದ ಸದಸ್ಯರುಗಳು ಮೇಜು ಕುಟ್ಟಿ ಸ್ವಾಗತಿಸಿದರು)**

ಆದರೆ ಇದನ್ನು ಈಗ ಏಕೆ ಮಾಡಬೇಕಾಗಿತ್ತು? ಕಳೆದ ಎರಡು, ನಾಲ್ಕು ವರ್ಷಗಳ ಹಿಂದೆಯೇ ಮಾಡಬೇಕಾಗಿತ್ತು ಎಂದು ಹೇಳಬಹುದು. ಬಡವರಿಗೆ ಅನುಕೂಲ ಮಾಡುವ ನಿರ್ಧಾರವನ್ನು ಕೈಗೊಂಡಿದ್ದೇವೆ. ಅದನ್ನು ಸ್ವಾಗತ ಮಾಡುವ ಕೆಲಸವನ್ನು ತಾವು ಮಾಡಬೇಕು ಎಂದು ಹೇಳಬಯಸುತ್ತೇನೆ. ಮಾನ್ಯ ಜೆ.ಹೆಚ್, ಪಾಟೀಲ್ ಅವರು ಮುಖ್ಯಮಂತ್ರಿಗಳಾಗಿದ್ದಾಗ ಈ ತಾಲ್ಲೂಕುಗಳ ರಚನೆ ಕಾರ್ಯದ ಬಗ್ಗೆ ಒಂದು ಧೃಡ ನಿರ್ಧಾರವನ್ನು ಕೈಗೊಂಡರು. ಜಿಲ್ಲೆಗಳ ಮತ್ತು ತಾಲ್ಲೂಕುಗಳ ಪುನರ್ ವಿಂಗಡಣೆ ಆಗಬೇಕು ಎಂಬುದರ ಬಗ್ಗೆ ಒಂದು ಧೃಡ ನಿರ್ಧಾರವನ್ನು ಕೈಗೊಂಡರು. ಇವತ್ತು ನಾವು ಅದನ್ನು ಅಭಿನಂದಿಸಬೇಕಾಗುತ್ತದೆ. ಇದರ ಬಗ್ಗೆ ವಾಸುದೇವನ್ ಸಮಿತಿ

ವರದಿ ಇದೆ, ಹುಂಡೇಕಾರ್ ಸಮಿತಿ ವರದಿ ಇದೆ. ಗದ್ದಿಗೌಡರ್ ಸಮಿತಿ ವರದಿ ಇದೆ. ಇತ್ತೀಚೆಗೆ ಪ್ರಕಾಶ್ ಅವರ ಸಮಿತಿಯ ವರದಿ ಇದೆ. ಒಟ್ಟು 4 ಆಯೋಗಗಳು ಇದ್ದು ಅವರುಗಳು ವರದಿಯನ್ನು ನೀಡಿರುತ್ತಾರೆ. ನನಗೆ ನೆನಪಿದ್ದ ಹಾಗೆ 1973 ರಲ್ಲಿ ವಾಸುದೇವನ್ ಸಮಿತಿಯನ್ನು ನೇಮಕ ಮಾಡುವುದಕ್ಕೆ ಮುಂಚೆ ಈ ತಾಲ್ಲೂಕುಗಳ ಪುನರ್‌ರಚನೆ ಬಗ್ಗೆ ಹೋರಾಟ ನಡೆದಿರಬೇಕು. ಕಳೆದ ಮೂರು ದಶಕಗಳಿಂದ ತಾಲ್ಲೂಕು ಪುನರ್ ರಚನೆ ಬಗ್ಗೆ ಹೋರಾಟ ನಡೆದಿದ್ದರೂ ಕೂಡ ಈ ತಾಲ್ಲೂಕುಗಳನ್ನು ಪುನರ್ ರಚನೆ ಮಾಡುವುದಕ್ಕೆ ನಮಗೆ ಆಗಿರಲಿಲ್ಲ. 175–176 ತಾಲ್ಲೂಕುಗಳು ಏನು ಇದ್ದವು ಅದು ಅಷ್ಟೇ ಇದ್ದು, ಅದರಲ್ಲಿಯೇ ನಾವು ಗುದ್ದಾಡುವುದಕ್ಕೆ ಶುರು ಮಾಡಿದ್ದೆವು. ನಿಜವಾಗಿ ಜಿಲ್ಲಾ ಮತ್ತು ತಾಲ್ಲೂಕುಗಳ ಪುನರ್ ರಚನೆ ಮಾಡುವುದು ಏನು ಇದೆ ಇದು ಉತ್ತಮ ಆಡಳಿತವನ್ನು ಕೊಡುವುದಕ್ಕೆ ಒಂದು ಒಳ್ಳೆಯ ವ್ಯವಸ್ಥೆಯಾಗಿದೆ. ದೊಡ್ಡ ದೊಡ್ಡ ರಾಜ್ಯಗಳಲ್ಲೂ ಕೂಡ ಇತ್ತೀಚೆಗೆ ಡಿವಿಜನ್ ಆದವು. ಉತ್ತರ ಪ್ರದೇಶ ಇರಬಹುದು, ಬಿಹಾರ ಇರಬಹುದು ಬೇರೆ ಬೇರೆ ರಾಜ್ಯಗಳು ಇರಬಹುದು, ಅವೆಲ್ಲವೂ ಡಿವೈಡ್ ಆದವು. ಸಣ್ಣ ರಾಜ್ಯಗಳು ಇರಬಹುದು, ಸಣ್ಣ ಜಿಲ್ಲೆಗಳು ಇರಬಹುದು, ಸಣ್ಣ ತಾಲ್ಲೂಕುಗಳು ಇರಬಹುದು, ಈ ಆಡಳಿತ ವಿಕೇಂದ್ರೀಕರಣದಿಂದಾಗಿ ಆಡಳಿತ ಜನರ ಹತ್ತಿರ ಹೋಗುವುದಕ್ಕೆ ಸಾಧ್ಯವಾಯಿತು. ಆಡಳಿತದಲ್ಲಿ ಒಬ್ಬ ತಹಶೀಲ್ದಾರ್ ಜನರ ಕೈಗೆ ಸಿಗಬೇಕೆಂದರೆ ಅವರು ಜನರ ಹತ್ತಿರ ಇರಬೇಕಾಗುತ್ತದೆ. 80–100 ಕಿ.ಮೀ ನಲ್ಲಿ ಆ ತಾಲ್ಲೂಕು ಕಚೇರಿಗೆ ಒಬ್ಬ ಹಳ್ಳಿ ಮನುಷ್ಯ ಹೋಗಬೇಕೆಂದರೆ ಅವನಿಗೆ ಎಷ್ಟು ಕಷ್ಟವಾಗುತ್ತದೆ ಎಂಬುದನ್ನು ತಾವು ವಿಚಾರ ಮಾಡಿ ನೋಡಿ. ಮೊದಲು ಬಿಜಾಪುರ ಬಾಗಲಕೋಟೆ ಎರಡೂ ಒಂದೇ ಇತ್ತು. ಬಾದಾಮಿ ತಾಲ್ಲೂಕಿನ ಒಬ್ಬ ವ್ಯಕ್ತಿ, ಈ ಧಾರವಾಡ ಜಿಲ್ಲೆಗೆ ಸೇರಿದಂತಹ ಕೊಣ್ಣೂರು ತಾಲ್ಲೂಕಿನ ಒಬ್ಬ ವ್ಯಕ್ತಿ, ಕೇಂದ್ರ ಸ್ಥಾನವಾದ ಬಿಜಾಪುರಕ್ಕೆ ಹೋಗಬೇಕೆಂದರೆ ಎಷ್ಟು ತ್ರಾಸ್ ಆಗುತ್ತಿತ್ತು. ಇಡೀ ಒಂದೆರಡು ದಿವಸ ಹೋಗುತ್ತಿತ್ತು. ಬೆಳಗಾವಿ ಜಿಲ್ಲೆ ಇನ್ನೂ ದೊಡ್ಡದು ಇದೆ. ಹಾವೇರಿ ಕೊನೆ ಭಾಗದ ವ್ಯಕ್ತಿ, ರಾಣಿಬೆನ್ನೂರಿನ ವ್ಯಕ್ತಿ ಧಾರವಾಡ ಜಿಲ್ಲಾ ಕೇಂದ್ರಕ್ಕೆ

ಬರಬೇಕೆಂದರೆ ಎಷ್ಟು ತ್ರಾಸ್ ಆಗುತ್ತಿತ್ತು. ಈಗ ಸಣ್ಣ ಜಿಲ್ಲೆಯನ್ನು ಮಾಡಿದ್ದರಿಂದ ಮತ್ತು ಹಾವೇರಿಯನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿದ್ದರಿಂದ ಕೂಡಲೇ ಹಾವೇರಿಗೆ ಹೋಗುತ್ತಾನೆ. ಅದೇ ರೀತಿಯಲ್ಲಿ ಗದಗಿಗೆ ಕೂಡಲೇ ಹೋಗುತ್ತಾನೆ. ಧಾರವಾಡ ಈಗ ಸಣ್ಣ ಜಿಲ್ಲೆ ಆಯಿತು. ಯಾವ್ಯಾವುದು ಎಲ್ಲೆಲ್ಲಿ ಇದೆ ಅಲ್ಲಿಗೆ ಕೂಡಲೇ ಹೋಗುತ್ತಾನೆ. ಇದು ಆಡಳಿತ ದೃಷ್ಟಿಯಿಂದ ಸುಧಾರಣೆ ಮಾಡುವುದಕ್ಕೆ ಅನುಕೂಲವಾಯಿತು. ಆಡಳಿತ ವಿಕೇಂದ್ರೀಕರಣ ಆಗಬೇಕೆಂಬುದು ಮೊದಲಿನಿಂದ ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಈ ಬಗ್ಗೆ ಹೋರಾಟ ಮಾಡಿದ್ದೇನೆ. ಆಡಳಿತ ವಿಕೇಂದ್ರೀಕರಣ ಮಾಡಬೇಕು ತಾಲ್ಲೂಕುಗಳ ಪುನರ್ ವಿಂಗಡಣೆ ಮಾಡಬೇಕೆಂಬ ನಿರ್ಧಾರಗಳನ್ನು ಕೈಗೊಂಡು ಆಯವ್ಯಯವನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ 43 ಹೊಸ ತಾಲ್ಲೂಕುಗಳ ಘೋಷಣೆಯನ್ನು ಮಾಡಿದ್ದೇನೆ.

**(ಈ ಹಂತದಲ್ಲಿ ಸದನದಲ್ಲಿ ಇದ್ದ ಸದಸ್ಯರುಗಳು ಮೇಜು ಕುಟ್ಟಿ ಸ್ವಾಗತಿಸಿದರು)**

**ಶ್ರೀ ಜಗದೀಶ್ ಶೆಟ್ಟರ್:-** ಈ ತಾಲ್ಲೂಕುಗಳನ್ನು ಮಾಡಿದ್ದರಿಂದ ಎಲ್ಲೆಲ್ಲಿ ನಾನು ಹೋಗುತ್ತಿದ್ದೇನೆ ಆ ಎಲ್ಲಾ ಭಾಗಗಳಲ್ಲಿ ಜನರು ಸ್ವಾಗತ ಮಾಡುತ್ತಿದ್ದಾರೆ. ಅದಾದ ಮೇಲೆ ಇಂಥಾದ್ದು ತಾಲ್ಲೂಕು ಆಗಬೇಕು, ಮತ್ತೊಂದು ತಾಲ್ಲೂಕು ಆಗಬೇಕೆಂಬ ಬಗ್ಗೆ ಚರ್ಚೆ ನಡೆಯುತ್ತಿದೆ. ಹೋರಾಟಗಳು ನಡೆಯುತ್ತಿದೆ. ಆದರೆ ಇದಕ್ಕೆ ಒಂದು ಹೆಜ್ಜೆಯನ್ನು ಇಡಬೇಕಾಗುತ್ತದೆ. ಇವತ್ತು ಒಂದು ತಾಲ್ಲೂಕನ್ನು ಮಾಡುವುದಕ್ಕೆ preliminary ಯಾಗಿ 2 ಕೋಟಿ ರೂಪಾಯಿಯನ್ನು ಇಟ್ಟಿದ್ದೆವು. ಆದರೆ ಅದು ಸಾಲುವುದಿಲ್ಲ. 20-30 ಕೋಟಿ ರೂಪಾಯಿ ಹಣವನ್ನು ಮೀಸಲಾಗಿ ಇಡಬೇಕಾಗಿತ್ತು ಎಂಬ ಒಂದು ವಾದ ಕೇಳಿ ಬಂತು. ಮಾಡೋಣ ಯಾರು ಬೇಡ ಎಂದು ಹೇಳಿದರು. ಆದರೆ ಅದು ಪ್ರಾರಂಭವಾದರೂ ಆಗಬೇಕು. ಆದರೂ ಗಜೇಂದ್ರಗಡ, ಗುಳೇದಗುಡ್ಡ, ಈ ಕೆಲವು ಕಡೆಗಳಲ್ಲಿ ಈಗಾಗಲೇ ವಿಶೇಷ ತಹಶೀಲ್ದಾರ್ ಇದ್ದಾರೆ. ಕೆಲವು ಕಡೆಗಳಲ್ಲಿ ಸಬ್ ರಿಜಿಸ್ಟ್ರಾರ್ ಕಚೇರಿ ಇದೆ, ಸಬ್ ಟ್ರೆಜರಿ ಆಫೀಸ್ ಕಚೇರಿ ಇದೆ. ಆದುದರಿಂದ ಇದಕ್ಕೆ ಬಹಳ ದೊಡ್ಡ

ಎಸ್ಟಾಬ್ಲಿಷ್‌ಮೆಂಟ್ ಬರುವುದಿಲ್ಲ. ಈಗ ಒಂದೊಂದು ಕಚೇರಿಯಲ್ಲಿ ನಡೆದಿದೆ. ನಾವು ಅವರಿಗೆ ಹೊಸ ಕಟ್ಟಡವನ್ನು ನೀಡಬೇಕಾಗಿದೆ. ವಿಶೇಷ ತಹಶೀಲ್ದಾರ್ ಅಂದರೆ ಅವರು ಹೆಚ್ಚೂ ಕಡಿಮೆ ತಹಶೀಲ್ದಾರರಿಗೆ ಸರಿ ಸಮಾನರು. ಕೆಲವು ಕಡೆಗಳಲ್ಲಿ ಸಬ್ ರಿಜಿಸ್ಟ್ರಾರ್ ಕಚೇರಿ ಇದೆ, ಸಬ್ ಟ್ರೆಜರಿ ಆಫೀಸ್ ಕಚೇರಿ ಇದೆ. ಆದರೆ ಅವರಿಗೆ ತಾಲ್ಲೂಕಿನ ರೆಕಾಗ್ನಿಷನ್ ಇರಲಿಲ್ಲ. ಇನ್ನು ಸ್ವಲ್ಪ ಹಣವನ್ನು ಖರ್ಚು ಮಾಡಿ, ಇನ್ನು ಸ್ವಲ್ಪ ಎಸ್ಟಾಬ್ಲಿಷ್‌ಮೆಂಟ್ ಮಾಡಿ ಸ್ವಲ್ಪ ಸಿಬ್ಬಂದಿಯನ್ನು ನೀಡುವ ಮೂಲಕ ಹಂತ ಹಂತವಾಗಿ ನಾವು ಈ ಕೆಲಸವನ್ನು ಮಾಡಬೇಕಾಗುತ್ತದೆ. 30–40 ವರ್ಷಗಳ ಹೋರಾಟ ಮಾಡಿ ಇವತ್ತಿಗೂ ಇದನ್ನು ಪೂರ್ಣ ಮಾಡುವುದಕ್ಕೆ ಆಗಲಿಲ್ಲ. ಈಗ ಒಂದು ಸಲ ಮಾಡಿದ್ದೇ ಆದರೆ, ಅದನ್ನು ಮುಂದಿನ ಸರ್ಕಾರ ನಡೆಸಿಕೊಂಡು ಹೋಗುತ್ತದೆ. ಹಿಂದೆ ಮುಖ್ಯಮಂತ್ರಿಗಳಾಗಿದ್ದ ಜೆ.ಹೆಚ್. ಪಟೇಲ್ ಅವರು ಹೊಸ ಜಿಲ್ಲೆಗಳನ್ನು ಘೋಷಣೆ ಮಾಡಿದರು. ಅವರು ಘೋಷಣೆ ಮಾಡಿದ ಕೂಡಲೇ ಎಲ್ಲಾ ಕಡೆ ಜಿಲ್ಲಾ ಕೇಂದ್ರಗಳಾದವೇನೆ? ಇಲ್ಲ. ಮಾನ್ಯ ಧರ್ಮಸಿಂಗ್ ಅವರ ಸರ್ಕಾರ ಬಂದಾಗ ಒಂದಷ್ಟು infrastructure ಕೊಟ್ಟರು. ನಮ್ಮ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದಾಗ ನಾವೂ ಕೂಡ ಸ್ವಲ್ಪ ಹಣವನ್ನು ಕೊಟ್ಟೆವು. 4–5 ವರ್ಷಗಳಲ್ಲಿ ಬಹುಶಃ ಎಲ್ಲಾ ಕಡೆಗಳಲ್ಲೂ ಜಿಲ್ಲಾ ಕಾಂಪ್ಲೆಕ್ಸ್ ಆದವು. ಉಡುಪಿ, ಕೊಪ್ಪಳ, ಗದಗ್ ಇರಬಹುದು, ದಾವಣಗೆರೆ ಇರಬಹುದು. ಇತ್ತೀಚೆಗೆ ನಾನೇ ಹೋಗಿ ಜಿಲ್ಲಾ ಕಾಂಪ್ಲೆಕ್ಸ್ ಅನ್ನು ಉದ್ಘಾಟನೆ ಮಾಡಿ ಬಂದೆ. ಜೆ.ಹೆಚ್. ಪಟೇಲ್ ಅವರು ಇದ್ದಾಗ ಘೋಷಣೆ ಮಾಡಿದ್ದನ್ನು ನಾನು ಮುಖ್ಯಮಂತ್ರಿಯಾದಾಗ ಹೋಗಿ ಉದ್ಘಾಟನೆ ಮಾಡಿ ಬಂದೆ. ಬೇರೆಯವರು ಏನ್ರಿ ಹಣವೇ ಇಲ್ಲ. ನೀವು ಕೊಡುವುದೇ ಇಲ್ಲ ಇಷ್ಟು ಕೊಟ್ಟರೆ ಸಾಲುವುದಿಲ್ಲ ಅಂದರೆ ನಾವು ಹಾಗೇ ಇರಬೇಕಾಗುತ್ತದೆ. ನಾವು ಮೊದಲು ಅದನ್ನು ಪ್ರಾರಂಭ ಮಾಡಬೇಕು. ಹೀಗಾಗಿ ನಾವು ಅದನ್ನು ಶುರು ಮಾಡಿದ್ದೇವೆ.

(4–30 ಘಂಟೆ)

ಅದನ್ನು ಪ್ರಾರಂಭ ಮಾಡಬೇಕಾಗಿದ್ದು, ಆ ಕೆಲಸವನ್ನು ನಾವು ಮಾಡಿದ್ದೇವೆ. ಒಟ್ಟು 43ನ್ನು ಪ್ರಾರಂಭ ಮಾಡಿದ್ದು, ಇನ್ನು ಕೆಲವು ವರದಿಯಲ್ಲಿರುವುದು

ಬಂದಿಲ್ಲ ಎಂದು ಇದೆ. ಅದನ್ನು ಅಧ್ಯಯನ ಮಾಡುತ್ತಿದ್ದೇವೆ. ಇನ್ನು ಕೆಲವು ಮುಖ್ಯವಾದ ಕೇಂದ್ರ ಸ್ಥಾನಗಳು ತಾಲ್ಲೂಕುಗಳಾಗುವ ಶಕ್ತಿಯನ್ನು ಹೊಂದಿದ್ದು, ಜನರಿಗೆ ಅನುಕೂಲತೆಗಳನ್ನು ಒದಗಿಸುತ್ತವೆ. ಅಂತಹವುಗಳ ಬಗ್ಗೆ ಬೇಡಿಕೆ ಬಂದಿದ್ದು, ಅವುಗಳ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಅಧಿಕಾರಿಗಳಿಗೆ ಅವುಗಳ ಬಗ್ಗೆ ಅಧ್ಯಯನ ಮಾಡಲು ಹಾಗೂ ಮಾನ್ಯ ಕಂದಾಯ ಮಂತ್ರಿಗಳು ಹಾಗೂ ಇಲಾಖೆಯ ಜೊತೆ ಸಮಾಲೋಚನೆ ಮಾಡಿ ಆದಷ್ಟು ಬೇಗ ನೋಟಿಫಿಕೇಷನ್ ಹೊರಡಿಸುತ್ತೇವೆ. ಇನ್ನು ಹೊಸ ತಾಲ್ಲೂಕು ಅವಶ್ಯಕತೆ ಇರುವಲ್ಲಿ ರಚನೆ ಮಾಡುತ್ತೇವೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇದರಿಂದ ಉತ್ತಮ ಆಡಳಿತ ಕೊಡಲು ನೆರವಾಗುತ್ತದೆ ಎಂದು ಹೇಳುತ್ತೇನೆ.

ಇನ್ನು ಸಾಮಾಜಿಕ ಭದ್ರತಾ ಪಿಂಚಣಿಯಾಗಿ ವಿಧವೆಯರು, ವಿಕಲಚೇತನರು ಮತ್ತು ಅನಾಥರಿ 400 ರೂಪಾಯಿಗಳನ್ನು ಕೊಡುತ್ತಿದ್ದು, ಈ ಸಾರಿ 500 ರೂಪಾಯಿಗಳಿಗೆ ಏರಿಸಿದ್ದೇನೆ. 80 ವರ್ಷ ದಾಟಿದ ಹಿರಿಯರು ಯಾವ ಮಕ್ಕಳು ಇಲ್ಲದೇ ಯಾವ ಆಧಾರವೂ ಇಲ್ಲದೇ ಇರುತ್ತಾರೆ. ಅವರನ್ನು ಎಲ್ಲರೂ ಬಿಟ್ಟು ಅನಾಥರಾಗುವ ಪರಿಸ್ಥಿತಿಯಲ್ಲಿರುತ್ತಾರೆ. ಅಂತಹವರಿಗೆ 500 ರೂಪಾಯಿಗಳಿಂದ 750 ರೂಪಾಯಿಗಳಿಗೆ ಏರಿಕೆ ಮಾಡಿದ್ದೇವೆ. ಅಂಗವಿಕಲಕರಿಗೆ 1000 ಸಾವಿರ ರೂಪಾಯಿಗಳಿಂದ 1200 ರೂಪಾಯಿಗಳಿಗೆ ಏರಿಸಿದ್ದೇವೆ. ಇದಲ್ಲದೇ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಕ ಪ್ರತಿ ವಿದ್ಯಾರ್ಥಿಯ ಮಾಸಿಕ ಘೋಷಣಾ ಮೊತ್ತವನ್ನು 750 ರೂಪಾಯಿಗಳಿಂದ 950 ರೂಪಾಯಿಗಳಿಗೆ ಏರಿಸಿದ್ದೇನೆ. ಮೆಟ್ರಿಕ್ ನಂತರದ ಹಂತಕ್ಕೆ 850 ರೂಪಾಯಿಗಳಿಂದ 1000 ರೂಪಾಯಿಗಾಳಿಗೆ ಏರಿಸಿದ್ದೇನೆ.

**ಶ್ರೀ ಕೆ.ಬಿ. ಶಾಣಪ್ಪ:–** ಇದರ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ, the Hon'ble Chief Minister should adjust to both.

**ಶ್ರೀ ಜಗದೀಶ್ ಶೆಟ್ಟರ್:–** ಈಗ ಪ್ರಾರಂಭ ಮಾಡಿದ್ದೇವೆ, ಅದನ್ನು ಅಳವಡಿಸಿಕೊಳ್ಳುತ್ತೇವೆ. ಅಂಗನವಾಡಿ ಕೇಂದ್ರದ ಪ್ರತಿ ಮಗುವಿನ ಆಹಾರ ವೆಚ್ಚವನ್ನು 4–60 ರೂಪಾಯಿಗಳಿಂದ 6–00 ರೂಪಾಯಿಗಳಿಗೆ ಏರಿಸಿದ್ದೇವೆ.

ಈ ಸಾರಿ ಮಕ್ಕಳಿಗೆ ಎರಡು ದಿವಸ ಹಾಲು ವಿತರಿಸುವ ಯೋಜನೆಯನ್ನು ತಂದಿದ್ದೇವೆ. ಇದು ಮೊದಲು ಇರಲಿಲ್ಲ. ಅಂಗನವಾಡಿ ಕಾರ್ಯಕರ್ತರ ಗೌರವ ಧನವನ್ನು ಹೆಚ್ಚಿಸುವ ಬಗ್ಗೆ ಬೇಡಿಕೆ ಇದ್ದು, ಈ ಸಾರಿ ಕಾರ್ಯಕರ್ತರಿಗೆ 500 ರೂಪಾಯಿಗಳು ಮತ್ತು ಸಹಾಯಕರಿಗೆ 250 ರೂಪಾಯಿಗಳನ್ನು ಹೆಚ್ಚಿಸಿದ್ದೇವೆ. ಎಸ್.ಸಿ., ಎಸ್ಎಟಿ ಅಭಿವೃದ್ಧಿ ನಿಗಮದಲ್ಲಿ ಸಾಲ ಪಡೆದ ಫಲಾನುಭವಿಗಳಿಗೆ 'One Time Settlement' ಎಂದು ಸಂಪೂರ್ಣ ಅಸಲು ತುಂಬಿದಾಗ ಬಡ್ಡಿ ಮನ್ನಾ ಮಾಡುವ ಯೋಜನೆಯನ್ನು ತಂದಿದ್ದೇವೆ. ಸಣ್ಣ, ಅತೀ ಸಣ್ಣ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳಿಗೆ ಹೆಚ್ಚುವರಿಯಾಗಿ 100 ಕೋಟಿ ರೂಪಾಯಿಗಳ ಬಂಡವಾಳದ ಸಬ್ಸಿಡಿಯನ್ನು ಸೇರಿಸಿದ್ದೇವೆ. ಬೆಂಗಳೂರಿನಲ್ಲಿರುವ ಕೈಗಾರಿಕೋದ್ಯಮಿಗಳು ಸ್ಥಳೀಯ ಸಂಸ್ಥೆಗಳಿಂದ ಕಡ್ಡಾಯವಾಗಿ ವ್ಯಾಪಾರ ಪರವಾನಗಿ (Trade License) ಯನ್ನು ತೆಗೆದುಕೊಳ್ಳಬೇಕಾಗಿದ್ದು, ಇದು ಒಂದು ವರ್ಷದ ಅವಧಿಗೆ ಮಾತ್ರ ಇದ್ದು, ಪ್ರತಿ ವರ್ಷ ನವೀಕರಣಕ್ಕೆ ಹೋಗಬೇಕಾಗಿತ್ತು. ಆಗ ಅವರಿಗೆ ಕಿರುಕುಳ ಆಗುತ್ತಿತ್ತು. ಇದನ್ನು ತಪ್ಪಿಸುವ ಸಲುವಾಗಿ ಒಂದು ಸಾರಿ ವ್ಯಾಪಾರ ಪರವಾನಗಿಯನ್ನು ತೆಗೆದುಕೊಂಡಾಗ 5 ವರ್ಷಗಳವರೆಗೆ ಅಸ್ತಿತ್ವದಲ್ಲಿ ಇರುವಂತೆ ಮಾಡಿದ್ದೇವೆ. 5 ವರ್ಷಗಳವರೆಗೂ ನವೀಕರಣ ಮಾಡುವ ಅವಶ್ಯಕತೆ ಇಲ್ಲ. ಕೈಗಾರಿಕೋದ್ಯಮಿಗಳು 5 ವರ್ಷಗಳ advance ಶುಲ್ಕವನ್ನು ತುಂಬುವ ಅಗತ್ಯವೂ ಇಲ್ಲ, ಪ್ರತಿವರ್ಷವೂ ಶುಲ್ಕ ತುಂಬುವ ಅವಕಾಶ ಕೊಟ್ಟಿದ್ದೇವೆ. ಆದ್ದರಿಂದ ವ್ಯಾಪಾರ ನವೀಕರಣದ ಕಿರುಕುಳವನ್ನು ತಡೆಹಿಡಿಯುವ ಕೆಲಸವನ್ನು ಈ ಬಜೆಟ್‌ನಲ್ಲಿ ಮಾಡಿದ್ದೇನೆ.

ಇನ್ನು ಯಶಸ್ವಿನಿ ಆಯೋಗ್ಯ ಯೋಜನೆ ಬಹಳ ಯಶಸ್ವಿಯಾಗಿ ಜಾರಿಗೆ ಬರುತ್ತಿದೆ. ಅದರಲ್ಲಿ ಪತ್ರಕರ್ತರೂ ಒಳಗೊಳ್ಳಬೇಕೆಂಬ ಬೇಡಿಕೆ ಇದ್ದು, ನಿಯಮಾವಳಿಗಳನ್ನು ಬದಲಾವಣೆ ಮಾಡಿ ಪತ್ರಕರ್ತರನ್ನು ಯಶಸ್ವಿನಿ ಆರೋಗ್ಯ ಯೋಜನೆಯಲ್ಲಿ ಒಳಪಡಿಸುತ್ತಿದ್ದೇನೆ ಎಂಬ ಮಾತನ್ನು ಹೇಳಬಯಸುತ್ತೇನೆ. ಶ್ರೀಗಂಧದ ತೋಪುಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಶ್ರೀಚಂದನವನ ಯೋಜನೆಯನ್ನು ಜಾರಿಗೆ ತರುತ್ತಿದ್ದೇವೆ. ಬೆಳಗಾವಿಯಲ್ಲಿ

Police Commissionerate Office ಬೇಕೆಂಬ ಬೇಡಿಕೆ ಇತ್ತು. ಏಕೆಂದರೆ ಜಿಲ್ಲೆಯು ಬಹಳ ದೊಡ್ಡದಾಗಿದೆ. S.P., ಯವರು ಮಹಾನಗರವನ್ನು ನಿಯಂತ್ರಣ ಮಾಡುವುದಕ್ಕೆ ಆಗುವುದಿಲ್ಲ ಮತ್ತು ಇಡೀ ಜಿಲ್ಲೆಯನ್ನು ನಿಯಂತ್ರಣ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ಡಿವಿಜನ್ ಮಾಡಬೇಕೆಂಬ ಬೇಡಿಕೆ ಹಿಂದೆ ಇದ್ದಾಗ, ಸ್ಥಳೀಯ ಕಾರಣಗಳಿಂದ ಮಾಡುವುದು ಬೇಡ ಎಂದು ನೆನೆಗುದಿಗೆ ಬಿದ್ದಿದೆ. ಬೆಳಗಾವಿ ನಗರವು ಬಹಳ ದೊಡ್ಡದಾಗಿ ಬೆಳೆದಿದ್ದು, ಜನಸಂಖ್ಯೆಯೂ ಜಾಸ್ತಿಯಾಗಿದ್ದು, ಅಲ್ಲಿ Police Commissionerate Office ಮಾಡುವ ನಿರ್ಧಾರವನ್ನು ಬಜೆಟ್‌ನಲ್ಲಿ ತೆಗೆದುಕೊಂಡಿದ್ದೇವೆ. ಅದೇ ರೀತಿ Home Guards ಅವರನ್ನು ನಾವು ವಿಶೇಷ ಸಂದರ್ಭದಲ್ಲಿ ಕರೆಸುತ್ತೇವೆ ಹಾಗೂ ಅವರಿಗೆ ಬಹಳ ಕಡಿಮೆ ಭತ್ಯೆಯನ್ನು ನೀಡುತ್ತಿದ್ದೆವು. ಅದನ್ನು ಬೆಂಗಳೂರಿನಲ್ಲಿ ದಿನಕ್ಕೆ 300 ರೂಪಾಯಿಗಳು ಹಾಗೂ ಇತರ ಪ್ರದೇಶಗಳಲ್ಲಿ 250 ರೂಪಾಯಿಗಳಿಗೆ ಹೆಚ್ಚಿಸಿದ್ದೇವೆ.

ಇನ್ನು ಇಂದಿನ ನೂತನ ತಾಂತ್ರಿಕತೆಯಲ್ಲಿ ಐಟಿ, ಮಾಹಿತಿ ತಂತ್ರಜ್ಞಾನ ಇತ್ಯಾದಿಗಳು ಗ್ರಾಮ ಪಂಚಾಯತಿ ಮಟ್ಟಕ್ಕೆ ಹೋಗಬೇಕೆಂಬ ಅಭಿಲಾಷೆ ಇದ್ದು, ಅಲ್ಲಿನ ಯುವಕರಿಗೆ ನೂತನ ಮಾಹಿತಿಗಳು ದೊರೆಯಬೇಕು ಮತ್ತು online ಮುಖಾಂತರ ಮಾಹಿತಿ ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಸೈಬರ್ ಕೆಫೆ ಸ್ಥಾಪನೆ ಮಾಡುವ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಇದರಿಂದ technology ಹಳ್ಳಿಗೂ ಹೋಗಿ ಅಲ್ಲಿನ ಯುವಕರು ನಗರಕ್ಕೆ ಬರಬೇಕಾದ ಅವಶ್ಯಕತೆ ಇರುವುದಿಲ್ಲ. ಅಲ್ಲಿನ ಗ್ರಾಮ ಪಂಚಾಯತಿಯ ಸೈಬರ್ ಕೆಫೆಯ, ಮುಖಾಂತರ ಇಡೀ ಜಗತ್ತಿನ ವಿಷಯ ತಿಳಿದುಕೊಳ್ಳಲು ಹಾಗೂ ಪರಸ್ಪರ ಹಂಚಿಕೊಳ್ಳುವುದಕ್ಕೂ ಸಾಧ್ಯವಿದೆ. ಆದ್ದರಿಂದ ಈ ಬಜೆಟ್‌ನಲ್ಲಿ ಇದನ್ನು ಘೋಷಣೆ ಮಾಡಿದ್ದೇನೆ. ಬಹಳ ಮುಖ್ಯವಾಗಿ ಬಿಜಾಪುರ ಜಿಲ್ಲೆಯಲ್ಲಿ ನದಿಗಳು ಇದ್ದಾಗ್ಯೂ ಕುಡಿಯುವ ನೀರಿನ ತೊಂದರೆಯನ್ನು ಅನುಭವಿಸುತ್ತಿದ್ದು, ಬರದ ಜಿಲ್ಲೆ ಎಂದು ಹೇಳುತ್ತೇವೆ. ಇದನ್ನು ನಿವಾರಣೆ ಮಾಡುವ ಸಲುವಾಗಿ ಬಿಜಾಪುರದ ಬಹುತೇಕ ಎಲ್ಲಾ ಗ್ರಾಮಗಳಿಗೆ, ಸಾವಿರಾರು ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರಿನ

ಯೋಜನೆಯನ್ನು ತರುವ ಕೆಲಸ ಮಾಡಿದ್ದೇವೆ. ಅದಕ್ಕಾಗಿ ಕನ್ನಡ ಗಂಗಾ ಯೋಜನೆಯನ್ನು ಜಾರಿಗೆ ತರುತ್ತಿದ್ದು, ಅದಕ್ಕಾಗಿ 885 ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡುತ್ತಿದ್ದೇವೆ.

**ಶ್ರೀ ಎಸ್.ಆರ್. ಪಾಟೀಲ್:–** ಇದನ್ನು ಕೇಂದ್ರದ ಸಹಯೋಗದೊಂದಿಗೆ ಮಾಡುತ್ತಿರುವುದು.

**ಶ್ರೀ ಜಗದೀಶ್ ಶೆಟ್ಟರ್:–** ಹೌದು, ಅದನ್ನು ಬಜೆಟ್‌ನಲ್ಲಿಯೂ ಬರೆಸಿದ್ದೇನೆ. ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಮತ್ತು ಅವರು ನಿಜವಾಗಿ ಸಹಯೋಗ ಕೊಡಬೇಕೆಂಬ ಕಾಳಜಿಯೊಂದಿಗೂ ಮಾಡಿದ್ದೇನೆ. ಏಕೆಂದರೆ ಕೆಲವು ಕಡೆ ಕೊಟ್ಟಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೆ, the Central Government has come forward for that project. ಕೇಂದ್ರ ಸರ್ಕಾರ ಕೊಡಲು ಒಪ್ಪಿದೆ, ರಾಜ್ಯ ಮತ್ತು ಕೇಂದ್ರಗಳ ಜೊತೆಯೊಂದಿಗೆ ಬಿಜಾಪುರಕ್ಕೆ ಕುಡಿಯುವ ನೀರು ಬರುತ್ತದೆ.

**ಶ್ರೀ ಜಗದೀಶ್ ಶೆಟ್ಟರ್:–** ಇದೇ ರೀತಿ ಚಿತ್ರದುರ್ಗ ಜಿಲ್ಲೆಗೂ ಕುಡಿಯುವ ನೀರನ್ನು ತರಬೇಕೆಂಬ process ಪ್ರಾರಂಭ ಮಾಡಿದ್ದೇವೆ. ಆದ್ದರಿಂದ ಬರದ ನಾಡು ಹಾಗೂ ಕುಡಿಯತುವ ನೀರಿಗೆ ತೊಂದರೆ ಇರುವಲ್ಲಿ ಹಂತ ಹಂತವಾಗಿ multi-village water supply scheme ಮುಖಾಂತರ ತುಮಕೂರು ಜಿಲ್ಲೆ ಪಾವಗಡ, ಕೋಲಾರ ಈ ಎಲ್ಲಾ ಪ್ರದೇಶಗಳಿಗೆ multi-village water supply scheme ತರುವ ಕೆಲಸ ಮಾಡುತ್ತೇವೆ. ಕುಡಿಯುವ ನೀರಿನ ಸಮಸ್ಯೆ ಇರುವಲ್ಲಿ ಬೋರ್‌ವೆಲ್ ಕೊರೆಸುತ್ತಾರೆ. ಮೊನ್ನೆ ವಿಧಾನ ಮಂಡಲದಲ್ಲಿ ಬರದ ಬಗ್ಗೆ ಚರ್ಚೆಯ ಸಂದರ್ಭದಲ್ಲಿ 30 ಲಕ್ಷ ರೂಪಾಯಿಗಳನ್ನು Taskforce ಗೆ ಬಿಡುಗಡೆ ಮಾಡಿದ್ದೇವೆ. ಇದನ್ನು ಬೋರ್‌ವೆಲ್ ಇತ್ಯಾದಿ ತುರ್ತು ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ಕೊಟ್ಟಿದ್ದೇವೆ. ಇನ್ನೂ 30 ಲಕ್ಷ ರೂಪಾಯಿಗಳನ್ನು ಮೇವು ಖರೀದಿ ಹಾಗೂ ಗೋಶಾಲೆಗಳನ್ನು ತೆರೆಯಲು

ಕೊಟ್ಟಿದ್ದೇವೆ. ಒಟ್ಟು 60 ಲಕ್ಷ ರೂಪಾಯಿಗಳನ್ನು ವಿಧಾನ ಮಂಡಲದ ಅಧಿವೇಶನದಲ್ಲಿ ಬಿಡುಗಡೆ ಮಾಡಿದ್ದೇವೆ. ಇದರ ಬಗ್ಗೆ ಒಟ್ಟಾಗಿ ಹೇಳಬೇಕೆಂದರೆ, ಕುಡಿಯುವ ನೀರಿನ ಸಮಸ್ಯೆ ಉಂಟಾದರೆ ಬೋರ್‌ವೆಲ್‌ಗಳನ್ನು ಕೊರೆಸುತ್ತೇವೆ, ಆದರೆ ಇವತ್ತು 1000–1500 ಅಡಿ ಆಳಕ್ಕೆ ಬೋರ್ ಕೊರೆಸಿದರೂ ನೀರು ಬರುವುದಿಲ್ಲ, ಈ ರೀತಿ ಆದರೂ ಕೊರೆಸುವುದನ್ನು ಬಿಡುವುದಿಲ್ಲ. ಇದು ನಡೆಯುತ್ತಲೇ ಇದೆ. ಹೀಗಾಗಿ ಎಷ್ಟೋ ಬೋರ್‌ವೆಲ್‌ಗಳು defunct ಆಗಿವೆ. ಅದನ್ನು ಪುನಃ recharge ಮಾಡುವುದಕ್ಕೂ ಆಗಿಲ್ಲ. ಹೀಗಾಗಿ ಶಾಶ್ವತ ಕುಡಿಯುವ ನೀರಿನ ಯೋಜನೆ ತರುವ ಅವಶ್ಯಕತೆ ಬಹಳ ಇದೆ. ಅದರಲ್ಲಿ surface water source ಮುಖಾಂತರ ಅಂದರೆ ಕರೆಗಳ ಮುಖಾಂತರ, ಜಲ ಸಂಗ್ರಹಗಳ ಮುಖಾಂತರ ಅಥವಾ ನದಿ ಹಾಗೂ ಕಾಲುವೆಗಳ ಮುಖಾಂತರ ಇರಬಹುದು ಅಥವಾ ಹಳ್ಳಗಳ ಮುಖಾಂತರ surface water source ನ ಮೂಲಕ ಕುಡಿಯುವ ನೀರಿನ ಯೋಜನೆಯನ್ನು ಜಾರಿಗೆ ತಂದರೆ ಬಹಳ ಒಳ್ಳೆಯದಾಗುತ್ತದೆ. ಅದಕ್ಕೆ ಹೆಚ್ಚು ಒತ್ತು ಕೊಡಬೇಕು. ಹಿಂದೆ ನಾನು R.D.P.R., ಸಚಿವನಾಗಿದ್ದಾಗ ಮಂಗಳೂರು, ಉಡುಪಿ ಜಿಲ್ಲೆಗಳಿಗೆ visit ನೀಡಿ review meeting ತೆಗೆದುಕೊಂಡಿದ್ದೆನು. ಅಲ್ಲಿ ಶಾಸಕರು ಅಧಿಕಾರಿಗಳೆಲ್ಲರೂ ಭಾಗವಹಿಸಿದ್ದರು. ಆ ಎರಡೂ ಜಿಲ್ಲೆಗಳಲ್ಲಿ ಅಧಿಕ water source ಇದ್ದು, ಬೇಕಾದಷ್ಟು ನದಿ ನೀರು ಪೋಲಾಗಿ ಸಮುದ್ರಕ್ಕೆ ಹೋಗುತ್ತಿದ್ದರೂ ಬಹಳಷ್ಟು ಕಡೆ ಕುಡಿಯುವ ನೀರಿನ ತೊಂದರೆ ಇದೆ ಎಂದು ತಿಳಿದಾಗ surface water source ನ ಮೂಲಕ multi-village water supply scheme ಅನ್ನು ಏಕೆ ಮಾಡಿಲ್ಲ ಎಂಬ ಪ್ರಶ್ನೆಯನ್ನು ಕೇಳಿದೆ. ಅಂದು ಅಲ್ಲಿ review meeting ಮಾಡಿದ ನಂತರ, ಅಧಿಕಾರಿಗಳಿಗೆ ಸೂಚನೆ ಕೊಟ್ಟು, ಶಾಸಕರು ಆಸಕ್ತಿ ತೆಗೆದುಕೊಂಡು ಮೇಲೆ ಎಂಟತ್ತು multi-village water supply scheme ಗಳ ಬಗ್ಗೆ proposals ಬಂದವು. ಅವುಗಳಿಗೆ ನಾನು ಒಪ್ಪಿಗೆಯನ್ನು ಕೊಟ್ಟೆ. ನಮ್ಮ ಕಾರವಾರ ಜಿಲ್ಲೆಯಲ್ಲಿ ಬೇಕಾದಷ್ಟು ಜಲದ ಸಂಪನ್ಮೂಲ ಇದೆ. ಅದಕ್ಕೆ ನಾನು approval ಸಹ ಕೊಟ್ಟಿದ್ದೇನೆ. ಹೀಗಾಗಿ ಅದಕ್ಕೆ ಹೆಚ್ಚು ಒತ್ತು ಕೊಡುವಂತಹ

ಕೆಲಸ ಆದರೆ ಬಹುಶಃ ನಮ್ಮ ಕಾರವಾರ ಜಿಲ್ಲೆಯಲ್ಲೇನು ಬೇಕಾದಷ್ಟು ನದಿ ನೀರಿನ source ಗಳು ಇವೆ, ಅಂತಹ ಕಡೆಗಳಲ್ಲಿ ಸಹ ನಾವು multi-village drinking water scheme ನ ಮುಖಾಂತರವಾಗಿ ಕುಡಿಯುವ ನೀರಿನ ಅನುಕೂಲವನ್ನು ಕಲ್ಪಿಸಬಹುದಾಗಿದೆ. ನದಿ ಪಕ್ಕದಲ್ಲಿರುವಂತಹ ಹಳ್ಳಿಗಳಲ್ಲಿ ಸಹ ಕುಡಿಯುವ ನೀರಿನ ಸಮಸ್ಯೆ ಇದೆ. ಎಷ್ಟೋ ಕಡೆಗಳಲ್ಲಿ ನಾನು ಇದನ್ನು ನೋಡಿದ್ದೇನೆ. ಏಕೆ ಅದನ್ನು ಉಪಯೋಗ ಮಾಡಲಿಲ್ಲ ಎನ್ನುವಂತಹ ಆತ್ಮಾವಲೋಕನವನ್ನು ನಾವು ಮಾಡಿಕೊಳ್ಳಬೇಕಾಗಿದೆ. ಪಕ್ಕದಲ್ಲಿಯೇ ನದಿ ನೀರಿದ್ದರೂ ಅದನ್ನು ನಮ್ಮ ಹಳ್ಳಿಗಳಿಗೆ ತರುವುದಕ್ಕಾಗಿಲ್ಲ. ಹೀಗಾಗಿ multi-village drinking water scheme ಮುಖಾಂತರವಾಗಿ ಈ ರೀತಿಯ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಿದೆ. ಆ ಪ್ರಯತ್ನಗಳನ್ನು ನಾವು ಇವೊತ್ತು ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರ ಸಹ ಅದಕ್ಕೆ ಸಹಯೋಗವನ್ನು ನೀಡುತ್ತಿದೆ. ಹೀಗಾಗಿ ನಾನು ಅಂತಹ ಹಲವಾರು ಯೋಜನೆಗಳನ್ನು ತರುವಂತಹ ಕೆಲಸವನ್ನು ಮಾಡಿದ್ದು, ಬರುವಂತಹ ದಿವಸಗಳಲ್ಲಿ ಅದನ್ನು ನಾವು ಕಾರ್ಯರೂಪಕ್ಕೆ ತರುತ್ತೇವೆ.

ಮಾನ್ಯ ಸಭಾಪತಿಯವರೇ, ಕೆಲವು ಕಡೆಗಳಲ್ಲಿ fluoride ಯುಕ್ತ ನೀರಿನ ಸಮಸ್ಯೆ ಇದೆ. ನಮ್ಮ ತುಮಕೂರು ಜಿಲ್ಲೆಯ ಪಾವಗಡದ ಅಕ್ಕಪಕ್ಕದ ತಾಲ್ಲೂಕುಗಳಲ್ಲಿ ಸಹ ಈ ಸಮಸ್ಯೆ ಇದೆ. ಬಹುಶಃ 9000 ಹಳ್ಳಿಗಳ ಜನರು ಇವೊತ್ತಿನ fluoride ಯುಕ್ತ ನೀರನ್ನೇ ಕುಡಿಯುತ್ತಿದ್ದಾರೆ. ಅದಕ್ಕಾಗಿ defluoridation units ಹಾಕುವಂಥದ್ದು, defluoridation ಗಾಗಿ ಬೇರೆ ರೀತಿಯ ತಂತ್ರಜ್ಞಾನವನ್ನು ಉಪಯೋಗ ಮಾಡಿಕೊಳ್ಳುವ ಮುಖಾಂತರ ಉತ್ತಮ ಕುಡಿಯುವ ನೀರನ್ನು ಸರಬರಾಜು ಮಾಡುವ ಸಲುವಾಗಿಯೂ ಈ ಸಾಲಿನ ಆಯವ್ಯಯದಲ್ಲಿ ಪ್ರತ್ಯೇಕವಾಗಿ ಹಣವನ್ನು ತೆಗೆದಿರಿಸಲಾಗಿದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಈ ರೀತಿಯಾಗಿ ಇವೊತ್ತು ಹಲವಾರು ಕಾರ್ಯಕ್ರಮಗಳ ಮುಖಾಂತರ, ಅದು ಗ್ರಾಮೀಣಾಭಿವೃದ್ಧಿ ಇರಬಹುದು, ಪಂಚಾಯತ್ ರಾಜ್

ಇರಬಹುದು, ಅಲ್ಲಿಯೂ ಸಹ ಹೊಸ ಯೋಜನೆಗಳನ್ನು ತರುವಂತಹ ಕೆಲಸವನ್ನು ನಾನು ಮಾಡಿದ್ದೇನೆ.

ಮೂಲ ಸೌಕರ್ಯಗಳ ಅಭಿವೃದ್ಧಿ ಕೂಡ ಬಹಳ ಮುಖ್ಯವಾದಂತಹ ಒಂದು ಕಾರ್ಯವಾಗಿದೆ. ಇವೊತ್ತು ರಸ್ತೆ ಮತ್ತು ರೈಲು ಈ ಎರಡು ವ್ಯವಸ್ಥೆಗಳನ್ನು ಸಮರ್ಪಕವಾಗಿ ಕಾರ್ಯರೂಪಕ್ಕೆ ತರಬೇಕಾದರೆ ಅದಕ್ಕೆ ಕೇಂದ್ರ ಸರ್ಕಾರದ ಸಹಯೋಗ ಕೂಡ ಬೇಕಾಗುತ್ತದೆ. ಅದು ಸಿಗುತ್ತಿಲ್ಲ ಎನ್ನುವಂತಹ ಮಾತನ್ನು ನಾನು ಮಾನ್ಯ ಪ್ರತಿಪಕ್ಷದ ನಾಯಕರಿಗೆ ತಿಳಿಸಬಯಸುತ್ತಿದ್ದೇನೆ. ನಾನು ಈಗಾಗಲೇ ಆಯವ್ಯಯದ ಭಾಷಣದಲ್ಲಿ ಸುಮಾರು ಎಂಟು-ಒಂಬತ್ತು project ಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. Railway budget ಪ್ರಕಟಿಸಿದಾಗ ಸರ್ವೆ ಮಾಡಲು ತಿಳಿಸಲಾಗುತ್ತದೆ. ಅದಕ್ಕೆ ನಾನು ಒಂದು ಉದಾಹರಣೆಯನ್ನು ಕೊಟಬಯಸುತ್ತೇನೆ. ನಾವು ಧಾರವಾಡದಿಂದ ಬೆಳಗಾವಿಗೆ ಹೋಗಬೇಕಾದರೆ ಲೋಂಡಾ ಮುಖಾಂತರವಾಗಿ ಗೋವಾಕ್ಕೆ ಹೋಗಿ ಮತ್ತೆ ಬೆಳಗಾವಿಗೆ ಬರಬೇಕು. ಹೀಗಾಗಿ ಈ ರೈಲು ಮಾರ್ಗ ಬಹಳ ಬಳಸಿಕೊಂಡು ಬಂದಂತಾಗುತ್ತದೆ. ಅದರ ಬದಲಾಗಿ ಧಾರವಾಡ-ಚಿತ್ತೂರು ಅಥವಾ ಬೈಲಹೊಂಗಲ ಮುಖಾಂತರ ಬೆಳಗಾವಿಗೆ ಹೋದರೆ ಎಷ್ಟು ಸುಲಭವಾಗುತ್ತದೆಯಲ್ಲವೆ? ಆ ಮಾರ್ಗದಲ್ಲಿ ಒಂದು ಹೊಸ ರೈಲು ಮಾರ್ಗವನ್ನು ಮಾಡಿದರೆ ನಮ್ಮ ಜನರಿಗೆ ಪ್ರಯಾಣದಲ್ಲಿ ಒಂದೊಂದು ತಾಸು ಉಳಿತಾಯವಾಗುತ್ತದೆ. ನಾವೀಗ ಹುಬ್ಬಳ್ಳಿಯಿಂದ ಬೆಳಗಾವಿಗೆ ಹೋಗಬೇಕಾದರೆ ಸುಮಾರು ಎರಡು ತಾಸು ಬೇಕು. ಅದಕ್ಕೋಸ್ಕರವಾಗಿ ಇದರ ಬಗ್ಗೆ ಸರ್ವೇ ಮಾಡುವುದಕ್ಕೆ ರೈಲ್ವೆ ಸಚಿವಾಲಯದವರು ಆದೇಶ ಮಾಡಿದರು. ಆದರೆ ಅದು ಇದುವರೆಗೂ ಅನುಷ್ಠಾನಗೊಂಡಿಲ್ಲ. ಅದಕ್ಕಾಗಿ ನಾವು ಒಂದು policy ಯನ್ನು ಮಾಡಿದ್ದೇವೆ, ರಾಜ್ಯ ಸರ್ಕಾರ ಇವೊತ್ತು ಕೇಂದ್ರದ ಈ ರೀತಿಯ ಯಾವುದೇ ಹೊಸ ರೈಲ್ವೆ ಯೋಜನೆಗಳು ಬರಲಿ, ಅದು ಹೊಸ ರೈಲು ಮಾರ್ಗವನ್ನು ಮಾಡುವಂಥದ್ದಿರಬಹದು, ಇರುವಂತಹ ಮಾರ್ಗಗಳನ್ನು ಅಭಿವೃದ್ಧಿಪಡಿಸುವುದಿರಬಹುದು, ಯಾವುದೇ ಯೋಜನೆ ಬಂದರೂ ಅದಕ್ಕೆ ಶೇಕಡ 50ರಷ್ಟು ಪಾಲನ್ನು ನಾವು ರಾಜ್ಯ ಸರ್ಕಾರದ

ವತಿಯಿಂದ ಕೊಡುವುದಕ್ಕೆ ತಯಾರಿದ್ದೇವೆ. ಅದಕ್ಕೆ ನಾವು ಒಂದು policy decision ಕೂಡ ತೆಗದುಕೊಂಡಿದ್ದೇವೆ. ಅದಕ್ಕಾಗಿ ಈಗ ಏನು ಆ ರೀತಿಯ ಪ್ರಸ್ತಾವನೆಗಳು ಬರುತ್ತವೆ ಅದಕ್ಕೆ ನಮ್ಮ ಶೇಕಡ 50ರಷ್ಟು ಪಾಲನ್ನು ಕೊಡಲು ನಾವು ಸಿದ್ಧರಿದ್ದೇವೆ. ಅದು 400 ಕೋಟಿ ಯೋಜನೆ ಇರಬಹುದು ಅಥವಾ 500 ಕೋಟಿ ರೂಪಾಯಿಗಳ ಯೋಜನೆ ಇರಬಹುದು. ನಾವು ಅದರ ಶೇಕಡ 50ರಷ್ಟು ಹಣವನ್ನು ತುಂಬಿದ್ದೇವೆ, ಆದರೆ ಕೇಂದ್ರದ ರೈಲ್ವೆ ಸಚಿವಾಲಯದವರು ತಮ್ಮಪಾಲಿನ ಶೇಕಡ 50ರಷ್ಟು ಹಣವನ್ನು ತುಂಬಿ ಆ ಕೆಲಸಗಳನ್ನು ಪ್ರಾರಂಭಿಸಲಿಲ್ಲ. ಹಿಂದೆ ಸನ್ಮಾನ್ಯ ಮುನಿಯಪ್ಪನವರು ರೈಲ್ವೆ ಸಚಿವರಿದ್ದಾಗ ನಾನು ಇದೇ ವಿಚಾರವಾಗಿ ಒಂದೆರಡು ಸಲ review meeting ಮಾಡಿ ಆ ಸಭೆಯಲ್ಲಿ ಇದೆ ಪ್ರಶ್ನೆಯನ್ನು ಪ್ರಸ್ತಾಪಿಸಿದ್ದೇನೆ. ನಮ್ಮ ಪಾಲಿನ ಹಣವನ್ನು ನಾವು ತುಂಬಿದ್ದೇವೆ, ಆದರೆ ನೀವು ನಿಮ್ಮ ಪಾಲಿನ ಹಣವನ್ನು ತುಂಬಿಲ್ಲ ಎಂದು ಹೇಳಿದಾಗ, ಅಧಿಕಾರಿಗಳಿಗೆ ಹೇಳಿ ಕೊಡಿಸುತ್ತೇನೆ ಎನ್ನುವಂತಹ ಮಾತನ್ನು ಅವರು ಹೇಳಿದರು. ಈ ರೀತಿಯಾಗಿ ಈ ವಿಚಾರದಲ್ಲಿ ನಮ್ಮ ಕಡೆಯಿಂದ ಸಹಕಾರ ಇದೆ.

ನಾವು ತೆಗೆದುಕೊಂಡಂತಹ ಮತ್ತೊಂದು ಪ್ರಮುಖವಾದಂತಹ ಒಂದು ತೀರ್ಮಾನವೆಂದರೆ, ಇವೊತ್ತು project cost ನಲ್ಲಿ ಈ ಶೇಕಡ 50ರ ನಮ್ಮ ಪಾಲಿನ ಹಣವನ್ನು ತುಂಬುವುದರ ಜೊತೆಗೆ ಅದಕ್ಕೆ ಬೇಕಾಗುವಂತಹ ಜಮೀನನ್ನೇನು ಸ್ವಾಧೀನಪಡಿಸಿಕೊಳ್ಳಬೇಕೋ ಆ ವಿಚಾರದಲ್ಲಿ ಮೊದಲೆಲ್ಲಾ ಯಾವ ಪದ್ಧತಿ ಇತ್ತೆಂದರೆ, ಕೇಂದ್ರ ಸರ್ಕಾರದಿಂದ ಹಣ ಜಮಾಗೊಂಡ ನಂತರ award ಆಗಿ ಭೂಸ್ವಾಧೀನ ಪ್ರಾರಂಭವಾಗುತ್ತಿತ್ತು. ಕೇವಲ ಭೂಸ್ವಾಧೀನ ಮಾಡಿಕೊಡುವುದಷ್ಟೇ ನಮ್ಮ ಕೆಲಸವಾಗಿತ್ತು. ಆದರೆ ಇವೊತ್ತು ನಾವು ಏನು policy decision ತೆಗೆದುಕೊಂಡಿದ್ದೇವೆ ಎಂದರೆ ಕೇಂದ್ರದವರು project announce ಮಾಡಿದರೆ ನಾವು ಉಚಿತವಾಗಿ ಭೂಸ್ವಾಧಿನಪಡಿಸಿಕೊಂಡು ಅವರಿಗೆ ಕೊಡುವುದಕ್ಕೆ ಸಹ ನಾವು ತಯಾರಿದ್ದೇವೆ. ನಾವು ಕೇಂದ್ರ ಸರ್ಕಾರಕ್ಕೆ ಇಷ್ಟೆಲ್ಲಾ offer ಗಳನ್ನು ಮಾಡಿದ್ದೇವೆ. ಹೀಗಾಗಿ ಕೇಂದ್ರ ಸರ್ಕಾರ ಮನಸ್ಸು ಮಾಡಿ ನಮ್ಮ ರಾಜ್ಯಕ್ಕೆ

ಅನುಕೂಲವಾಗುವಂತಹ ಹೊಸ ಯೋಜನೆಗಳನ್ನು ತಮದು ಅದಕ್ಕೆ ಹಣವನ್ನು ಬಿಡುಗಡೆ ಮಾಡಿದಲ್ಲಿ ನಾವು ಆ project ನ ಒಟ್ಟು ಮೊತ್ತದಲ್ಲಿ ಶೇಕಡ 50ರಷ್ಟು ಪಾಲನ್ನು ಕೊಡುವುದಕ್ಕೆ ಸಿದ್ಧರಿದ್ದೇವೆ. ಅಲ್ಲದೆ ಅದಕ್ಕೆ ಬೇಕಾದಂತಹ ಜಮೀನನ್ನು ಕೂಡ ಕೊಡುವುದಕ್ಕೆ ತಯಾರಿದ್ದೇವೆ. ನಾವು ಈ ರೀತಿಯ project cost ತೆಗೆದುಕೊಂಡಿದ್ದೇವೆ. ಆದ್ದರಿಂದ ದಯವಿಟ್ಟು ವಿರೋಧ ಪಕ್ಷದವರು ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಮೇಲೆ ಹೆಚ್ಚು ಒತ್ತಾಯ ತರಬೇಕೆನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಅಂದಾಗ ಮಾತ್ರ ನಮ್ಮ ಕರ್ನಾಟಕ ರಾಜ್ಯಕ್ಕೆ ಹೆಚ್ಚು railway project ಗಳು ಬರಲಿಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ನಾವು ಎಲ್ಲ ರೀತಿಯಲ್ಲಿಯೂ ತಯಾರಿದ್ದೇವೆ ಎನ್ನುವಂತಹ ಮಾತನ್ನು ಸಹ ಈ ಸಂಧರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಬಹಳ ಮುಖ್ಯವಾದಂತಹ ಮತ್ತೊಂದು ವಿಚಾರವೆಂದರೆ, ಇವೊತ್ತು ದೇಶದಲ್ಲೇನಾದರೂ ಸಣ್ಣಪುಟ್ಟ ಹಳ್ಳಿಗಳಿಗೂ ಉತ್ತಮವಾದಂತಹ ರಸ್ತೆ ಸಂಪರ್ಕಗಳಾಗಿದ್ದರೆ ಅದಕ್ಕೆ ಪ್ರಧಾನ ಮಂತ್ರಿಗಳಾಗಿದ್ದಂತಹ ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಕಾರಣ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅವರು ತಮ್ಮ ಅಧಿಕಾರಾವಧಿಯಲ್ಲಿ Pradhan Mantri Gram Sadak Yojana (PMGSY) ಯನ್ನು ಜಾರಿಗೆ ತಂದರು. ಅನಂತರ ಇವೊತ್ತು ಸಣ್ಣಪುಟ್ಟ ಹಳ್ಳಿಗಳಿಗೂ ಸಹ ರಸ್ತೆಗಳು ನಿರ್ಮಾಣವಾದವು. ಆದರೆ ಒಂದು ದುರ್ದೈವದ ಸಂಗತಿ ಎಂದರೆ ನಮ್ಮ ರಾಜ್ಯದಲ್ಲಿ ಬಿ.ಜೆ.ಪಿ. ಸರ್ಕಾರ ಅಧಿಕಾರಕ್ಕೆ ಬರುವವರೆಗೂ ಕೇಂದ್ರದಿಂದ ನಮ್ಮ ಪ್ರತಿಯೊಂದು ಯೋಜನೆಗಳಿಗೂ ಹಣ ಮಂಜೂರಾಗುತ್ತಾ ಬಂತು. ಆದರೆ ರಾಜ್ಯದಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದ ನಂತರ ಕಳೆದ ನಾಲ್ಕೂವರೆ ವರ್ಷಗಳಿಂದ ನಾನು ಗಮನಿಸುತ್ತಿದ್ದೇನೆ, ನಾನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವನಾಗಿದ್ದಾಗ ಸುಮಾರು ನಾಲ್ಕೈದು ಸಲ ಕೇಂದ್ರದ ಸಚಿವರನ್ನು ಭೇಟಿ ಮಾಡಿ ಬಂದಿದ್ದೇನೆ, ಮೂರು ಜನರು ಬದಲಾದರು. ಮೊದಲಿಗೆ ಶ್ರೀ ಸಿ.ಪಿ. ಜೋಷಿ ಎಂಬುವವರಿದ್ದರು,

ನಂತರ ಆ ಸ್ಥಾನಕ್ಕೆ ಮಾನ್ಯ ವಿಲಾಸ್‌ರಾವ್ ದೇಶ್‌ಮುಖ್‌ರವರು ಬಂದರು, ಈಗ ಮಾನ್ಯ ಜಯರಾಂ ರಮೇಶ್‌ರವರಿದ್ದಾರೆ. ಈ ಮೂರು ಜನರಿದ್ದಾಗಲೂ ನಾನು ಅವರನ್ನು ಭೇಟಿಯಾಗಿ ನಮ್ಮ ರಾಜ್ಯಕ್ಕೆ Pradhan Mantri Gram Sadak Yojana ಗೆ ಹಣವನ್ನು ಮಂಜೂರು ಮಾಡಬೇಕೆಂದು ಬೇಡಿಕೊಂಡಿದ್ದೇನೆ, ಆದರೆ ಅವರು ತಾಂತ್ರಿಕ ಕಾರಣವೊಂದನ್ನು ಹೇಳಿ ಅದಕ್ಕೆ ಒಪ್ಪಲಿಲ್ಲ. ಭೇಟಿಯ ಸಂದರ್ಭದಲ್ಲಿ ಅವರು ಹೇಳಿದ್ದೇನೆಂದರೆ, ನಿಮ್ಮ ಕೋಟಾ ನೀವು ಮುಗಿಸಿಬಿಟ್ಟಿರಿ, ನಿಮಗೆ ಏನು ಹಣ ಮಂಜೂರಾಗಬೇಕಾಗಿತ್ತೋ, ಅಂದರೆ new connectivity guidelines ನಲ್ಲಿ ಆ ಹಳ್ಳಿಗಳಿಗೆ ಏನು connection ಗಳು ಬೇಕು ಅದರ ಪ್ರಕಾರ ನಿಮ್ಮ quota ಮುಗಿದುಹೋಗಿದೆ. ಸರಿ, ಮುಗಿದುಹೋದ ಮೇಲೆ ನಾವು ಕೊಟ್ಟಿದ್ದು ರಸ್ತೆಗಳ upgradation ಸಲುವಾಗಿ, ಸುಮಾರು ಹತ್ತು ವರ್ಷಗಳ ಹಿಂದೆ ಮಾಡಲಾಗಿರುವಂತಹ ಒಂದು ರಸ್ತೆ ಇರುತ್ತದೆ, ಅದನ್ನು ನಾವು ಜಿಲ್ಲಾ ಪಂಚಾಯತ್‌ನ ಯಾವುದೋ ಒಂದು scheme ನಲ್ಲಿ ಏನು ಮಾಡಿರುತ್ತೇವೆ, ಆ ರಸ್ತೆಗೆ ಕೊಟ್ಟರೆ upgradation ಸಲುವಾಗಿ ನಾವು ಹಣವನ್ನು ಕೊಡುವುದಕ್ಕಾಗುವುದಿಲ್ಲ ಎನ್ನುವಂತಹ ಮಾತನ್ನು ಅವರು ಹೇಳಿದರು. ಅಂದರೆ new connectivity ಗೆ ಮಾತ್ರ ಕೊಡುತ್ತೇವೆ ಎನ್ನುವಂಥದ್ದು, ಸರಿ. ಆ ಮಾರ್ಗಸೂಚಿ ಪ್ರಕಾರ ತಾಂತ್ರಿಕವಾಗಿ ಅದು ಸರಿಯಿರಬಹುದು. ಆದರೆ ಆ guidelines ಪ್ರಕಾರ ಅದಾದಮೇಲೂ ಸಹ ಇವೊತ್ತು upgradation ಸಲುವಾಗಿ ಸುಮಾರು ಎರಡು-ಮೂರು ವರ್ಷಗಳ ಕಾಲ ಕೇಂದ್ರದಿಂದ ಹಣವನ್ನು ಬಿಡುಗಡೆ ಮಾಡಿರುವಂತಹ ಉದಾಹರಣೆಗಳು ಸಹ ನಮ್ಮಲ್ಲಿವೆ. ಆ ವಿಚಾರವನ್ನು ಸಹ ನಾನು ಅವರ ಗಮನಕ್ಕೆ ತಂದಿದ್ದೇನೆ. 'ಇಲ್ರಿ, ಅವಾಗ ಕೊಟ್ಟಿರಬಹುದು, ಆದರೆ ಈಗ ನಾವು ಈ ಮಾರ್ಗಸೂಚಿಯ ಪ್ರಕಾರ ಕೊಡುವುದಕ್ಕಾಗುವುದಿಲ್ಲ' ಎಂದು ಅವರು ಹೇಳಿದರು. ಕೊನೆಗೆ ಮಾನ್ಯ ವಿಲಾಸ್‌ರಾವ್ ದೇಶ್‌ಮುಖ್‌ರವರು ತಾವು ಪ್ರಸ್ತಾಪಿಸುತ್ತಿರುವಂತಹ ಸಮಸ್ಯೆ ಏನೆಂಬುದು ನನಗೆ ಅರ್ಥವಾಗುತ್ತಿದೆ ಎಂದರು. ಏಕೆಂದರೆ ಅವರು ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನದಿಂದ ಬಂದಂತಹವರಾದ್ದರಿಂದ 'ನಿಮ್ಮ ಸಮಸ್ಯೆ ಏನಂಬುದನ್ನು ನಾನು ಅರ್ಥ

ಮಾಡಿಕೊಂಡಿದ್ದೇನೆ, ಈ ಸಮಸ್ಯೆ ಮಹಾರಾಷ್ಟ್ರದಲ್ಲಿಯೂ ಇದೆ, ನಾನು ನಿಮ್ಮ ಪರವಾಗಿ ವಾದ ಮಾಡುತ್ತೇನೆ' ಎಂದು ಹೇಳಿದರು. ಆದರೆ ಅದೇನೂ ಯಶಸ್ವಿಯಾಗಲಿಲ್ಲ. ಮುಂದೆ ಮಾನ್ಯ ಜಯರಾಂ ರಮೇಶ್‌ರವರು ಬಂದಮೇಲೆ ಅವರು ಒಂದು offer ಬಗ್ಗೆ ಹೇಳಿದರು, 'ಆಯಿತು guidlines ಪ್ರಕಾರ ನಿಮಗೆ ಹಣವನ್ನು ಕೊಡುವುದಕ್ಕೆ ಬರುವುದಿಲ್ಲ ಅಲ್ಲವೆ, ನಾನು ಮತ್ತೊಂದು ಹಂತದಲ್ಲಿ ಹೊಸ ಯೋಜನೆಯನ್ನು ತೆಗೆದುಕೊಂಡು ಬರುತ್ತೇನೆ, ಅದರಲ್ಲಿ ಶೇಕಡ 50ರಷ್ಟು ಪಾಲನ್ನು ನೀವು ಭರಿಸಬೇಕಾಗುತ್ತದೆ' ಎಂದು ಹೇಳಿದರು. ಅಂದರೆ ಪ್ರಸ್ತುತ ರೈಲ್ವೆ ಯೋಜನೆಗಳ ವಿಚಾರದಲ್ಲಿ ಶೇಕಡ 50ರಷ್ಟು ಪಾಲುದಾರಿಕೆ ಎನಿದೆಯೋ ಅದೇರೀತಿ. ಮೊದಲೆಲ್ಲಾ ಪೂರ್ಣವಾಗಿ ಶೇಕಡ 100ರಷ್ಟು ಪಾಲು ಕೇಂದ್ರ ಸರ್ಕಾರದ್ದೇ ಇತ್ತು. 'ಈಗ ಶೇಕಡ 50ರಷ್ಟು ಪಾಲುದಾರಿಕೆ ಪ್ರಕಾರ ರಾಜ್ಯ ಸರ್ಕಾರ ಶೇಕಡ 50ರಷ್ಟನ್ನು ಭರಿಸುವುದಾದರೆ ನಾವು ಹೊಸ ಯೋಜನೆಯನ್ನು ತೆಗೆದುಕೊಂಡು ಬರುತ್ತೇವೆ' ಎಂದು ಮಾನ್ಯ ಜಯರಾಂ ರಮೇಶ್‌ರವರು ತಿಳಿಸಿದರು. ಅದಕ್ಕೆ 'ನೋಡಿ ನೀವು ಮೊದಲೆಲ್ಲಾ ಶೇಕಡ 100ರಷ್ಟು ಕೊಡುತ್ತಿದ್ದಿರಿ, ಈಗ ಶೇಕಡ 50ರಷ್ಟನ್ನು ರಾಜ್ಯ ಸರ್ಕಾರ ಭರಿಸಬೇಕು ಎಂದರೆ ಅದರಿಂದ ರಾಜ್ಯ ಸರ್ಕಾರದ ಮೇಲೆ ಹೆಚ್ಚಿನ ಹೊರೆಯಾಗುತ್ತದೆ, ಆದ್ದರಿಂದ ದಯವಿಟ್ಟು ಬೇಡ, ಶೇಕಡ 25ರಷ್ಟನ್ನು ಕೊಡುವುದಕ್ಕೆ ತಯಾರಿದ್ದೇನೆ' ಎಂದು ನಾನು ಹೇಳಿದ್ದೇನೆ. ಕಡೆಗೆ ನಾನು ಹಣಕಾಸು ಇಲಾಖೆಯವರನ್ನು ಒಪ್ಪಿಸಿ ಸಚಿವಸಂಪುಟದ ತೀರ್ಮಾನವನ್ನು ತೆಗೆದುಕೊಂಡು ಶೇಕಡ 25ರಷ್ಟನ್ನು ರಾಜ್ಯ ಸರ್ಕಾರದಿಂದ ಬಿಡುಗಡೆಗೊಳಿಸಲು ಒಪ್ಪಿ Cabinet Note ಹಾಕಿ ನಾನು ಮಾನ್ಯ ಜಯರಾಂ ರಮೇಶ್‌ರವರಿಗೆ ಅದನ್ನು ಕಳುಹಿಸಿಕೊಟ್ಟೆ. 4000 ಕಿಲೋ ಮೀಟರ್ ರಸ್ತೆಗೆ ಮಂಜೂರಾತಿ ಕೊಡುತ್ತೇವೆ ಎಂದು ಅವರು ತಿಳಿಸಿದರು, ಆದರೆ ಆ ಕೆಲಸ ಇವೊತ್ತಿನವರೆಗೂ ಆಗಿಲ್ಲ.

ಇತ್ತೀಚೆಗೆ ನಡೆದ N.D.C., (National Development Council) ಸಭೆಯಲ್ಲಿ ನಾನು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಭಾಗವಹಿಸಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ನಾವು ಶೇಕಡ 25ರಷ್ಟನ್ನು ಕೊಡುವುದಕ್ಕೆ

ಸಿದ್ಧರಿದ್ದೇವೆ, ದಯವಿಟ್ಟು ತಾವು ಯೋಜನೆಯನ್ನು ಮಂಜೂರು ಮಾಡಿಕೊಡಿ ಎಂದು ಕೇಳಿದ್ದೇನೆ. ಅದಕ್ಕೆ ಸುಮಾರು ಮೂರು-ನಾಲ್ಕು ಜನ ಮುಖ್ಯಮಂತ್ರಿಗಳು ತಮ್ಮ ಧ್ವನಿಗೂಡಿಸುವ ಮೂಲಕ ಬೆಂಬಲವನ್ನು ವ್ಯಕ್ತಪಡಿಸಿದರು. ಹೀಗಾಗಿ ಇಷ್ಟೆಲ್ಲಾ ಪ್ರಯತ್ನಗಳನ್ನು ನಡೆಸಿದರೂ ಇನ್ನೂ ಯಾವುದೇ ಪ್ರಯೋಜನವಾಗಿಲ್ಲ. ಅದಕ್ಕಾಗಿ ಇಂತಹ ಸಂದರ್ಭಗಳಲ್ಲಿ ವಿರೋಧ ಪಕ್ಷದವರು ಕೇಂದ್ರದ ಮೇಲೆ ಒತ್ತಡವನ್ನು ತರಬೇಕಾಗುತ್ತದೆ. 'ನೀವು ಅದನ್ನು ಮಾಡಿಲ್ಲ, ಇದನ್ನು ಮಾಡಿಲ್ಲ, ಬಜಟೆ ಹಾಗಿದೆ-ಹೀಗಿದೆ, ನಿರಾಶಾದಾಯಕವಾಗಿದೆ' ಎಂದೆಲ್ಲಾ ಹೇಳುವುದು ಬೇಡ. ದಯಮಾಡಿ ನೀವು ಸಹ ಇಂತಹ ಯೋಜನೆಗಳ ವಿಚಾರದಲ್ಲಿ ಸ್ವಲ್ಪಮಟ್ಟಿಗೆ ಒತ್ತಡವನ್ನು ತರಬೇಕಾಗುತ್ತದೆ. ಅದರಿಂದ ನಮ್ಮ ರಾಜ್ಯಕ್ಕೂ ಅನುಕೂಲವಾಗುತ್ತದೆ, ಶಾಸಕರ ಜಿಲ್ಲೆಗಳಿಗೂ ರಸ್ತೆಗಳು ಮಂಜೂರಾಗಿ ಬರುತ್ತವೆ.

**ಶ್ರೀ ದಯಾನಂದ:-** ಮಾನ್ಯ ಸಭಾಪತಿಯವರೇ, ಈ ಸಾಲಿನ ಬಜೆಟ್‌ನಲ್ಲಿ ಕೊಡುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ಸ್ವಲ್ಪ ಆತುರ ಮಾಡಿ ಬೇಗನೆ ಆ ಯೋಜನೆಗಳನ್ನು ತರುವಂತೆ ಒತ್ತಾಯಿಸಬೇಕಾಗುತ್ತದೆ.

**ಶ್ರೀಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ತಮ್ಮ ಬೇಡಿಕೆ ನ್ಯಾಯಸಮ್ಮತವಾದುದಾಗಿದೆ. ಕೇಂದ್ರ ಸರ್ಕಾರ ತನ್ನ ಪಾಲಿನ ಹಣವನ್ನು ಕೊಡಬೇಕೆಂಬುದರಲ್ಲಿ ಎರಡು ಮಾತಿಲ್ಲ. Federal structure ನಲ್ಲಿ ನಮ್ಮ ರಾಜ್ಯ ಕೂಡ ಇದೆ. ಆದರೆ ಒಂದು ವಿಚಾರವನ್ನು ದಯಮಾಡಿ ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಕೇಂದ್ರ ಸರ್ಕಾರದವರು ನಮ್ಮ ಕರ್ನಾಟಕ ರಾಜ್ಯಕ್ಕಷ್ಟೇ exclude ಮಾಡಿದ್ದರೆ ನಾನು ಬಹಳಷ್ಟು ತೀವ್ರವಾಗಿ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡು ಮಂಜೂರು ಮಾಡುವಂತೆ ಒತ್ತಾಯಪಡಿಸುತ್ತೇನೆ. ಆದರೆ ಇಡೀ ದೇಶಕ್ಕೆ ಅನ್ವಯವಾಗುವಂತಹ ಒಂದು guidelines ಇದೆ. ಆದಾಗ್ಯೂ ಕೂಡ ನಮ್ಮ ರಾಜ್ಯ ಬರದಿಂದ ತತ್ತರಿಸುತ್ತಿದೆ, ಅದಕ್ಕಾಗಿ ವಿಶೇಷವಾದಂತಹ ಸೌಲಭ್ಯಗಳನ್ನು ಕೊಡಬೇಕೆಂಬುದಾಗಿ ಪ್ರತಿಪಕ್ಷದ ಪರವಾಗಿ ನಾನು ಕೇಂದ್ರದ ಮೇಲೆ ಒತ್ತಾಯವನ್ನು ತರುತ್ತೇನೆ. ಅವರಿಗೂ

ರಾಜ್ಯದ ಬಗ್ಗೆ human consideration ಇದೆ. ನಾವು–ನೀವು ಜೊತೆಗೂಡಿ ಮಾನ್ಯ ಜಯರಾಂ ರಮೇಶ್‌ರವರು ಮತ್ತು ಶರದ್ ಪವಾರ್‌ರವರನ್ನು ಭೇಟಿಯಾಗಿ ಮೀಟಿಂಗ್ ಮಾಡಿದಾಗ ಅವರು ನಮ್ಮ ರಾಜ್ಯದ ಪರವಾಗಿ ಬಹಳಷ್ಟು ಸ್ಪಂದನಶೀಲವಾದಂತಹ ಮಾತುಗಳನ್ನಾಡಿದ್ದಾರೆ. ಇವರು ಕೇಳಿದರೆ ಎಲ್ಲಾ ಕೊಟ್ಟುಬಿಡುತ್ತಾರೆ. 100 human days ಇದ್ದುದನ್ನು 150 human days ಮಾಡಿದರು. ಆದುದರಿಂದ ಈ ರಾಜ್ಯದ ಯೋಜನೆಗಳಿಗೆ ಹಣವನ್ನು ತರುವಂತಹ ವಿಚಾರದಲ್ಲಿ ನಾವು ಸಹ ನಿಮ್ಮ ಜೊತೆಯಲ್ಲಿ ಪ್ರಯತ್ನಗಳನ್ನು ನಡೆಸುತ್ತೇವೆ.

**ಶ್ರೀ ಜಗದೀಶ್ ಶೇಟ್ಟರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಜಯರಾಂ ರಮೇಶ್‌ರವರು ನಮ್ಮ ಕರ್ನಾಟಕ ರಾಜ್ಯದವರು. ಆ ಅಭಿಮಾನದಿಂದಲಾದರೂ ನಮ್ಮ ಕರ್ನಾಟಕದವರಿಗೆ ಕೊಡಿ ಎಂದು ಹೇಳಿದ್ದೇನೆ. ಅದಕ್ಕೆ ಅವರು ಸಹಕರಿಸುವುದಾಗಿ ತಿಳಿಸಿದ್ದಾರೆ. ನಾನು NREGA ಗೆ ಸಂಬಂಧಿಸಿದಂತಹ guidelines ಏನಿದೆ ಅದರಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕೆಂದು ವಿನಂತಿಸಿದಾಗ ಅದನ್ನವರು ಮಾಡಿದರು. ಅದಕ್ಕಾಗಿ ಅವರನ್ನು ನಾನು ಅಭಿನಂದಿಸಬೇಕಾಗುತ್ತದೆ. ಆದರೆ ಇಂದೊಂದು ವಿಚಾರದಲ್ಲಿ ಅವರೇಕೋ ಸ್ವಲ್ಪ ನಿಧಾನಿಸುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, 100 ದಿನಗಳಿದ್ದಂತಹ ಮಾನವ ದಿನಗಳನ್ನು 150ಕ್ಕೆ ಹೆಚ್ಚಿಸಿ, ಅವೊತ್ತೇ ಅದಕ್ಕೆ ಬೇಕಾಗದಂತಹ 750 ಕೋಟಿ ರೂಪಾಯಿಗಳನ್ನು ಕೂಡ ಬಿಡುಗಡೆ ಮಾಡಿದ್ದಾರೆ. ಅವೊತ್ತಿನ ಸಭೆಯಲ್ಲಿ ನಾನು ಸಹ ತಮ್ಮ ಜೊತೆಯಲ್ಲಿದ್ದೆ. ನಿವು ಹೇಳಿದ್ದಕೆಲ್ಲಾ ಅವರು ಒಪ್ಪಿಕೊಂಡರು.

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಆ ವಿಚಾರದಲ್ಲಿ ವಿರೋಧ ಪಕ್ಷದವರು ಇನ್ನಷ್ಟು ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಸುಮಾರು ಒಂದು ವರ್ಷದಿಂದ ನಾವು ಪ್ರಯತ್ನ ಮಾಡುತ್ತಲೇ ಇದ್ದೇವೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯಕ್ಕೆ ಅನುಕೂಲವಾಗುತ್ತದೆ ಎಂದರೆ ಪ್ರತಿಪಕ್ಷದವರಾದ ನಮಗೂ ಆ ವಿಚಾರದಲ್ಲಿ ಜವಾಬ್ದಾರಿ ಇದೆ, ನಾವು ಪ್ರಯತ್ನ ಮಾಡುತ್ತೇವೆ.

**ಶ್ರೀ ಜಗದೀಶ್ ಶೇಟ್ಟರ್:-** ಮಾನ್ಯ ಸಭಾಪತಿಯವರೇ, ಕೇಂದ್ರದಿಂದ ಕಳೆದ ಸುಮಾರು 4 ವರ್ಷಗಳಿಂದ ಈ ಯೋಜನೆಗಳಿಗೆ ಹಣ ಬಿಡುಗಡೆಯಾಗಿಲ್ಲ ಎಂದು ನಾವೇನು ಸುಮ್ಮನೆ ಕುಳಿತಿಲ್ಲ. Pradhan Mantri Gram Sadak Yojana ಯಲ್ಲಿ ಹಣ ಬಂದಿಲ್ಲವೆಂದು ನಾವು ಸುಮ್ಮನೆ ಕುಳಿತರೆ ನಮ್ಮ ರಾಜ್ಯದ ರಸ್ತೆಗಳು ಹಾಳಾಗಿ ಹೋಗುತ್ತವೆ. ಆ ರೀತಿ ರಸ್ತೆಗಳು ಹಾಳಾದರೆ ನಮ್ಮ ಗ್ರಾಮೀಣ ಭಾಗದ ಜನರು ಹೇಗೆ ಸಂಚರಿಸುವುದಕ್ಕಾಗುತ್ತದೆ? ಅದಕ್ಕಾಗಿ ನಾವು ನಮ್ಮದೇ ಆದಂತಹ ಯೋಜನೆಗಳನ್ನು ಪ್ರಾರಂಭಿಸಿದ್ದೇವೆ. 'ನಮ್ಮ ಗ್ರಾಮ-ನಮ್ಮ ರಸ್ತೆ' ಯೋಜನೆಯ ಅಡಿಯಲ್ಲಿ ಕಳೆದ ವರ್ಷ ಮಾನ್ಯ ಡಿ.ವಿ. ಸದಾನಂದಗೌಡರು ಮಂಡಿಸಿದಂತಹ ಆಯವ್ಯಯದಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 30 ಕಿಲೋ ಮೀಟರ್ ರಸ್ತೆಯನ್ನು ಮಂಜೂರು ಮಾಡಲಾಗಿದ್ದು, ಈ ಸಾಲಿನ ಆಯವ್ಯಯದಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 20 ಕಿಲೋ ಮೀಟರ್ ರಸ್ತೆಯನ್ನು ನಿರ್ಮಾಣ ಮಾಡಲು ಹಣವನ್ನು ತೆಗೆದಿರಿಸಲಾಗಿದೆ. ಅಂದರೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಟ್ಟು 50 ಕಿಲೋ ಮೀಟರ್ ರಸ್ತೆಗೆ ಏನು ಮಂಜೂರಾತಿ ನೀಡಲಾಗಿದೆ ಇದು ನಮ್ಮ ಸರ್ಕಾರದ ಬಜೆಟ್. ಇದಕ್ಕೆ ಸುಮಾರು 2000 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣ ಬೇಕಾಗುತ್ತದೆ. ಅದರಲ್ಲಿ ಈಗಾಗಲೇ ಸುಮಾರು 20 ಕಿಲೋ ಮೀಟರ್ ರಸ್ತೆಗಳು ನಿರ್ಮಾಣಗೊಂಡಿವೆ. ಈಗ 30 ಕಿಲೊ ಮೀಟರ್ ರಸ್ತೆ ನಿರ್ಮಾಣಕ್ಕೆ ಟೆಂಡರ್ ಆಗಿ, ಬಹುಶಃ ಮಾರ್ಚ್-ಏಪ್ರಿಲ್ ವೇಳೆಗೆ ಆ ಕಾಮಗಾರಿಗಳು ಪ್ರಾರಂಭವಾಗುತ್ತವೆ. ಚುನಾವಣಾ ನೀತಿ ಸಂಹಿತೆ ಜಾರಿಯಾಗದಿದ್ದ ಪಕ್ಷದಲ್ಲಿ ಖಂಡಿತವಾಗಿಯೂ ಆ ಕೆಲಸಗಳು ಪ್ರಾರಂಭವಾಗುತ್ತವೆ. ನಮ್ಮ ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಪ್ರತೀ ವಿಧಾನ ಸಭಾ ಕ್ಷೇತ್ರಕ್ಕೆ 50 ಕಿ.ಮೀ.ರಸ್ತೆ ನಿರ್ಮಾಣ ಮಾಡಲು ಉದ್ದೇಶಿಸಲಾಗಿದ್ದು ಒಂದೊಂದು ರಸ್ತೆಗೆ ಕನಿಷ್ಠ 30

ಲಕ್ಷದಿಂದ 35 ಲಕ್ಷ ರೂಪಾಯಿಯವರೆವಿಗೆ ನಾವು ಖರ್ಚು ಮಾಡುತ್ತಿದ್ದೇವೆ. ಈಗಾಗಿ ಇವತ್ತು ಐದಾರು ಸಾವಿರ ಕಿ.ಲೋ.ಮೀಟರ್ ರಸ್ತೆ ಮಾಡುತ್ತಿದ್ದೇವೆ. ಇದರ ಜೊತೆಗೆ ಕೇಂದ್ರ ಸರ್ಕಾರದ್ದು ನಾಲ್ಕೈದು ಸಾವಿರ ಕಿ.ಮೀ.ಬಂದರೆ ಬಹಳಷ್ಟು ಒಳ್ಳೆಯದಾಗುತ್ತದೆ ಎಂಬ ಮಾತನ್ನು ಈ ಸದನದಲ್ಲಿ ಹೇಳಬಯಸುತ್ತೇನೆ. ಈಗಾಗಿ ಅದರ ಬಗ್ಗೆ ಹೆಚ್ಚಿನ ರೀತಿಯಾದ ಒಂದು ಪ್ರಯತ್ನ ಮಾಡಬೇಕು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆ ದೃಷ್ಟಿಯಿಂದ ತಮ್ಮ ಕಡೆಯಿಂದ ಜಾಸ್ತಿ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೊಂದು ವಿಷಯವೇನೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರ ಸದಸ್ಯರು ಕೆಲವೊಂದು ಪ್ರಶ್ನೆಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಹೊರಟ್ಟಿಯವರು ಕೇಳಿದರು ಕೃಷಿ ಬಜೆಟ್ ಮಾಡಿದ್ದೀರಿ, ಮಾದರಿಯ ಬಜೆಟ್ ಮಾಡಿದ್ದಿರಿ ಇದರಿಂದ ಎನು ಉಪಯೋಗವೆಂದು ಕೇಳಿದರು. ಆದರೆ ನಮ್ಮ ಕೃಷಿ ಬಜೆಟ್ ಬಗ್ಗೆ ಬೇರೆ ರಾಜ್ಯದವರು ಬಂದು ಅಧ್ಯಯನ ಮಾಡುತ್ತಿದ್ದಾರೆ. ಅದರಲ್ಲೂ ಪ್ರಮುಖವಾಗಿ ಒರಿಸ್ಸಾ ಮತ್ತು ಛತ್ತೀಸ್‌ಘಡ ಆ ರಾಜ್ಯಗಳ ಅಧಿಕಾರಿಗಳು ಬಂದು ಯಾವ ರೀತಿ ಕೃಷಿ ಬಜೆಟ್ ಮಂಡನೆ ಮಾಡಿದ್ದಾರೆ, ಅದರ advantage ಎನಾಗಿದೆ ಎಂಬುದರ ಬಗ್ಗೆಯೂ ಸಹ ಸಾಕಷ್ಟು ಚಿಂತನೆಯನ್ನು ಮಾಡಿದ್ದಾರೆ. ಇನ್ನೊಂದು ವಿಷಯವೇನೆಂದರೆ, ಕೃಷಿ ಬೆಳವಣಿಗೆ ಶೇಕಡ 1.8 ರಷ್ಟಾಗಿದೆ. ಅಂದರೆ ಕೃಷಿ ಬೆಳವಣಿಗೆ ಕಡಿಮೆ ಆಗಿದೆ ಎನ್ನುವಂತಹ ಒಂದು ಮಾತಿದೆ. ಇಲ್ಲಿ ಟೀಕೆಗಳು ಬಂದವು ನಿಜ. ಇವತ್ತೇನು ಕೃಷಿ ವಲಯದ ಪ್ರಸ್ತುತ ದರಗಳ G.S.D.P. ಕಾಲಂ ನೋಡಿದಾಗ ಒಂದು total amount ನೋಡಿದಾಗ ಅದು ಹೆಚ್ಚಳವಾಗಿದೆ. ಕೃಷಿ ವಲಯದಿಂದ amount ಲೆಕ್ಕದಲ್ಲಿ ತೆಗೆದುಕೊಂಡಾಗ ಕೃಷಿವಲಯದಲ್ಲಿ 2010–11ನೇ ಸಾಲಿನಲ್ಲಿ 69,241 ಕೋಟಿ contribution ಆಗಿದೆ. 2011–12ನೇ ಸಾಲಿನಲ್ಲಿ 74,722 ಕೋಟಿ. 2012–13ನೇ ಸಾಲಿನಲ್ಲಿ 80,830 ಕೋಟಿ. ಅಂದರೆ ಇದನ್ನು ಲೆಕ್ಕ ಇಡುವಾಗ ಹೆಚ್ಚಿಗೆ amount ಬಂದಿತ್ತು. ಇನ್ನು percentage ನಲ್ಲಿ ನೋಡಿದಾಗ ಕಡಿಮೆ ಆಗಿರುವುದನ್ನು ನಾವು ತೆಗೆದುಕೊಳ್ಳುತ್ತೇವೆ. ಅದಕ್ಕೆ

ಬರಗಾಲ ಕಾರಣವಿದೆ. ಕಳೆದ ಒಂದೂವರೆ, ಎರಡು ವರ್ಷದಲ್ಲಿ ಬರಗಾಲದ ಪರಿಸ್ಥಿತಿ ಇತ್ತು. ಅದರೆ ಭೂ ಚೇತನ ಯೋಜನೆ, ಜಲಸಂವರ್ಧನ ಯೋಜನೆ ಇನ್ನಿತರ ಯೋಜನೆಗಳ ಮುಖಾಂತರ ಸರ್ಕಾರ ಮತ್ತು ರೈತರ ಪ್ರಯತ್ನದಿಂದ 130 ಮೆಟ್ರಿಕ್ ಟನ್ ಉತ್ಪಾದನೆ ಆಗಬೇಕಾಗಿತ್ತು ಆದರೆ 120 ಮೆಟ್ರಿಕ್ ಟನ್ ಉತ್ಪಾದನೆ ಆಗುವ ಹಂತಕ್ಕೆ ಹೋಗುತ್ತಿದ್ದೇವೆ. ಇಷ್ಟು ಬರಗಾಲ ಇದ್ದಂತಹ ಸಂದರ್ಭದಲ್ಲಿಯೂ ಸಹ ಬೇರೆ ಬೇರೆ ಕಾರ್ಯಕ್ರಮಗಳ ಮುಖಾಂತರ ನಮ್ಮ ರೈತರ ಪರಿಶ್ರಮದಿಂದ ಇವತ್ತು ಆ ಸಾಧನೆಯನ್ನು ಮಾಡುತ್ತಿದ್ದೇವೆ. ಇನ್ನೊಂದು ಬಹಳ ಮುಖ್ಯವಾದ ವಿಷಯವೇನೆಂದರೆ, G.S.D.P. ಇದು agriculture sector ಗೆ ಕಡಿಮೆ ಆಗುವುದಕ್ಕೆ ಕೆಲವೊಂದು ಕಾರಣಗಳಿವೆ. ಏನೆಂದರೆ, ಸುಮಾರು ಇಪ್ಪತ್ತು, ಮುವತ್ತು ವರ್ಷದ ಹಿಂದೆ agriculture sector ಮೇಲೆ dependability ಬಹಳ ಇತ್ತು. ಆದರೆ ಈಗ ನಗರ ಪ್ರದೇಶದ ಬೆಳವಣಿಗೆ ಇರಬಹುದು, ಉದ್ಯೋಗಾವಕಾಶಗಳು ಇರಬಹುದು ಅದು ಬೇರೆ ಬೇರೆ ಘಟಕಗಳಲ್ಲಿ ಅದು ಕೈಗಾರಿಕೆ, I.T., ಮತ್ತೊಂದರಲ್ಲಿ ಒಂದು shifting ನಡೆಯುತ್ತಿದೆ. ಆ ವೃತ್ತಿಯಿಂದ ಬೇರೆ ಬೇರೆ ಕಡೆ shifting ಆಗುತ್ತಿದೆ. ಆದುದರಿಂದ ಬೇರೆ ಕಡೆ ಉದ್ಯೋಗಾವಕಾಶಗಳು ಜಾಸ್ತಿ ಆಗುತ್ತಿವೆ. ಹಾಗಾಗಿ ಈ ಬೆಳವಣಿಗೆಯು ಸಹ ಕೃಷಿ ಉತ್ಪನ್ನ ಕಡಿಮೆ ಆಗುವುದಕ್ಕೆ ಒಂದಿಷ್ಟು ಕಾರಣವಾಗಿದೆ. ಆದರೆ ಇಂತಹ ಬರಗಾಲದ ಪರಿಸ್ಥಿತಿಯಲ್ಲಿಯೂ ಸಹ ನಮ್ಮ ಉತ್ಪಾದನೆ ಜಾಸ್ತಿಯಾಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನೊಂದು ಬಹಳ ಪ್ರಮುಖವಾದಂತಹ ವಿಷಯ ಚರ್ಚೆಗೆ ಬಮತು. ಬರಗಾಲ, ಸರಿಯಾಗಿ ಗೋ–ಶಾಲೆಗಳನ್ನು ಮಾಡಲಿಲ್ಲ, ಮೇವು ಕೊಡಲಿಲ್ಲ ಎಂಬ ಮಾತುಗಳು ಕೇಳಿ ಬಂದವು. ಅದರ ಬಗ್ಗೆ ನಾನು ಹೇಳುವಂಥದ್ದು ಬರಗಾಲ ಬಂದಂತಹ ಸಂದರ್ಭದಲ್ಲಿ ನಮ್ಮ ರೈತರಿಗೆ ಜಾನುವಾರುಗಳಿಗೆ ಯಾವುದೇ ರೀತಿಯಾದಂತಹ ತೊಂದರೆ ಆಗದ ರೀತಿಯಲ್ಲಿ ಸಂರಕ್ಷಣೆ ಮಾಡುವಂಥ ಎಲ್ಲಾ ಕೆಲಸವನ್ನು ಸರ್ಕಾರ ಮಾಡಿದೆ ಎಂದು ಹೇಳಬಯಸುತ್ತೇನೆ. ಸರ್ಕಾರ ದೊಡ್ಡ ದೊಡ್ಡ ದೊಡ್ಡ ಪ್ರಮಾಣದಲ್ಲಿ

ಗೋ–ಶಾಲೆಗಳನ್ನು ತೆರೆದಿದೆ. ನಾನು ಗ್ರಾಮೀಣಾಭಿವೃದ್ಧಿ ಮತ್ತು ಪಮಚಾಯತ್ ರಾಜ್ ಸಚಿವನಾಗಿದ್ದಂತಹ ಸಂದರ್ಭದಲ್ಲಿ ನಾವು ಮೂರ್ನಾಲ್ಕು team ಮಾಡಿದ್ದೆವು. ಬಿಜಾಪುರ, ಗುಲ್ಬರ್ಗಾ ಇನ್ನಿತರ ಕಡೆಗಳಿಗೆ ನಾನು ಭೇಟಿ ನೀಡಿದ್ದೇನೆ. ಬಿಜಾಪುರಕ್ಕೆ ನಾನು ಹೋಗಿದ್ದೆ. ಅಲ್ಲಿಗೆ ಹೋದಾಗ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಬಾಗದಲ್ಲಿ ಒಂದೊಂದು ಗೋ–ಶಾಲೆಯಲ್ಲಿ ಸುಮಾರು ಎರಡೂವರೆ ಸಾವಿರ ಜಾನುವಾರುಗಳು ಗೋ–ಶಾಲೆಯಲ್ಲಿ ಇರುವುದನ್ನು ನಾನು ನೋಡಿದ್ದೇನೆ. ಅವುಗಳಿಗೆ ಮೇವು ಕೊಡುವುದರಲ್ಲಿ ಮೊದಲು 5 ಕೆ.ಜಿ ಮೇವನ್ನು ಕೊಡುತ್ತಿದ್ದರು ಅದನ್ನು 8 ಕೆ.ಜಿ.ಗೆ ಹೆಚ್ಚಿಸಲಾಗಿದೆ. ಯಾವುದೇ ಸಂದರ್ಭದಲ್ಲಿ ಗೋ–ಶಾಲೆಯಲ್ಲಿ ಜಾನುವಾರುಗಳಿಗೆ ಮೇವು ಕಡಿಮೆ ಆಗದ ರೀತಿಯಲ್ಲಿ ಸರಬರಾಜು ಮಾಡುವ ಕೆಲಸವನ್ನು ನಾವು ಮಾಡಿದ್ದೇವೆ. ಹಾಗಾಗಿ ಒಂದು ಕಡೆಯಲ್ಲಿಯೂ ಸಹ ರೈತರು ನಮಗೆ ತೊಂದರೆ ಆಗಿದೆ ಎಂದು ಹೇಳಲಿಲ್ಲ. ಜಾನುವಾರುಗಳೇ ಬರದೆ ಹೋದರೆ ನಾವು ಗೋ–ಶಾಲೆಗಳನ್ನು ನಡೆಸುವುದಾದರು ಹೇಗೆ? ನಾವು ಎಲ್ಲೆಲ್ಲಿ ಗೋ–ಶಾಲೆಗಳು ಅವಶ್ಯಕತ್ತೆ ಇತ್ತು ಅಲ್ಲೆಲ್ಲಾ ಗೋಶಾಲೆಗಳನ್ನು ಪ್ರಾರಂಭಿಸಿದೆವು. ಅಲ್ಲಿಗೆ ಸಾವಿರಾರು ಜಾನುವಾರುಗಳನ್ನು ತಂದು ಬಿಟ್ಟರು. ಬೆಳಿಗ್ಗೆ ಗೋ–ಶಾಲೆಗಳಿಗೆ ಜಾನುವಾರುಗಳನ್ನು ತಂದು ಬಿಡುತ್ತಿದ್ದರು, ಸಾಯಂಕಾಲ ಅವುಗಳನ್ನು ತಮ್ಮ ತಮ್ಮ ಮನೆಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಈ ರೀತಿ ವ್ಯವಸ್ಥೆ ಮಾಡಿದ್ದೆವು. ಮೂರಾರು ಗ್ರಾಮಗಳಿಗೆ ಕುಡಿಯುವ ನೀರಿಗೆ ತೊಂದರೆಯಾದಾಗ ಟ್ಯಾಂಕರ್ ಮುಖಾಂತರ ನೀರಿನ ಸರಬರಾಜು ಮಾಡಿದ್ದೇವೆ. ಈಗಾಗಿ ಯಾವುದೇ ಹಂತದಲ್ಲಿ ಕುಡಿಯುವ ನೀರಿಗೆ ಗೋ–ಶಾಲೆಗಳನ್ನು ತೆರೆಯುವುದಕ್ಕೆ ಮತ್ತು ಮೇವಿನ ಕೊರತೆ ಆಗದ ರೀತಿಯಲ್ಲಿ ಬರಗಾಲ ಬಂದಂತಹ ಸಂದರ್ಭದಲ್ಲಿ ಎಲ್ಲಾ ರೀತಿಯಾದಂತಹ ಕ್ರಮವನ್ನು ತೆಗೆದುಕೊಂಡಿದ್ದೇವೆ. ನಮಗೆ ಹಣದ ಕೊರತೆ ಇಲ್ಲ. ಒಂದೊಂದು ತಾಲ್ಲೂಕಿಗೂ ಸಹ ಅರವತ್ತು ಲಕ್ಷ ಹಣವನ್ನು ಬಿಡುಗಡೆ ಮಾಡಿದ್ದೇವೆ. ಎಲ್ಲಿ ಗೋ–ಶಾಲೆಯ ಅವಶ್ಯಕತೆ ಇದೆ ಅಲ್ಲಿ ಗೋ–ಶಾಲೆಯನ್ನು ತೆಗೆಯಿರಿ, ಕುಡಿಯುವ ನೀರಿನ ತೊಂದರೆ ಇದ್ದರೆ ಅಲ್ಲಿಗೆ ಟ್ಯಾಂಕರ್ ಮುಖಾಂತರ

ನೀರು ಸರಬರಾಜು ಮಾಡಿ, ಮತ್ತು ಇನ್ನಿತರ ಮೂಲಗಳಿಂದ ಕುಡಿಯುವ ನೀರಿನ ಯೋಜನೆಯನ್ನು ಜಾರಿಗೆ ತನ್ನಿ ಎಂದು ಈಗಾಗಲೇ ನಾವು D.C. ಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಯುದ್ಧೋಪಾದಿಯಲ್ಲಿ ಕೆಲಸವನ್ನು ಮಾಡುತ್ತಿದ್ದೇವೆ. ಈ ದಿಸೆಯಿಂದ ಎಲ್ಲಾ district administration alert ಮಾಡಿದ್ದೇವೆ. ಈಗ ಬರುವಂತಹ ಮಾರ್ಚ್, ಎಪ್ರೀಲ್ ಮತ್ತು ಮೇ ತಿಂಗಳಿನಲ್ಲಿಯೂ ತೊಂದರೆ ಆಗಬಹುದು. ಆ ದೃಷ್ಟಿಯಿಂದ ಎಲ್ಲಾ ರೀತಿಯಾದಂತಹ ಕ್ರಮವನ್ನು ಕೈಗೊಂಡಿದ್ದೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗಾಗಿ ಈ ವಿಷಯಗಳ ಬಗ್ಗೆ ಹಲವಾರು ಚರ್ಚೆಗಳಾದವು. ಹಾಗಾಗಿ ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ ಎಂಬ ಮಾತನ್ನು ಹೇಳಬಯಸುತ್ತೇನೆ. ಇವತ್ತಿನ ಬಜೆಟ್‌ನಲ್ಲಿ ಕುಡಿಯುವ ನೀರಿನ ಹಲವಾರು ಯೋಜನೆಗೂ ಸಹ ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದರ ಮುಖಾಂತರ ಖರ್ಚು ಮಾಡುತ್ತೇವೆ ಎಂಬ ಮಾತನ್ನು ಹೇಳಬಯಸುತ್ತೇನೆ. ಪೂರಕ ಬಜೆಟ್‌ನಲ್ಲಿಯೂ ಸಹ ನಾವು additional amount ತೆಗೆದುಕೊಂಡಿದ್ದೇವೆ. ಇನ್ನೊಂದು ಬಹಳ ಪ್ರಮುಖವಾದ ವಿಷಯದ ಬಗ್ಗೆ ಚರ್ಚೆ ಆಯಿತು. ಏನೆಂದರೆ, ವಿದ್ಯುತ್ ಉತ್ಪಾದನೆ ಎಷ್ಟಾಗಿದೆ ಎಂಬುದರ ಬಗ್ಗೆ ಚರ್ಚೆ ಆಯಿತು. ಹಿಂದಿನ ಸರ್ಕಾರಗಳು ಬಹುಶಃ ಈ ಒಂದು ವಲಯಕ್ಕೆ ಹೆಚ್ಚಿನ ಒಂದು ಆದ್ಯತೆಯನ್ನು ಕೊಟ್ಟು, equity share ಏನಾದರು ಕೊಟ್ಟಿದ್ದರೆ, ಬೆಂಬಲ ಕೊಟ್ಟಿದ್ದರೆ ಬಹುಶಃ ಇಷ್ಟು ದೊಡ್ಡ public sector ನಲ್ಲಿ ದೊಡ್ಡ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಸಾಧ್ಯತೆ ಇತ್ತು. ಆದರೆ ಅದು ಆಗಲಿಲ್ಲ. ಆದರೆ ನಾನು ಮೊದಲ ಸಲ ಹೇಳುತ್ತಿದ್ದೇನೆ, ನಮ್ಮ ರಾಜ್ಯದಲ್ಲಿ ಕಳೆದ ನಾಲ್ಕೂವರೆ ವರ್ಷದ ಅವಧಿಯಲ್ಲಿ ವಿದ್ಯುತ್ ಉತ್ಪಾದನೆ ಒಟ್ಟು 4,593 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಿದ್ದೇವೆ. ಹೊಸದಾಗಿ ಇದನ್ನು ಸೇರಿಸಿದ್ದು. ಅದರಲ್ಲಿ R.T.P.S. ಎಂಟನೇ ಘಟಕದಲ್ಲಿ 850 ಮೆಗಾವ್ಯಾಟ್, B.T.P.S. ಒಂದು ಮತ್ತು ಎರಡನೇ ಘಟಕ 1,000 ಮೆಗಾವ್ಯಾಟ್. ವರಾಹಿ ಐದು ಮತ್ತು ಆರನೇ ಘಟಕ 230 ಮೆಗಾವ್ಯಾಟ್, U.P.C.L. ಒಂದು ಮತ್ತು ಎರಡನೇ ಘಟಕ 1,200

ಮೆಗಾವ್ಯಾಟ್, ನವೀಕೃತ ಇಂಧನ ಮೂಲಗಳಿಂದ 1,913 ಮೆಗಾವ್ಯಾಟ್. ಈ ರೀತಿ ಒಟ್ಟು 4,593 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುತ್ತಿದ್ದೇವೆ. ಅದು public sector ಇರಬಹುದು, private sector ಇರಬಹುದು. ನಮ್ಮ ರಾಜ್ಯದಲ್ಲಿ ಉತ್ಪಾದನೆ ಆಗುತ್ತಿದೆ, ನಮ್ಮ ರಾಜ್ಯಕ್ಕೆ ಅವರಿ ವಿದ್ಯುತ್ ಕೊಡುತ್ತಿದ್ದಾರೆ. ಆ ರೀತಿ ಒಂದು agreement ಮಾಡಿಕೊಮಡು ನಾವು ವಿದ್ಯುತ್ ಉತ್ಪಾದನೆ ಮಾಡುತ್ತಿದ್ದೇವೆ. ಇನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 2008–9ನೇ ಸಾಲಿನಿಂದ ಈ ವಲಯಕ್ಕೆ ನಮ್ಮ ರಾಜ್ಯ ಸರ್ಕಾರ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಆರು ಸಾವಿರ ಕೋಟಿ ರೂಪಾಯಿಗಳ equity ಬೆಂಬಲ ಕೊಟ್ಟಿದ್ದೇವೆ. ಈ ಹಿಂದೆ ಯಾವುದೇ ಸರ್ಕಾರ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಣವನ್ನು ಕೊಡಲಿಲ್ಲ. ಬಹುಶಃ ಈ ಹಿಂದೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಣ ಕೊಟ್ಟಿದ್ದರೆ ಇವತ್ತು self-sufficient ಆಗಿರುತ್ತಿದ್ದೇವು. ಕೇವಲ ನಾಲ್ಕು ವರ್ಷಗಳಲ್ಲಿ ಜಾದು ಮಾಡಬೇಕೆಂದರೆ ಆಗುವುದಿಲ್ಲ. ಅದಕ್ಕೆ ಮೊದಲಿನ ಎಲ್ಲಾ ಸರ್ಕಾರಗಳು ಕೈಜೋಡಿಸಿದ್ದರೆ ಇವತ್ತು ಇಷ್ಟು ತೊಂದರೆ ಇರುತ್ತಿರಲಿಲ್ಲ. ಇಷ್ಟಾದರೂ ಸಹ ಅಕ್ಕಪಕ್ಕದ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರದಲ್ಲಿ ವಿದ್ಯುತ್ತಿನ ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಸ್ವಲ್ಪ ಮಾಡಿ. ಅಲ್ಲಿ ಬಹಳ worst ಇದೆ. ಆ ಎಲ್ಲಾ ರಾಜ್ಯಗಳಿಗೆ ಹೋಲಿಕೆ ಮಾಡಿ ನೋಡಿದಾಗ ನಮ್ಮ ಕರ್ನಾಟಕದ ಪರಿಸ್ಥಿತಿ ಉತ್ತಮವಾಗಿದೆ. ಆದರೆ ನಾವು ಇನ್ನೂ ಸ್ವಲ್ಪ self-sufficient ಆಗಬೇಕಾಗಿದೆ. ಆದರೆ ಇವತ್ತು ನಾವು ಎಷ್ಟೋ ಸಾಧನೆಯನ್ನು ಮಾಡಿದ್ದೇವೆ ಅದನ್ನು ನೀವು appreciate ಮಾಡಬೇಕು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು 2008–09ನೇ ಸಾಲಿನಿಂದ B.T.P.S. ಎರಡನೇ ಘಟಕ ಮತ್ತು ನವೀಕೃತ ಇಂಧನ ಮೂಲಗಳಿಂದ ಹೆಚ್ಚಿನ ಸಾಮರ್ಥ್ಯದ ವಿದ್ಯುತ್ ಉತ್ಪಾದನೆ ಆಗುತ್ತಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದರ ಜೊತೆಗೆ ಅರಣ್ಯ ಮತ್ತು ಪರಿಸರ ಇಲಾಖೆಗಳ ಅನುಮತಿ ಮುಂತಾದ ಅಡಚಣೆಗಳನ್ನು ನಿವಾರಿಸಿ ನಮ್ಮ ಸರ್ಕಾರದ ಅವಧಿಯಲ್ಲಿ ನವೀಕೃತ ಇಂಧನ ನೀತಿಯಿಂದ 1,200 ಮೆಗಾವ್ಯಾಟ್ ವಿದ್ಯುತ್

ಉತ್ಪಾದನೆ ಮಾಡಲಾಗುತ್ತಿದೆ. 2010ನೇ ಸಾಲಿನಲ್ಲಿ ನಮ್ಮ ರಾಜ್ಯ ಮೊದಲ ಸಲ ನವೀಕೃತ ಇಂಧನ ನೀತಿಯನ್ನು announce ಮಾಡಿತು. ಅದರ ಜೊತೆಗೆ ಸೌರನೀತಿಯನ್ನು ಸಹ 2011ರಲ್ಲಿ ನಾವು ತೆಗೆದುಕೊಂಡಿದ್ದೇವೆ, ಅದರಿಂದ 14 ಮೆ.ವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿದ್ದೇವೆ. ಇನ್ನೂ ಕೆಲವು ongoing ಕೆಲಸ ನಡೆಯುತ್ತಿದೆ. ಅದು ಆದರೆ ನಾವು self-sufficient ಆಗುತ್ತೇವೆ. ಬಿಜಾಪುರ ಜಿಲ್ಲೆ ಕುಡ್ಲಗಿಯಲ್ಲಿ N.T.P.C. ಸಹಯೋಗದೊಂದಿಗೆ 4,000 ಮೆಗಾವ್ಯಾಟ್ ಸಾಮರ್ಥ್ಯದ ಬೃಹತ್ ಶಾಖೋತ್ಪನ್ನ ಉತ್ಪಾದನೆ ಕೇಂದ್ರದ ಸ್ಥಾಪನೆಗೆ ಈಗಾಗಲೇ ನಾವು ಪ್ರಾರಂಭ ಮಾಡಿದ್ದೇವೆ. ಅದರಲ್ಲಿ ನಮ್ಮ ರಾಜ್ಯದ ಪಾಲು 2,000 ಮೆಗಾವ್ಯಾಟ್.

(5 ಘಂಟೆ)

ಅದರಲ್ಲಿ ರಾಜ್ಯದ ಪಾಲು 2000 ಮೆ.ವ್ಯಾಟ್. N.T.P.C. 2000 ಮೆ.ವ್ಯಾಟ್, ಅದರ ಕೆಲಸವನ್ನು ಈಗಾಗಲೇ ಚಾಲೂ ಮಾಡಿಸುತ್ತಿದ್ದೇವೆ. ರಾಯಚೂರಿನ ಯರಮರಸ್ ಮತ್ತು ಯಜ್ಞಾಪುರದಲ್ಲಿ 1600 ಮತ್ತು 800 ಮೆ.ವ್ಯಾಟ್ ಶಾಖೋತ್ಪನ್ನ ವಿದ್ಯುತ್ ಕೇಂದ್ರವನ್ನು ಸ್ಥಾಪಿಸಲು ನಾವು ಈಗಾಗಲೇ ಯೋಜನಾ ಕ್ರಮವನ್ನು ಕೈಗೊಂಡಿದ್ದೇವೆ. ಅದೇ ರೀತಿ 1600 ಸಾಮರ್ಥ್ಯದ pithead ವಿದ್ಯುತ್ ಕೇಂದ್ರ ಸ್ಥಾವರವನ್ನು ಛತ್ತೀಸ್‌ಗಡ ರಾಜ್ಯದಲ್ಲಿ ಪ್ರಾರಂಭಿಸುವ ಹಂತದಲ್ಲಿ ನಾವಿದ್ದೇವೆ. ಇದರ ಜೊತೆಗೆ 700. ವ್ಯಾಟ್ ಸಾಮರ್ಥ್ಯದ B.T.P.S. 3ನೇ ಘಟಕದ ಸ್ಥಾಪನೆಗೆ ಯೋಜನಾ ಕ್ರಮವನ್ನು ನಾವು ಈಗಾಗಲೇ ಕೈಗೊಂಡಿದ್ದೇವೆ. ಬಿಡದಿಯಲ್ಲಿ 700 ಮೆ.ವ್ಯಾಟ್ ಸಾಮರ್ಥ್ಯದ ಅನಿಲ ಅಧಾರಿತ ವಿದ್ಯುತ್ ಕೇಂದ್ರ ಸ್ಥಾಪನೆಗೂ ಸಹ ಸರ್ಕಾರ ಕ್ರಮವನ್ನು ಕೈಗೊಂಡಿದೆ. ಅದರಲ್ಲೂ ಖಾಸಗಿ ವಿದ್ಯುತ್ ಉತ್ಪಾದಕರಿಂದ ಬೆಳಗಾವಿ, ಗದಗ, ದಾವಣಗೆರೆ ಮತ್ತು ತುಮಕೂರಿನಲ್ಲಿ ಅನಿಲ ಅಧಾರಿತ ವಿದ್ಯುತ್ ಯೋಜನೆಗಳಿಗೆ ಈಗಾಗಲೇ ನಾವು ಚಾಲನೆಯನ್ನು ನೀಡಿದ್ದೇವೆ. ಮತ್ತು ತದಡಿ ಯಲ್ಲಿ 750 ಸಂಯುಕ್ತ ಅನಿಲ ಮತ್ತು ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರಸ್ಥಾಪನೆಗೂ ಸಹ ಯೋಜನಾ ಕ್ರಮವನ್ನು ನಾವು ಕೈಗೊಂಡಿದ್ದೇವೆ. ಈ ರೀತಿಯ ವಿದ್ಯುತ್ ಕ್ಷೇತ್ರದಲ್ಲಿ ನಾವು progress ಅನ್ನು

ಕಾಣುತ್ತಿದ್ದೇವೆ. Self-sufficient ಆಗುವ ಪ್ರಯತ್ನದಲ್ಲಿದ್ದೇವೆ. ಈ ಹೊಸ ಯುನಿಟ್‌ಗಳು ಪ್ರಾರಂಭ ಆದಾಗ 4–5 ವರ್ಷಗಳಾದರೂ ಬೇಕಾಗುತ್ತದೆ. ಹಾಗಾಗಿ ಮೊದಲ ವರ್ಷದಲ್ಲಿ ನಾವು ಕೈಗೊಂಡಿದ್ದು ಒಂದು ಹಂತಕ್ಕೆ ಬಂದಿದೆ, ಇನ್ನು ಕೆಲವು ongoing units ಇದ್ದಾವೆ, ಇನ್ನೂ ಕೆಲವೇ ವರ್ಷಗಳಲ್ಲಿ ಆ ಯುನಿಟ್‌ಗಳು ಬಂದಲ್ಲಿ ನಾವು ಪೂರ್ತಿ self-sufficient ಆಗುತ್ತೇವೆ. ಇನ್ನೂ excessive production ಮಾಡುವುದಕ್ಕೆ ಕ್ರಮವನ್ನು ಕೈಗೊಳ್ಳುತ್ತೇವೆ. ಆ ದೃಷ್ಟಿಯಿಂದ ಈ ವಿದ್ಯುತ್ ವಲಯಕ್ಕೆ ನಾವು ಹೆಚ್ಚಿನ ಆದ್ಯತೆಯನ್ನು ನೀಡಿದ್ದೇವೆ. ಈ ವರ್ಷದ ಆಯವ್ಯಯದಲ್ಲಿ ಅದಕ್ಕಾಗಿಯೇ 10 ಕೋಟಿಗೂ ಹೆಚ್ಚಿನ ಹಣವನ್ನು ನೀಡಲಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಅದೇ ರೀತಿ ವಿದ್ಯುತ್ತಿನ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಏನೇನು ಕ್ರಮಗಳನ್ನು ಕೈಗೊಳ್ಳಬೇಕೋ ಅದನ್ನೆಲ್ಲ ಮಾಡಲಾಗಿದೆ.

ಮತ್ತೊಂದು ವಿಚಾರ ಏನೆಂದರೆ Transmission and Distribution loss. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಇದರ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿತ್ತು. 28%, 30% T & D loss ಇತ್ತು. ಇದಕ್ಕಾಗಿ ನಮ್ಮ ರಾಜ್ಯದಲ್ಲಿ ಎಲ್ಲಾ ಕ್ರಮವನ್ನು ಕೈಗೊಂಡು T & D loss average 21.5% ಇಳಿಕೆ ಆಗಿದೆ. ಮೊದಲಿಗೆ 28%, 26%, 23% ಇದ್ದದ್ದು ಈಗ 21.5% ಇಳಿಕೆ ಆಗಿದೆ. ನಾವು national average loss ತೆಗೆದುಕೊಂಡರೆ ಅದು ಶೇಕಡ 26 ಇದೆ. ಆದರೆ ನಮ್ಮ ರಾಜ್ಯದ್ದು 21.5% ಇಳಿಕೆ ಆಗಿದೆ. ಅದಕ್ಕೆ ಎಲ್ಲಾ ರೀತಿಯ ಪ್ರಯತ್ನವನ್ನು ನಾವು ಮಾಡಿದ್ದೇವೆ. ಅದಕ್ಕೆ ಬೇಕಾದ advanced technology ಬಳಕೆ ಮಾಡಿದ ಹಿನ್ನೆಲೆಯಲ್ಲಿ ಈ ಹಂತಕ್ಕೆ ನಾವು ಬಂದಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಇನ್ನು G.D.P. ಬಗ್ಗೆ ಹೇಳುವುದಾದರೆ ಕರ್ನಾಟಕದ G.S.D.P. ಮತ್ತು national level ಅನ್ನು ನಾವು compare ಮಾಡಿ ನೋಡಿದಾಗ ಕೇವಲ ಒಂದೇ ವರ್ಷದಲ್ಲಿ ಮಾತ್ರ ನಾವು national average ಗಿಂತ ಕಡಿಮೆ ಇದ್ದೇವೆ. ಇದರ ಬಗ್ಗೆ ಕೂಡ ಸಾಕಷ್ಟು ಚರ್ಚೆ ನಡೆದಿದೆ. 2007–08ನೇ

ಸಾಲಿನಲ್ಲಿ national level G.D.P. 9.3% ಇದ್ದರೆ ನಮ್ಮ ರಾಜ್ಯದ್ದು 12.6% ಇತ್ತು. 2012–13ನೇ ಸಾಲಿನಲ್ಲಿ national average G.D.P. 5% ಇದ್ದರೆ, ನಮ್ಮ ರಾಜ್ಯದ್ದು 5.9% ಇದೆ. ಹೀಗಾಗಿ ಒಂದು ವರ್ಷ ಬಿಟ್ಟರೆ ಕಳೆದ ನಾಲ್ಕೈದು ವರ್ಷದಿಂದ ನಮ್ಮ G.D.P. national average ಗಿಂತ ಹೆಚ್ಚಿಗೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. ಈ ರೀತಿಯ ಒಂದು financial position ಅನ್ನು ಕೂಡ ನಾವು maintain ಮಾಡಿಕೊಂಡು ಹೋಗುತ್ತಿದ್ದೇವೆ. ಆರ್ಥಿಕ ಮಿತವ್ಯಯ ಏನಿದೆ., ಆ fiscal Responsibility Act ಏನಿದೆ ಆ ರೀತಿಯಲ್ಲಿಯೇ ಎಷ್ಟು ಸಾಲವನ್ನು ಮಾಡಬೇಕು, ನಮ್ಮ outlay ಎಷ್ಟು ಹಿಂದೆ ಎಷ್ಟು ಸಾಲ ಇತ್ತು, ಈಗ ಎಷ್ಟಿದೆ ಎನ್ನುವುದನ್ನು ಸರಿಯಾಗಿ ನಿರ್ವಹಣೆ ಮಾಡಿದ್ದೇವೆ. ಹಿಂದೆ ಸಾಲ ಮಡಿದಾಗ ನಮ್ಮ outlay ಎಷ್ಟಿತ್ತು? ಇವತ್ತು ನಮ್ಮ outlay 1 ಲಕ್ಷ 17 ಸಾವಿರ ಕೋಟಿ ರೂಪಾಯಿಗಳಿವೆ. ಹಾಗಾಗಿ ಪಡೆಯುವ ಜವಾಬ್ದಾರಿಯಲ್ಲೂ ಸಹ ನಮ್ಮ ಇತಿಮಿತಿಯಲ್ಲಿ ನಾವಿದ್ದೇವೆ. ಅದನ್ನು ಮೀರಿ ಹೋಗಿಲ್ಲ. Financial discripline ನ rules ಅನ್ನು ಮೀರಿ ಹೋಗಿಲ್ಲ. ಬಡ್ಡಿ ಅಥವಾ ಸಾಲ ಪಡೆಯುವುದು ಎಲ್ಲಾದರಲ್ಲಿಯೂ ಸಹ ನಾವು ಇತಿಮಿತಿಯಲ್ಲಿದ್ದೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಚಿಸುತ್ತೇನೆ. ಇದನ್ನು comparison ಮಾಡಿ ಹೇಳುವುದಾದರೆ 2005–06ರಲ್ಲಿ ಆವತ್ತಿನ ಆಯವ್ಯಯದ ಗಾತ್ರ, total outlay 34,973 ಕೋಟಿಯಿತ್ತು. ಆಮೇಲೆ ಆ ಸಾಲಿನಲ್ಲಿ ಸಾಲ ಎಷ್ಟಿತ್ತು ಎಂದರೆ 58434 ಕೋಟಿ ರೂಪಾಯಿಗಳು, ಅವತ್ತಿನ budget outlay 34,973 ಕೋಟಿ ರೂಪಾಯಿಗಳು, ಅಂದರೆ 167% ಜಾಸ್ತಿ, ಆಗ 2005–06ನೇ ಸಾಲಿನಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ಇತ್ತು., ಅದಕ್ಕಾಗಿಯೇ ನಾನು ಹೋಲಿಸಿ ಹೇಳುತ್ತಿದ್ದೇನೆ. 2012–13ನೇ ಸಾಲಿನಲ್ಲಿ ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿಗಳಾದಾಗ ನಮ್ಮ outlay 1,04,023 ಕೋಟಿ ರೂಪಾಯಿಗಳು, ಅವತ್ತು 1,13,000 ಕೋಟಿ ರೂಪಾಯಿಗಳ ಸಾಲ ಇತ್ತು. ಅಂದರೆ ನಮ್ಮದು 130% ಜಾಸ್ತಿಯಿದೆ. 2005–06ನೇ ಸಾಲಿನ ಸರ್ಕಾರದ ಸಾಲ 167%., ವಿರೋಧ ಪಕ್ಷದವರು 1,17,000 ಕೋಟಿ ಸರ್ಕಾರ

ಸಾಲ ಮಾಡಿದೆ ಎಂದು ಹೇಳಿಬಿಡುವುದು, ನಾವು ಸಾಲ ಮಾಡಿರುವುದು ನಿಜ, ನಮ್ಮ ಸಾಮರ್ಥ್ಯಕ್ಕೆ ತಕ್ಕ ಹಾಗೆ ನಾವು ಸಾಲವನ್ನು ಮಾಡಿದ್ದೇವೆ. ಈಗ ನನ್ನ ಸಂಬಳ ಒಂದು ಲಕ್ಷ ಇರುತ್ತದೆ, ನಾನು ಮನೆ ಕಟ್ಟಲಿಕ್ಕೆ 20 ಲಕ್ಷ ಸಾಲ ಪಡೆದರೆ ಬೇಡ ಎಂದು ಹೇಳುವಿರಾ? ಒಂದು ಲಕ್ಷ ಸಂಬಳ ಇದೆ, 20 ಲಕ್ಷ ಸಾಲ ಎಂದರೆ ನಾನು ಒಂದು asset create ಮಾಡುವುದು ಬೇಡವೇ? 1,04,000 ಕೋಟಿ ಬಜೆಟ್ ಇರುವಾಗ 1,17,000 ಕೋಟಿ ಸಾಲ ಇದೆ, ಇಲ್ಲ ಎಂದು ನಾನು ಹೇಳುವುದಿಲ್ಲ. 34,000 ಕೋಟಿ ರೂಪಾಯಿಗಳ outlay ಇದ್ದಾಗ 58,000 ಕೋಟಿ ರೂಪಾಯಿಗಳ ಸಾಲವನ್ನು ಮಾಡಿದ್ದೀರಿ, ಅವತ್ತಿಗೂ ಇವತ್ತಿಗೂ ವ್ಯತ್ಯಾಸವಿದೆ. ಅದು outlay ಮೇಲೆ ಹೋಗುತ್ತದೆ. ಎಲ್ಲರೂ ಈ ಸರ್ಕಾರ ಸಿಕ್ಕಾಪಟ್ಟೆ ಸಾಲ ಮಾಡಿದೆ ಎನ್ನುವ ಮಾತನ್ನು ಹೇಳುತ್ತಾರ. ಆದರೆ ನಾವು ನಮ್ಮ ಇತಿಮಿತಿಯಲ್ಲಿ ಸಾಲ ಮಾಡಿದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಹಾಗೆ ನೋಡಿದರೆ ಕಾಂಗ್ರೆಸ್ ಸರ್ಕಾರ ಇದ್ದಾಗ ಹೆಚ್ಚು ಸಾಲವನ್ನು ಮಾಡಿದೆ.

**ಶ್ರೀ ಬಸವರಾಜ ಹೊರಟ್ಟಿ:–** ನಿಮ್ಮ ಸರ್ಕಾರ ಬಂದ ಮೇಲೆ ಎಷ್ಟು ಸಾಲವನ್ನು ಮಾಡಿದ್ದೀರಿ ಎನ್ನುವುದನ್ನು ಹೇಳಿ.

**ಶ್ರೀ ಜಗದೀಶ್ ಶೆಟ್ಟರ್:–** ನಾವು ನಮ್ಮ outlay ಅನ್ನು ನೋಡಿಕೊಂಡು ನಮ್ಮ limit ನಲ್ಲಿ ಸಾಲವನ್ನು ಮಾಡಿದ್ದೇವೆ. ಅದನ್ನು ಎಂದೂ ದಾಟಿಲ್ಲ. ವಾಪಸ್ಸು ಕೊಡುವುದರಲ್ಲಿಯೂ ಬಡ್ಡಿ ಕೊಡುವುದರಲ್ಲಿಯೂ ಸಹ ನಾವು limit ನಲ್ಲಿದ್ದೇವೆವ. Limit ದಾಟಿ ಎಂದೂ ಹೋಗಿಲ್ಲ. Limit ದಾಟಿ ಹೋಗಿದ್ದರೆ ಇಷ್ಟರಲ್ಲಿ observation ಬಂದು ಬಿಡುತ್ತಿತ್ತು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಎಲ್ಲರೂ ಶೆಟ್ಟರ ಲೆಕ್ಕ ಎಂದು ಹೇಳುತ್ತಿದ್ದರೂ, ಈ ಬಜೆಟ್ ಕೂಡ ಹಾಗೆಯೇ ಇದೆ.

**ಶ್ರೀ ಜಗದೀಶ್ ಶೆಟ್ಟರ್:–** ನಮ್ಮದೆಲ್ಲಾ ಶೆಟ್ಟರ ಲೆಕ್ಕದ ರೀತೀಯಲ್ಲಿಯೇ ಇದೆ.

**ಶ್ರೀ ಬಸವರಾಜ ಹೊರಟ್ಟಿ:-** ನಿಮಗೆ ಸಹಾಯ ಮಾಡುವವರು ಬೇರೆಯವರಿದ್ದಾರೆ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಗಳೇ, ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನಗಳನ್ನು ನೀಡುವುದರ ಬಗ್ಗೆ ನಾವೆಲ್ಲರೂ ಸಾಕಷ್ಟು ಹೋರಾಟ ನಡೆಯಿತು. ಇದರಲ್ಲಿ ಕೇಂದ್ರಸರ್ಕಾರ ಕೂಡ initiative ತೆಗೆದುಕೊಂಡು ಒಂದು ತಿದ್ದುಪಡಿಯನ್ನು ತಂದಿತು. ನಮ್ಮ ಭಾರತೀಯ ಜನತಾ ಪಾರ್ಟಿಯವರು ಇರಬಹುದು, ಜೆಡಿಎಸ್ ನವರು ಇರಬಹುದು ಎಲ್ಲರೂ ಅದಕ್ಕೆ ಬೆಂಬಲವನ್ನು ನೀಡಿದರು. ಅದಕ್ಕಾಗಿಯೇ ರಾಜ್ಯಸಭೆಯಲ್ಲಿ 2/3 majority ಯಲ್ಲಿ ಈ bill pass ಆಗಿದೆ. ಹೀಗಾಗಿ ನಾನು ಕೇಂದ್ರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಬಹಳ ವರ್ಷಗಳ ಬೇಡಿಕೆ ಈಡೇರಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರಲ್ಲಿ ಏನೇನು rules ಮಾಡಬೇಕೆನ್ನುವುದರ ಬಗ್ಗೆ ಈಗಾಗಲೇ ಒಂದು Cell ಅನ್ನು ಕೂಡ ಮಾಡಿದ್ದೇವೆ. ಅದನ್ನು ಬಜೆಟ್‌ನಲ್ಲಿ announce ಕೂಡ ಮಾಡಿದ್ದೇವೆ. ಇದರ ಬಗ್ಗೆ ತಾವೆಲ್ಲರೂ ಕೂಡ ಅಧ್ಯಯನ ಮಾಡಿದಲ್ಲಿ ಅನುಕೂಲವಾಗುತ್ತದೆ. ಈ bill ನ copy ಬಂದಾಗ ತೆಲಂಗಾಣ ಮಾದರಿಯಲ್ಲಿ ನೇಮಕಾತಿಗಳಲ್ಲಿ, ಶೈಕ್ಷಣಿಕವಾಗಿ ಮೀಸಲಾತಿಯಾಗಬೇಕೆಂದು ಬಯಸಿದ್ದೆವು. ವಿಧಾನಸಭೆ ಮತ್ತು ವಿಧಾನಪರಿಷತ್ತಿನಲ್ಲಿ ತೆಲಂಗಾಣಮಾದರಿಯಲ್ಲಿ Article 371 ಗೆ ತಿದ್ದುಪಡಿ ಆಗಬೇಕೆಂದು ಸರ್ವಾನುಮತದಿಂದ ನಿರ್ಣಯವನ್ನು ತರಲಾಗಿತ್ತು. ಅದರ copy ಇಟ್ಟು ಕೇಂದ್ರಸರ್ಕಾರಕ್ಕೆ ಕಳುಹಿಸಲಾಗಿತ್ತು. ಕರ್ನಾಟಕ ಸರ್ಕಾರದವರು ವಿನಾಃಕಾರಣ ವಿಳಂಬ ಮಾಡುತ್ತಿದ್ದಾರೆ ಎಂದಾಗ ನಾನು ಕೇಂದ್ರ ಸಚಿವರನ್ನು ಭೇಟಿಯಾಗಿ, ಎಲ್ಲಾ ಎಂಪಿಗಳನ್ನು ಸಭೆಗೆ ಕರೆದು, ಆ ಭಾಗದ ಸಚಿವರನ್ನು ಕರೆದುಕೊಂಡು ಹೋಗಿ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೂ ಹೇಳಿ, ಹೇಗಿದೆಯೋ ಹಾಗೆ ಮಾಡುವಂತೆ ವಿನಂತಿ ಮಾಡಿದೆನು. ಮುಂದೆ ಏನಾದರೂ ಸಮಸ್ಯೆ ಬಂದರೆ ನೋಡೋಣ ಎಂದು ಹೇಗಿದೆಯೋ ಹಾಗೆ ಮಾಡುವಂತೆ ಹೇಳಿದಾಗ ಅದನ್ನು ಹಾಗೆ ಮಾಡಿದರು. ಆದ್ದರಿಂದ ಅದರ provision ಅನ್ನು ವಿಧಾನ ಮಂಡಲದ ಅಧಿವೇಶನ

ಆದಮೇಲೆ ಸ್ವಲ್ಪ ಅಧ್ಯಯನ ಮಾಡಿ. ಆ ಭಾಗದ ಶಾಸಕರು, ಎಂಪಿಗಳು, ಹೋರಾಟಗಾರರೆಲ್ಲರನ್ನು ಕರೆಸಿ ಒಂದು ಸಭೆ ಮಾಡೋಣ. ನಾವು rules frame ಮಾಡುತ್ತಿದ್ದು, ಅದಕ್ಕೆ supportive rule ಬೇಕಾಗಿದ್ದು, provision ನಲ್ಲಿ.

(2) An order made under sub-clause (c) of clause (1) may provide for-

> (a) reservation of a proportion of seats in educational and vocational training institution in the Hyderabad-Karnataka region for students who belong to that region by birth or by domicile;

ಇಲ್ಲಿ ಹೇಳಿರುವುದೇನೆಂದರೆ; reservation of a proportion of seats in educational and vocational training institution in the Hyderabad-Karnataka region...ಎಂದು ಹೇಳಲಾಗಿರುವುದು, ಅಲ್ಲಿದ್ದ ಶಿಕ್ಷಣ ಸಂಸ್ಥೆಯಲ್ಲಿದ್ದವರಿಗೆ ಸೀಮಿತವಾಗಿ ಎಂಬ ಅರ್ಥವನ್ನು ಕೊಡುತ್ತದೆ. ಆದ್ದರಿಂದ ಅದನ್ನು ಸ್ವಲ್ಪ ಅಧ್ಯಯನ ಮಾಡಿ ನೋಡಬೇಕಾಗುತ್ತದೆ. ಅದನ್ನು ತಾವು ಸ್ವಲ್ಪ ಅಧ್ಯಯನ ಮಾಡಿ ನೋಡಿ.

**ಶ್ರೀ ಎಸ್.ಆರ್. ಪಾಟೀಲ್:–** ವಿವರ ನೀಡಿ. ಅಧ್ಯಯನ ಮಾಡೋಣ.

**ಶ್ರೀ ಜಗದೀಶ್ ಶೆಟ್ಟರ್:–** ಇದರಲ್ಲಿ ಮುಂದೆ,

> 2(b) identification of posts or classes of posta under the State Government and in any body or organization under the control of the State Government in the Hyderabad-Karnataka region.

ಅಲ್ಲಿ ಇರುವಷ್ಟು ಹುದ್ದೆಗಳಿಗೆ ಮಾತ್ರ ಸೀಮಿತವಾಗುತ್ತದೆಯೇ ಹೊರತು ರಾಜ್ಯಮಟ್ಟಕ್ಕೆ ಆಗುವುದಿಲ್ಲ. ಇದರ ಬಗ್ಗೆ ಸ್ವಲ್ಪ ಅಧ್ಯಯನ ಮಾಡಲಿ. ಇದಾದ ನಂತರ ಸಭೆ ಕರೆಯುತ್ತೇನೆ, ಅಲ್ಲಿನ ಹೋರಾಟಗಾರರನ್ನು ಕರೆಸೋಣ. ಇದರ ಬಗ್ಗೆ ಎಲ್ಲಿಯೂ ತಪ್ಪಾಗಿ ಮತ್ತೆ ಅವರಿಗೆ ಅನ್ಯಾಯವಾಗುವುದು ಬೇಡ ಎಂದು ಹೇಳುತ್ತೇನೆ. ಅದಕ್ಕೆ rules and guidelines ಮಾಡೋಣ. ಆ ದೃಷ್ಟಿಯಿಂದ ನಾವು ಚಿಂತನೆಯನ್ನು ಮಾಡೋಣ. ಅಂದು ನಾನು ಇದಕ್ಕೆ ಚುನಾಯಿತ ಸರ್ಕಾರಕ್ಕೆ ಅಧಿಕಾರ ಇಲ್ಲ ಎಂದು ಹೇಳಿದಾಗ ನನ್ನ ಮಾತನ್ನು ಯಾರೂ ಕೇಳಲಿಲ್ಲ.

**ಶ್ರೀ ಕೆ.ಬಿ. ಶಾಣಪ್ಪ:-** ಅಲ್ಲಿನ ಮಕ್ಕಳಿಗೆ ಕೆಲಸವನ್ನು ಒದಗಿಸುವ ಬಗ್ಗೆ ಏನಾದರೂ ಮಾಡಬೇಕು.

**ಶ್ರೀ ಜಗದೀಶ್ ಶೆಟ್ಟರ್:-** ಇದರಲ್ಲಿರುವುದೇನೆಂದರೆ, (a) reservation of a proportion of seats in educational and vocational training institution in the Hyderabad-Karnataka region for students who belong to that region. ಅಲ್ಲಿದ್ದ ಶಿಕ್ಷಣ ಸಂಸ್ಥೆಯಲ್ಲಿದ್ದವರಿಗೆ ಮಾತ್ರ ಮೀಸಲಾಗಿ ಇದೆ. (b) identification of posts or classes of posta under the State Government and in any body or organization under the control of the State Government in the Hyderabad-Karnataka region. ಅಂದರೆ ಅಲ್ಲಿಗೆ ಮಾತ್ರ ಸಂಬಂಧಪಡುತ್ತದೆ.

**Sri K.B. SHANAPPA:-** What about the centre?

**ಶ್ರೀ ಜಗದೀಶ್ ಶೆಟ್ಟರ್:-** ಅದನ್ನು ನಾನು ಹೇಳುತ್ತೇನೆ. ಆದರೆ ಇದು ಮುಗಿಯಿತು.

**ಶ್ರೀ ಎಸ್.ಆರ್. ಪಾಟೀಲ್:-** ನಮಗೆ ವಿವರ ಕೊಟ್ಟರೆ ಅಧ್ಯಯನ ಮಾಡಿ ಸಭೆ ಕರೆದರೆ ಬೆಳಕು ಚೆಲ್ಲುವ ಕೆಲಸ ಮಾಡೋಣ. Let us find out. ಇದರ ಬಗ್ಗೆ ಒಮ್ಮಲೆ ಐಡಿಯಾಗಳು ಬರುವುದಿಲ್ಲ.

**ಶ್ರೀ ಕೆ.ಬಿ. ಶಾಣಪ್ಪ:-** ಪ್ಲಾನ್‌ನಲ್ಲಿ ಕೇಂದ್ರ ಸರ್ಕಾರದವರು ಸೇರಿಸಿಲ್ಲ, ರಾಜ್ಯ ಸರ್ಕಾರ ಎಂದು ಮಾತ್ರ ಹೇಳಿದ್ದಾರೆ.

**ಶ್ರೀ ಜಗದೀಶ್ ಶೆಟ್ಟರ್:-** ಹೇಳುತ್ತೇನೆ... Article 371-J of the Constitution, the following article shall be inserted, namely:-

"371J. (1) The President may, by order made with respect to the State of Karnataka, provide for any special responsibility of the Governor for-

(a) Establishment of a separate development board for Hyderabad-Karnataka region with the provision that a report on the working of the board will be placed each year before the State Legislative Assembly; Insertion of new article 371J. Specialprovisions with respect to State of Karnataka.

(b) Equitable allocation of funds for developmental expenditure over the said region, subject to the requirements of the State as a whole; and

(c) Equitable opportunities and facilities for the people belonging to the said region, in matters of public employment, education and vocational training, subject to the requirements of the State as a whole.

ಈ ರೀತಿ ಹಣ ಕೊಟ್ಟಾಗ ರಾಜ್ಯಪಾಲರಿಗೆ ಹಂಚಿಕೆ ಮಾಡಲು ಇರುವ ಅಧಿಕಾರವಾಗಿದೆ. ಅದನ್ನು ನಾವು ವಿರೋಧ ಮಾಡಿದ್ದೇವೆ. ಸರ್ಕಾರ ನಡೆಸುವವರು ಯಾರೇ ಆದರೂ ಚುನಾಯಿತ ಪ್ರತಿನಿಧಿಗಳಿಗೆ ಎಲ್ಲಿ ಖರ್ಚು ಮಾಡಬೇಕು ಎಂಬ ಅಧಿಕಾರ ಇರಬೇಕು. ಅದನ್ನು ರಾಜ್ಯಪಾಲರಿಗೆ ಕೊಡುತ್ತೇವೆ. ಇದರ ಬಗ್ಗೆ ವಿಚಾರ ಮಾಡಿ. ನಾವು ಕೇಂದ್ರ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸಿದ್ದೇವೆ. ಅದೇರೀತಿ ಕೆಲಸದ ಅವಕಾಶ ಮತ್ತು ಶಿಕ್ಷಣಕ್ಕೆ ನೀಡಿದ ಆದ್ಯತೆಗಳು ಆಯಿತು. ಇನ್ನು ವಿಶೇಷ ಗ್ರಾಂಟ್ ಅನ್ನು ನಮ್ಮ ರಾಜ್ಯ ಸರ್ಕಾರದಿಂದ ಕೊಡಬೇಕು. ಆದ್ದರಿಂದ ಸ್ವಲ್ಪ ಕೇಂದ್ರ ಸರ್ಕಾರಕ್ಕೂ ಕೊಡುವುದಕ್ಕೆ ಹೇಳಲಿ. ರಾಜ್ಯ ಸರ್ಕಾರಕ್ಕೆ ಮಾತ್ರ ಹೊರೆ ಆಗುವುದು ಬೇಡ. ಈಗಾಗಲೇ ಡಾ॥ ನಂಜುಂಡಪ್ಪ ವರದಿ ಪ್ರಕಾರ ಹೆಚ್ಚುವರಿ ಕೊಡುತ್ತಿದ್ದೇವೆ. ತಿದ್ದುಪಡಿ ಮಾಡಿ ಕೊಟ್ಟಿರುವುದಕ್ಕೆ ದನ್ಯವಾದಗಳು. ಆ ವಲಯಕ್ಕೆ ಸ್ವಲ್ಪ ಹಣವನ್ನು ಕೊಡಬೇಕು. ಆಗ ನಾವು ಮಾಡುತ್ತೇವೆ. ಇದರ ಬಗ್ಗೆ ಪ್ರತ್ಯೇಕ ಸಭೆ ಕರೆದು ನಿಯಮಾವಳಿಗಳ ಬಗ್ಗೆ ಚರ್ಚೆ ಮಾಡಿ ಮಾಡೋಣ. Rules and Clauses ಬಗ್ಗೆ interpretations ಇದ್ದು, ಇವುಗಳೆಲ್ಲವನ್ನು ನೋಡಿ ಮಾಡಿಕೊಂಡು ಆ ಭಾಗದ ಜನರಿಗೆ ನ್ಯಾಯವನ್ನು ಒದಗಿಸೋಣ. ನೇಮಕಾತಿ ಬಗ್ಗೆ ಸಹ ವಿಚಾರ ಮಾಡುತ್ತಿದ್ದೇವೆ. ಸಂಬಂಧಪಟ್ಟ ಇಲಾಖೆಯ ಜೊತೆಗೆ ಮಾತನಾಡಿ ನಿರ್ಣಯ ತೆಗೆದುಕೊಳ್ಳುತ್ತೇನೆ.

ಇನ್ನು ಡಾ॥ ನಂಜುಂಡಪ್ಪ ಆಯೋಗವನ್ನು ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿ ಇದ್ದಾಗ ನೇಮಕ ಮಾಡಿದಾಗ ನಾನು ವಿರೋಧ ಪಕ್ಷದ ನಾಯಕನಾಗಿದ್ದೆನು. ಆಗ ಅವರ ಸರ್ಕಾರದಲ್ಲಿಯೇ ವರದಿಯನ್ನು ಕೊಟ್ಟಿದ್ದು, ಅದರಂತೆ ಹಿಂದುಳಿದ ಹಾಗೂ ಅತೀ ಹಿಂದುಳಿದ ತಾಲ್ಲೂಕುಗಳಿಗೆ ಹೆಚ್ಚು ಹಣ ಕೊಡಬೇಕೆಂಬ ಪ್ರಸ್ತಾವನೆ ಇದೆ. ಅದರಂತೆ ಕನಿಷ್ಠ ವರ್ಷಕ್ಕೆ 2000 ಕೋಟಿ ರೂಪಾಯಿಗಳ ಹಣವನ್ನು ಕೊಟ್ಟಾಗ ಐದಾರು ವರ್ಷಗಳಲ್ಲಿ 14ರಿಂದ 16 ಸಾವಿರ ಕೋಟಿ ರೂಪಾಯಿಗಳು ಹಿಂದುಳಿದ ತಾಲ್ಲೂಕುಗಳಿಗೆ ಹೋಗುವುದರಿಂದ ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ ಇತ್ಯಾದಿ ರಂಗಗಳಲ್ಲಿ ಹಣ ಕೊಡುವುದರ ಮೂಲಕ ಅಭಿವೃದ್ಧಿ ಆಗಬೇಕೆಂಬ

ಸಲಹೆ ಕೊಟ್ಟಿದ್ದರು. ಆದರೆ ಅವರು ಕೊಟ್ಟ ವರದಿಯನ್ನು ಯಾವ ಸರ್ಕಾರವು ಮುಟ್ಟಿಲ್ಲ. ಆದರೆ ನಮ್ಮ ಸರ್ಕಾರ ಬಂದಮೇಲೆ ಅವರ ವರದಿಯನ್ನು ಹೊರತೆಗೆದು ವಿಶೇಷ ಅನುದಾನ ಕೊಡುವ ಕೆಲಸ ಮಾಡಿದ್ದೇವೆ. 10 ಸಾವಿರ ಕೋಟಿ ರೂಪಾಯಿಗಳು ಹೆಚ್ಚು ಕೊಟ್ಟಿದ್ದು, ಈ ವರ್ಷದ ಬಜೆಟ್‌ನಲ್ಲಿ 2900 ಕೋಟಿ ರೂಪಾಯಿಗಳನ್ನು ಹೆಚ್ಚುವರಿ ಹಣವನ್ನು ಡಾ॥ ನಂಜುಂಡಪ್ಪ ವರದಿ ಪ್ರಕಾರ ಕೊಟ್ಟಿದ್ದೇವೆ. ಆ ಜವಾಬ್ದಾರಿ ರೀತಿಯಲ್ಲಿ ನಡೆದುಕೊಂಡು ವರದಿಯನ್ನು ಅನುಷ್ಠಾನ ಮಾಡುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದ್ದೇನೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಇನ್ನು ಕುಡಿಯುವ ನೀರು ಮತ್ತು ನೀರಾವರಿ ಯೋಜನೆಯಾಗಿ ಎತ್ತಿನ ಹೊಳೆ ಯೋಜನೆಗೆ ಬಜೆಟ್‌ನಲ್ಲಿ ಹಣವನ್ನು ಘೋಷಣೆ ಮಾಡಿದ್ದೇನೆ. ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳಿಂದ ಹೆಚ್ಚುವರಿ ನೀರನ್ನು ಬಳಸುವ ಯೋಜನೆ ಆಗಿದೆ. ಇದರಿಂದ ಬಯಲು ಸೀಮೆಗಳಿಗೆ ನೀರನ್ನು ಒದಗಿಸುವ ಪರಮಶಿವಯ್ಯನವರ ವರದಿಯನ್ನು ಈ ವರ್ಷ ಪ್ರಾರಂಭ ಮಾಡುವ ನಿರ್ಧಾರವನ್ನು ಕೈಗೊಂಡಿದ್ದೇವೆ. ಅಲ್ಲದೇ ಎತ್ತಿನ ಹೊಳೆ ಯೋಜನೆಗೆ ನೀರೆತ್ತುವ ಕಾಮಗಾರಿಗೆ ಚಾಲನೆ ಕೊಟ್ಟಿದ್ದೇವೆ. ಪರಮಶಿವಯ್ಯನವರ ಯೋಜನೆ ಸೇರಿದಂತೆ ಎರಡೂ ಯೋಜನೆಗಳ ಲಾಭವನ್ನು ಪಡೆಯಲು ಅನುಕೂಲವಾಗುವಂತೆ ಸಂಯುಕ್ತ ಗ್ರಿಡ್ ಕಾಲುವೆ ನಿರ್ಮಿಸಲು ತೀರ್ಮಾನವನ್ನು ತೆಗೆದುಕೊಂಡಿದ್ದೆವೆ. ಇದರಿಂದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ರಾಮನಗರ, ಚಿಕ್ಕಬಳ್ಳಾಪುರ, ತುಮಕೂರು ಸೇರಿದಂತೆ ಒಟ್ಟು 9 ಜಿಲ್ಲೆಗಲ 43 ತಾಲ್ಲೂಕುಗಳ ಕುಡಿಯುವ ನೀರನ್ನು ಒದಗಿಸಲು ಸಾದ್ಯವಾಗುತ್ತದೆ. ಈ ವರ್ಷದ ಬಜೆಟ್‌ನಲ್ಲಿ 800 ಕೋಟಿ ರೂಪಾಯಿಗಳ ಹಣವನ್ನು ಬಜೆಟ್‌ನಲ್ಲಿ ಇಟ್ಟಿದ್ದೇವೆ. ಅಲ್ಲದೇ ಹೆಚ್ಚುವರಿಯಾಗಿ ಬಾಂಡ್‌ಗಳ ಮುಖಾಂತರ ನಿಯಮಗಳಿಂದ 1000 ಕೋಟಿ ರೂಪಾಯಿಗಳನ್ನು ಕ್ರೋಢೀಕರಣ ಮಾಡುವ ಕೆಲಸ ಮಾಡುತ್ತೇವೆ.

**ಶ್ರೀ ನಸೀರ್ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಡಿಸೆಂಬರ್ 5ನೆ ತಾರೀಖು ಮಾನ್ಯ ಮುಖ್ಯಮಂತ್ರಿಗಳ ಕಛೇರಿಯಲ್ಲಿ ಚರ್ಚೆಯಾದಾಗ

ಎಲ್ಲಾ ಜಿಲ್ಲೆಯವರನ್ನು ಕರೆಸಿದ್ದರು. ಅಲ್ಲಿ ಸಂಬಂಧಪಟ್ಟ ಶಾಸಕರು, ಹೋರಾಟಗಾರರು ಹಾಗೂ ಶ್ರೀ ಪರಮಶಿವಯ್ಯನವರು ಇದ್ದರು. ಕೊನೆಯಲ್ಲಿ ಶ್ರೀ ಪರಮಶಿವಯ್ಯನವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಬೇಕೆಂಬ ತೀರ್ಮಾನಕ್ಕೆ ಬರಲಾಗಿದೆ. ಆದರೆ ಅವರಿಗೆ ಕೊಠಡಿ.....

**ಶ್ರೀ ಜಗದೀಶ್ ಶೆಟ್ಟರ್:-** ಅವರಿಗೆ ಅಧಿಕಾರ ಕೊಟ್ಟಿದ್ದೇವೆ.

**ಶ್ರೀ ನಸೀರ್ ಅಹಮದ್:-** ಇಲ್ಲ, ಕೊಟ್ಟಿಲ್ಲ.

**ಶ್ರೀ ಜಗದೀಶ್ ಶೆಟ್ಟರ್:-** ಅದೇನೆದ್ದರೂ ಸರಿ ಮಾಡೋಣ. ಅವರ ವರದಿ ಪ್ರಕಾರವೇ ಇದೆಲ್ಲವನ್ನು ಮಾಡುತ್ತಿದ್ದೇವೆ. ಇನ್ನೂ ಅವರಿಗೆ ಏನು ಸೌಲಭ್ಯಗಳು ಬೇಕೋ, ಅವೆಲ್ಲವನ್ನು ಕೊಡುತ್ತೇವೆ.

**ಶ್ರೀ ನಸೀರ್ ಅಹಮದ್:-** ದಯವಿಟ್ಟು ಮಾಡಬೇಕು.

**ಶ್ರೀ ವೈ.ಎ. ನಾರಾಯಣಸ್ವಾಮಿ:-** ಇದನ್ನು ನಾನು ಸ್ವಾಗತ ಮಾಡುತ್ತೇನೆ, ಆದರೆ ಯಾವ ಟೈಮ್‌ಫ್ರೇಮ್‌ನಲ್ಲಿ ಕೆಲಸ ಮುಗಿಸುತ್ತಾರೆ ಎಂಬುದನ್ನು ಕೇಳಬಯಸುತ್ತೇನೆ. ಇದು ಎಷ್ಟು ವರ್ಷಗಳ ಯೋಜನೆ ಎಂದು ದಯವಿಟ್ಟು ಹೇಳಬೇಕು.

**ಶ್ರೀ ಜಗದೀಶ್ ಶೆಟ್ಟರ್:-** ಟೆಂಡರ್ ಪ್ರೋಸೆಸ್ ಎಲ್ಲವನ್ನು ಪ್ರಾರಂಭ ಮಾಡಿದ್ದೇವೆ.

**ಶ್ರೀ ಡಿ.ಎಸ್. ವೀರಯ್ಯ:-** ಮೊಟ್ಟಮೊದಲನೆಯ ಬಾರಿಗೆ ಮಾಡುತ್ತಿರುವುದರಿಂದ ಆ ಜಿಲ್ಲೆಗಳ ಪರವಾಗಿ ತಮಗೆ ಅಭಿನಂದನೆ ಸಲ್ಲಿಸುವುದಲ್ಲದೇ ಸ್ವಾಗತಿಸುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ಬೆಣ್ಣೆಹಳ್ಳ ಮತ್ತು ದೋಣಿಹಳ್ಳ ಯೋಜನೆಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಈಗಿನ ಚರ್ಚೆಯಲ್ಲಿ 5 ವರ್ಷಗಳಲ್ಲಿ ಏನೂ ಮಾಡಲಿಲ್ಲ, ನೀರಾವರಿ ಯೋಜನೆಗಳನ್ನು ಮಾಡಲಿಲ್ಲ ಎಂದೆಲ್ಲಾ ಬಂತು. ನಮ್ಮ ಸರ್ಕಾರ ಬಂದ ಮೇಲೆ ಸಾಕಷ್ಟು ನೀರಾವರಿ ಯೋಜನೆಗಳನ್ನು ಮಾಡಿದ್ದು, ಸುಮಾರು 10

ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಎಷ್ಟೋ ಯೋಜನೆಗಳು ಅಪೂರ್ಣವಾಗಿದ್ದು, ಅವುಗಳನ್ನು ಪೂರ್ಣಗೊಳಿಸಿದ್ದೇವೆ. ಹೊಸ ಏತ ನೀರಾವರಿ ಯೋಜನೆಗಳಿಗೆ ಚಾಲನೆ ಕೊಟ್ಟಿದ್ದೇವೆ. ಕೃಷ್ಣಾ ಮೇಲ್ದಂಡೆ ಯೋಜನೆ, ಕಾವೇರಿ ಬೇಸಿನ್ ಯೋಜನೆಗಳು ಇರಬಹುದು, ಕಾಲುವೆಗಳ ಆಧುನೀಕರಣ ಇರಬಹುದು, ಈ ಯೋಜನೆಗಳನ್ನು ಮಾಡಿದ್ದೇವೆ. 2013–14ರಲ್ಲಿ ಬೆಣ್ಣೆಹಳ್ಳ ಮತ್ತು ದೋಣಿಹಳ್ಳ ಯೋಜನೆಗಳ ಪುನಶ್ಚೇತನ ಕಾಮಗಾರಿ, ಕೆಂಪವಾಡ ಬಸವೇಶ್ವರ ಏತ ನೀರಾವರಿ ಯೋಜನೆ, ವೀರಭದ್ರೇಶ್ವರ ಏತ ನೀರಾವರಿ ಯೋಜನೆ, ತುಪ್ರೀಹಳ್ಳ ಏತನೀರಾವರಿ ಯೋಜನೆ, ತುಪ್ಸೀ ಬಬ್ಲೇಶ್ವರ ಏತನೀರಾವರಿ ಯೋಜನೆ, ಯಲ್ಲಮ್ಮನ ಬೂದಿಹಾಳ ಎತನೀರಾವರಿ ಯೋಜನೆ, ನಂದವಾಡಗಿ ಏತನೀರಾವರಿ ಯೋಜನೆ, ಮಹಾಲಕ್ಷ್ಮಿ ಏತನೀರಾವರಿ ಯೋಜನೆ, ಸವಣೂರು ಏತನೀರಾವರಿ ಯೋಜನೆ, ಪುರಿಗಾಲಿ ಏತನೀರಾವರಿ ಯೋಜನೆಗಳೆಲ್ಲವನ್ನು ಈ ಸಾರಿ ಕೈಗೊಳ್ಳುತ್ತಿದ್ದೇವೆ. ಅದೇರೀತಿ ಚನ್ನಗಿರಿ ತಾಲ್ಲೂಕಿನ ಸೂಳೆಕೆರೆ ಏತನೀರಾವರಿ ಯೋಜನೆ, ಭೀಮ ಸಮುದ್ರ ಕೆರೆಗೆ ನೀರು ತುಂಬಿಸುವ ಕೆಲಸಕ್ಕೆ ಚಾಲನೆ ಕೊಡುತ್ತಿದ್ದೇವೆ. Micro Irrigation ಅನ್ನು ಪ್ರಾರಂಭ ಮಾಡಿರುವುದು ನೀರಾವರಿ ಕ್ರಾಂತಿಯಾಗಿದೆ. ರಾಮನಾಳ ಮರೋಳ ಏತನೀರಾವರಿ ಯೋಜನೆಯ ಮುಖಾಂತರ ನಾರಾಯಣ ಎಡದಂಡೆ ಕಾಲುವೆಯ ಕೊಪ್ಪ ಏತನೀರಾವರಿ ಯೋಜನೆ, ಸಿಂಗಾಟಲೂರು ಏತನೀರಾವರಿ ಯೋಜನೆ, ನಂದವಾಡಗಿ ಹಾಗೂ ಹೇಮಾವತಿ ಏತನೀರಾವರಿ ಯೋಜನೆಗಳು ಸೇರಿದಂತೆ ಒಟ್ಟು 9.65 ಲಕ್ಷ ಎಕರೆ ಪ್ರದೇಶದಲ್ಲಿ Micro Irrigation ಪದ್ಧತಿಯನ್ನು ಅಳವಡಿಕೆ ಮಾಡುವ ಯೋಜನೆ ಚಾಲನೆ ಕೊಟ್ಟಿದ್ದೇನೆ. ಈಗಾಗಲೇ ಶಿಗ್ಗಾಂವ್‌ನಲ್ಲಿ 25 ಲಕ್ಷ ಎಕರೆ ಸೂಕ್ಷ್ಮ ನೀರಾವರಿ ಪ್ರಾರಂಭವಾಗಿದೆ. ಕಾಮಗಾರಿ ಮುಗಿದು ನಾವು ಉದ್ಘಾಟನೆ ಮಾಡಿದ್ದೇವೆ. ಈ ರೀತಿ ಹಲವಾರು ಪ್ರಮುಖ ಯೋಜನೆಗಳನ್ನು ಪ್ರಾರಂಭ ಮಾಡಿದ್ದೇವೆ. ಜೊತೆಗೆ ಹಲವಾರು ವಿಚಾರಗಳ ಬಗ್ಗೆ ಕೆಳಮನೆಯಲ್ಲಿ ಉತ್ತರವನ್ನು ಕೊಟ್ಟಿದ್ದೇನೆ. ಇಲ್ಲಿಯೂ ಅದನ್ನು ಪ್ರಸ್ತಾಪ ಮಾಡುತ್ತೇನೆ. ಕೈಗಾರಿಕಾ ಮೂಲ

ಸೌಕರ್ಯಕ್ಕಾಗಿ KIADB ಮುಖಾಂತರ 300 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಇದಕ್ಕೆ ಸಂಪನ್ಮೂಲವನ್ನು ಕ್ರೋಢೀಕರಿಸುತ್ತಿದ್ದೇವೆ. ಜಲಸಂವರ್ಧನ ಯೋಜನೆಗೆ ಪರಿಷ್ಕೃತ guidelines ಮಾಡಿ, ಕೆರೆಗಳ ಅಭಿವೃದ್ಧಿಗಾಗಿ 100 ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದೇನೆ. ಪ್ರತಿಯೊಂದು ಜಿಲ್ಲೆಯಲ್ಲಿ ಆರೋಗ್ಯ ಇಲಾಖೆಯ ಮೂಲಕ Generic Medicine Store ಗಳನ್ನು ಸ್ಥಾಪನೆ ಮಾಡುವ ಕೆಲಸ ಮಾಡುತ್ತೇವೆ. ಶಾಲಾ ವಿದ್ಯಾರ್ಥಿನಿಯರಿಗೆ ಉಚಿತವಾಗಿ sanitary napkins ಒದಗಿಸುವ ಯೋಜನೆ ಪ್ರಾರಂಭಿಸುತ್ತಿದ್ದೇವೆ. ನಾಟಕ ಮತ್ತು ರಂಗಭೂಮಿಯ ಹಿರಿಯ ಕಲಾವಿದರಿಗೆ 1000 ರೂಪಾಯಿಗಳ ಮಾಶಾಸವನ್ನು 1200 ರೂಪಾಯಿಗಳಿಗೆ ಏರಿಕೆ ಮಾಡಿದ್ದೇವೆ. ಕರ್ನಾಟಕ ಆರೋಗ್ಯ ಆಯೋಗವನ್ನು ಮಾಡಿದ್ದು, ಅದಕ್ಕೆ ಅನುದಾನವನ್ನು ಕೊಡುವ ಕೆಲಸ ಮಾಡುತ್ತಿದ್ದೇವೆ. ಜೊತೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ನಿರ್ವಹಣೆಗೆ ರಾಜ್ಯಮಟ್ಟದ ಸಂಸ್ಥೆಯನ್ನು ರಚನೆ ಮಾಡುತ್ತೇವೆ. ಪ್ರಾರಂಭಿಕವಾಗಿ 8 ಜಿಲ್ಲೆಗಳಲ್ಲಿ ಅಂದರೆ ಒಂದು ವಿಭಾಗದಲ್ಲಿ 2 ಜಿಲ್ಲೆಗಳಂತೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ಈ ಸಂಸ್ಥೆಗೆ ವಹಿಸುತ್ತೇವೆ. ಈ ವ್ಯವಸ್ಥೆಯನ್ನು ಕಾರ್ಯಗತಗೊಳಿಸಲು ಒಂದು ವರ್ಷದ ನಂತರ ಮೌಲ್ಯಮಾಪನ ಕೈಗೊಂಡು ಈ ಸಂಸ್ಥೆಗಳನ್ನು ಇತರ ಜಿಲ್ಲೆಗಳಿಗೂ ವಿತರಿಸುವ ಬಗ್ಗೆ ನಿರ್ಧಾರವನ್ನು ಕೈಗೊಳ್ಳುತ್ತೇವೆ. ಇದರ ಜೊತೆಗೆ Registration Department ನಲ್ಲಿ Joint Development ಗೆ ಸಂಬಂಧಪಟ್ಟಂತೆ General Power of Attorney ಮಾಡುವ ಸಂದರ್ಭದಲ್ಲಿ ಕೇವಲ 200 ರೂಪಾಯಿಗಳ ಶುಲ್ಕವನ್ನು ನಿಗದಿ ಮಾಡುವ ಬಗ್ಗೆ ತಿದ್ದುಪಡಿ ತರುತ್ತಿದ್ದೇವೆ. ಅದರಿಂದ ಗೃಹ ನಿರ್ಮಾಣಕ್ಕೆ ಪ್ರೋತ್ಸಾಹ ಕೊಡಲು ಸಾಧ್ಯವಾಗುತ್ತದೆ. ಬಾರ್ ಕೌನ್ಸಿಲ್‌ನ ವಕೀಲರ ಸಂಘದ ಕಲ್ಯಾಣ ನಿಧಿಗೆ 5 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಯ ನಂತರ ತಾಯಿ–ಮಗು ಸುರಕ್ಷಿತವಾಗಿ ಮನೆ ಸೇರಲು ಹಾಗೂ ಅವರ ಆರೋಗ್ಯ ರಕ್ಷಣೆಗೆ 'ನಗುಮಗು' ಯೋಜನೆಯನ್ನು ಜಾರಿಗೆ ತರುತ್ತಿದ್ದೇವೆ. ಸಹಕಾರಿ ಸಂಸ್ಥೆಗಳಿಂದ ರೈತ

ಬಾಂಧವರು ಸಾಲವನ್ನು 25 ಸಾವಿರ ರೂಪಾಯಿಗಳವರೆಗೆ ಮನ್ನಾ ಮಾಡಿದ್ದೇವೆ. ಅದೇ ರೀತಿ ನೇಕಾರರು ಹಾಗೂ ಮೀನುಗಾರರು ಸಹಕಾರಿ ಸಂಸ್ಥೆಗಳಿಂದ ಸಾಲ ಪಡೆದಿದ್ದು, ಅದಕ್ಕೆ ಒಂದಾವರ್ತಿ ತೀರುವಳಿ ಯೋಜನೆಯ ರೂಪನೆಯನ್ನು ಮಾಡುತ್ತಿದ್ದೇವೆ. ಇದನ್ನು ಆದಷ್ಟು ಬೇಗ ಜಾರಿಗೆ ತರುತ್ತೇವೆ. ಇದರ ಜೊತೆಗೆ ಸಂಘ–ಸಂಸ್ಥೆ, ಮಠಗಳಿಗೆ ಅನುದಾನ ಕೊಡುತ್ತಿರುವ ಬಗ್ಗೆ ಪ್ರಸ್ತಾಪ ಮಾಡಿದರು. ಸರ್ಕಾರಗಳು ಮಾಡುವ ಕೆಲಸವನ್ನು ಕೆಲವು ಸಂಘ–ಸಂಸ್ಥೆಗಳು, ದೇವಸ್ಥಾನಗಳು ಹಾಗೂ ಮಠಗಳು ಮಾಡುತ್ತಿರುವುದಲ್ಲದೇ ಸಮಾಜದ ಪರಿವರ್ತನೆ ಕೆಲಸವನ್ನು ಮಾಡುತ್ತಿವೆ. ನಮ್ಮ ಸರ್ಕಾರ ಬಂದಮೇಲೆ ಸಂಘ–ಸಂಸ್ಥೆ, ಮಠಗಳಿಗೆ ಅನುದಾನ ಕೊಡುತ್ತಿರುವುದುರಿಂದ ಒಳ್ಳೆಯ ಬೆಳವಣಿಗೆ ಆಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ನಾವು ಒಂದು ಯಾತ್ರಿನಿವಾಸವನ್ನು ಮಾಡಿದಾಗ ಅದರಿಂದ ಭಕ್ತಾಧಿಗಳಿಗೆ ಅನುಕೂಲವಾಗುತ್ತದೆ. ನಿನ್ನೆ ವಿಧಾನ ಸಭೆಯಲ್ಲಿ ಘೋಷಣೆ ಮಾಡಿದ್ದೇನೆ. ಪಂಡರಾಪುರಕ್ಕೆ ಉತ್ತರ ಕರ್ನಾಟಕದ ಲಕ್ಷಾಂತರ ಭಕ್ತರು ಹೋಗುತ್ತಿದ್ದು, ಅಲ್ಲಿ ಒಂದೆರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಯಾತ್ರಿನಿವಾಸ ಮಾಡಿದರೆ ಕರ್ನಾಟಕ ಭಕ್ತರಿಗೆ ಅನುಕೂಲವಾಗುತ್ತದೆ. ನಿನ್ನೆ ವಿರೋಧ ಪಕ್ಷದ ನಾಯಕರೊಬ್ಬರು ಪಂಡರಾಪುರಕ್ಕೆ ಮಾಡಿ, ಅನೇಕರು ತುಳಜಾಪುರಕ್ಕೆ ಹೋಗುವಾಗ ಅಲ್ಲಿ ಯಾತ್ರಿನಿವಾಸ ಮಾಡುವ ಬಗ್ಗೆ ಪ್ರಸ್ತಾಪಿಸಿದಾಗ ಅಲ್ಲಿಗೂ 2 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದೆ. ಗುಡ್ಡಾಪುರದ ದಾನಮ್ಮದೇವಿ ಮಹಾರಾಷ್ಟ್ರದಲ್ಲಿ ಇದೆ, ಅಲ್ಲಿಗೆ ಕರ್ನಾಟಕದ ಭಕ್ತರು ಹೋಗುತ್ತಾರೆ. ಅದೇ ರೀತಿ ಗಾಣಿಗಾಪುರಕ್ಕೂ ಹೋಗುತ್ತಾರೆ. ಆ ದೃಷ್ಟಿಯಿಂದ ಕೆಲವೊಂದು ಕೋಟ್ಟಿದ್ದೇವೆ. ಇಲ್ಲಿ ಕೆಲವು ಪ್ರಸ್ತಾವನೆಗಳು ಬಂದಿದ್ದು, ಅವುಗಳಿಗೂ ಘೋಷಣೆ ಮಾಡುತ್ತೇನೆ. ಹಾವೇರಿ ಜಿಲ್ಲೆಯ ಶಿವಲಿಂಗೇಶ್ವರ ಮಹಾಸ್ವಾಮಿಗಳ ಹುಕ್ಕೇರಿ ಮಠಕ್ಕೆ 2 ಕೋಟಿ ರೂಪಾಯಿಗಳು, ಶಿವಶರಣರ ಅಂಬಿಗರ ಚೌಡಯ್ಯನವರ ಗುರುಪೀಠಕ್ಕೆ 2 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡುತ್ತೇನೆ.

**ಶ್ರೀ ಕೆ.ಬಿ. ಶಾಣಪ್ಪ:–** ಎಸ್‌ಟಿ., ಮತ್ತು ಎಸ್‌ಸಿ., ಕಾರ್ಪೋರೇಷನ್‌ಗೆ .....

**ಶ್ರೀ ಜಗದೀಶ್ ಶೆಟ್ಟರ್:–** ಗದಗ್ ಜಿಲ್ಲೆಯ ಜಗದ್ಗುರು ತೋಂಟದಾರ್ಯ ಮಠಕ್ಕೆ 2 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದ್ದೇನೆ. ಇದನ್ನು ಮಾನ್ಯ ಪಾಟೀಲರು, ಮಾನ್ಯ ಹೊರಟ್ಟಿಯವರು ಹಾಗೂ ಶ್ರೀಮತಿ ಮೋಟಮ್ಮನವರ ಸಲಹೆಯಂತೆ ಮಾಡಿದ್ದೇನೆ.

**ಶ್ರೀ ಎ.ಹೆಚ್. ಶಿವಯೋಗಿಸ್ವಾಮಿ:–** ಮಾನ್ಯ ಮೋಟಮ್ಮನವರು ಅಲ್ಲಿ ಕುಳಿತುಕೊಂಡು ಹೇಳುತ್ತಾ ಹೋದರೆ ನಾವು ಮಾಡುತ್ತಾ ಹೋಗುತ್ತೇವೆ.

**ಶ್ರೀಮತಿ ಮೋಟಮ್ಮ:–** ಯಶೋದಮ್ಮ ದಾಸಪ್ಪ ಸಂಸ್ಥೆಗೆ ಕೊಡಬೇಕು.

**ಶ್ರೀ ಜಗದೀಶ್ ಶೆಟ್ಟರ್:–** ಮೊದಲು ಇದನ್ನು ಮುಗಿಸುತ್ತೇನೆ. ಬೆಂಗಳೂರಿನಲ್ಲಿ ಹಳ್ಳಿಕಾರ ಸಂಘದ ಅಭಿವೃದ್ಧಿಗೆ 1 ಕೋಟಿ ರೂಪಾಯಿಗಳು, ಗುಂಡ್ಲುಪೇಟೆಯಲ್ಲಿ ಕನಕಭವನ ನಿರ್ಮಾಣಕ್ಕೆ 1 ಕೋಟಿ ರೂಪಾಯಿಗಳು, ಕೊಳ್ಳೇಗಾಲದ ಚಿಕ್ಕಲ್ಲೂರು ಎಂಬಲ್ಲಿ ಮಂಟೇಸ್ವಾಮಿ ಭಕ್ತರ ಯಾತ್ರಿ ನಿವಾಸಕ್ಕೆ 1 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡುತ್ತಿದ್ದೇನೆ. ಈ ಸದನದಲ್ಲೆ ಸಭಾನಾಯಕರು ಹಾಗೂ ಹಿರಿಯ ಸಚಿವರಾಗಿ ಕೆಲಸ ಮಾಡಿದ ಡಾ|| ವಿ.ಎಸ್. ಆಚಾರ್ಯರವರ ನೆನಪಿನಲ್ಲಿ ಅಧ್ಯಯನ ಕೇಂದ್ರ ಮಾಡಲು ನಿರ್ಣಯ ಕೈಗೊಂಡು ಅದಕ್ಕೆ 2 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇನೆ. ಶಿವಮೊಗ್ಗದ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಭಿವೃದ್ಧಿಗೆ 2 ಕೋಟಿ ರೂಪಾಯಿಗಳನ್ನು ಮಾನ್ಯ ಸಭಾಪತಿಯವರ ಸಲಹೆಯ ಮೇರೆಗೆ ಕೋಡುತ್ತಿದ್ದೇನೆ.

(5–30 ಘಂಟೆ)

ಔರಾದ್ ತಾಲ್ಲೂಕಿನ ಶರಣತತ್ವ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗೆ ಒಂದು ಕೋಟಿ ರೂಪಾಯಿ. ತುಮಕೂರಿನ ಗುರುಗುಂಟ ಬ್ರಹ್ಮೇಶ್ವರ ಸ್ವಾಮಿ ಮಠದ ವಿದ್ಯಾಸಂಸ್ಥೆಗೆ ಒಂದು ಕೋಟಿ, ಬೆಂಗಳೂರಿನ ಬೇಲಿಮಠದ ಅಭಿವೃದ್ಧಿಗೆ

ಒಂದು ಕೋಟಿ, ಗುಲ್ಬರ್ಗಾದಲ್ಲಿರುವಂತಹ ಸಾವಳಗಿಯ ಶಿವಲಿಂಗೇಶ್ವರ ಸಂಸ್ಥಾನ ಮತ್ತು ಬಗುಳಾದ ಮಲ್ಲಿಕಾರ್ಜುನೆ ದೇವಸ್ಥಾನದ ಅಭಿವೃದ್ಧಿಗೆ ಒಂದು ಕೋಟಿ, ಉಳವಿ ಚನ್ನಬಸವೇಶ್ವರ ದೇವಸ್ಥಾನದ ಅಭಿವೃದ್ಧಿಗೆ ಒಂದು ಕೋಟಿ ರೂಪಾಯಿ ಶ್ರೀರಂಗಪಟ್ಟಣದ ಮಹದೇವಪುರ ಗ್ರಾಮದ ಕನಕಬಂಡಿ ಸ್ಥಳದ ಅಭಿವೃದ್ಧಿಗೆ ಒಂದು ಕೋಟಿ ರೂಪಾಯಿ ನೀಡಲಾಗುವುದು.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಮುಖ್ಯಮಂತ್ರಿಗಳೇ ಡಾ॥ ಹೆಚ್.ಟಿ. ಗಂಗಲ್ ಅವರ ಬಗ್ಗೆ ಹೇಳಿ.

**ಶ್ರೀ ಜಗದೀಶ್ ಶೆಟ್ಟರ್:-** ಡಾ॥ ಹೆಚ್.ಟಿ. ಗಂಗಲ್ ಸಂಶೋಧನೆ ಕೇಂದ್ರಕ್ಕೆ ಧಾರವಾಡದ ಕಿಮ್ಸ್ ಮೇಲುಸ್ತುವಾರಿ ಮೂಲಕ ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಘೋಷಣೆ ಮಾಡಿದ್ದೇನೆ. ಡಾ॥ ಹೆಚ್.ಟಿ. ಗಂಗಲ್ ರವರು ಒಂದು ಸಂಶೋಧನೆ ಮಾಡಿದ್ದಾರೆ, ಆ ಸಂಶೋಧನೆಯನ್ನು ಇನ್ನು ಹೆಚ್ಚು ಮಾಡುವುದಕ್ಕೆ ಅವರಿಗೆ ಅನುಕೂಲವಾಗಲಿ ಎಂದು ಎರಡು ಕೋಟಿ ರೂಪಾಯಿ ಘೋಷಣೆಯನ್ನು ಮಾಡುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಮುಖ್ಯಮಂತ್ರಿಯವರೇ, ಎರಡು ಕೋಟಿ ರೂಪಾಯಿಗಳ ಬದಲು ಐದು ಕೋಟಿ ಅನುದಾನವನ್ನು ನೀಡಬೇಕೆಂದು ಕೋರುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಮುಖ್ಯಮಂತ್ರಿಗಳೇ ಮಾಡುವುದು ಮಾಡುತ್ತೀರಿ ಒಂದು ಐದು ಕೋಟಿ ರೂಪಾಯಿಗಳನ್ನಾದರೂ ಮಾಡಿ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಕಾರಣ ಐದು ಕೋಟಿ ರೂ ಅನುದಾನವನ್ನು ನೀಡಲಾಗುವುದು.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಮಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ವಿಭೂತಿಪುರದಲ್ಲಿರುವ ಭಾರತೀಯ ಗ್ರಾಮೀಣಾ ಮಹಿಳಾ ಸಂಘವನ್ನು ನಮ್ಮ ಯಶೋಧಮ್ಮ ದಾಸಪ್ಪನವರು ಪ್ರಾರಂಭಿಸಿರುವುದು. ಆ ಸಂಘಕ್ಕೆ ಎರಡು ಕೋಟಿ ರೂಪಾಯಿಗಳನ್ನಾದರು ನೀಡಬೇಕೆಂದು ಕೋರುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಶ್ರೀಮತಿ ಮೋಟಮ್ಮನವರು ಕೇಳಿರುವಂತೆ ವಿಭೂತಿಪುರದ ಭಾರತೀಯ ಗ್ರಾಮೀಣಾ ಮಹಿಳಾ ಸಂಘಕ್ಕೂ ಎರಡು ಕೋಟಿ ರೂ ಅನುದಾನವನ್ನು ಕೊಡಲಾಗುವುದು.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಇವರೇ ಎಲ್ಲಾ ಮಠ–ಮಾನ್ಯಗಳಿಗೆ ಕೊಡುತ್ತಿದ್ದಾರೆಂದು ಬೈದರು, ಇವತ್ತು ಅವರೇ ಆ ಮಠಕ್ಕೆ ಕೊಡಿ, ಇವರಿಗೆ ಕೊಡಿ ಎಂದು ಹೆಸರು ಹೇಳುತ್ತಿದ್ದಾರೆ.

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರು ಕೋರಿಕೆಯಂತೆ ತುಮಕೂರಿನ ಎಂಪ್ರಸಸ್ ಪದವಿ ಪೂರ್ವ ಕಾಲೇಜು ಶತಮಾನೋತ್ಸವ ಭವನಕ್ಕೆ ನೂರು ವರ್ಷದ ಇತಿಹಾಸವಿದೆ. ಅದರ ಅಭಿವೃದ್ಧಿಗೆ ಕಟ್ಟಡ ನಿರ್ಮಾಣಕ್ಕೆ ಒಂದು ಕೋಟಿ ರೂಪಾಯಿಯ ಅನುದಾನವನ್ನು ನೀಡಲಾಗುತ್ತದೆ. ನಮ್ಮ ಆಯವ್ಯಯದಲ್ಲಿ 4 ವಿದೇಶಿ ವಿಶ್ವವಿದ್ಯಾನಿಲಯಗಳಿವೆ ಅಲ್ಲಿ ಕನ್ನಡ ಅಧ್ಯಯ ಪೀಠಗಳಿಗೆ ಸ್ಥಾಪನೆ ಮಾಡಲಾಗಿದ್ದು, ಅದಕ್ಕಾಗಿ ನಾಲ್ಕು ಕೋಟಿ ಹಣವನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಲಾಗಿತ್ತು. ಆದರೆ ಅದರಲ್ಲಿ ಇದುವರೆಗೆ ಎರಡು ಕೋಟಿ ಮಾತ್ರ ಬಿಡುಗಡೆಯಾಗಿದ್ದು ಇನ್ನುಳಿದ ಎರಡು ಕೋಟಿ ಹಣವನ್ನು ಈ ಸಾಲಿನ ಆಯವ್ಯಯದಲ್ಲಿ ತೆಗೆದುಕೊಂಡು ಬಿಡುಗಡೆ ಮಾಡುತ್ತೇನೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದೇ ರೀತಿ ಬೆಂಗಳೂರಿನ ಸಮಗಾರ ಹಳ್ಳಿಕಾರ್ ಸಂಘಕ್ಕೆ ಒಂದು ಕೋಟಿ ರೂ, ಜಗಜೀವನ್‌ರಾಮ್ ರವರ ಟ್ರಸ್ಟಿಗೆ ಎರಡು ಕೋಟಿ ರೂ. ಮತ್ತು ಹೊಸೂರಿನ

ಕನಕ ಭವನಕ್ಕೆ 50 ಲಕ್ಷ ರೂ. ಬ್ಯಾಡಗಿಯ ಕನಕ ಭವನಕ್ಕೆ 50 ಲಕ್ಷ ರೂ ಅನುದಾನವನ್ನು ಕೊಡಲಾಗುವುದು. ಗುಂಡ್ಲುಪೇಟೆ ಮತ್ತು ಹುಣಸೂರಿನಲ್ಲಿ ಕನಕಭವನ ನಿರ್ಮಾಣಕ್ಕೆ ಒಂದು ಕೋಟಿ ಅನುದಾನವನ್ನು ಕೊಡಲಾಗುವುದು. ಇನ್ನೊಂದು ಬಹಳ ಮುಖ್ಯವಾದ ವಿಷಯವೇನೆಂದರೆ, ಬಸವಣ್ಣನವರು ಹುಟ್ಟಿದ ಸ್ಥಳವಾದ ಇಂಗಳೇಶ್ವರಕ್ಕೂ ಸಹ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಸಾಲುಮರದ ತಿಮ್ಮಕ್ಕ ಈ ಹಿಂದೆ ಹಲವಾರು ಬೇಡಿಕೆಗಳನ್ನು ಇಟ್ಟಿದ್ದರು. ಪರಿಸರ ಸಾಮಾಜಿಕ ಕಾಳಜಿಯನ್ನು ಮಾಡುವಂತಹ ವ್ಯಕ್ತಿ ಸಾಲುಮರದ ತಿಮ್ಮಕ್ಕ. ಅವರು ಅಲ್ಲಿ ಒಂದು ಆಸ್ಪತ್ರೆ ಆಗಬೇಕು, ಒಂದು ಸೈಟ್ ಕೊಡಬೇಕು ಎನ್ನುವುದು ಅವರ ಬಹಳ ದಿನದ ಬೇಡಿಕೆ ಆಗಿತ್ತು. ಈಗಾಗಿ ಇವತ್ತು ನಮ್ಮ ವಸತಿ ಸಚಿವರು ಹಾಗೂ ಸಭಾನಾಯಕರಾದಂತಹ ಶ್ರೀ ವಿ. ಸೋಮಣ್ಣನವರ ಪ್ರಸ್ತಾವನೆಯಂತೆ ಹೌಸಿಂಗ್ ಬೋರ್ಡ್‌ನಿಂದ ಬೆಂಗಳೂರಿನ ಸೂರ್ಯನಗರ ಬಡಾವನೆಯ ಮೊದಲ ಹಂತದ 30 )( 40 ನಿವೇಶನದಲ್ಲಿ ನಿರ್ಮಸಿದ ಮನೆಯನ್ನು ಸಮಾಜ ಸೇವಕಿ ಸಾಲುಮರದ ತಿಮ್ಮಕ್ಕನವರಿಗೆ ಮಂಜೂರು ಮಾಡಲಾಗುವುದು.

**ಶ್ರೀ ದಯಾನಂದ:–** ಸನ್ಮಾನ್ಯ ಸಭಾಪತಿಯವರೇ, ಸಾಲುಮರದ ತಿಮ್ಮಕ್ಕನನ್ನು ಮಾನ್ಯ ಸೋಮಣ್ಣನವರು ನಮ್ಮ ತಾಲ್ಲೂಕಿಗೆ ಕಳಿಸಿದ್ದರಿಂದ ನಿಮಗೂ ಮತ್ತು ಅವರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್:–** ಅದೇ ರೀತಿ ಸಾಲೂರು ಮಠದ ಸ್ವಾಮೀಜಿಯವರ ಮಠಕ್ಕೆ ಎಜ್ಯುಕೇಶನ್ ಟ್ರಸ್ಟ್ ಮಹದೇಶ್ವರ ಬೆಟ್ಟ ಅವರಿಗೆ ಎರಡು ಕೋಟಿ ಹಣವನ್ನು ಘೋಷಣೆ ಮಾಡುತ್ತಿದ್ದೇನೆ. ಸಂಸ್ಕೃತ ಭಾರತಿ ಸಂಸ್ಥೆಗೆ ಸಂಸ್ಕೃತ ಭವನ ನಿರ್ಮಾಣಕ್ಕೆ ಎರಡು ಕೋಟಿ ಅನುದಾನವನ್ನು ಘೋಷಣೆ ಮಾಡಿದ್ದೇನೆ. ಇನ್ನು ಬಹಳಷ್ಟು ಇವೆ. (ಖಾನಾಪುರದ ಮೈಲಾರಮಲ್ಲದ್ದು ಸಹ ಮಾಡುತ್ತೇನೆ).

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಕನ್‌ಕ್ಲೂಡ್ ಮಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಜಗದೀಶ್ ಶೆಟ್ಟರ್:–** ಚೆನ್ನಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜು ಶತಮಾನೋತ್ಸನ ಭವನ, ಇದಕ್ಕೂ ಒಂದು ಕೋಟಿ ಅನುದಾನವನ್ನು ನೀಡಲಾಗುವುದು. ಈಗಾಗಲೇ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಈಗಾಗಲೇ ಎಲ್ಲಾ ಮಾನ್ಯ ವಿರೋಧ ಪಕ್ಷದ ನಾಯಕರು, ಇನ್ನಿತರ ಸದಸ್ಯರು ಏನು ವಿಚಾರಗಳನ್ನು ಹೇಳಿದ್ದಾರೆ ಅದಕ್ಕೆ ಸಾಕಷ್ಟು ತೃಪ್ತಿಕರವಾಗಿ ಉತ್ತರವನ್ನು ಕೊಟ್ಟಿದ್ದೇನೆ. ನಾನು ಇವತ್ತು ಒಂದು ಉತ್ತಮ ಬಜೆಟ್ ಕೊಟ್ಟಿದ್ದೇನೆ. ಇವತ್ತು ಇಡಿ ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಎಲ್ಲಾ ವರ್ಗಗಳಿಗೆ ಅಭಿವೃದ್ಧಿಯ ಒಂದು ಹಂತ ಮುಟ್ಟುವಂತಹ ರೀತಿಯಲ್ಲಿ ಹಲವಾರು ಯೋಜನೆಗಳ ಮುಖಾಂತರ ಒಂದು ಪ್ರೋಗ್ರೆಸ್ಸೀವ್ ಆಗಿ ಮಂಡನೆ ಮಾಡಿದ್ದೇನೆ. ಇದರಿಂದ ಕರ್ನಾಟಕ ರಾಜ್ಯಕ್ಕೆ ಒಳ್ಳೆಯದಾಗುತ್ತದೆ. ಅದು ಅಸಮತೋಲನ ಇರಬಹುದು ಅಥವಾ ಒಟ್ಟಾರೆ ಅಭಿವೃದ್ಧಿ ಇರಬಹುದು ನಿರಾವರಿ, ಕೃಷಿ ಮತ್ತು ಎಸ್‌ಸಿ/ಎಸ್‌ಟಿ ಜನಾಂಗ, ದೀನದಲಿತರು, ಅಲ್ಪಸಂಖ್ಯಾತರು, ಎಲ್ಲಾ ವರ್ಗಕ್ಕೂ ಅನುಕೂಲವಾಗುವಂತಹ ಒಂದು ಉತ್ತಮ ಬಜೆಟ್ ಅನ್ನು ಕೊಟ್ಟಿದ್ದೇವೆ. ಇದರಿಂದ ಮೂಲಭೂತ ಸೌಕರ್ಯಗಳನ್ನು ಸಹ ಒದಗಿಸಬಹುದು. ನಾನು ಪ್ರಥಮವಾಗಿ ಭಾಷಣವನ್ನು ಪ್ರಾರಂಭ ಮಾಡುವಾಗ 8ನೇ ತಾರೀಖು ಬಜೆಟ್ ಮಂಡನೆ ಮಾಡುತ್ತೇನೆ, ಮತ್ತು ಅದನ್ನು ಎಲ್ಲರ ಒಪ್ಪಿಗೆಯನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೆ. ಆ ಸಮಯದಲ್ಲಿ ಜನರು ಜಗದೀಶ್ ಶೆಟ್ಟರ್‌ರವರು ಬಜೆಟ್ ಮಂಡನೆ ಮಾಡುತ್ತಾರೋ ಇಲ್ಲವೋ, ಈ ಸರ್ಕಾರ ಅವಧಿಯನ್ನು ಪೂರ್ಣಗೊಳಿಸುತ್ತದೆಯೋ ಇಲ್ಲವೋ ಎಂದು ಹೇಳುತ್ತಿದ್ದರು. ಆದರೆ ನಾನು ಅವಧಿಯನ್ನು ಪೂರ್ಣಗೊಳಿಸುತ್ತೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೊಂದು ಮಾತನ್ನು ಹೇಳಬಯಸುತ್ತೇನೆ, ಬಹಳ ಜನ ವಿರೋಧ ಪಕ್ಷದವರು ಇರಬಹುದು ಅಥವಾ ಇನ್ನಿತರರು ಇರಬಹುದು ಇದನ್ನು ಅನುಷ್ಠಾನವನ್ನು ಯಾರು ಮಾಡುತ್ತಾರೆಂದು ಹೇಳುತ್ತಿದ್ದಾರೆ. ಈಗ

ನಾನು ನಾಲ್ಕು ತಿಂಗಳು ಕಾಳ vote on account ತೆಗೆದುಕೊಳ್ಳುತ್ತಿದ್ದೇನೆ, ಮೇ ಅವಧಿಯಲ್ಲಿ ನಮ್ಮ ಸರ್ಕಾರ ಪೂರ್ಣಗೊಳ್ಳುತ್ತದೆ. ನಂತರ ಮುಂದಿನ ಚುನಾವಣೆಯಲ್ಲಿ ಭಾರತೀಯ ಜನತಾಪಕ್ಷ ನೇತೃತ್ವದ ಸರ್ಕಾರವೆ ಪುನಃ ಬರುತ್ತದೆ ಈ ಬಜೆಟ್ ಅನುಷ್ಠಾನವನ್ನು ನಮ್ಮ ಸರ್ಕಾರವೇ ಮಾಡುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹಾಗಾಗಿ ಇವತ್ತು 2013ರ ಏಪ್ರಿಲ್ ನಿಂದ ಜುಲೈವರಿವಿಗೂ ಅಂದರೆ 4 ತಿಂಗಳ ಲೇಖಾನುದಾನಕ್ಕೆ ಈ ಸದನ ಅನುಮೋದನೆಯನ್ನು ನೀಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಸಭಾಪತಿಯವರು:–** ಧನ್ಯವಾದಗಳು.

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಇನ್ನೊಂದು ವಿಷಯವನ್ನು ಹೇಳುತ್ತೇನೆ. ನಮ್ಮ ಲಿಸ್ಟ್‌ನಲ್ಲಿತ್ತು, ದಾವಣಗೆರೆ ವಿಶ್ವವಿದ್ಯಾನಿಲಯ ಹೊಸದಾಗಿ ಆಗಿದೆ. ಅದಕ್ಕೆ 10 ಕೋಟಿ ರೂಪಾಯಿಗಳ ವಿಶೇಷ ಅನುದಾನ ಕೊಡುವಂಥ ಕೆಲಸವನ್ನು ನಾನು ಮಾಡುತ್ತೇನೆ.

**ಸಭಾಪತಿಯವರು:–** ದಯಮಾಡಿ ಎಲ್ಲರು ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮೊದಲ ಆದ್ಯತೆ. ವಿರೋಧ ಪಕ್ಷದ ನಾಯಕರು ಸ್ಪಷ್ಟೀಕರಣವನ್ನು ಕೇಳುವ ಹಾಗಿದ್ದರೆ ಕೇಳಬಹುದು. ಭಾಷಣ ಮಾಡುವ ಹಾಗಿಲ್ಲ, ಬಜೆಟ್ ಭಾಷಣ ಮುಗಿದು ಹೋಗಿದೆ.

**(ಕೆಲವು ಸದಸ್ಯರು ಮುಖ್ಯಮಂತ್ರಿಯವರ ಆಸನದ ಬಳಿಗೆ ಬಂದು ಅವರಿಗೆ ಚೀಟಿಗಳನ್ನು ನೀಡುತ್ತಿದ್ದರು)**

**ಸಭಾಪತಿಯವರು:–** ಇದೇನು ನಡೆಸಿದ್ದಿರಿ?

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ತಮ್ಮ ಬೇಡಿಕೆಗಳಿಗೆ ಸಂಬಂಧಿಸಿದಂತೆ ಈ ರೀತಿ ಮಾನ್ಯ ಮುಖ್ಯಮಂತ್ರಿಗಳಿಗೆ ಚೀಟಿಗಳನ್ನು ಕೊಟ್ಟು

ಬಜೆಟ್ sanctityಯನ್ನು ಕಳೆಯುತ್ತಿದ್ದಾರೆ. You will lose the sanctity of the budget.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳಿಗೆ ಚೀಟಿಯನ್ನು ಕೊಡುತ್ತಿರುವ ಸದಸ್ಯರು ಸಾಕು ಬನ್ನಿ, ಚರ್ಚೆ ಬೇಡ. ವಿರೋಧ ಪಕ್ಷದ ನಾಯಕರು ಸ್ಪಷ್ಟೀಕರಣವನ್ನು ಕೇಳುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಚೊಚ್ಚಲ ಮುಂಗಡ ಪತ್ರವನ್ನು ಶ್ರೀಮಾನ್ ಜಗದೀಶ್ ಶೆಟ್ಟರ್‌ರವರು ಮಂಡಿಸಿ ಬಹಳಷ್ಟು ಸುದೀರ್ಘವಾದಂಥ ಉತ್ತರವನ್ನು ನೀಡಿದ್ದಾರೆ. ನಾನು ಸಹ ಬಜೆಟ್ ಮೇಲೆ ಮಾತನಾಡುವಂಥ ಸಂದರ್ಭದಲ್ಲಿ ಈ ಸದನದ ಬಹಳಷ್ಟು ಸಮಯವನ್ನು ತೆಗೆದುಕೊಂಡಿದ್ದೇನೆ. ನಾನು ಮೂರು ಗಂಟೆಗಳಿಗೂ ಹೆಚ್ಚು ಸಮಯವನ್ನು ತೆಗೆದುಕೊಂಡಿದ್ದೇನೆ. ನಾನು ಯಾವುದೇ ವಿಷಯದ ಆಳಕ್ಕೆ ಹೋಗುವುದಿಲ್ಲ. ಕೇವಲ ಎರಡು–ಮೂರು ಸ್ಪಷ್ಟೀಕರಣವನ್ನು ಮಾತ್ರ ಕೇಳುತ್ತೇನೆ. ಮೊದಲನೆಯದಾಗಿ ರೈತರು ಸಹಕಾರಿ ಸಂಸ್ಥೆಗಳಿಂದ ಒಂದು ಲಕ್ಷ ರೂಪಾಯಿಗಳವರೆಗೆ ಪಡೆದ ಸಾಲಕ್ಕೆ ಶೂನ್ಯ ಬಡ್ಡಿ ದರವನ್ನು ಮುಂದುವರೆಸಿದ್ದಾರೆ. ಅದರ ಜೊತೆಗೆ ರಾಷ್ಟ್ರೀಕೃತ ಬ್ಯಾಂಕಿನಿಂದ ಸಾಲ ಪಡೆದಿದ್ದಕ್ಕೆ ಶೇಕಡ 3ರಷ್ಟು ಬಡ್ಡಿ ದರವನ್ನು ಮುಂದುವರೆಸಿದ್ದಾರೆ. ನನಗಿರುವ ಒಂದು ಜಿಜ್ಞಾಸೆ ಏನೆಂದರೆ, ಒಂದು ಲಕ್ಷ ರೂಪಾಯಿಗಳವರೆಗೆ ಶೂನ್ಯ ಬಡ್ಡಿ ದರ ಇದೆ, ನಂತರ ಮೂರು ಲಕ್ಷ ರೂಪಾಯಿಗಳ ಸಾಲಕ್ಕೆ ಶೇಕಡ 1ರ ಬಡ್ಡಿ ದರ ಇದೆ. ಅಂದರೆ ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿಯಾಗಿದ್ದಾಗ ಆಗಲಿ, ಹಿಂದಿನ ಬಜೆಟ್‌ನಲ್ಲಿ ಆಗಲಿ, ರೈತರು ಬೆಳೆ ಸಾಲ ಪಡೆದಿದ್ದಕ್ಕೆ ಶೇಕಡ 1ರ ಬಡ್ಡಿ ದರ 2 ಲಕ್ಷ ರೂಪಾಯಿಗಳವರೆವಿಗೂ ಇತ್ತು. ಅದನ್ನು ಕೈಬಿಟ್ಟಿದ್ದಾರೆ. ಒಂದು ಲಕ್ಷ ರೂಪಾಯಿಗಳ ಸಾಲಕ್ಕೆ ಶೂನ್ಯ ಬಡ್ಡಿ ದರವನ್ನು ಮುಂದುವರೆಸಿದ್ದಾರೆ. ಮತ್ತೆ ಶೇಕಡ 1ರ ಬಡ್ಡಿ ದರದಲ್ಲಿ 2 ಲಕ್ಷ ರೂಪಾಯಿಗಳವರೆವಿಗೂ ರೈತರಿಗೆ ಬೆಳೆ ಸಾಲವನ್ನು ನೀಡುತ್ತಿದ್ದರು. ಇದರಲ್ಲಿ ಅದನ್ನು ಕೈಬಿಟ್ಟಿದ್ದಾರೆ. It is subject to correction. ತಾವು ನೋಡಿ ಈ ಬಜೆಟ್ ಪುಸ್ತಕದಲ್ಲಿ clear ಆಗಿದೆ. ಮೊದಲು ಏನಿತ್ತು ಎಂದರೆ, upto 1 lakh

zero percent ಮತ್ತು 1 ಲಕ್ಷಕ್ಕೂ ಮೇಲ್ಪಟ್ಟು 3 ಲಕ್ಷಗಳವರೆಗೆ ಶೇಕಡ 1ರಷ್ಟು ಬಡ್ಡಿ ದರ ಇತ್ತು. ಶೇಕಡ 1ರ ಬಡ್ಡಿ ದರದಲ್ಲಿ ರೈತರಿಗೆ 2 ಲಕ್ಷ ರೂಪಾಯಿಗಳ ಸಾಲವನ್ನು ಏನು ಕೊಡುತ್ತಿದ್ದರು, ಅದನ್ನು ಕೈಬಿಟ್ಟಿದ್ದಾರೆ. ಅದರ ಜೊತೆಗೆ ಮಧ್ಯಮಾವಧಿ ಸಾಲದ ಬಗ್ಗೆ ಹೇಳುವುದಾದರೆ, ಹಿಂದಿನ ಬಜೆಟ್ ಪ್ರಕಾರ ಶೇಕಡ 3ರ ಬಡ್ಡಿ ದರದಲ್ಲಿ 10 ಲಕ್ಷ ರಾಪಾಯಿಗಳವರೆಗೆ ಸಾಲವನ್ನು ಏನು ಕೊಡುತ್ತಿದ್ದರು, ಅದನ್ನು ಸಹ ಕೈಬಿಟ್ಟಿದ್ದಾರೆ. ಇಷ್ಟು ಭೀಕರವಾದಂಥ ಬರಗಾಲದಲ್ಲಿ ರೈತರು ಸಿಕ್ಕಿಕೊಂಡಿರುವಂಥ ಸಂದರ್ಭದಲ್ಲಿ, ಕಳೆದ ಬಾರಿಯು ಸಹ ಇವರದೇ ಸರ್ಕಾರ ಇತ್ತು. ಮಾನ್ಯ ಸದಾನಂದಗೌಡರು ಮಂಡಿಸಿದಂಥ ಬಜೆಟ್‌ನಲ್ಲಿ ಈ ಸೌಕರ್ಯವಿತ್ತು. ಶೂನ್ಯ ಬಡ್ಡಿ ದರ ಒಂದು ಲಕ್ಷ ರೂಪಾಯಿಗಳವರೆಗೆ ಇತ್ತು. ನಂತರ ಶೇಕಡ 1ರ ಬಡ್ಡಿದರದಲ್ಲಿ 2 ಲಕ್ಷ ರೂಪಾಯಿಗಳನ್ನು ಹೆಚ್ಚುವರಿಯಾಗಿ ಕೊಡುತ್ತಿದ್ದರು. 2 ಲಕ್ಷ ರೂಪಾಯಿಗಳನ್ನು ಶೇಕಡ 1ರ ಬಡ್ಡಿ ದರದಲ್ಲಿ ಏನು ಕೊಡುತ್ತಿದ್ದರು, it has been dropped. ನಂತರ ಟ್ರಾಕ್ಟರ್ ಖರೀದಿಗೆ ಅಥವಾ ಒಕ್ಕಲುತನ ಉಪಕರಣಗಳ ಖರೀದಿಗೆ ಶೇಕಡ 3ರ ಬಡ್ಡಿ ದರದಲ್ಲಿ 10 ಲಕ್ಷ ರೂಪಾಯಿಗಳವರೆಗೆ ರೈತರಿಗೆ ಏನು ಮಧ್ಯಮಾವಧಿ ಸಾಲವನ್ನು ಕೊಡುತ್ತಿದ್ದರು, ಅದನ್ನು ಸಹ ಕೈ ಬಿಟ್ಟಿದ್ದಾರೆ. ಇದು ರೈತ ಪರ ಬಜೆಟ್ ಎಂದು ಹೇಗೆ ಹೇಳಬೇಕೆಂದು ತಾವು ಯೋಚನೆ ಮಾಡಿ. ಗೌರವಾನ್ವಿತ ಮುಖ್ಯಮಂತ್ರಿಗಳ ಬಗ್ಗೆ ನನಗೆ ಬಹಳ ಗೌರವವಿದೆ. Mid term fiscal budgetನಲ್ಲಿದೆ, ಇವತ್ತು ಟೋಯೋಟಾ, ಕಿರ್ಲೋಸ್ಕರ್ ನಂತಹ ಮೂರ್‍ನಾಲ್ಕು ಸಂಸ್ಥೆಗಳಿಗೆ, ಅವರು ಕೊಡತಕ್ಕಂಥ ತೆರಿಗೆಯನ್ನು ಮುಂದೂಡಿದರು. ಸುಮಾರು 42,000 ಕೋಟಿ ರೂಪಾಯಿಗಳಾಗುತ್ತದೆ. ಟೋಯೋಟಾ, ಕಿರ್ಲೋಸ್ಕರ್ ಮೋಟಾರ್ಸ್‌ಗೆ 14,197 ಕೋಟಿ CST ಮುಂದೂಡಿಕೆ, ಸುಮಾರು 10,000 ಕೋಟಿ ರೂಪಾಯಿಗಳ ವ್ಯಾಟ್ ಮುಂದೂಡಿಕೆ. Mangalore Refinery And Petrochemicals Limited, Mangalore ಇವರ KTEG ವಿನಾಯಿತಿ 17,743 ಕೋಟಿ ರೂಪಾಯಿಗಳು. Mangalore Refinery And Petro Chemicals Limitedಗೆ ಒಟ್ಟು ವಿನಾಯಿತಿಯನ್ನು ಕೊಟ್ಟಿರುವುದು

7,039 ಕೋಟಿ ರೂಪಾಯಿಗಳು. ಅದೇ ರೀತಿ ಟೊಯೋಟಾ, ಕಿರ್ಲೋಸ್ಕರ್‌ಗೆ 412 ಕೋಟಿ ರೂಪಾಯಿಗಳು ಅಂದರೆ ನಾನು ಅಂದಾಜು ಹೇಳುತ್ತಿದ್ದೇನೆ. ಅಂದಾಜು 9,000 ಕೋಟಿ ರೂಪಾಯಿಯಷ್ಟು ವಿನಾಯಿತಿಯನ್ನು ನಾಲ್ಕೈದು ಕೈಗಾರಿಕೆಗಳಿಗೆ ಕೊಡುತ್ತಿದ್ದಾರೆ. ಇನ್ನು ತೆರಿಗೆ ಮುಂದೂಡಿಕೆ ಬಗ್ಗೆ ಹೇಳುವುದಾದರೆ, CST ಇರಬಹುದು, KTEG ಇರಬಹುದು, VAT ಇರಬಹುದು, ಮುಂದೂಡಿಕೆ ಹಣವನ್ನು ಕೇವಲ 4–5 ಸಂಸ್ಥೆಗಳಿಗೆ ಕೊಡಿಸಿದರೆ ಸುಮಾರು 42,000 ಕೋಟಿ ರೂಪಾಯಿಯಾಗುತ್ತದೆ. ನಾನೇಕೆ ಇದನ್ನು ಹೇಳುತ್ತೇನೆಂದರೆ, ರೈತರು ಶೇಕಡ 1ರ ಬಡ್ಡಿ ದರದಲ್ಲಿ 2 ಲಕ್ಷ ರೂಪಾಯಿಗಳ ಸಾಲವನ್ನು ತೆಗೆದುಕೊಳ್ಳುತ್ತಾರೆ. ಅದು ಸಹ ಹೋಯಿತು. ಶೇಕಡ 3ರ ಬಡ್ಡಿ ದರದಲ್ಲಿ 10 ಲಕ್ಷ ರೂಪಾಯಿಗಳ ಸಾಲವನ್ನು ತೆಗೆದುಕೊಳ್ಳುತ್ತಿದ್ದರು, ಅದು ಸಹ ಹೋಯಿತು. ಇವತ್ತು ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ನಾನು ಕೈಗಾರೀಕರಣಕ್ಕೆ ವಿರುದ್ಧ ಅಲ್ಲ. “Industrialise or perish” ಎಂದು Sir ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಹೇಳಿದ್ದಾರೆ. “ಉದ್ಯಮೀಕರಣ ಆಗು ಅಥವಾ ಅವಸಾನ ಆಗು” ಎನ್ನುವುದಕ್ಕೆ ನಾನು ಕೂಡ ಕಟಿಬದ್ಧನಾಗಿದ್ದೇನೆ. ಆದರೆ ಇವತ್ತು 42,000 ಕೋಟಿ ರೂಪಾಯಿಯಷ್ಟು ಬೃಹತ್ ಮೊತ್ತದ ಹಣವನ್ನು ಕೇವಲ ನಾಲ್ಕೈದು ಉದ್ಯಮಗಳಿಗೆ ಇವತ್ತು tax recovery ಯಿಂದ ಮುಂದೂಡಿದ್ದಾರೆ. ನಂತರ 9,000 ಕೋಟಿಗಿಂತ ಮೇಲ್ಪಟ್ಟು exemption ಮಾಡಿದ್ದಾರೆ. ಆದುದರಿಂದ ಸರ್ಕಾರ ಇದರ ಬಗ್ಗೆ ಚಿಂತನೆಯನ್ನು ಮಾಡಬೇಕು. 20,000 ಕೋಟಿ ರೂಪಾಯಿಗಳ ರೈತರ ಸಾಲ ಇದೆ. ಈಗ ಇಷ್ಟು ಬರಗಾಲವಿರುವುದರಿಂದ ಈ ಹಣವನ್ನು defer ಮಾಡಬಹುದಾಗಿತ್ತಲ್ಲಾ. ಸಹಕಾರಿ ಬ್ಯಾಂಕ್‌ಗಳಲ್ಲಿ ಈ ರಾಜ್ಯದ ಎಲ್ಲಾ ರೈತರ ಸಾಲವನ್ನು ಕೂಡಿದರೆ ಸುಮಾರು 25,000 ಕೋಟಿ ರೂಪಾಯಿ ಆಗಬಹುದು. ನನಗೆ ಅಂಕಿ–ಸಂಖ್ಯೆ ಸರಿಯಾಗಿ ಗೊತ್ತಿಲ್ಲ. ನಾನು ಅಂದಾಜು ಹೇಳುತ್ತಿದ್ದೇನೆ. ಸುಮಾರು 42,000 ಕೋಟಿ ರೂಪಾಯಿಯಷ್ಟು ಈ ನಾಲ್ಕೈದು ಉದ್ಯಮಗಳು ಸರ್ಕಾರಕ್ಕೆ ಕೊಡತಕ್ಕಂಥ VAT, KTEG, CST ಯನ್ನು ಮುಂದೂಡಿದರು. ಇಷ್ಟು ಬರಗಾಲದಲ್ಲಿ ತತ್ತರಿಸುತ್ತಿರುವ ರೈತರ ಸಾಲ

ಅಂದಾಜು 25,000 ದಿಂದ 30,000 ಕೋಟಿ ರೂಪಾಯಿಯಾಗಬಹುದು. ಇದನ್ನು ಮುಂದೂಡಬಹುದಾಗಿತ್ತು, defer ಮಾಡಬಹುದಾಗಿತ್ತು. 9,000 ಕೋಟಿ ರೂಪಾಯಿಗಳನ್ನು exemption ಮಾಡಿದರು. ರೈತರಿಗೆ 3,600 ಕೋಟಿ ರೂಪಾಯಿಗಳನ್ನು exemption ಮಾಡಿ ಕೇವಲ 350 ಕೋಟಿ ರೂಪಾಯಿಯಷ್ಟು ಮಾತ್ರ ಸಾಲ ಮನ್ನಾದಲ್ಲಿ ತುಂಬಿದರು. ಅದಕ್ಕೆ ನನ್ನ ಒಂದು ವಿಚಾರವೇನೆಂದರೆ, ಮೊದಲು ಏನು ಯೋಜನೆ ಇತ್ತು ಶೂನ್ಯ ಬಡ್ಡಿ ದರದಲ್ಲಿ 1 ಲಕ್ಷ ರೂಪಾಯಿ ಸಾಲ ಕೊಡುವುದು ಸರಿ. ನಂತರ ಶೇಕಡ 1ರ ಬಡ್ಡಿ ದರದಲ್ಲಿ 2 ಲಕ್ಷ ರೂಪಾಯಿಗಳನ್ನು ಏನು ಕೊಡುತ್ತಿದ್ದರು, ಅದನ್ನು ಮುಂದುವರೆಸಿ. ಶೇಕಡ 3ರ ಬಡ್ಡಿ ದರದಲ್ಲಿ ಏನು ಮಧ್ಯಮಾವಧಿ ಸಾಲವನ್ನು ರೈತರು sprinkler ಹಾಕಲಿಕ್ಕೆ, ಬೋರ್‌ವೆಲ್ ತೆಗೆಯಲಿಕ್ಕೆ ಅಥವಾ ಸಮತಟ್ಟು ಮಾಡಲಿಕ್ಕೆ development loan ಏನಿತ್ತು, medium term loan 10 ಲಕ್ಷ ರೂಪಾಯಿಗಳವರೆಗೆ ಶೇಕಡ 3ರ ಬಡ್ಡಿ ದರ ಇತ್ತು. ಅದನ್ನು ಮುಂದುವರೆಸಿ, ಅದನ್ನು ಬಿಟ್ಟುಬಿಟ್ಟಿದ್ದಾರೆ. "Pro-farmer budget" ಅಂದರೆ ಅದು ಸರಿಯಾದಂಥ ವಿಚಾರವಲ್ಲ ಎನ್ನುವಂಥ ಮಾತನ್ನು ಹೇಳಿ, ಇವರು ಕೊಟ್ಟಂಥ ಅಂಕಿ–ಸಂಖ್ಯೆ ಸರಿ ಇದೆಯೋ ಇಲ್ಲವೋ ಎಂಬುದನ್ನು ನೋಡಿ. ಇವೆಲ್ಲಾ ಕೂಡಿಸಿದರೆ ಇನ್ನು ಹೆಚ್ಚಾಗುತ್ತದೆ. 42,000 ಕೋಟಿ ರೂಪಾಯಿ ಬೃಹತ್ ಮೊತ್ತದ ತೆರಿಗೆಯನ್ನು ಇವತ್ತು ಮುಂದೂಡಿಬಿಟ್ಟಿದ್ದಾರೆ.

3,600 ಕೋಟಿ ರೂಪಾಯಿಯಷ್ಟು ಏನು ಮನ್ನಾ ಮಾಡಿದ್ದಾರೆ, ಅದರಲ್ಲಿ 350 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ರಾಜ್ಯ ಸರ್ಕಾರದಲ್ಲಿ 900 ಕೋಟಿ ರೂಪಾಯಿಯ ಬಿಲ್ ಪೆಂಡಿಂಗ್ ಇದೆ. ಸುಮಾರು 1,500 ಕೋಟಿ ರೂಪಾಯಿ ಹಣವಿದೆ. ಅದನ್ನು ತಕ್ಷಣವೇ ಪೇಮೆಂಟ್ ಮಾಡಿದರೆ ಸಹಕಾರಿ ಸಂಸ್ಥೆಗಳೇನಿದ್ದಾವೆ ಅವು ಬದುಕಿ ಉಳಿಯುತ್ತವೆ ಮತ್ತು ರೈತರಿಗೆ ಸಾಲ ಕೊಡುವುದಕ್ಕೆ ಆಗುತ್ತದೆ. ಮತ್ತೆ ರೈತರು ಬದುಕುತ್ತಾರೆ ಮತ್ತು ಸಹಕಾರಿ ಸಂಸ್ಥೆಗಳು ಸಹ ಬದುಕುತ್ತವೆ. ಆ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ, ರೈತರಿಗೆ ಏನು ಪ್ಯಾಕೇಜ್‌ನ್ನು ಘೋಷಣೆ ಮಾಡಲಾಗಿದೆ, ಅದನ್ನು ಕಡಿಮೆ ಮಾಡಿ ರೈತರಿಗೆ ಅನ್ಯಾಯ

ಮಾಡುವುದು ಬೇಡ. ಏಕೆಂದರೆ ರೈತರ ಪರಿಸ್ಥಿತಿಯೂ ಸಹ ಸರಿ ಇಲ್ಲ. ರೈತರು ಬಹಳಷ್ಟು suffer ಆಗಿದ್ದಾರೆ, ಬಹಳಷ್ಟು ತೊಂದರೆಯಲ್ಲಿದ್ದಾರೆ. ಆ ದೃಷ್ಟಿಯಿಂದ 4–5 ಉದ್ಯಮಗಳಿಗೆ ಇಷ್ಟು ಮಾಡಿದರೆ, ರಾಜ್ಯದ ಎಲ್ಲಾ ಸಮಸ್ತ ರೈತರ ಹಿತದೃಷ್ಟಿಯಿಂದ ಅವರಿಗೆ ಅನುಕೂಲಕರವಾದ ವ್ಯವಸ್ಥೆಯನ್ನು ಕಲ್ಪಿಸಬೇಕು ಎನ್ನುವಂಥ ಮಾತನ್ನು ನಾನು ತಮ್ಮ ಎದುರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಭಾಷಣ ಮಾಡುತ್ತಿಲ್ಲ. ನನ್ನ ಮಾತುಗಳನ್ನು ಸೀಮಿತಗೊಳಿಸಿಕೊಂಡಿದ್ದೇನೆ. ತಾವು ಅನೇಕ ಹೊಸ ತಾಲ್ಲೂಕುಗಳನ್ನು ಘೋಷಣೆ ಮಾಡಿದ್ದಿರಿ. ಈ ನಿಟ್ಟಿನಲ್ಲಿ ತಾಲ್ಲೂಕು ಮಾಡುವಂತಹ ಯೋಗ್ಯ ಸ್ಥಳಗಳಿದೆಯೋ ಅಂದರೆ, ನಮ್ಮ ಜಿಲ್ಲೆಯ ತೇರದಾಳ ಇರಬಹುದು, ಸಾವಳಗಿ ಇರಬಹುದು, ಹಳಿಯಾಳ ತಾಲ್ಲೂಕಿನ ದಾಂಡೇಲಿ ಇರಬಹುದು, ಶಿಕಾರಿಪುರದ ಶಿರಾಳಕೊಪ್ಪ ಇರಬಹುದು, ಇವುಗಳನ್ನೂ ಕೂಡ ಕನ್ಸಿಡರ್ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸಿಎಂಜಿಎಸ್‌ವೈ ಎಂದೇನಿದೆ, ಅಂದರೆ, "ನಮ್ಮ ಗ್ರಾಮ, ನಮ್ಮ ರಸ್ತೆ" ಇದು 2700 ಕೋಟಿ ರೂಪಾಯಿಗಳ ಯೋಜನೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳೆ, ಈ ಅಕ್ಸೆಪ್ಟೆನ್ಸ್‌ನಲ್ಲಿ ದೊಡ್ಡ ಗೋಲ್‌ಮಾಲ್ ನಡೆಯುತ್ತಿದೆ ಎನ್ನುವುದು ನಿಮ್ಮ ಗಮನಕ್ಕೆ ಇರಲಿ. ಇನ್ನು ಕಾಮಗಾರಿ ಪ್ರಾರಂಭವಾಗಿಲ್ಲ, ಟೆಂಡರ್ ಹಂತದಲ್ಲೇ ದೊಡ್ಡ ಪ್ರಮಾಣದಲ್ಲಿ ಗೋಲ್‌ಮಾಲ್ ನಡೆಯುತ್ತಿದೆ. ತಾವು ಇದರ ಬಗ್ಗೆ ಆರ್‌ಡಿಪಿಆರ್ ಕಾರ್ಯದರ್ಶಿಯವರನ್ನು ಕರೆಸಿ ಅಲ್ಲೇನು ನಡೆಯುತ್ತಿದೆ ಎನ್ನುವುದರ ಬಗ್ಗೆ ಚರ್ಚೆ ಮಾಡಬೇಕೆಂದು ಕೋರುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಒಣದ್ರಾಕ್ಷಿ ಮಾರುಕಟ್ಟೆಯನ್ನು ಪ್ರಾರಂಭ ಮಾಡಿದಿರಿ, ಆದರೆ ಒಣದ್ರಾಕ್ಷಿ ಮೇಲೆ ಶೇಕಡ 2ರಷ್ಟು ತೆರಿಗೆ ದರ ವಿಧಿಸಿದಿರಿ. ಆದರೆ ಮಹಾರಾಷ್ಟ್ರದಲ್ಲಿ ಯಾವುದೇ ರೀತಿಯ ತೆರಿಗೆಯಿಲ್ಲ ಆದ್ದರಿಂದ ನಮ್ಮಲ್ಲಿ ಬೆಳೆಯುವ ಒಣದ್ರಾಕ್ಷಿ ಮಹಾರಾಷ್ಟ್ರಕ್ಕೆ ಹೋಗುತ್ತಿದೆ. ಈ ಎರಡು ಪರ್ಸೆಂಟ್ ತೆರಿಗೆಯನ್ನು ರದ್ದು ಮಾಡಿ ಮಹಾರಾಷ್ಟ್ರದಲ್ಲಿ ಹೇಗಿದೆಯೋ ಹಾಗೆ ಮಾಡಬೇಕು. ಅದು ಮಹಾರಾಷ್ಟ್ರಕ್ಕೆ ಹೋಗುವುದನ್ನು ತಪ್ಪಿಸಬೇಕು. ಸಹಕಾರಿ ಬ್ಯಾಂಕಿಗೆ ಸಂಬಂಧಪಟ್ಟ ಪೆಂಡಿಗ್ ಬಿಲ್ಸ್ ಇದೆ. ಅವೆಲ್ಲವನ್ನೂ ಕ್ಲಿಯರ್

ಮಾಡಬೇಕು. 900 ಕೋಟಿ ರೂಪಾಯಿಗಳಷ್ಟು ಪೆಂಡಿಂಗ್ ಇವೆ. 350 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ನಿಮ್ಮ ಬಜೆಟ್‌ನಲ್ಲಿ 1500 ಕೋಟಿ ರೂಪಾಯಿಗಳ provision ಮಾಡಿಕೊಂಡಿದ್ದೀರಿ. ದುಡ್ಡು ಇದೆ. 5ರಷ್ಟು ತೆರಿಗೆಯನ್ನು ಹೆಚ್ಚು ಮಾಡಿಕೊಂಡು 1 ಸಾವಿರ ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿದ್ದೀರಿ. ಈ ದಿಸೆಯಲ್ಲಿ ಶೀಘ್ರ ಕ್ರಮ ಕೈಗೊಳ್ಳಬೇಕು.

ಕೇಂದ್ರ ಸರ್ಕಾರದಿಂದ ಬರಬೇಕಾದ ಸಹಾಯದ ಬಗ್ಗೆ ಕೆಲವು ವಿಚಾರಗಳನ್ನು ಹೇಳೀದ್ದಿರಿ. ಈ ವಿಚಾರದಲ್ಲಿ ನಾವು ನಿಮ್ಮ ಜೊತೆಗೆ ಇರುತ್ತೇವೆ. ಈ ರಾಜ್ಯಕ್ಕೆ  ಏನು ಪಾಲು ಬರಬೇಕಾಗಿದೆಯೋ, ಕೇಂದ್ರ ಸರ್ಕಾರದಿಂದ ಸಹಾಯ, ಸೌಕರ್ಯ-ಸವಲತ್ತುಗಳು ಬರಬೇಕಾಗಿದೆಯೋ ಅದನ್ನು ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ನಾವು ನಿಮ್ಮ ಜೊತೆ ಇರುತ್ತೇವೆ. ಪ್ರಧಾನ ಮಂತ್ರಿಗಳಾಗಲಿ, ಮಾನ್ಯ ಶರತ್‌ಪವಾರ್ ಆಗಲಿ, ಗ್ರಾಮೀಣಾಭಿವೃದ್ಧಿ ಮಂತ್ರಿಯಾಗಲಿ ಇವರನ್ನು ಒತ್ತಾಯ ಮಾಡಿ ರಾಜ್ಯಕ್ಕೆ ಸಿಗಬೇಕಾದ ಸವಲತ್ತುಗಳನ್ನು ಪಡೆದುಕೊಳ್ಳುವ ಸಲುವಾಗಿ ನಾವು ನಿಮ್ಮ ಜೊತೆ ಇರುತ್ತೇವೆ. K-RIDE (Karnataka Rail Infrastructure Development Corporation) ಬಗ್ಗೆಯೂ ಪ್ರಸ್ತಾಪವಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕೂಡ ಅತ್ಯುತ್ತಮವಾದ ಕೆಲಸ ಮಾಡಿದೆ. ಶ್ರೀಮಾನ್ ಜಾಫರ್‌ಶರೀಫ್‌ರವರು ರೈಲ್ವೆ ಸಚಿವರಾಗಿದ್ದಾಗ ಮಾಡಿದಂತಹ ಸಾಧನೆ ಬಹುದೊಡ್ಡ ಸಾಧನೆಯಾಗಿದೆ. ಅವರಿಂದ ನಮ್ಮ ರಾಜ್ಯಕ್ಕೆ ಅನುಕೂಲವಾಗಿದೆ ಎನ್ನುವುದನ್ನು ನಾವು ಒಪ್ಪಿಕೊಳ್ಳಬೇಕು. ತಾವು, ಬೆಳಗಾವಿ-ಹುಬ್ಬಳ್ಳಿ ರೈಲ್ವೆ ಮಾರ್ಗದ ಬಗ್ಗೆ ಪ್ರಸ್ತಾಪಿಸಿದ್ದಿರಿ. ಇಂತಹ ಯೋಜನೆಗಳು ಕಾರ್ಯಗತವಾಗಬೇಕು ಎನ್ನುವ ದಿಸೆಯಲ್ಲಿ ನಾವೂ ಕೂಡ ನಿಮ್ಮ ಜೊತೆ ಇರುತ್ತೇವೆ. ಒಟ್ಟಿನಲ್ಲಿ ಕೇಂದ್ರ ಸರ್ಕಾರದಿಂದ ಬರುವಂತಹ ಸೌಲಭ್ಯಗಳೇನಿವೆ ಅವುಗಳನ್ನು ಕೊಡಿಸಲಿಕ್ಕೆ ನಾವು ಹಿಂದೇಟು ಹಾಕುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ, you compare a farmer with an industrialist. ಕೈಗಾರಿಕೋದ್ಯಮಿಗಳಿಗೆ 42 ಸಾವಿರ ಕೋಟಿಯಷ್ಟು ಮುಂದೂಡಿದ್ದೀರಿ. ಬರಗಾಲ ಎದುರಿಸುತ್ತಿರುವ ಸಂದರ್ಭದಲ್ಲಿ ರೈತರ

ಸಾಲವನ್ನು ಬಡ್ಡಿ ಸಮೇತ ಮನ್ನಾ ಮಾಡಿ, ಹೊಸ ಇತಿಹಾಸ ನಿರ್ಮಾಣ ಮಾಡುತ್ತಾರೆ ಎಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ, ಕಡಿಮೆ ಬಡ್ಡಿದರದಲ್ಲಿ ಕೊಡುತ್ತಿದ್ದ ಕೆಲವು ಸಾಲದ ಯೋಜನೆಗಳನ್ನೂ ಕೈಬಿಟ್ಟಿದ್ದಾರೆ, ಅದನ್ನು ಇನ್‌ಕ್ಲೂಡ್ ಮಾಡಿದ್ದರೆ it is well and good. ದಯವಿಟ್ಟು ರೈತರಿಗೆ ಅನುಕೂಲವಾಗುವ ದಿಸೆಯಲ್ಲಿ ತಾವು ಕ್ರಮ ಕೈಗೊಳ್ಳಿ ಎಂದು ಹೇಳಬಯಸುತ್ತೇನೆ.

**ಸಭಾಪತಿಯವರು:–** ಯಾರ್‍ಯಾರಿಗೆ ಬಜೆಟ್ ಮೇಲೆ ಭಾಷಣ ಮಾಡಲು ಅವಕಾಶ ಸಿಗಲಿಲ್ಲವೋ ಅಂಥವರಿಗೆ ಮೊದಲ ಕ್ಲ್ಯಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ. ಈಗ ಶ್ರೀಮತಿ ಭಾರತಿಶೆಟ್ಟಿಯವರು ಮಾತನಾಡಬೇಕು.

**ಶ್ರೀಮತಿ ಭಾರತಿಶೆಟ್ಟಿ:–** ಮಾನ್ಯ ಸಭಾಪತಿಗಳೆ, ನಮ್ಮ ರಾಜ್ಯದಲ್ಲಿ ಸಾಕಷ್ಟು ಜನ ಅವಿವಾಹಿತ ಮಹಿಳೆಯರಿದ್ದಾರೆ. ಅವರಿಗೆ ವಯಸ್ಸಾಗಿರುತ್ತದೆ, ನೋಡಿಕೊಳ್ಳುವುದಕ್ಕೆ ತಂದೆ–ತಾಯಿಗಳಿರುವುದಿಲ್ಲ. ಅವರು ವಿಧವೆಯರಲ್ಲ, ಸಂಧ್ಯಾಸುರಕ್ಷಾ ಯೋಜನೆ ಅವರಿಗೆ ಅನ್ವಯವಾಗುವುದಿಲ್ಲ. ಅಂತಹ 50 ವರ್ಷದ ಅವಿವಾಹಿತ ಮಹಿಳೆಯರಿಗೆ ಸನ್ಮಾನ್ಯ ಯಡಿಯೂರಪ್ಪನವರು 1 ಸಾವಿರ ರೂಪಾಯಿಗಳನ್ನು ಕೊಡಲು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದರು. ಆ ಒಂದು ಯೋಜನೆಯ ಫಲ ತಲುಪಿಲ್ಲ. ಈ ಬಾರಿಯಾದರೂ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್‌ನಲ್ಲಿ ಇದಕ್ಕೆ ಒತ್ತು ಕೊಟ್ಟು ಫಲಾನುಭವಿಗಳಗೆ ಸಿಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ದಯಾನಂದ:–** ಬಜೆಟ್ ಮೇಲೆ ಮಾತನಾಡಿದ ಕೆಲವು ಅಂಶಗಳಿಗೆ ಉತ್ತರ ಬಂದಿಲ್ಲ. ಪ್ರಸ್ತಾಪವಾಗಲಿಲ್ಲ ಎಂದರೆ ನಾವೇಕೆ ಮಾತನಾಡಬೇಕು . . . (ಗೊಂದಲ)

**ಶ್ರೀ ಪುಟ್ಟಣ್ಣ:–** ನನಗೂ ಕ್ಲ್ಯಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಮಾಡಿಕೊಡಿ . . .

**ಶ್ರೀ ದಯಾನಂದ:–** ನಾವೇನು ಮಾತನಾಡಿದ್ದೇವೆಯೋ ಆ ಕುರಿತು, ಇದನ್ನು ಮಾಡುವುದಕ್ಕೆ ಆಗುತ್ತದೆ, ಇದನ್ನು ಮಾಡುವುದಕ್ಕಾಗುವುದಿಲ್ಲ ಎಂದಾದರೂ ಹೇಳಬೇಕಲ್ಲವೇ?

**ಸಭಾಪತಿಯವರು:–** ನಾನು, ಬಜೆಟ್ ಮೇಲೆ ಯಾರು ಮಾತನಾಡಲಿಲ್ಲವೋ ಅವರಿಗೆ ಮೊದಲು ಅವಕಾಶ ಕೊಡುತ್ತೇನೆ ಎಂದು ಹೇಳಿದೆ. ಕ್ಲ್ಯಾರಿಫಿಕೇಷನ್ ಕೇಳುವುದಕ್ಕೆ ಬೇರೆಯವರಿಗೆ ಅವಕಾಶ ಕೊಡುವುದಿಲ್ಲ ಎಂದು ಹೇಳಲಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸದಸ್ಯರು, ನಾವು ಕೆಲವು ಸಲಹೆಗಳನ್ನು ಕೊಟ್ಟಿದ್ದೆವು ಅದನ್ನು ಮಾಡಿದ್ದಾರೋ ಇಲ್ಲವೋ, ಎಂದು ಕೇಳುವುದಕ್ಕೆ ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ.

**ಸಭಾಪತಿಯವರು:–** ನಾನು ಹೇಳಿದ್ದನ್ನು ನೀವು ಯಾರು ಕೇಳಿಸಿಕೊಳ್ಳಲಿಲ್ಲ. ಸಮಯದ ಅಭಾವದಿಂದ ಬಜೆಟ್ ಮೇಲೆ ಮಾತನಾಡಲು ಯಾರಿಗೆ ಅವಕಾಶ ಸಿಗಲಿಲ್ಲವೋ ಮೊದಲು ಅವರಿಗೆ ಕ್ಲ್ಯಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿದೆ ಎಷ್ಟೆ.

**ಕ್ಯಾ. ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಗಳೆ, ಈ ಬಜೆಟ್ಟನ್ನು ಸ್ವಾಗತ ಮಾಡುತ್ತಾ ಒಂದು ಮನವಿ ಮಾಡಬಯಸುತ್ತೇನೆ. ವಿಕಲಚೇತನರಿಗೆ, ವಿಧವೆಯರಿಗೆ ಪಿಂಚಣಿಯನ್ನು ಜಾಸ್ತಿ ಮಾಡಿದ್ದಾರೆ. ಅದಕ್ಕೆ ಅಭಿನಂದನೆಗಳು. ಆದರೆ ವಿಕಲಚೇತನರಿಗೆ ಸಂಬಂಧಪಟ್ಟಂತೆ ಆದಾಯ ಮಿತಿ ಇದೆ. ದಯವಿಟ್ಟು ಅದನ್ನು ತೆಗೆದು ಹಾಕಬೇಕು. ನಾವು ಬಜೆಟ್‌ನಲ್ಲಿ ಉಲ್ಲೇಖ ಮಾಡಬೇಕಾದರೆ ನಮ್ಮ ಒಟ್ಟು GSDP (Gross State Domestic Product) ಯಿಂದ ಕೃಷಿ ಕ್ಷೇತ್ರಕ್ಕೆ ಬರುವಂತಹ ಹಣ ಕೇವಲ ಶೇಕಡ 15.32. ಆದರೆ ಶೇಕಡ 58 ರಿಂದ 60 ಜನ ಕೃಷಿ ಮೇಲೆ ಅವಲಂಬಿತರಾಗಿದ್ದಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ ಪಾಸ್ ಆಗದವರು ಕೃಷಿ ಕ್ಷೇತ್ರಕ್ಕೆ ಹೋಗುತ್ತಾರೆ. ಅವರಿಗೆ ತರಬೇತಿ ಕೊಡುವುದಕ್ಕೆ, ಅವರನ್ನು ಕೃಷಿ ಕ್ಷೇತ್ರದಲ್ಲಿ ತೊಡಗಿಸಿ ಆಧುನಿಕ ರೀತಿ ಉತ್ಪಾದನೆ ಕಾರ್ಯಗಳನ್ನು ಮಾಡುವುದಕ್ಕೆ ಸಂಬಂಧಿಸಿದಂತೆ

ಯಾವುದಾದರೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಗಳೆ, ಬಿಎಂಪಿ ಇದ್ದ ಸಂದರ್ಭದಲ್ಲಿ ಸುಮಾರು 108 ಹಳ್ಳಿಗಳಿಗೆ ಸಂಬಂಧಪಟ್ಟಂತೆ, 195 ಪ್ರಾಥಮಿಕ ಶಾಲೆಗಳು, 135 ಪ್ರೌಢ ಶಾಲೆಗಳು ಮತ್ತು ಪಿಯು ಕಾಲೇಜುಗಳಲ್ಲಿ ಕೆಲಸ ಮಾಡುತ್ತಿದ್ದವರಿಗೆ ಹೆಚ್ಆರ್ಎ ಕೊಡುತ್ತಿದ್ದರು. ಆದರೆ ಈಗ ಬಿಬಿಎಂಪಿ ಆದಮೇಲೆ ಅದನ್ನು ನಿಲ್ಲಿಸಿದ್ದಾರೆ. ನಾನು ಸುಮಾರು 10–15 ಸಲ ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳನ್ನು ಭೇಟಿ ಮಾಡಿದ್ದೇನೆ. ಇದುವರೆಗೂ ಏನೂ ಆಗಲಿಲ್ಲ. ಈ ತಿಂಗಳಿಂದ ಪೂರ್ತಿಯಾಗಿ ನಿಲ್ಲಿಸಬೇಕು ಎಂದು ಹೊರಟ್ಟಿದ್ದಾರೆ. ಆದರೆ ಈಗೇನು ಕೊಡುತ್ತಿದ್ದಾರೋ ಅದನ್ನೇ ದಯವಿಟ್ಟು ಮುಂದುವರೆಸಿ ಎಂದು ಕೇಳಿದ್ದೇವೆ. ಮತ್ತೆ, ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿಟ್ಟಿದ್ದಾರೆ. ಇದನ್ನು ಬಿಬಿಎಂಪಿ ವ್ಯಾಪ್ತಿಗೆ ತಂದರೆ ಸಾವಿರಾರು ರೂಪಾಯಿಗಳ ತೆರಿಗೆ ಬರುತ್ತದೆ. ಬೆಂಗಳೂರು ನಗರ ಜಿಲ್ಲೆಗೆ ಹೆಚ್ಆರ್ಎಯನ್ನು ಎಕ್ಸ್ಟೆಂಡ್ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಪದವಿ ಕಾಲೇಜುಗಳಿಗೆ ಸಂಬಂಧಿಸಿದಂತೆ ಯುಜಿಸಿ ವೇತನ 800 ಕೋಟಿ ರೂಪಾಯಿಗಳ ಬಾಕಿ ಇದೆ. ದಯಮಾಡಿ ಇದನ್ನೂ ಕೊಡಿ.

**ಶ್ರೀ ದಯಾನಂದ:–** ಮಾನ್ಯ ಸಭಾಪತಿಗಳೆ, ನನ್ನ ಬಜೆಟ್ ಮೇಲಿನ ಪ್ರಸ್ತಾವನೆಯಲ್ಲಿ, ಬರಗಾಲ ಪರಿಸ್ಥಿತಿಯಲ್ಲಿ ನಿರ್ವಹಣೆ ಮಾಡುವುದಕ್ಕಾಗಿ ಶೇಕಡ 14ರಷ್ಟು ಇದ್ದ VAT ಅನ್ನು ಶೇಕಡ 14.50ರಷ್ಟು ಮಾಡಿದಿರಿ, ಅದನ್ನು ಬರುವ ಏಪ್ರಿಲ್ 1ರಿಂದ ಹಿಂಪಡೆಯಬೇಕೆಂದು ಮನವಿ ಮಾಡಿದ್ದೆ.

(6 ಘಂಟೆ)

ಸಾಕಷ್ಟು ಬೃಹತ್ ಕೈಗಾರಿಕೆಗಳಿಗೆ ಈಗಾಗಲೇ ನಾನು ಪ್ರಸ್ತಾಪ ಮಾಡಿದ್ದೇನೆ. ಅದಕ್ಕೆ ವಿನಾಯಿತಿಯನ್ನು ಕೊಟ್ಟಿದ್ದಿರಿ. ಇವತ್ತು 5 ಪರ್ಸೆಂಟ್ನ್ನು ಕಡಿಮೆ ಮಾಡುವುದರಿಂದ ಬಹು ದೊಡ್ಡ ಹೊರೆ ಏನು ಆಗುವುದಿಲ್ಲ. ಇವತ್ತು

ಮೂವತ್ತೆರಡು ಸಾವಿರ ಕೋಟಿ ರೂಪಾಯಿಗಳಿಂದ ಮೂವತ್ತೇಳು ಸಾವಿರ ಕೋಟಿ ರೂಪಾಯಿಗಳಿಗೆ ಕೇಳಿದ್ದೀರಿ. ಇವತ್ತು ನಮ್ಮ ರಾಜ್ಯದ ಆದಾಯದಲ್ಲಿ ಶೇಕಡ 61 ಪರ್ಸೆಂಟ್ ವಾಣಿಜ್ಯೋದ್ಯಮಿಗಳು ವ್ಯಾಟ್ ಮೂಲಕ ತೆರಿಗೆಯನ್ನು ಕೊಡುತ್ತಿವೆ. ಮೋಟಾರ್ ವೆಹಿಕಲ್ ಟ್ಯಾಕ್ಸ್, ಸ್ಟ್ಯಾಂಪ್ ಡ್ಯೂಟಿ, ಎಲ್ಲವನ್ನು ವಾಣಿಜ್ಯೋದ್ಯಮಿಗಳಿಂದಲೇ ಹೆಚ್ಚು ಟ್ಯಾಕ್ಸ್ ಬರುವುದು. ಇದನ್ನು ತಾವು ದಯವಿಟ್ಟು ಕೈಗಾರಿಕೆಗಳ ಹಿತದೃಷ್ಟಿಯಿಂದ ತಕ್ಷಣ ಹಿಂಪಡೆಯಬೇಕು ಮತ್ತು ಡೀಸೆಲ್ ಮೇಲೆ ಏನು ಇವತ್ತು ಎಂಟ್ರಿ ಟ್ಯಾಕ್ಸ್ 5 ಪರ್ಸೆಂಟ್ ಹಾಕಿದ್ದಿರಿ, ಇದು ಕೂಡ ಸಣ್ಣ ಕೈಗಾರಿಕೆಗಳ ಮೇಲೆ ಹೆಚ್ಚಿನ ದುಷ್ಪರಿಣಾಮ ಬೀರುತ್ತದೆ. ಇವತ್ತು ಪಕ್ಕದ ರಾಜ್ಯದಲ್ಲಿ ಎಂಟ್ರಿ ಟ್ಯಾಕ್ಸ್ ಡೀಸೆಲ್ ಮೇಲೆ ಇಲ್ಲದಿರುವುದರಿಂದ ಆ ಎಂಟ್ರಿ ಟ್ಯಾಕ್ಸ್‌ನ್ನು ಕೂಡ ಹಿಂಪಡೆಯಬೇಕು. ಇಂಡಸ್ಟ್ರಿಯಲ್ ಸಬ್ಸಿಡಿ 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ ಅದಕ್ಕೆ ನಾನು ಸ್ವಾಗತವನ್ನು ಕೋರುತ್ತೇನೆ. ಇವತ್ತೇನು ಮೂವತ್ತೆರಡು ಸಾವಿರ ಕೋಟಿ ರೂಪಾಯಿಗಳಿಂದ ಮೂವತ್ತೇಳು ಸಾವಿರ ಕೋಟಿ ರೂಪಾಯಿಗಳವರೆಗೆ ವ್ಯಾಟ್‌ನ್ನು ಹೆಚ್ಚಿಸಿದ್ದೀರಿ ಐದು ಸಾವಿರ ಕೋಟಿ ರೂಪಾಯಿಗಳನ್ನು ಹೆಚ್ಚಸಿ 100 ಕೋಟಿ ರೂಪಾಯಿಗಳ ಸಬ್ಸಿಡಿ ಕೊಡುವುದರಿಂದ ಅದೇನು ಸಾಕಾಗುವುದಿಲ್ಲ. ಬಜೆಟ್‌ನಲ್ಲಿ ಎರಡು ಪರ್ಸೆಂಟ್ ಮಾತ್ರ ಇಂಡಸ್ಟ್ರೀಸ್‌ಗೆ ರಿವರ್ಸ್ ಮಾಡಿದ್ದೀರಿ. 729 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ಇವತ್ತು ಹೊಸ ಹೊಸ ಕೈಗಾರಿಕೆಗಳನ್ನು ತರುತ್ತಿದ್ದೀರಿ. ಅದಕ್ಕೆ ಕನಿಷ್ಟ ಪಕ್ಷ ಇವತ್ತು ವಾಣಿಜ್ಯೋದ್ಯಮಿಗಳಿಂದ 61 ಪರ್ಸೆಂಟ್ ತೆರಿಗೆ ಬರುತ್ತಿರುವುದರಿಂದ 10 ಪರ್ಸೆಂಟ್ ಕನಿಷ್ಟ ಪಕ್ಷ ಅದಕ್ಕೆ ಇಂಡಸ್ಟ್ರಿಯಲ್ ಬಜೆಟ್ ಮಾಡಬೇಕು. ಸಬ್ಸಿಡಿ ಮತ್ತು ಇತರೆ ಸೌಲಭ್ಯಗಳನ್ನು ಹೆಚ್ಚು ಮಾಡಬೇಕು. ಇವತ್ತೇನು ಟ್ರೇಡ್ ಲೈಸೆನ್ಸ್‌ನ್ನು ತೆಗೆದುಕೊಳ್ಳುವುದಕ್ಕೆ ಐದು ವರ್ಷಗಳಿಗೊಮ್ಮೆ ಮಾಡಿದ್ದೀರಿ ಅದಕ್ಕೆ ನಾನು ಸ್ವಾಗತನ್ನು ಕೋರುತ್ತೇನೆ. ಆದರೆ, ಆ ಟ್ರೇಡ್ ಲೈಸನ್ಸ್ ಬೇಕಾಗಿಲ್ಲ. ಏಕೆಂದರೆ, ಇತರೆ ಎಲ್ಲಾ ಲೈಸೆನ್ಸ್‌ಗಳ ಜೊತೆಗೆ ಟ್ರೇಡ್ ಲೈಸೆನ್ಸ್‌ನಿಂದ ಇವತ್ತು ಯಾವುದೇ ಲಾಭವಾಗಲಿ, ಮತ್ತೊಂದು ಆಗಲಿ ಬರುವುದಿಲ್ಲ. ಕೈಗಾರಿಕೋದ್ಯಮಿಗಳಿಗೆ ಅದೊಂದು, ಕಿರುಕುಳ ಅಷ್ಟೆ. ಆದ್ದರಿಂದ ಆ ಟ್ರೇಡ್

ಲೈಸೆನ್ಸ್ ಕೂಡ ಹಿಂಪಡೆಯಬೇಕೆಂದು ನಾನು ಕೈಗಾರಿಕೋದ್ಯಮಿಗಳ ಪರವಾಗಿ ಮನವಿ ಮಾಡುತ್ತೇನೆ.

ಇವತ್ತು ಆನೇಕಲ್ ಏತ ನೀರಾವರಿ ಯೋಜನೆಗೆ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ. ಮಾದಪ್ಪನಳ್ಳಿ ಏತ ನೀರಾವರಿಗೆ ಸನ್ಮಾನ್ಯ ಗೋವಿಂದ ಕಾರಜೋಳ್‌ರವರು ನಮ್ಮ ತಾಲ್ಲೂಕಿಗೆ ಬಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಜೊತೆಗೆ ಕಳೆದ ಬಜೆಟ್‌ನಲ್ಲಿ ನನಗೆ ಬರವಣಿಗೆಯಲ್ಲಿ ಕೊಟ್ಟಿದ್ದಾರೆ, ಕಳೆದ ಮಾರ್ಚ್ 31 ರೊಳಗೆ ನಾನು ಪೂರ್ತಿ ಮಾಡುತ್ತೇನೆ ಹೇಳಿದರು. ಆದರೆ, ಅವರು ಆಶ್ವಾಸನೆ ಕೊಟ್ಟು ಒಂದು ವರ್ಷ ಆಗಿದ್ದರೂ ಕೂಡ ಪೂರ್ತಿಯಾಗಿಲ್ಲ. ಅದಕ್ಕೆ ಬೇಕಾಗಿರುವುದು ಕೇವಲ 20 ರಿಂದ 30 ಲಕ್ಷ ರೂಪಾಯಿಗಳು. ಆದ್ದರಿಂದ ಆ ಹಣವನ್ನು ತಕ್ಷಣ ಕೊಟ್ಟು ಕಾಮಗಾರಿಯನ್ನು ಮಾಡಬೇಕೆಂದು ನಾನು ಕೋರುತ್ತೇನೆ. ಮಾನ್ಯ ಮಧುಸೂದನ್‌ರವರು ತಮಗೆ ಕಡತಗಳನ್ನು ಒಪ್ಪಿಸಿದ್ದಾರೆ ಅದರ ಬಗ್ಗೆ ಸೂಕ್ತವಾದ ತನಿಖೆಗೆ ಆದೇಶವನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಮಾಡಬೇಕೆಂದು ಕೋರುತ್ತೇನೆ.

**ಶ್ರೀ ಕೆ.ಬಿ. ಶಾಣಪ್ಪ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುವುದೇನೆಂದರೆ, ಈಗ ಸರ್ಕಾರಿ ಹಾಸ್ಟೇಲ್‌ನಲ್ಲಿರುವಂತಹ ಪ್ರತಿ ವಿದ್ಯಾರ್ಥಿಗಳಿಗೆ ಸುಮಾರು ಎರಡು ವರ್ಷಗಳಿಂದ 700 ರೂಪಾಯಿ ಇದ್ದದ್ದು ಈ 1,000 ರೂಪಾಯಿ ಕೊಡುತ್ತಿದ್ದಾರೆ. ಖಾಸಗಿ ಶಾಲೆಯವರು ಡೆಲಿಗೇಷನ್ ಬಂದಿದ್ದರು. ಅವರು ಹೇಳಿದರು ನಮ್ಮ ಮಕ್ಕಳು ಹಾಸ್ಟೆಲ್‌ನಲ್ಲಿದ್ದಾರೆ, ನಾವು ಕೂಡ ಅನುದಾನ ಪಡೆಯುವಂತಹ ಸ್ಕೂಲ್‌ನವರು, ನಮ್ಮ ಮಕ್ಕಳು ಎಲ್ಲಾ ಹಾಸ್ಟೆಲ್‌ನಲ್ಲಿ ಓದುತ್ತಿದ್ದಾರೆ. ಆ ಮಕ್ಕಳಿಗೂ, ಈ ಮಕ್ಕಳಿಗೂ ತಾರತಮ್ಯ ಮಾಡಿದರೆ ಸರಿಯಾಗುವುದಿಲ್ಲ. ನಾವು ಪ್ರೋಟಿನ್ ಯುಕ್ತ ಆಹಾರವನ್ನು ಕೊಡುವುದಕ್ಕಾಗುವುದಿಲ್ಲ. ಅಲ್ಲಿ ಎಣ್ಣೆ, ಸೋಪ್, ಊಟವನ್ನು ಕೊಡುತ್ತಾರೆ. ಈ ಮಕ್ಕಳನ್ನು ಅವರಿಗೆ ಹೋಲಿಸಿದಾಗ they feel very sorry for it. ಅದಕ್ಕಾಗಿ on par with them ಇವರಿಗೂ ಕೂಡ 1000 ರೂಪಾಯಿ ಕೊಡಬೇಕೆಂದು

ಅವರು ಮನವಿ ಮಾಡುತ್ತಿದ್ದಾರೆ. 500 ರೂಪಾಯಿ ಇರುವುದು 700 ರೂಪಾಯಿ ಆಗಿರುವುದನ್ನು ಇವರಿಗೆ ಮಾಡಲ್ಲಿಲ್ಲ. ಈಗ 1,000 ರೂಪಾಯಿ ಮಾಡಿದ್ದಾರೆ. ಆ 1,000 ರೂಪಾಯಿಯನ್ನು ಖಾಸಗಿ ಶಾಲೆಯಲ್ಲಿ ಓದುವಂತಹ ಹಾಸ್ಟೆಲ್ ಮಕ್ಕಳಿಗೂ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀಮತಿ ಮೋಟಮ್ಮ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ತಾಲ್ಲೂಕುಗಳನ್ನು ಮಾಡಿದ್ದಾರೆ. ಅದರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಳಸಾ, ಕುದುರೆಮುಖ, ಚಿಕ್ಕಮಗಳೂರಿನಿಂದ 100 ಕಿಲೋಮೀಟರ್ ದೂರದಲ್ಲಿದೆ. ಮತ್ತು ಮೂಡಿಗೆರೆಯಿಂದ 70 ಕಿಲೋಮೀಟರ್ ದೂರದಲ್ಲಿದೆ. ಅದರ ಬಗ್ಗೆ ನಾವು ಹಿಂದೆ ಕೂಡ ಬೇಡಿಕೆಯನ್ನಿಟ್ಟಿದ್ದೆವು. ಈಗ ಬಜೆಟ್ ಮಾಡಬೇಕಾದರೆ ಅದು ಏಕೆ ಕೈಬಿಟ್ಟಿ ಹೋಗಿದೆಯೋ ಗೊತ್ತಿಲ್ಲ. ಚಿತ್ರದುರ್ಗ ಜಿಲ್ಲೆಯ ಬರ್ಮಸಾಗರ, ಎಂ.ಪಿ. ಪ್ರಕಾಶ್‌ರವರ ವರದಿಯಲ್ಲಿ ಇದು ಶಿಫಾರಸ್ಸು ಆಗಿದೆ. ಅದೂ ಕೂಡ ಚಿತ್ರದುರ್ಗ ಜಿಲ್ಲೆಯಿಂದ ಬಹಳ ದೂರವಿದೆ. ದಯವಿಟ್ಟು ಇವೆರಡನ್ನು ಮಾನ್ಯ ಮುಖ್ಯಮಂತ್ರಿಗಳಿ ಕನ್ಸಿಡರ್ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ರಸ್ತೆ ಬಗ್ಗೆ ಮಾತನಾಡಿದ್ದಾರೆ. 'ನಮ್ಮ ಗ್ರಾಮ ನಮ್ಮ ರಸ್ತೆ' ಯೋಜನೆಯಡಿಯಲ್ಲಿ ಇದನ್ನು ಮಾಡಿ. ಆದರೆ, ಮಲೆನಾಡು ತಾಲ್ಲೂಕಿನ ರಸ್ತೆಗಳನ್ನು ಸರ್ವಋತುಗಳ ರಸ್ತೆಯನ್ನಾಗಿ ಮಾಡಬೇಕಾಗುತ್ತದೆ. ಎಷ್ಟು ಸಲ ನೀವು ಚಾರ್ಮಾಡಿ ಘಾಟ್ ರಸ್ತೆ ನೋಡಿರಬಹುದು, ಶಿರಾಡಿಘಾಟ್ ರಸ್ತೆ ನೋಡಿರಬಹುದು, ಈ ಸಲ ಮಳೆ ಬಂದರೆ ಮುಂದಿನ ಸಲ ಕೊಚ್ಚಿಕೊಂಡು ಹೋಗಿರುತ್ತದೆ ಮತ್ತು ರಸ್ತೆ ಬ್ಲಾಕ್ ಆಗುತ್ತದೆ. ಆದ್ದರಿಂದ ಅವುಗಳಿಗೆ ಸಿಮೆಂಟ್ ರಸ್ತೆಯನ್ನು ಮಾಡಬೇಕಾಗುತ್ತದೆ. ಮಲೆನಾಡಿನ ಹೆಚ್ಚಿನ ಪ್ರದೇಶಗಳಲ್ಲಿ ನೀವು ಸಿಮೆಂಟ್ ರಸ್ತೆಯನ್ನು ಮಾಡಿದರೆ ವರ್ಷ ವರ್ಷ ನೀವೇನೂ ಖರ್ಚು ಮಾಡಬೇಕಾಗುತ್ತದೆ ಅದನ್ನು ನೀವು ಕಡಿಮೆ ಮಾಡಿಕೊಂಡ ಹಾಗೆ ಆಗುತ್ತದೆ. ದಯವಿಟ್ಟು ಮಲೆನಾಡು ಪ್ರದೇಶಗಳಾದ ಶಿವಮೊಗ್ಗ, ಚಿಕ್ಕಮಗಳೂರು, ಮಂಗಳೂರು, ಉಡುಪಿ, ಕೊಡಗು, ಇಷ್ಟು

ಪ್ರದೇಶಗಳಲ್ಲಿ ಸರ್ವಋತು ರಸ್ತೆಗಳನ್ನು ಮಾಡಬೇಕು. ಅದು ಸ್ಟೇಟ್ ಹೈವೇ ಇರಬಹುದು, ನಮ್ಮ ಊರು ನಮ್ಮ ರಸ್ತೆ ಇರಬಹುದು, ಯಾವುದರಲ್ಲಾದರೂ ಮಾಡಿ.

ಎಸ್‌ಸಿ, ಎಸ್‌ಟಿ ಕಾರ್ಪೊರೇಷನ್ ಲೋನ್‌ಗೆ ಬಡ್ಡಿ ಕಟ್ಟಿದರೆ one time settlement ಮಾಡುತ್ತೇವೆಂದು ಹೇಳಿದ್ದೀರಿ. ಅದರ ಬದಲಾಗಿ ನಾವು ಹಿಂದಿನಿಂದಲೂ ಮನವಿಯನ್ನು ಮಾಡಿಕೊಳ್ಳುತ್ತಿದ್ದೇವೆ. ಕಾರ್ಪೊರೇಷನ್ ಸಾಲ ಎಷ್ಟು ಜನ ತೆಗೆದುಕೊಂಡಿದ್ದಾರೆ, ಎಷ್ಟು ಸಾಲ ಇದೆ? ಈ ರೈತರಿಗೆ ಸಾಲ ಮನ್ನಾ ಮಾಡಿದ್ದಾರೆ, ಎಸ್‌ಸಿ, ಎಸ್‌ಟಿ, ಜನರೆಲ್ಲಾ ಹೆಚ್ಚಾಗಿ ಕೃಷಿ ಕಾರ್ಮಿಕರು. ಅವರ ಮಕ್ಕಳ ಓದುವಿಗೆ ಮತ್ತು ಸ್ವಂತ ಉದ್ಯೋಗಕ್ಕಾಗಿ ತೆಗೆದುಕೊಂಡಿರುವ ಸಾಲ. ಬಡ್ಡಿ ಮನ್ನಾಕ್ಕಿಂತ ಸಾಲ ಮನ್ನಾ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಮತ್ತೊಂದು ಪ್ರಮುಖವಾದ ವಿಚಾರವೇನೆಂದರೆ, ಶಾಲಾ ಮಕ್ಕಳಿಗೆ ಸ್ಯಾನಿಟರಿ ಪ್ಯಾಡ್ಸ್‌ನ್ನು ಹಂಚುವುದಕ್ಕೆ ಸ್ಕೀಮ್ ಮಾಡಿದ್ದೇವೆಂದು ಹೇಳಿದ್ದಾರೆ. ಈಗ ಬಜೆಟ್ ಪುಸ್ತಕದಲ್ಲಿ ಎಲ್ಲಿ ಬಂದಿದೆ ಎಂದು ಎಲ್ಲರೂ ಹುಡುಕಾಡುತ್ತಿದ್ದರು. ದಯವಿಟ್ಟು ಅಂತಹ ಘೋಷಣೆ ಎಲ್ಲ ಮಾಡಬೇಡಿ. ಇನ್ನು ನಾಳೆ under garments ಎಲ್ಲಾ ಕೊಡಬೇಕಾಗುತ್ತದೆ. ಕೊಡುತ್ತೇವೆಂದು ಹೇಳಿದ ಹಾಗೆ ಆಗುತ್ತದೆ. ದಯವಿಟ್ಟು ಅಂಥದ್ದೆಲ್ಲಾ ಮಾಡಬೇಡಿ. ಸ್ಯಾನಿಟರಿ ಪ್ಯಾಡ್ಸ್ ಎಲ್ಲಾ ಶಾಲೆಗಳಲ್ಲಿ ಹಂಚುವುದಕ್ಕೆ ಹೋದರೆ ಮತ್ತೊಂದು ರೀತಿಯಲ್ಲಿ ಹೆಣ್ಣುಮಕ್ಕಳು exploit ಆಗುತ್ತಾರೆ. ದಯವಿಟ್ಟು ಆ ರೀತಿಯೆಲ್ಲಾ ಮಾಡಬೇಡಿ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದು populist scheme ಅಲ್ಲವೇ ಅಲ್ಲ.

ಮಾನ್ಯ ಶಾಣಪ್ಪನವರು ಏನು ಹೇಳಿದರು, ಅನುದಾನವನ್ನು ಪಡೆಯುತ್ತಿರುವ ಹಾಸ್ಟಲ್ ಇರಬಹುದು, ಸರ್ಕಾರಿ ಹಾಸ್ಟಲ್ ಇರಬಹುದು, ಮಕ್ಕಳು ಊಟ ಮಾಡುವುದು ಒಂದೇ. ಆದ್ದರಿಂದ, ಇಬ್ಬರಿಗೂ ಒಂದೇ ರೀತಿಯ ಗ್ರಾಂಟ್ಸ್ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆದಿದ್ದೆ. ಲಾಲ್ ಬಹದ್ದೂರ್ ಶಾಸ್ತ್ರಿಯವರ ಪ್ರತಿಮೆಯನ್ನು ಯಾವಾಗ ಅನಾವರಣ ಮಾಡುತ್ತೀರಿ ಎಂದು ಕೇಳಿದ್ದೆ. ಮತ್ತೊಂದು ವಿಚಾರ, ಎಲ್ಲಾ ಸಮುದಾಯಗಳ ಬಗ್ಗೆಯೂ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನಮ್ಮ ಗಾಣಿಗ ಸಮುದಾಯದವರಿಗೆ ಐದು ಕೋಟಿ ರೂಪಾಯಿ ಕೊಟ್ಟಿರುವುದನ್ನು ಎರಡು ಕೋಟಿ ರೂಪಾಯಿಗಳಿಗೆ ಇಳಿಸಿದರು. ಆ ಎರಡು ಕೋಟಿ ರೂಪಾಯಿಗಳನ್ನು ಡ್ರಾ ಮಾಡುವುದಕ್ಕೆ ಅವರ ಅಧಿಕಾರಿ ಕಡತವನ್ನು ಮೂರು ತಿಂಗಳಿನಿಂದ ಇಟ್ಟುಕೊಂಡಿದ್ದಾರೆ. ಶಾಸಕರಾಗಿ ನಾವು ಇನ್ನೇನು ಕೇಳಬೇಕು? ಆ ದಿವಸ ಮುಖ್ಯಮಂತ್ರಿಗಳು ಆದೇಶ ಮಾಡಿದರೂ ಕೂಡ ಕೊಡುತ್ತೇವೆ, ಹುಡುಕುತ್ತೇವೆ ಎಂದು ಹೇಳುತ್ತಾರೆ. ಹಾಗಾದರೆ ಮುಖ್ಯಮಂತ್ರಿಗಳ ಕಚೇರಿಯಲ್ಲಿ ಹುಡುಕುವುದಕ್ಕೆ ಇನ್ನೂ ಎಷ್ಟು ಸಾವಿರ ಕಡತಗಳಿವೆ? ನಮ್ಮ ಕಡತವನ್ನು ಹುಡುಕಿ ಅದಕ್ಕೇನಾದರೂ ಪರಿಹಾರ ಕೊಡುತ್ತಾರೆಯೋ ಇಲ್ಲವೋ ಎಂದು ನಾನು ಮುಖ್ಯಮಂತ್ರಿಗಳನ್ನು ಕೇಳಿದ್ದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಏನು ಉತ್ತರವನ್ನು ಹೇಳಲಿಲ್ಲ. ದಯಮಾಡಿ ಅದರ ಬಗ್ಗೆ ಮಾನ್ಯಮಂತ್ರಿಗಳು ಉತ್ತರ ಹೇಳಬೇಕು.

**ಶ್ರೀ ಘೊಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಉಳವಿ ಚನ್ನಬಸವೇಶ್ವರ ದೇವಸ್ಥಾನಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿರುವುದಕ್ಕೆ ಧನ್ಯವಾದಗಳು. ಅದೇ ಪ್ರಕಾರ ದಾಂಡೇಲಿಯನ್ನು ತಾಲ್ಲೂಕು ಆಗಿ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಈ ಬಜೆಟ್‌ನಲ್ಲಿ ನಮ್ಮ ಉತ್ತರ ಕನ್ನಡ ಜಿಲ್ಲೆಗೆ ಯಾವುದೇ ತರಹ ಹೆಚ್ಚಿನ ಪ್ರವಾಸೋದ್ಯಮಕ್ಕಾಗಲಿ ಅಥವಾ ಅಭಿವೃದ್ಧಿಗಾಗಲಿ ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ಮೀಸಲಿಡಲಿಲ್ಲ. ಆದ್ದರಿಂದ ಹಿಂದೆ ಮಾನ್ಯ ಯಡಿಯೂರಪ್ಪನವರು ಹಾಗೂ ಸದಾನಂದಗೌಡರು, ಇವರಿಬ್ಬರು 100 ಕೋಟಿ ಪ್ಯಾಕೇಜ್ ಕೊಡುತ್ತೇನೆಂದು ಹೇಳಿದರು. ಆ ಪ್ರಕಾರ ನಮ್ಮ ಜಿಲ್ಲಾ ಪಂಚಾಯಿತಿಯವರು ಆರೂವರೆ ಲಕ್ಷ

ರೂಪಾಯಿಗಳನ್ನು ಖರ್ಚು ಮಾಡಿ ಕ್ರಿಯಾ ಯೋಜನೆ ಹಾಕಿದ್ದಾರೆ. ಆದ್ದರಿಂದ 100 ಕೋಟಿ ರೂಪಾಯಿಗಳ ಪ್ಯಾಕೇಜ್ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಹಳ ಪ್ರಮುಖವಾದ ವಿಚಾರವೇನೆಂದರೆ, ಕೃಷಿ ವ್ಯವಸಾಯ ಮಾಡುವಂತಹ ಜನಕ್ಕೆ ಸರ್ಕಾರಿ ನಾಲ್ಕನೇ ದರ್ಜೆಯಲ್ಲಿ ಕೆಲಸ ಮಾಡುವವರಿಗೆ ಬರುವಂತಹ ಸಂಬಳದಲ್ಲಿ ಕಾಲು ಭಾಗದಷ್ಟಾದರೂ ಆದಾಯ ಬರುವಂತಹ ಪರಿಸ್ಥಿತಿ ಬಂದರೆ ಈ ರಾಜ್ಯದಲ್ಲಿ ರೈತರ ಸಾಲ ಮನ್ನಾ ಮಾಡುವುದು ಬೇಕಾಗಿಲ್ಲ. ರೈತರನ್ನು ರಕ್ಷಣೆ ಮಾಡಬಹುದು. ಆ ರೀತಿ ಆಗಬೇಕಾದರೆ ಪ್ರತಿ ರೈತರನ ಕುಟುಂಬದಲ್ಲಿ 18 ವರ್ಷ ಮೇಲ್ಪಟ್ಟಂಥವರಿಗೆ ಇಡೀ ರಾಜ್ಯದಲ್ಲಿ ಸರ್ಕಾರ ಮಾಡಬೇಕು. ಒಬ್ಬ ನಾಲ್ಕನೇ ದರ್ಜೆಯ ಸರ್ಕಾರಿ ನೌಕರನಿಗೆ ಹತ್ತು ಸಾವಿರ ರೂಪಾಯಿ ಸಂಬಳ ಬಂದರೆ ಕನಿಷ್ಟ ಎರಡೂವರೆ ಸಾವಿರ ರೂಪಾಯಿ ಬರುವ ಹಾಗೆ ಆದರೆ ಅವನು ನಮ್ಮ ಜೊತೆಯಲ್ಲಿ ಬದುಕಬಲ್ಲ. ಆ ರೀತಿ ಆಗಬೇಕಾದರೆ ರೈತ ಬೆಳೆದಂತಹ ಬೆಳೆಗೆ ಬೆಲೆ ನಿಶ್ಚಯವಾಗಬೇಕು. ಅದಕ್ಕೆ ಬೆಲೆ ನಿಶ್ಚಯ ಮಾಡಿ ಸರ್ಕಾರ ಸಂಪೂರ್ಣವಾಗಿ ಅದನ್ನು ಕೊಂಡುಕೊಳ್ಳಬೇಕು. ನೀವು ಅಕ್ಕಿ ಬೆಲೆಯನ್ನು ನೂರು ರೂಪಾಯಿ ಮಾಡಿ. ಆದರೆ, ರೈತ ಬದುಕುಬೇಕಾದರೆ ಅವನು ಬೆಳೆದಿರುವುದನ್ನು ಸಂಪೂರ್ಣವಾಗಿ ಸರ್ಕಾರ ತೆಗೆದುಕೊಳ್ಳಬೇಕು. ಆ ಬೆಳೆಯನ್ನು ತೆಗೆದುಕೊಂಡು ಹಂಚಿಕೆ ಮಾಡಬೇಕು. ಹಾಗಾದರೆ ಮಾತ್ರ ರೈತ ಬದುಕಬಲ್ಲ. ಇಲ್ಲದಿದ್ದರೆ ರೈತನಿಗೆ ಸಬ್ಸಿಡಿ ಕೊಡುತ್ತೇವೆ, ಸಾಲ ಮನ್ನಾ ಮಾಡುತ್ತೇವೆ, ಬಡ್ಡಿ ಮನ್ನಾ ಮಾಡುತ್ತೇವೆ ಎಂದರೆ ಸಮಸ್ಯೆ ಬಗೆಹರಿಯುವುದಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಚಿಂತನೆ ಮಾಡಿದರೆ ಈಗ ಅಲ್ಲದಿದ್ದರು ಮುಂದಿನ ಬಜೆಟ್ ಮಂಡಿಸುವಂತಹ ಕಾಲಕ್ಕೆ ಮುಂದೆ ಬರತಕ್ಕಂಥ ಸರ್ಕಾರಗಳು ಅದರ ಬಗ್ಗೆ ಚಿಂತನೆ ಮಾಡಬಹುದು ಎಂದು ಈ ವಿಚಾರವನ್ನು ತಮ್ಮ ಮುಂದೆ ಇಡುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ರೆಕಾರ್ಡ್‌ಗೆ ತಪ್ಪು ಮಾಹಿತಿ ಹೋಗಬಾರದು.

**ಸಭಾಪತಿಯವರು:-** ಅಂಕಿಗಳು ಮಿಸ್ಟೇಕ್ ಆಗಿರುವುದರ ಬಗ್ಗೆ ಹೇಳಿ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ವಿನಾಯಿತಿ ಮಾಡಿದ್ದು, 28,615 ಕೋಟಿ ರೂಪಾಯಿಗಳು. This is totally exempted, which is free from all liabilities. ಇದು ಮನ್ನಾ ಮಾಡಿದ್ದು. ಅಮೇಲೆ ಮುಂದೂಡಿದ್ದು, 29,792 ಕೋಟಿ ರೂಪಾಯಿಗಳು. ಮುಂದೂಡಿದ್ದರಲ್ಲಿ CST ಇರಬಹುದು, VAT ಇರಬಹುದು, KTEG (Karnataka Tax on Entry of Goods) ಇರಬಹುದು. ಆದರೆ, exemption ಮಾಡಿದ್ದು 28,615 ಕೋಟಿ ರೂಪಾಯಿಗಳು, ಮುಂದೂಡಿದ್ದು 29,792 ಕೋಟಿ ರೂಪಾಯಿಗಳು ಸೇರಿದಂತೆ ಒಟ್ಟು 57,407 ಕೋಟಿ ರೂಪಾಯಿಗಳು ನಮ್ಮ industrialist ಗೆ ಕೊಟ್ಟಿದ್ದಾರೆ. ನಮ್ಮ ರೈತರದ್ದನ್ನು ನೋಡಿದರೆ . . . .

**ಶ್ರೀ ಎಂ.ವಿ. ರಾಜಶೇಖರನ್ (ವಿಧಾನಸಭಾಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಈ ಹೊಸ ತಾಲ್ಲೂಕುಗಳ ರಚನೆ ಏನಾಗಿದೆ, ಅದರ ವಿಚಾರದಲ್ಲಿ ಒಂದು ಮಾತನ್ನು ಹೇಳಿದರು: "We are taking the administration closer to the people."

But, I would like to know what is the action which is going tobe taken to decentralise the power. ಇದು ಆಗದ ಹೊರತು, ಬರಿ office ಅನ್ನು ಅಲ್ಲಿ open ಮಾಡಿದರೆ ಏನೂ ಆಗುವುದಿಲ್ಲ. ಮಾನ್ಯ ಸಭಾಪತಿಯವರೆ, ತಮಗೆ ಗೊತ್ತಿರುವ ಹಾಗೆ ಗಾಂಧೀಜಿಯವರ ಪ್ರಕಾರ every village should become a republic ಎಂಬ ಗ್ರಾಮ ಸ್ವರಾಜ್ಯದ ಕನಸು ಏನಿತ್ತು, ಆ ದೃಷ್ಟಿಯಲ್ಲಿ, ಆ ಒಂದು ವಿಷಯದಲ್ಲಿ ಹೆಚ್ಚಿನ ಗಮನವನ್ನು ಸರ್ಕಾರದವರು ಕೊಡಬೇಕು, when they talk about decentralisation. ಈ ಒಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಎರಡನೆಯದಾಗಿ, non-conventional energy ವಿಚಾರದಲ್ಲಿ ಈಗಾಗಲೇ

ಪ್ರಸ್ತಾಪ ಮಾಡಿ ಸೋಲಾರ್ ವಿದ್ಯುತ್‌ಗೆ ಏನೆಲ್ಲಾ ಪ್ರಾಮುಖ್ಯತೆಯನ್ನು ಕೊಡುತ್ತಿದ್ದೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದು ಸಂತೋಷದ ವಿಚಾರ. ಅದನ್ನು ನಾವು ಸ್ವಾಗತಿಸುತ್ತೇನೆ. ಆದರೆ, ಒಂದು ವಿಷಯವನ್ನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ವಿಶ್ವದಲ್ಲಿ Brazil ಏನಿದೆ, ಅತ್ಯಂತ ವಿಶಿಷ್ಠ ರೀತಿಯಲ್ಲಿ ಸೋಲಾರ್ ವಿದ್ಯುತ್ ಅನ್ನು ಎಲ್ಲಾ ರೀತಿಯಲ್ಲಿ ಅನುಕೂಲ ಮಾಡಿಕೊಳ್ಳುತ್ತಿದ್ದಾರೆ. The Government should give the highest priority for the non-conventional energy.

ಮಾನ್ಯ ಸಭಾಪತಿಯವರೆ, ತಮಗೆ ಜ್ಞಾಪಕ ಇರಬಹುದು. **"ಪುರ"** ಎಂದು ಹೇಳಿ, ನಮ್ಮ ತುಮಕೂರು ಜಿಲ್ಲೆಯ ಒಂದು ಹಳ್ಳಿಯನ್ನು ಡಾ॥ ಅಮೂಲ್ಯ ರೆಡ್ಡಿಯವರು, who is one of the outstanding Scientists in the Indian Institute of Science and Technology, ಅವರು ನಮ್ಮ ನೀರಾವರಿ ಪಂಪ್ ಸೆಟ್‌ಗಳು ಏನಿವೆ, ಅವುಗಳನ್ನು ಹೊಂಗೆ ಬೀಜದ oil ನಿಂದ run ಮಾಡುತ್ತಿದ್ದರು. ಇದರ ಕಡೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ. ಈ ಒಂದು ಕೆಲಸವನ್ನು ದಯವಿಟ್ಟು ಮಾಡಬೇಕು. ಇನ್ನು ಕಡೆಯದಾಗಿ, surface water ಅನ್ನು harvest ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿನ ಒತ್ತನ್ನು ಕೊಟ್ಟಿದ್ದಾರೆ. ಈ ವಿಚಾರದಲ್ಲಿ ನನಗೆ ಬಹಳ ಸಂತೋಷ ಇದೆ. surface water ಅನ್ನು ನಾವು harvest ಮಾಡಿದೇ ಹೋದರೆ ಮುಂದೆ ಕುಡಿಯುವ ನೀರಿಗೆ ಬಹಳ ತೊಂದರೆಯಾಗುತ್ತದೆ. ನನ್ನ ಪ್ರಕಾರ ಮುಂದಿನ 3ನೆ ಮಹಾಯುದ್ಧ ವಿಶ್ವದ ಮಟ್ಟದಲ್ಲಿ ನಡೆದಿದ್ದೇ ಆದರೆ, it is only to get access to the drinking water. Let us realise this one. ಈ ವಿಚಾರದಲ್ಲಿ ನಾನು ಒಂದು ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಮಧ್ಯಪ್ರದೇಶದ ಸರ್ಕಾರ ಬಹಳ ಚೆನ್ನಾಗಿ surface water ಅನ್ನು harvest ಮಾಡುವುದಕ್ಕೆ ನಾನಾ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ನಾನು ಅಲ್ಲಿಗೆ ಹೋಗಿ ನೋಡಿದಾಗ ಅಲ್ಲಿನ ಒಂದು ವಿಚಾರದ ಬಗ್ಗೆ ಮನಸ್ಸಿಗೆ ಬಹಳ

ಸಂತೋಷವಾಯಿತು. ಏನು ನಾನು ಬೋರ್‌ವೆಲ್‌ಗಳನ್ನು ನೀರನ್ನು ತೆಗೆಯಲಿಕ್ಕೆ ಉಪಯೋಗ ಮಾಡುತ್ತೇವೆ, ಸಾಮಾನ್ಯವಾಗಿ ಎಲ್ಲಾ ಒಣ ನೆಲ ಇರತಕ್ಕಂತಹ ಪ್ರದೇಶದಲ್ಲಿ ಬೋರ್‌ವೆಲ್ ತೆಗದು, ಜೆಲ್ಲಿ ತುಂಬಿ, ಏನು ಮಳೆ ನೀರು ಬರುತ್ತದೆ, ಅದನ್ನು ಬಹಳ ಚೆನ್ನಾಗಿ harvest ಮಾಡಿದ್ದಾರೆ. ಇದರ ಕಡೆ ಸಹಿತ ಹೆಚ್ಚಿನ ಗಮನವನ್ನು ಕೊಡಬೇಕೆಂದು ಕೇಳುತ್ತೇನೆ. ಧನ್ಯವಾದಗಳು.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ನಾನು ಹೇಳುವಂತಹ ವಿಚಾರಗಳನ್ನು ಗಮನಿಸಬೇಕು. ಕಳೆದ 4 ವರ್ಷಗಳಿಂದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರತಕ್ಕಂತಹ ಶಿಕ್ಷಕರನ್ನು ತುಂಬಲಿಕ್ಕೆ ಅನುಮತಿಯನ್ನು ಕೊಟ್ಟಿರುವುದಿಲ್ಲ. ಕನ್ನಡ ಮಾಧ್ಯಮದಲ್ಲಿರುವಂತಹ ಎಷ್ಟೋ ಶಾಲೆಗಳು ಬಂದ್ ಆಗಿವೆ. ಆರ್ಥಿಕ ಮಿತವ್ಯಯ ಆದೇಶವನ್ನು ಇವತ್ತು ಸಡಿಲಿಸಿರುವುದಿಲ್ಲ. ದಯಮಾಡಿ, ಸಡಿಲಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ತಾಲ್ಲೂಕುಗಳ ಬಗ್ಗೆ ಮಾತನಾಡುವಾಗ ದಾಂಡೇಲಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ತಾವು ಏತಕ್ಕೋ ಏನೊ ಹಾವೇರಿಯ ತಡಸದ ಬಗ್ಗೆ ಗಮನಹರಿಸಲಿಲ್ಲ. ಏತಕ್ಕೆಂದು ನನಗೆ ಗೊತ್ತಿದೆ. ಅದರೂ ಸಹಿತ ಅದನ್ನು ನೀವು ಪರಿಗಣನೆಗೆ ತೆಗದುಕೊಂಡು ಅಕ್ಕಿ ಅಲೂರು ಮತ್ತು ಇದನ್ನು ತಾಲ್ಲೂಕು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪ್ರೊ: ಮುಮ್ತಾಜ್ ಆಲಿಖಾನ್ (ನಾಮ ನಿರ್ದೇಶಿತರು):-** ನಾನು ಅನೇಕ ಮಠಗಳಿಗೆ ಹೋಗುತ್ತಿದ್ದೇನೆ. ಮಠಗಳಿಗೆ ಹೋಗುವಂತಹ ಹವ್ಯಾಸ ನನ್ನಲ್ಲಿ ಇದೆ. ಮಠಗಳಿಗೆ ಎಷ್ಟು ಹಣವನ್ನು ಕೊಟ್ಟರೂ ಪರವಾಗಿಲ್ಲ. ಅವರು ಗುಣಮಟ್ಟದ ಶಿಕ್ಷಣವನ್ನು ಕೊಡುತ್ತಾರೆ. ಅಲ್ಲಿ ಓದಿದವರೆಲ್ಲರೂ ಶಿಸ್ತಿಗೆ ಪ್ರಸಿದ್ಧಿಯಾಗಿದ್ದಾರೆ. ಎಲ್ಲಾ ಜನರ ಅಂದರೆ ಹಿಂದೂ-ಮುಸ್ಲೀಂ, ಕ್ರೈಸ್ತರೆಲ್ಲರಿಗೂ ಆ ಮಠದಲ್ಲಿ ಅವಕಾಶವನ್ನು ಒದಗಿಸಿಕೊಡುತ್ತಾರೆ. ಆದ್ದರಿಂದ, ಮಠಗಳಿಗೆ ಎಷ್ಟು ಬೇಕಾದರೂ ಹಣವನ್ನು ಕೊಡಿ. ಆದರೆ, ಸಣ್ಣ ಸಣ್ಣ ಮಠಗಳಿಗೆ ಏನೂ ಪ್ರಯೋಜನವಾಗುತ್ತಿಲ್ಲ. 12 ಸಾವಿರ ಪ್ರಾಥಮಿಕ ಶಾಲೆಗಳ

ಶಿಕ್ಷಕರನ್ನು ನೇಮಿಸುವಾಗ ಉರ್ದು ಶಾಲೆಗಳಲ್ಲಿ ಕನ್ನಡ ಶಿಕ್ಷಣಕ್ಕೆ ಗಮನಕೊಡಬೇಕು. ನಾನು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಉರ್ದು ಶಿಕ್ಷಕರನ್ನು ತೆಗೆದುಕೊಳ್ಳುವಾಗ ಯಾವ ಉರ್ದು ಶಿಕ್ಷಕರಿಗೆ ಕನ್ನಡವೂ ಸಹ ಬರುತ್ತದೆ, ಅವರುಗಳನ್ನು ತೆಗೆದುಕೊಂಡರೆ, ಉರ್ದು ಮತ್ತು ಕನ್ನಡ ಎರಡು ಓದುವವರಿಗೆ ಅನುಕೂಲವಾಗುತ್ತದೆ. ವಸತಿ ಶಾಲೆಗಳಲ್ಲಿ ಭೋಜನಾ ವೆಚ್ಚದಲ್ಲಿ ಸ್ವಲ್ಪ ತಾರತಮ್ಯ ಇದೆ. ಅದರ ಬಗ್ಗೆ ಈಗತಾನೆ, ಮುಖ್ಯಮಂತ್ರಿಗಳಿಗೆ ಚೀಟಿಯನ್ನು ಕೊಟ್ಟಿದ್ದೇನೆ. ಕೆಲವು ಶಾಲೆಗಳಲ್ಲಿ ತಿಂಗಳಿಗೆ ಭೋಜನಾ ವೆಚ್ಚವಾಗಿ 1,000 ರೂಪಾಯಿಗಳನ್ನು ಕೊಡುತ್ತಾರೆ. ಮತ್ತೆ ಕೆಲವು ವಸತಿ ಶಾಲೆಗಳಲ್ಲಿ ತಿಂಗಳಿಗೆ ಭೋಜನಾ ವೆಚ್ಚವಾಗಿ 850 ರೂಪಾಯಿಗಳನ್ನು ಕೊಡುತ್ತಾರೆ. ಎಲ್ಲಾ ಮಕ್ಕಳು ಒಂದೇ. ಆದ್ದರಿಂದ ಎಲ್ಲಾ ಶಾಲೆಯ ಮಕ್ಕಳಿಗೂ ಕೂಡ ತಿಂಗಳಿಗೆ 1,000 ರೂಪಾಯಿಗಳನ್ನು ಭೋಜನಾ ವೆಚ್ಚವಾಗಿ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಇನ್ನು ಅಲ್ಪಸಂಖ್ಯಾತ ವಸತಿ ಶಾಲೆಗಳಿಗೆ ನಿನ್ನೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಲಿಂಗಾಯತರು ಅಲ್ಲಿ ಅಡಿಗೆಯನ್ನು ಮಾಡುತ್ತಾರೆ. ಆದ್ದರಿಂದ, ನೀವು ಮಕ್ಕಳಿಗೆ ಮೊಟ್ಟೆಯನ್ನು ಕೊಡಬೇಕು, ಕೋಳಿ ಸಾರು ಕೊಡಬೇಕು, ಏನು ಮಾಡುತ್ತೀರಿ ಎಂದಾಗ ನಾವು ಮಾಡುತ್ತೇವೆ ಸ್ವಾಮಿ ಎಂದು ಅವರು ಹೇಳಿದರು. ಆದರೆ, ಸಾರಿನ ಕಾರ ಎಷ್ಟು ಇರಬೇಕೆಂದು ನೋಡುವಲ್ಲಿ ಅದರ ರುಚಿಯನ್ನು ನೋಡಬೇಕಾಗುತ್ತದೆ. ಈಗ ನೀವು ಈ ಕೆಲಸವನ್ನು ಮಾಡಿದರೆ ನನ್ನನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಈ ಅಲ್ಪಸಂಖ್ಯಾತ ಮಂತ್ರಿಗಳು ಲಿಂಗಾಯತರ ಹೆಂಗಸರಿಗೆ ಕೋಳಿ ಸಾರಿನ ರುಚಿಯನ್ನು ನೋಡುವುದನ್ನು ಕಲಿಸಿಕೊಟ್ಟರು ಎನ್ನುವ ಮಾತು ಬರುತ್ತದೆ. ಆದ್ದರಿಂದ, ನಾನು ಅಧಿಕಾರಿಗಳಿಗೆ ಇವರುಗಳಿಗೆಲ್ಲಾ ಶಾಖಾಹಾರ ವಸತಿ ಶಾಲೆಗಳನ್ನು ನಿಯೋಜನೆ ಮಾಡಿ ಎಂದು ಹೇಳಿದ್ದೇನೆ. ಇನ್ನೊಂದು ವಿಚಾರ ಏನೆಂದರೆ, ಹೆಣ್ಣು ಮಕ್ಕಳ ವಸತಿ ಶಾಲೆಗಳಲ್ಲಿ ಪುರುಷ ವಾರ್ಡನ್ ಇರಕೂಡದು ಎಂದು ಹೇಳುತ್ತಿದ್ದೇನೆ.

**ಸಭಾಪತಿಯವರು:–** ಇದು ಒಳ್ಳೆಯ ವಿಚಾರ.

**ಪ್ರೊ: ಮುಮ್ತಾಜ್ ಆಲಿಖಾನ್:-** ಈ ವಿಚಾರವನ್ನು ಮೊದಲಿನಿಂದಲೂ ಅಂದರೆ ನಾನು ಮಂತ್ರಿಯಾದಗಲೂ ಕೂಡ ಹೇಳಿದ್ದೇನೆ. ಖಂಡಿತವಾಗಿಯೂ ಕೂಡ ಅದರ ಕಡೆ ಗಮನಕೊಡಬೇಕು. ಅನೇಕ ಸಲ ಅನಾಹುತಗಳಾಗಿವೆ. ಆದ್ದರಿಂದ, ಅನಾಹುತ ಆಗಲಿಕ್ಕೆ ಅವಕಾಶವನ್ನು ಕೊಡಬಾರದು. ಆದ್ದರಿಂದ, ಯಾವ ಕಾರಣಕ್ಕೂ ಅದರಲ್ಲೂ 25-30-35ರ ವಯಸ್ಸಿನ ಯುವಕರನ್ನು ತಂದು ಹೆಣ್ಣು ಮಕ್ಕಳ ವಸತಿ ಶಾಲೆಗೆ ಹಾಕುತ್ತೀರಿ. ಅದನ್ನು ತೆಗೆದು ಹಾಕಬೇಕು.

**ಡಾ॥ ಎಂ.ಆರ್. ಹುಲಿನಾಯ್ಕರ್:-** ಸನ್ಮಾನ್ಯ ಸಭಾಪತಿಯವರೆ, ಮಧ್ಯೆ ಕರ್ನಾಟಕದ 9 ಜಿಲ್ಲೆಗಳಿಗೆ ಕುಡಿಯುವ ನೀರಿನ ಯೋಜನೆಯಾದಂತಹ ಎತ್ತಿನ ಹೊಳೆ ಮತ್ತು ಪಶ್ಚಿಮಕ್ಕೆ ಹರಿಯುವ ಹಳ್ಳಗಳಿಗಾಗಿ ಹೆಚ್ಚುವರಿಯಾಗಿ 1,000 ಕೋಟಿ ರೂಪಾಯಿಗಳನ್ನು ಬಾಂಡ್ ಮೂಲಕ ಕೊಡುತ್ತಿದ್ದೀರಿ. ಅದಕ್ಕೆ ಮೊಟ್ಟಮೊದಲನೆಯದಾಗಿ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಅದರ ಜೊತೆ ಜೊತೆಯಲ್ಲಿ ತಾವು ಬಹಳಷ್ಟು ಸಲ ಯಶಸ್ವಿನಿ ಯೋಜನೆಯ ಬಗ್ಗೆ ಮಾತನಾಡುತ್ತೀರುತ್ತಿರಿ. ಇವತ್ತು ಸಹ ಅದರ ಬಗ್ಗೆ ಹೇಳಿದ್ದಿರಿ. ಯಶಸ್ವಿನಿ ಯೋಜನೆಯಲ್ಲೂ ಒಂದು ಕುಟುಂಬದಿಂದ 160 ರೂಪಾಯಿಗಳನ್ನು ಸಂಗ್ರಹಿಸುವುದರ ಮೂಲಕ 37-40 ಕೋಟಿಯಷ್ಟು ಬಂಡವಾಳ ಇರುವಂತಹ ಒಂದು ಕಾರ್ಪೊರೇಷನ್ ಮಾಡಿ, ಅದರ ಮೂಲಕ ಲಕ್ಷಾಂತರ ಜನರಿಗೆ ವೈದ್ಯಕೀಯ ಚಿಕಿತ್ಸೆಯನ್ನು ನೀಡುತ್ತಾರೆ. ಹೀಗಾಗಿ ಆ ಒಂದು ಯಶಸ್ವಿನಿ ಯೋಜನೆ ನಲ್ಲಿ ಜನರು ಏನು ಚಿಕಿತ್ಸೆ ತೆಗದುಕೊಳ್ಳುತ್ತಿದ್ದಾರೆ, ಅವರನ್ನು ಎರಡನೇ ದರ್ಜೆ ನಾಗರೀಕರ ರೀತಿಯಲ್ಲಿ ಆಸ್ಪತ್ರೆಯಲ್ಲಿ treat ಮಾಡುತ್ತಿದ್ದಾರೆ. ಅದಕ್ಕಾಗಿ ಸರ್ಕಾರ 100 ಕೋಟಿ ರೂಪಾಯಿಗಳಷ್ಟು ಹೆಚ್ಚುವರಿ ಅನುದಾನವನ್ನು ಏನಾದರೂ ಕೊಟ್ಟಿದ್ದೇ ಆದರೆ, ಆ ಯೋಜನೆಯು ಬಹಳಷ್ಟು ಯಶಸ್ವಿಯಾಗಿ ಬಡ ರೈತಾಪಿ ಜನರಿಗೆ ಅನುಕೂಲವಾಗುತ್ತದೆ. ಹೀಗಾಗಿ ಕೇವಲ ಅವರು ಕಲೆಕ್ಟ್ ಮಾಡಿದಂತಹ ಶುಲ್ಕದಲ್ಲಿ ಇದನ್ನು ನಡೆಸುವುದು ಕಷ್ಟ. ಅದರಲ್ಲೂ ಸಹ ಈ ಕಾರ್ಪೊರೇಷನ್‌ನವರು ಸ್ವಲ್ಪ ಲಾಭ ಇಟ್ಟುಕೊಳ್ಳುವಂತಹ ಯೋಜನೆ ಅಲ್ಲಿದೆ. ಅದಕ್ಕಾಗಿ ಸರ್ಕಾರ 100 ಕೋಟಿ ರೂಪಾಯಿಗಳಷ್ಟು

ಹಣವನ್ನು ಮೀಸಲಿಟ್ಟು ಬಹಳಷ್ಟು ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರದಲ್ಲಿ ವಿನಂತಿ.

ಎರಡನೆಯದಾಗಿ, ತಾವು ಬಹಳಷ್ಟು private establishment ಗೆ ಹಣವನ್ನು ಕೊಟ್ಟಿದ್ದೀರಿ. ಸರ್ಕಾರದಿಂದ ನಡೆಯುವ ಒಂದು Gastroenterology ವಿಭಾಗವೊಂದನ್ನು ತೆಗೆಯಬೇಕೆಂದು ಕಳೆದ ಎರಡು ವರ್ಷಗಳಿಂದ ಪ್ರಸ್ತಾವನೆ ಇದೆ. ಬಹಳಷ್ಟು ಕಡೆ ಶಿಫಾರಸ್ಸು ಆಗಿತ್ತು. Gastroenterology ವಿಭಾಗ ಬಹಳ ಮಹತ್ವದ್ದಾಗಿದ್ದು, ಶರೀರದ 40–50% ರಷ್ಟು ಖಾಯಿಲೆಗಳು ಆ ಭಾಗದಲ್ಲಿರುವುದರಿಂದ ಹೆಚ್ಚಿನ ಜಿಜ್ಞಾಸೆಗಳು, ಹೆಚ್ಚಿನ ಸಂಶೋಧನೆಗಳು ಅಲ್ಲಿ ನಡೆಯುತ್ತಿರುವುದರಿಂದ, ತಾವು ಸರ್ಕಾರಿ ಸ್ವಾಮ್ಯದ ನಮ್ಮ ಸರ್ಕಾರಿ ಕಾಲೇಜುಗಳಲ್ಲಿ ಒಂದು department ಇದ್ದು, ಅಲ್ಲಿ ಈ Gastroenterology ವಿಭಾಗವೊಂದನ್ನು ತೆರೆದು, ಅದಕ್ಕಾಗಿ 10–20 ಕೋಟಿ ರೂಪಾಯಿಗಳನ್ನು ಧನಸಹಾಯ ಮಾಡಿದರೆ, ಒಂದು ದೊಡ್ಡ ಇಲಾಖೆಯನ್ನು ಸ್ಥಾಪನೆ ಮಾಡಲಿಕ್ಕೆ ಸಹಾಯವಾಗುತ್ತದೆನ್ನುವುದು ನನ್ನ ಎರಡನೆಯ ಮನವಿ.

**ಶ್ರೀ ಮೋನಪ್ಪ ಭಂಡಾರಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕರಾವಳಿ ಜಿಲ್ಲೆಗಳಲ್ಲಿ ಗೇರು ಕೃಷಿಗಾಗಿ ಸಣ್ಣ ಮತ್ತು ಮಧ್ಯಮ ರೈತರಿಗೆ ಸರ್ಕಾರೀ ಬಂಜರು ಭೂಮಿಯನ್ನು 30 ವರ್ಷಗಳ lease ಗೆ ನೀಡಲಾಗಿತ್ತು. ಆ ನಿಯಮದಂತೆ 30 ವರ್ಷ ಕಳೆದ ನಂತರ ಅದನ್ನು ರೈತರಿಗೆ ಖಾಯಂ ಆಗಿ ಕೊಡುವಂತಹ ನಿಬಂಧನೆಯನ್ನು ವಿಧಿಸಲಾಗಿತ್ತು. ಆದರೆ ಆ ರೈತರು ಸ್ವಾಧೀನ ಹೊಂದಿ ಭೂಮಿಯನ್ನು ಗೇರು ಕೃಷಿಗೆ ಉಪಯೋಗಿಸುತ್ತಾ ಬಂದಿದ್ದಾರೆ. ಅವರು ಕಳೆದ 30 ವರ್ಷಗಳಿಂದ ಈ ಉದ್ದೇಶಕ್ಕೆ ಬಳಸುತ್ತಾ ಬಂದಿದ್ದರೂ ಕೂಡ ಅದನ್ನು ಆ ರೈತರಿಗೆ ಹಸ್ತಾಂತರ ಮಾಡುವಂತಹ ಕೆಲಸವನ್ನು ಮಾಡಿರುವುದಿಲ್ಲ. ಇದರ ಬಗ್ಗೆ ಅವರಿಗೆ ಯಾವುದೇ ದಾಖಲಾತಿಗಳೂ ಇರುವುದಿಲ್ಲ. ಈ ಸಂಧರ್ಬದಲ್ಲಿ ಸದರಿ ರೈತರಿಗೆ ಹಸ್ತಾಂತರ ಮಾಡಲು ಅಗತ್ಯವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿಸುತ್ತೇನೆ. ಈಗಾಗಲೇ ಮಾನ್ಯ ಸದಸ್ಯರಾದ ಶ್ರೀಮತಿ ಮೋಟಮ್ಮನವರು ಕರಾವಳಿ ಮತ್ತು ಮಲೆನಾಡು

ಭಾಗಗಳಲ್ಲಿ ಪಕ್ಕನೆ ಮಳೆ ಬರುವುದರ ಜೊತೆಗೆ ಹೆಚ್ಚಿನ ಮಳೆ ಬರುವ ಪ್ರದೇಶವಾಗಿರುವುದರಿಂದ ಆ ಭಾಗದ ರಸ್ತೆಗಳು ಬೇಗನೆ ಹಾಳಾಗಿ ಹೋಗುತ್ತವೆ ಎಂದು ಹೇಳಿದರು. ರಸ್ತೆ ನಿರ್ಮಾಣದ ಬಗ್ಗೆ ಇಡೀ ರಾಜ್ಯದ ನಿಯಮಾವಳಿಗಳನ್ನು ಈ ಜಿಲ್ಲೆಗಳಿಗೆ ಅನುಷ್ಠಾನಗೊಳಿಸಿದರೆ ಸರಿಯಾದ ವ್ಯವಸ್ಥೆಯನ್ನು ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ದಕ್ಷಿಣ ಕನ್ನಡ ಜಿಲ್ಲೆ, ಮಲೆನಾಡು ಜಿಲ್ಲೆಗೆ ಈ ನಿಯಮಗಳನ್ನು ಸಡಿಲಿಸಿ ಇಲ್ಲವೇ ಬದಲಾವಣೆ ಮಾಡಿ ಹೆಚ್ಚಿನ ಅನುದಾನವನ್ನು ನೀಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ವೈ.ಎ. ನಾರಾಯಣ ಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಡಾ॥ ಪರಮಶಿವಯ್ಯ ವರದಿಯ ಶಿಫಾರಸ್ಸಿನಂತೆ 43 ತಾಲ್ಲೂಕುಗಳಿಗೆ 7 ಜಿಲ್ಲೆಗಳ ಜನರ ಬವಣೆಯನ್ನು ಸರ್ಕಾರ ಅರಿತು ನೀರಿನ ಅನುಕೂಲವನ್ನು ಮಾಡಿಕೊಟ್ಟಿದೆ. ಈವರೆವಿಗೂ ಯಾವುದೇ ಸರ್ಕಾರಗಳು ಮಾಡದೇ ಇರುವ ಉತ್ತಮ ಕೆಲಸವನ್ನು ನಮ್ಮ ಮುಖ್ಯಮಂತ್ರಿಗಳು ನಮ್ಮ ಸರ್ಕಾರ ಮಾಡಿದೆ. ಇದಕ್ಕೋಸ್ಕರ 800 ಕೋಟಿ ರೂಪಾಯಿಯನ್ನು ಮೀಸಲಿಟ್ಟಿದೆ. 1000 ಕೋಟಿ ರೂಪಾಯಿಯನ್ನು bond ಮೂಲಕ collect ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ವಿಶೇಷವಾಗಿ ಆ ಭಾಗದ ಜನರ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಬೆಂಗಳೂರು ವಿಶ್ವವಿದ್ಯಾನಿಲಯವನ್ನು ವಿಭಜನೆ ಮಾಡಿ 360 ಕಾಲೇಜುಗಳನ್ನು ಬೇರ್ಪಡಿಸಿ ಡಾ॥ ಡಿ.ವಿ. ಗುಂಡಪ್ಪ ಎಂಬ ಹೆಸರಿನ ವಿಶ್ವವಿದ್ಯಾನಿಲಯವನ್ನು ಮಾಡಿದ್ದೀರಿ ವಿಶೇಷವಾಗಿ ಆ ಭಾಗದ ಜನರ ಪರವಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಶಿಕ್ಷಣ ಇಲಾಖೆಗೆ 18,668 ಕೋಟಿಯಷ್ಟು ದೊಡ್ಡ ಮೊತ್ತವನ್ನು ಕೊಟ್ಟಿದ್ದೀರಿ. ಅದಕ್ಕಾಗಿ ಧನ್ಯವಾದಗಳು. ಒಂದು ಸಣ್ಣ ಕೆಲಸವನ್ನು ತಾವು ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಶಿಕ್ಷಕರಿಗೆ ಉಚಿತ health card ಅನ್ನು ಕೊಡುವ ಮುಖಾಂತರ ಶಿಕ್ಷಕರಿಗೆ ಸಹಾಯ ಮಾಡಬೇಕು. ಈ ವೇತನಾನುದಾನವನ್ನು 1994–95 ರತನಕ ಕೊಟ್ಟಿದ್ದೀರಿ ಅದನ್ನು 2000 ನೇ

ಇಸವಿಯವರೆಗೆ ವಿಸ್ತರಣೆ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತಮವಾದ ಆಯವ್ಯಯವನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಎರಡು ವಿಚಾರಗಳ ಬಗ್ಗೆ ಮಾತ್ರ ತಮ್ಮ ಗಮನಕ್ಕೆ ತರಬಯಸುತ್ತೇನೆ. ಅತಿ ಹೆಚ್ಚಿನ ತೆರಿಗೆಯನ್ನು ನಮ್ಮ ಬೆಂಗಳೂರು ಮಹಾನಗರದ ಕೈಗಾರಿಕೋದ್ಯಮಿಗಳು ಕೊಡುತ್ತಿದ್ದಾರೆಂದು ಮಾನ್ಯ ಸದಸ್ಯರಾದ ದಯಾನಂದ ಅವರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಪೀಣ್ಯ ಕೈಗಾರಿಕಾ ಪ್ರದೇಶ, ಜಿಗಣಿ ಕೈಗಾರಿಕಾ ಪ್ರದೇಶ ಮತ್ತು ಕುಂಬಳಗೋಡು ಕೈಗಾರಿಕಾ ಪ್ರದೇಶಗಳಿಗೆ ಯಾವುದೇ infrastructure ಅನ್ನು ಕೊಡುತ್ತಿಲ್ಲ. ಅವರು ಶೇಕಡ 14.5 highest ತೆರಿಗೆಯನ್ನು ಕೊಡುತ್ತಿದ್ದಾರೆ. ಈ ಬಗ್ಗೆ ನಾವು ಕಳೆದ ಬಾರಿಯೂ ಪ್ರಸ್ತಾಪವನ್ನು ಮಾಡಿದ್ದೆವು. ಪ್ರತ್ಯೇಕವಾಗಿ industrial area ಗೆ infrastructure development ಗೋಸ್ಕರ fund ಅನ್ನು reserve ಮಾಡಿ ಎಂದು ಮನವಿ ಮಾಡಿದ್ದೆವು. ಇದರ ಬಗ್ಗೆ ಕಳೆದ ಬಾರಿಯೂ ತಮ್ಮಲ್ಲಿ ಮನವಿ ಮಾಡಿಕೊಂಡಿದ್ದೆವು. ಕಳೆದ ಸಲ ಇಟ್ಟಂತಹ fund ಅನ್ನು K.I.A.D.B., ಯಲ್ಲಿ ಇಟ್ಟಿದ್ದರಂತೆ. ಆದರೆ ಅವರು ಇದಕ್ಕೆ ಯಾವುದೇ ರೀತಿಯಿಂದ ಖರ್ಚು ಮಾಡಿಲ್ಲ. ಅವರು ಅದನ್ನು ಬೇರೆ ಯಾವುದಕ್ಕೋ ಉಪಯೋಗಿಸಿಕೊಂಡರಂತೆ. ಅವರು ಶೇಕಡ 14.5 highest ತೆರಿಯನ್ನು ಕೊಡುತ್ತಿರುವಂತಹ ಕೈಗಾರಿಕೋದ್ಯಮಿಗಳು ಇರುವಂತಹ ಜಾಗ ಇದಾಗಿದೆ. ಎಲ್ಲಾ T.V., ಮತ್ತಿತರೆ ಮಾಧ್ಯಮದಲ್ಲಿ ನಮ್ಮನ್ನು ಕುರಿತು comments ಮಾಡಿದ್ದಾರೆ. ಈ ಸರ್ಕಾರ ಕೈಗಾರಿಕೋದ್ಯಮಿಗಳಿಗೆ ಹೆಚ್ಚಿನ ತೆರಿಗೆಯನ್ನು ವಿಧಿಸುತ್ತಾರೆ ನಮಗೆ ಅಗತ್ಯವಿರುವ infrastructure ಅನ್ನು ಕೊಡುತ್ತಿಲ್ಲ ಎಂದು ಹೇಳಿದ್ದಾರೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದರ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕು. ನಾನು ಈ ರಾಜ್ಯದ ಮೂವರು ಮುಖ್ಯಮಂತ್ರಿಗಳ ಆಳ್ವಿಕೆಯನ್ನು ಗಮನಿಸಿಕೊಂಡು ಬಂದಿದ್ದೇನೆ. ಮಂಡ್ಯ ಜಿಲ್ಲೆ ಈ ರಾಜ್ಯದ

ಭೂಪಟದಲ್ಲಿ ಇದೆಯೋ ಇಲ್ಲವೋ ಗೊತ್ತಿಲ್ಲ. ಒಂದು ನಯಾ ಪೈಸೆ ನಮ್ಮ ಮಂಡ್ಯ ಜಿಲ್ಲೆಗೆ ಹಣವನ್ನು ನೀಡುತ್ತಿಲ್ಲ. ಆಯವ್ಯಯದಲ್ಲಿ ಮಂಡ್ಯ ಜಿಲ್ಲೆಯ ಸಕ್ಕರೆ ಕಂಪನಿಗಳಿಗೆ ಹಣ ಕೊಡುವುದು ಎಂದು ಮಾತ್ರ ತಿಳಿದುಕೊಂಡಿದ್ದಾರೆ. ದಯಮಾಡಿ ಮಂಡ್ಯ ಜಿಲ್ಲೆಗೆ ಫಂಡ್ ಅನ್ನು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಘೋಷಣೆ ಮಾಡಬೇಕೆಂದು ವಿನಂತಿಸುತ್ತೇನೆ. ಕಳೆದ ಬಾರಿ ತಾವು ಬಂದಾಗ ಒಂದು ಮನವಿಯನ್ನು ಮಾಡಿಕೊಂಡಿದ್ದೆವು. ಕಾವೇರಿ ನದಿಗೆ ಒಂದು brige ಬೇಕು ಇದಕ್ಕಾಗಿ 5 ಕೋಟಿ ರೂಪಾಯಿ ಹಣವನ್ನು ನೀಡಬೇಕು ಎಂದು ಮನವಿಯನ್ನು ಮಾಡಿಕೊಂಡಿದ್ದೆವು. ಆ ಭಾಗದ 35 ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯಾಗುತ್ತದೆ ಎಂದು ತಿಳಿಸಿದ್ದೆವು. ತಾವು ಬರೆದಿರಿ ಆದರೆ ನಿಮ್ಮ ಇಲಾಖೆಯವರು ಈಗ ಹಣ ಇಲ್ಲ ಮುಂದಿನ ಆಯವ್ಯಯದಲ್ಲಿ ನೋಡೋಣ ಎಂದು ಒಂದು ರೀತಿಯ ಹಾರಿಕೆಯ ಉತ್ತರವನ್ನು ನೀಡಿದರು. ಇನ್ನೊಂದು Markonahalli Dam ನಿಂದ ಸಣ್ಣದಾದ ಒಂದು channel ಅನ್ನು ಮಾಡಲು ಅರ್ಧ ಕೆಲಸ ಮಾಡಿ ನಿಲ್ಲಿಸಿದ್ದಾರೆ. ಇದನ್ನು ಪೂರ್ತಿ ಮಾಡಲು 2 ಕೋಟಿ ರೂಪಾಯಿಯನ್ನು ಮಂಜೂರು ಮಾಡಿದರೆ 20 ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯಾಗುತ್ತದೆ. ಇಡೀ ಮಂಡ್ಯ ಜಿಲ್ಲೆಗೆ 6–7 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಮತ್ತು ಸೇತುವೆಯನ್ನು ಪೂರ್ಣ ಮಾಡುವುದಕ್ಕೋಸ್ಕರ ನೀಡಬೇಕೆಂದು ವಿನಂತಿಸುತ್ತೇನೆ. ಕೈಗಾರಿಕಾ ಪ್ರದೇಶಗಳಿಗೆ ಸ್ವಲ್ಪ ಸಹಾಯವನ್ನು ಮಾಡಬೇಕೆಂದು ವಿನಂತಿಸುತ್ತೇನೆ. ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಣೆಯನ್ನು ಮಾಡಬೇಕೆಂದು ವಿನಂತಿ. ಸಾವಿರಾರು ಕೋಟಿ ರೂಪಾಯಿಗಳ ಆಯವ್ಯಯವನ್ನು ಈ ಸದನದಲ್ಲಿ ಮಂಡಿಸಿದ್ದೀರಿ. ಈ ಸದನದಲ್ಲಿಯೇ 150–200 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದ್ದೀರಿ. ದಯಮಾಡಿ 6–7 ಕೋಟಿ ರೂಪಾಯಿಯನ್ನು ಮಂಡ್ಯ ಜಿಲ್ಲೆಗೆ ಘೋಷಣೆ ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಯವರು ಬಹಳ ಉದಾರಿಗಳು. ಇಂತಹ ಉದಾರವಾಗಿ

ಹಣ ಕೊಟ್ಟಂಥ ಮುಖ್ಯಮಂತ್ರಿಯವರನ್ನು ನಾನು ನೋಡಲಿಲ್ಲ. ಆದರೆ ನಮ್ಮ ಶಿಕ್ಷಕ ವೃಂದವನ್ನೇ ಮರೆತು ಬಿಟ್ಟಿದ್ದಾರೆ. ನಮ್ಮ ವೇತನ ಪರಿಷ್ಕರಣೆ ಆಗಲೇ ಇಲ್ಲ. ಹೋಗಲಿ, ಇದೇ ಮುಖ್ಯಮಂತ್ರಿಗಳು ತಮ್ಮ ಅವಧಿಯಲ್ಲಿ ಕೊಟ್ಟಿರತಕ್ಕಂಥಹ ವಿಶೇಷ ಭತ್ಯೆ 300 ರಿಂದ 500 ಏನು ಇದೆ ಅದನ್ನು ಮೂಲ ವೇತನಕ್ಕೆ ಸೇರಿಸುವ ಬಗ್ಗೆ ಈ ಆಯವ್ಯಯದಲ್ಲಿ ಘೋಷಣೆಯಾಗಬೇಕು. 1994–95 ನೇ ಸಾಲಿನವರೆಗೆ ಪ್ರಾರಂಭವಾಗಿರತಕ್ಕಂಥಹ ಎಸ್.ಸಿ / ಎಸ್.ಟಿ. ಡಿಗ್ರಿ ಕಾಲೇಜುಗಳ ಮ್ಯಾನೇಜ್‌ಮೆಂಟಿಗೆ ಅನುದಾನವನ್ನು ಘೋಷಣೆ ಮಾಡಿದ್ದೀರಿ ಅದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಅದೇ ರೀತಿಯಲ್ಲಿ ಸಾಮಾನ್ಯ ವರ್ಗದ ಸಂಘ ಸಂಸ್ಥೆಗಳವರು ನಡೆಸುತ್ತಿರುವ ಪ್ರಥಮ ದರ್ಜೆ ಪದವಿ ಕಾಲೇಜುಗಳಿಗೆ ಅನುದಾನ ಕೊಡುವುದನ್ನು ವಿಸ್ತರಣೆ ಮಾಡಬೇಕೆಂದು ನನ್ನ ಮನವಿ. ಸರ್ಕಾರೀ ಪದವಿ ಕಾಲೇಜುಗಳಲ್ಲಿ 2000 ಉಪನ್ಯಾಸಕರ ಹುದ್ದೆಗಳು ಖಾಲಿ ಇದೆ. ಅದನ್ನು ಆದ್ಯತೆಯ ಮೇಲೆ ತುಂಬುವುದಕ್ಕೆ ಅಗತ್ರ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನನ್ನ ಮನವಿ. ಸರ್ಕಾರೀ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸುಮಾರು 8000 ಮಂದಿ ಅತಿಥಿ ಉಪನ್ಯಾಸಕರಾಗಿ ಬಹಳ ಉತ್ತಮವಾಗಿ ಕೆಲಸವನ್ನು ಮಾಡುತ್ತಿದ್ದಾರೆ. ಅವರಿಗೆ ಈಗ ಕೊಡುತ್ತಿರುವ 8000 ರೂಪಾಯಿಯ ಬದಲಿಗೆ ಕನಿಷ್ಠ 20,000 ರೂಪಾಯಿ ಗೌರವಧನವನ್ನು ನೀಡುವ ಬಗ್ಗೆ ಚಿಂತನೆಯನ್ನು ನಡೆಸಬೇಕು ಎಂದು ಮನವಿ ಮಾಡುತ್ತೇನೆ.

**ಸಭಾಪತಿಯವರು:–** ಸಾಕು ಇನ್ನು ಎಷ್ಟು ಹೊತ್ತು ಮಾತನಾಡುತ್ತೀರಿ?

**ಶ್ರೀ ಮರಿತಿಬ್ಬೇಗೌಡ:–** ಬೆಂಗಳೂರು ನಗರದ ಸರ್ಕಾರಿ ನೌಕರರಿಗೆ ಸಂಬಂಧಪಟ್ಟಂತೆ ಶೇಕಡ 5 ಪರ್ಸೆಂಟ್ ಮನೆ ಬಾಡಿಗೆ ಭತ್ಯೆಯನ್ನು ಹೆಚ್ಚಳ ಏನು ಮಾಡಿದ್ದೀರಿ ಇದನ್ನು ಗ್ರಾಮಾಂತರ ಪ್ರದೇಶದಲ್ಲಿ ಮತ್ತು ತಾಲ್ಲೂಕು ಹಂತದಲ್ಲಿ ಇರುವವರಿಗೆ 5 ಪರ್ಸೆಂಟ್ ಮನೆ ಬಾಡಿಗೆ ಭತ್ಯೆಯನ್ನು ಹೆಚ್ಚಳ ಮಾಡುವ ಬಗ್ಗೆ ಘೋಷಣೆ ಮಾಡಬೇಕು. ಕಾವೇರಿ ಕೊಳ್ಳದ ರೈತರಿಗೆ ಅನ್ಯಾಯವಾಗಿದೆ. ಸಾಲ ಮನ್ನಾ ಮಾಡಿದ್ದೀರಿ ಈ ವಿಚಾರದ ಬಗ್ಗೆ ನಾನು

ತಮ್ಮನ್ನು ಬಹಳವಾಗಿ ಪ್ರಶಂಸೆ ಮಾಡುತ್ತೇನೆ. K.R.S., dam ನೀರು ಹೋಗುವ ಮುನ್ನಾ ಸಾಲ ಮನ್ನಾ ಮಾಡಿದ್ದಿರಿ. ಈಗ K.R.S., dam ನೀರೆಲ್ಲವೂ ಹೊರಟು ಹೋಗಿದೆ. ರೈತರ ಬದುಕು ಬಹಳ ಬರಿದಾಗಿದೆ. ಕಾವೇರಿ ಕೊಳ್ಳದ ರೈತರ ಸಂಪೂರ್ಣವಾದ ಸಹಕಾರ ಮತ್ತು ವಾಣಿಜ್ಯ ಬ್ಯಾಂಕುಗಳ ಸಾಲವನ್ನು ಮತ್ತು ಕಂದಾಯವನ್ನು ಮನ್ನಾ ಮಾಡಬೇಕು. ಆ ರೈತರ ಪ್ರತಿ ಎಕರೆಗೆ 50,000 ರೂಪಾಯಿಗಳನ್ನಾದರೂ ಪರಿಹಾರ ಕೊಡುತ್ತೀರಿ ಎಂದು ನಾವು ಈ ಒಂದು ಮುಂಗಡ ಪತ್ರದಲ್ಲಿ ನಿರೀಕ್ಷೆ ಮಾಡಿದ್ದೆವು. ಅದು ಆಗಬೇಕು. ವಿಶೇಷವಾಗಿ **ಸಹಕಾರಿ ಸಪ್ತಾಹದಲ್ಲಿ** ಮಾನ್ಯ ಮುಖ್ಯಮಂತ್ರಿಗಳೇ ಘೋಷಣೆಯನ್ನು ಮಾಡಿದ್ದರು. ಪ್ರಾಥಮಿಕ ಸಹಕಾರ ಸಂಘಗಳ ನಿರ್ವಹಣೆ ಬಹಳ ದುರ್ಭರವಾಗಿದೆ. ಇದರ ನಿರ್ವಹಣೆಗಾಗಿ ಕನಿಷ್ಠ 150 ಕೋಟಿ ರೂಪಾಯಿಯನ್ನು ಕೊಡುತ್ತೇನೆಂದು ತಾವು ಹೇಳಿದ್ದಿರಿ. ಆದರೂ ಕೂಡ ಈ ಮುಂಗಡ ಆಯವ್ಯಯದಲ್ಲಿ ಇದು ಎಲ್ಲೂ ಕಾಣುತ್ತಿಲ್ಲ. ಪ್ರಾಥಮಿಕ ಸಹಕಾರ ಸಂಘಗಳ ನಿರ್ವಹಣೆಗೆ ಕನಿಷ್ಠ 150 ಕೋಟಿ ರೂಪಾಯಿಯನ್ನು ಕೊಡುತ್ತೇವೆಂದು ತಾವೇನು ಘೋಷಣೆ ಮಾಡಿದ್ದಿರಿ ಅದನ್ನೂ ಕೂಡ ಕೊಡಬೇಕು ಎಂದು ವಿನಂತಿಸುತ್ತೇನೆ. ಆದ್ಯತೆಯ ಮೇಲೆ ಇದಕ್ಕೆ ಹಣವನ್ನು ನೀಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳವರಲ್ಲಿ ವಿನಂತಿಸುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ಈಗಾಗಲೇ ಹಲವಾರು ವಿಚಾರಗಳ ಬಗ್ಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಅದಾದ ಮೇಲೆ ಮಾನ್ಯ ಪ್ರತಿ ಪಕ್ಷದ ನಾಯಕರು 2-3 ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಮುಖ್ಯವಾಗಿ crop loan ಬಡ್ಡಿ ದರಗಳ ಬಗ್ಗೆ ಹೇಳುವುದಾದರೆ ಸೊಸೈಟಿಗಳ ಮುಖಾಂತರ ಕಳೆದ ವರ್ಷ 1 ಲಕ್ಷ ರೂಪಾಯಿಯವರೆಗೆ ಜೀರೋ ಪರ್ಸೆಂಟ್ ಏನು ಇತ್ತು ಅದನ್ನು ಮುಂದುವರೆಸಿದ್ದೇವೆ. 3 ಲಕ್ಷದವರೆಗೆ ಇರುವಂತಾದ್ದು ಏನು ಇದೆ ಅದಕ್ಕೆ ಶೇಕಡ 1 ಪರ್ಸೆಂಟ್ ಬಡ್ಡಿ ಇತ್ತು ಅದನ್ನೂ ಕೂಡ ಮುಂದುವರಿಸಿದ್ದೇವೆ. ಅದ್ಯಾವುದನ್ನೂ disturb ಮಾಡಿಲ್ಲ. 1 ಲಕ್ಷ

ರೂಪಾಯಿಯವರೆಗೆ zero percent, 3 ಲಕ್ಷ ರೂಪಾಯಿಯವರೆಗೆ ಶೇಕಡ 1 ರಂತೆ ಬಡ್ಡಿ ವಿಧಿಸುವುದು ಏನು ಯೋಜನೆ ಇತ್ತು ಅದನ್ನೂ ಮುಂದುವರೆಸಿದ್ದೇವೆ. Pending Bills...

**ಶ್ರೀ ಎಸ್.ಆರ್. ಪಾಟೀಲ್:–** ಮಧ್ಯಮಾವಧಿ ಸಾಲ (medium-term loan) ದ್ದು 10 ಲಕ್ಷ ರೂಪಾಯಿಯವರೆಗೆ ಶೇಕಡ 3 ಪರ್ಸೆಂಟ್ ಇತ್ತು. Tractor ಖರೀದಿ ಇರಲಿ, sprinkler ಗೆ, ನೀರಾವರಿ ಇದನ್ನು ತೆಗೆದುಕೊಳ್ಳಬಹುದಿತ್ತು.

**ಶ್ರೀ ಜಗದೀಶ್ ಶೆಟ್ಟರ್:–** 3 ಲಕ್ಷದವರೆಗೆ ಸಾಲದ limit ಏನು ಇತ್ತು, ಅಷ್ಟರವರೆಗೆ ಬಡ್ಡಿ ದರದಲ್ಲಿ concession ಕೊಟ್ಟಿದ್ದೇವೆ. ಉಳಿದ ಕಳೆದ ಸಲ ಏನು ಇತ್ತು ಅದನ್ನು maintain ಮಾಡಿದ್ದೇವೆ.

**ಶ್ರೀ ಎಸ್.ಆರ್. ಪಾಟೀಲ್:–** ಅದು S.A.Y., Loan ಆಗಿದೆ. ಅದು crop loan. ಅದಕ್ಕೆ apply ಆಗುವುದಿಲ್ಲ.

**ಶ್ರೀ ಜಗದೀಶ್ ಶೆಟ್ಟರ್:–** 3 ಲಕ್ಷ ರೂಪಾಯಿಗಿಂತ ಮೇಲೆ ಏನು ಇದೆ, ಅದರ status quo ಅನ್ನು maintain ಮಾಡಿಕೊಂಡು ಬಂದಿದ್ದೇವೆ. ಅದಕ್ಕೆ ಇದು apply ಆಗುವುದಿಲ್ಲ ಅಷ್ಟೇ. ನೀವು ಸಲಹೆಯನ್ನು ಕೊಡುತ್ತಿದ್ದೀರಿ.

**ಶ್ರೀ ಎಸ್.ಆರ್. ಪಾಟೀಲ್:–** ಅದು short-term loan ಆಯಿತು. Medium-term loan ಬಗ್ಗೆ ಏನು ಮಾಡುತ್ತೀರಿ ಅದರ ಬಗ್ಗೆ ಹೇಳಿ. ಇದು ಸಲಹೆ ಅಲ್ಲ. ಅದು ಹೋದ ಸಲ ಇತ್ತು.

**ಶ್ರೀ ಜಗದೀಶ್ ಶೆಟ್ಟರ್:–** ಹೋದ ಸಲ ಏನು system ಇತ್ತು ಅದೆಲ್ಲವನ್ನು ಈ ಬಾರಿಯೂ ಮುಂದುವರಿಸಿದ್ದೇವೆ. ಅದರಲ್ಲಿ ಯಾವುದೇ ಬದಲಾವಣೆ ಇಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಧ್ಯಮಾವಧಿ ಸಾಲದ ಬಗ್ಗೆಯೂ ಮುಂದುವರಿಸಿದ್ದೀರಾ?

**ಶ್ರೀ ಜಗದೀಶ್ ಶೆಟ್ಟರ್:-** ಕಳೆದ ವರ್ಷ ಏನು ಇತ್ತು ಅದನ್ನು ಮುಂದುವರಿಸಿದ್ದೇವೆ. ಅದರಲ್ಲಿ ಏನೂ ಬದಲಾವಣೆ ಇಲ್ಲ. 1 ಲಕ್ಷ ರೂಪಾಯಿಯವರೆಗೆ zero percent ಏನು ಇತ್ತು ಅದನ್ನು ಮುಂದುವರೆಸಿದ್ದೇವೆ. 3 ಲಕ್ಷದವರೆಗೆ ಸಾಲವನ್ನು ಕತೆಗೆದುಕೊಳ್ಳುವವರಿಗೆ ಶೇಕಡ 1 ಪರ್ಸೆಂಟ್ ಬಡ್ಡಿ ಏನು ಇತ್ತು ಅದನ್ನೂ ಕೂಡ ಮುಂದುವರಿಸಿದ್ದೇವೆ. ಕಳೆದ ವರ್ಷ ಏನು ಇತ್ತು ಅದನ್ನು ಮುಂದುವರಿಸಿದ್ದೇವೆ. ಈ pending bills ಸಾಲ ಮನ್ನಾ ಮಾಡಿದ್ದೀರಿ. ಸಾಲ ಮನ್ನಾ ಮಾಡಿ ಹಣ ಕೊಟ್ಟಿಲ್ಲವೆಂದು ಹೇಳಿದರು. ಈಗಾಗಲೇ 350 ಕೋಟಿ reimburse ಆಗಿದೆ.

(6.30 ಘಂಟೆ)

ಸಾಲ ಮನ್ನಾ ಮಾಡಿ ಸಹಕಾರಿ ಸಂಘಗಳಿಗೆ ಹಣ ಕೊಟ್ಟಿರುವುದಿಲ್ಲ ಎಂದು ಹೇಳಲಾಗುತ್ತಿದೆ. ಆದರೆ ಈಗಾಗಲೇ 350 ಕೋಟಿ ರೂ.ಗಳ reimbursement ಆಗಿದೆ. ಯಾವ-ಯಾವ ಬಿಲ್ ಬಂದಿವೆ ಅವೆಲ್ಲವನ್ನು reimburse ಮಾಡುತ್ತೇವೆ. ಅದಕ್ಕಾಗಿ ಕಳೆದ ಪೂರಕ ಅಂದಾಜಿನಲ್ಲಿ 1850 ಕೋಟಿ ರೂ.ಗಳನ್ನು ಮೀಸಲಾಗಿ ಇಡಲಾಗಿದೆ. 900 ಕೋಟಿ ಎಂದು ತಾವು ಹೇಳುತ್ತಿದ್ದೀರಿ. ಯಾವ ಬಿಲ್ ಬರುತ್ತದೆ ಅದನ್ನು ತಕ್ಷಣ ನಾವು ಪಾವತಿ ಮಾಡುತ್ತೇವೆ.

**ಶ್ರೀ ಎಸ್.ಆರ್. ಪಾಟೀಲ್:-** ಯಾವುದೇ ಸಹಕಾರಿ ಸಂಘಕ್ಕೆ ಸಾಲ ಮನ್ನಾ ಮಾಡಿದ ಹಣ ತಕ್ಷಣ ನೀಡುವಂತೆ instruction ಕೊಡಿ. ಅದು delay ಆಗಬಾರದು.

**ಶ್ರೀ ಜಗದೀಶ್. ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು):-** ಈಗಾಗಲೇ instruction ಕೊಟ್ಟಿದ್ದೇವೆ. ಯಾವುದು ತಡವಾಗುವುದಿಲ್ಲ. ಯಾವುದಾದ್ದರು specific complaint ಬಂದರೆ, ಅದನ್ನು ನಮ್ಮ ಗಮನಕ್ಕೆ ತನ್ನಿ ಅದನ್ನು ನಾವು reimburse ಮಾಡುತ್ತೇವೆ. ಈಗಾಗಲೇ ತಿಂಗಳು-ತಿಂಗಳು ಬರುತ್ತಿರುವ ಬಿಲ್‌ಗಳನ್ನು reimburse ಮಾಡುತ್ತಿದ್ದೇವೆ. ಇಂತಹ ಕಡೆ delay ಆಗಿದೆ

ಎನ್ನುವುದನ್ನು ನಮ್ಮ ಗಮನಕ್ಕೆ ತಂದರೆ ಅದನ್ನು ನಾವು reimburse ಮಾಡುತ್ತೇವೆ. ಈಗ ಮಾನ್ಯ ಸದಸ್ಯರು ಮಧ್ಯಮಾವಧಿ ವಿತ್ತಿಯ ಯೋಜನೆ Medium Term Fiscal Policy ಬಗ್ಗೆ ಹೇಳಿದರು. ಅಲ್ಲಿ ಏನು ಆಗಿದೆ ಎಂದರೆ, ಇಂಗ್ಲೀಷ್ ಮತ್ತು ಕನ್ನಡ ಎರಡು ಇವೆ. ಕನ್ನಡದಲ್ಲಿ ಲಕ್ಷ ಎನ್ನುವಲ್ಲಿ ಕೋಟಿ ಎಂದು ಹಾಕಿದ್ದಾರೆ.

**ಸಭಾಪತಿಯವರು:–** ಒಂದು ಕೋಟಿ ಎಂದು ಮುದ್ರಣವಾಗಿದೆ ಎಂದೇ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ನಿಮ್ಮ ಸರ್ಕಾರದಲ್ಲಿ ಇಂಗ್ಲೀಷ್‌ನಲ್ಲಿ ಲಕ್ಷ ಎನ್ನುವುದು ಕನ್ನಡದಲ್ಲಿ ಕೋಟಿ ಅಂದಹಾಗೆ ಆಯಿತು.

**ಶ್ರೀ ಜಗದೀಶ್. ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು):–** ಮುದ್ರಣದ ದೋಷವಿದೆ.

**ಶ್ರೀ ದಯಾನಂದ:–** ಇದು error ಆಗಲು ಕಾರಣ ಏನು ಎಂದರೆ. ಲಕ್ಷ ಮತ್ತು ಕೋಟಿ ಎನ್ನುವುದನ್ನು ಭಾರತದಲ್ಲಿ ಮಾತ್ರ ಉಪಯೋಗಿಸಲಾಗುತ್ತದೆ.

**ಸಭಾಪತಿಯವರು:–** ಆಯಿತು ಬಿಡಿ, ಮುದ್ರಣ ಮಾಡುವಾಗ ತಪ್ಪಾಗಿದೆ ಎಂದು ಹೇಳಿದಾರಲ್ಲ ಬಿಡಿ.

**ಶ್ರೀ ಜಗದೀಶ್. ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು):–** 57,407 ಲಕ್ಷ ಎಂದು ಇಂಗ್ಲೀಷನಲ್ಲಿ ಇದೆ.

**ಶ್ರೀ ಎಸ್.ಆರ್. ಪಾಟೀಲ್:–** ಇಲ್ಲಿ ತಾವು ಕೋಟಿ ಎಂದು ಕೊಟ್ಟಿದ್ದಿರಿ ನಾನು ಅದನ್ನೇ ಓದಿದೆ.

**ಶ್ರೀ ಜಗದೀಶ್. ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಗಳೆ, ಇದರಲ್ಲಿ ನಿಮ್ಮದೇನು ತಪ್ಪು ಇಲ್ಲ. ಮುದ್ರಣ ತಪ್ಪು ಇದೆ. ತಾವು ಹೇಳಿರುವುದು ಸರಿ ಅಷ್ಟೇನು ಕೊಟ್ಟಿಲ್ಲ. 57,407 ಲಕ್ಷ ರೂ.ಗಳನ್ನು ಕೊಡಲಾಗಿದೆ. ಎಲ್ಲ ಸೇರಿ 574 ಕೋಟಿ ರೂ.ಗಳಾಗುತ್ತದೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ನಿಮ್ಮ ಅಧಿಕಾರಿಗಳು ಅಷ್ಟೊಂದು ಬೇಜವಾಬ್ದಾರಿಯಿಂದ ಕೆಲಸ ಮಾಡುತ್ತಾರೆ. ಒಂದೊಂದು ಕಡತ ಹೋದರೆ 10 ವರ್ಷವಾದರು ಬರುವುದಿಲ್ಲ. ಇಷ್ಟು ಬೇಜವಾಬ್ದಾರಿ ಹಣಕಾಸು ಇಲಾಖೆ ಇದೆ, ಇಷ್ಟೊಂದು ನಿರ್ಲಜ್ಜ..... ಲಕ್ಷಕ್ಕೂ ಕೋಟಿಗೂ ಅಂತರ ಗೊತ್ತಿಲ್ಲವೆ?

**ಸಭಾಪತಿಯವರು:–** ಆಯಿತು ಬಿಡಿ ಈಗ. ಕಡಿಮೆಯಾಯಿತು ಎಂದು ನೀವೆ ಹೇಳುತ್ತೀರಾ, ಜಾಸ್ತಿಯಾಯಿತು ಎಂದು ನೀವೆ ಹೇಳುತ್ತೀರಾ.

**ಶ್ರೀ ಜಗದೀಶ್. ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಗಳೆ, ಉಳಿದ ಶಾಸಕರು ಹೇಳಿದಂತಹ ಹಲವಾರು ವಿಚಾರಗಳು, ಅದರಲ್ಲಿ ನಮ್ಮ ದಯಾನಂದರವರು trading license ಬಗ್ಗೆ ಹೇಳಿದ್ದಾರೆ. Trading license ಪ್ರತಿ ವರ್ಷ renewal ಮಾಡಬೇಕಾಗಿತ್ತು. ಹೀಗಾಗಿ ವರ್ಷಾವರ್ಷಾ ಅವರು fees ತುಂಬಬೇಕು. ಇದರಿಂದ harassment ಆಗುತ್ತಿತ್ತು. ಅದಕ್ಕಾಗಿ ಅದನ್ನು 5 ವರ್ಷ ಮಾಡಿದ್ದೇವೆ. 0.5 ವ್ಯಾಟ್ enhancement ಆಗಿತ್ತು, ಸಾಲ ಮನ್ನಾ ಮಾಡಿದಾಗ 14% ಇರುವುದನ್ನು 14.5% ಮಾಡಿದ್ದೇವು. ಅದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಮಾನ್ಯ ಸದಸ್ಯರು ಹೇಳಿದ ಪ್ರಕಾರ, ಸದನ್ನು ವಾಪಸ್ ತೆಗದುಕೊಳ್ಳಲು ನಾವು ಈಗಾಗಲೇ order ಮಾಡಿದ್ದೇವೆ. ಜೂನ್‌ನಿಂದ ಅದು implement ಆಗುತ್ತದೆ.

**ಶ್ರೀ ದಯಾನಂದ:–** ನನ್ನದೊಂದು ವಿನಂತಿ, ಹೆಚ್ಚಿಗೆ 5000 ರೂ.ಗಳನ್ನು ಕೊಟ್ಟಿರುವುದಕ್ಕೆ ಜಾಸ್ತಿ ಹಾಕಿದ್ದೀರಿ. ಏಪ್ರಿಲ್‌ನಿಂದ ವಾಪಸ್ ತೆಗೆದುಕೊಂಡು ಬಿಡಿ. ಇನ್ನು ಎರಡು ತಿಂಗಳಲ್ಲಿ ಎಷ್ಟು ಸಂಗ್ರಹವಾಗುತ್ತದೆ? ಅದೊಂದು ಸಮಾಧಾನಕ್ಕಾಗಿ ಅಷ್ಟೆ. ಅದರಿಂದ ಯಾವುದೇ ವ್ಯತ್ಯಾಸವಾಗುವುದಿಲ್ಲ.

**ಶ್ರೀ ಜಗದೀಶ್. ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಗಳೆ, ಜೂನ್‌ನಿಂದ ಜೂನ್‌ಗೆ ಒಂದು ವರ್ಷ ಮಾಡಿದ್ದೇವೆ. ಹೋದ ಸಾರಿ announce ಮಾಡಿದು ಜೂನ್ ತಿಂಗಳಲ್ಲಿ.

**ಶ್ರೀ ದಯಾನಂದ:-** ನಮಗೆ 500 ಕೋಟಿ ರೂ.ಗಳ difference ಆಯಿತು.

**Sri JAGADISH SHETTAR:-** It's a question of two months.

**ಶ್ರೀ ದಯಾನಂದ:-** ಆ two months credit ನಿಮಗೆ ಬರಲಿ ದಯಮಾಡಿ ಮಾಡಿ.

**ಶ್ರೀ ಜಗದೀಶ್. ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಗಳೆ, ಅಂಗವಿಕಲರಿಗೆ ಇರುವ ಆದಾಯಮಿತಿಯನ್ನು ತೆಗೆಯಬೇಕೆಂದು ಸಲಹೆ ಬಂದಿದೆ ಅದರ ಬಗ್ಗೆಯು ನಾನು ಪರಿಶೀಲನೆ ಮಾಡುತ್ತೇನೆ. H.R.A. ಬಗ್ಗೆ ಮಾನ್ಯ ಪುಟ್ಟಣ್ಣನವರು ಮತ್ತು ಮಾನ್ಯ ಮರಿತಿಬ್ಬೇಗೌಡರು ಏನು ಸಲಹೆ ಕೊಟ್ಟಿದ್ದಾರೆ, ಒಂದು ಹಂತದಲ್ಲಿ ಅದರ ಬಗ್ಗೆ ನಾನು ಚರ್ಚೆಯನ್ನು ಮಾಡಿದ್ದೇನೆ. ಅದರ ಬಗ್ಗೆ ಆದಷ್ಟು ಬೇಗ ನಾನು ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಪುಟ್ಟಣ್ಣ:-** 50ವರ್ಷದಿಂದ ಕೊಡುತ್ತಿರುವುದನ್ನು ಈಗ ನಿಲ್ಲಿಸಲು ಹೊರಟ್ಟಿದಾರೆ ಅದರ ಬಗ್ಗೆ ನಾವು ಹೇಳುತ್ತಿರುವುದು. ಅದನ್ನು ಕೊಡುವಂತೆ ತಾವು ಹೇಳಿ.

**ಶ್ರೀ ಜಗದೀಶ್. ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು):-** ಅದನ್ನು ನಾನು ಸರಿ ಮಾಡುತ್ತೇನೆ. ಮಾಡುವುದಿಲ್ಲ ಎಂದು ನಾನೇನು ಹೇಳಿರುವುದಿಲ್ಲ. You have to give time. ಮಾನ್ಯ ಶಾಣಪ್ಪನವರು ಇತರೆ ಸದಸ್ಯರು ಹಾಸ್ಟೆಲ್ ಬಗ್ಗೆ ಹೇಳಿದ್ದಾರೆ. ಖಾಸಗಿ ಹಾಸ್ಟೆಲ್‌ಗಳು ಇವೆ, ಅನುದಾನಿತ ಹಾಸ್ಟೇಲ್‌ಗಳು ಇವೆ. ಅಲ್ಲಿ ಎಸ್‌ಸಿ-ಎಸ್‌ಟಿ ಹಾಸ್ಟೇಲ್ ಗಳಲ್ಲಿ ಇರುವ facility ಗಳನ್ನು, ಪೌಷ್ಠಿಕಾಂಶವನ್ನು ಕೊಡುವ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆಯು ಅವರು ಸಲಹೆ ಕೊಟ್ಟಿದ್ದಾರೆ. ಎಷ್ಟು ಹಾಸ್ಟೇಲ್‌ಗಳು ಇವೆ, ಎಷ್ಟು ವಿದ್ಯಾರ್ಥಿಗಳಿದ್ದಾರೆ ಎನ್ನುವುದನ್ನು ನೋಡಿಕೊಂಡು, ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ಆದಷ್ಟು ಬೇಗ ನಾನು ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ. ಶ್ರೀಮತಿ ಮೋಟಮ್ಮನವರು ಅದರ ಬಗ್ಗೆ ಮಾತನಾಡಿ ನಮ್ಮ ಗಮನಕ್ಕೆ ತಂದಿದ್ದಾರೆ.

ಪುಟ್ಟಸ್ವಾಮಿಯವರು ಬೆಳಿಗ್ಗೆಯಿಂದ ಹೇಳುತ್ತಿದ್ದಾರೆ. ಅವರ ಕಡತ ಎಲ್ಲಿ ಅಡ್ಡಾಡುತ್ತಿದೆ ಎನ್ನುವುದನ್ನು ನಾನು ನೋಡುತ್ತೇನೆ. ಆ ಕಡತಕ್ಕೆ ಆದಷ್ಟು ಬೇಗ ಮೋಕ್ಷವನ್ನು ಕೊಡುತ್ತೇನೆ. ಆ ಕಡತವನ್ನು ಆದಷ್ಟು ಬೇಗ dispose ಮಾಡುತ್ತೇನೆ. ಯಶಸ್ವಿ ಯೋಜನೆ ಬಗ್ಗೆ ಹೇಳೀದ್ದಾರೆ. ಆರ್ಥಿಕ ಮಿತವ್ಯಯದ ಬಗ್ಗೆ ಮಾನ್ಯ ಹೊರಟ್ಟಿಯವರು ಹೇಳಿದ್ದಾರೆ. ಆರ್ಥಿಕ ವ್ಯವಸ್ಥೆಯನ್ನು ನೋಡಿಕೊಂಡು ಅದರ ಬಗ್ಗೆ ನಾನು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ. ಮಾನ್ಯ ಅಶ್ವಥನಾರಾಯಣರವರು ಮಂಡ್ಯ ಜಿಲ್ಲೆ ಬಗ್ಗೆ ಮತ್ತು ಕೈಗಾರಿಕಾ infrastructure create ಮಾಡುವ ಬಗ್ಗೆ ಹೇಳಿದ್ದಾರೆ. ಈಗಾಗಲೇ 300 ಕೋಟಿ ರೂ.ಗಳನ್ನು infrastructure ಮಾಡುವ ಸಲುವಾಗಿ ಉತ್ತರ ಕೊಡುವ ಸಮಯದಲ್ಲಿ ಘೋಷಣೆ ಮಾಡಿದ್ದೇನೆ. ಆದಷ್ಟು ಅದಕ್ಕೆ ಹೆಚ್ಚಿನ priority ಕೊಟ್ಟು, industry ಗಳಿಗೆ ಮೂಲಭೂತ ಸೌಕರ್ಯಗಳನ್ನು ಅವಶ್ಯಕತೆ ಇದೆ. ಇದು ನನ್ನ ಗಮಕ್ಕೆ ಬಂದಿದೆ. ಅದರ ಬಗ್ಗೆ ನಾನು ಲಕ್ಷ್ಯ ಕೊಡುತ್ತೇನೆ. ಮಂಡ್ಯ ಜಿಲ್ಲೆಯಲ್ಲಿ bridge, ಇತರೆ ಸಣ್ಣ-ಪುಟ್ಟ ಕೆಲಸಗಳ ಬಗ್ಗೆ ಹೇಳಿದ್ದಾರೆ. ಅದಕ್ಕೂ ಹೆಚ್ಚು ಆದ್ಯತೆಯನ್ನು ಕೊಟ್ಟು ಮಾಡುತ್ತೇನೆ. ಮಾನ್ಯ ಘೋಟ್ನೆಕರ್‌ರವರು ಕಾರವಾರ ಜಿಲ್ಲೆ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆಯು ನಾನು ಗಮನ ಹರಿಸುತ್ತೇನೆ. ಮಾನ್ಯ ರಾಮಚಂದ್ರಗೌಡರು ರೈತರ ಬಗ್ಗೆ ಹಲವಾರು ವಿಚಾರಗಳನ್ನು ಹೇಳಿದ್ದಾರೆ. ರೈತರನ್ನು ಇನ್ನು ಹೆಚ್ಚು strengthen ಮಾಡಲು, ಅವರು ಬೆಳೆದಂತಹ ಬೆಳೆಗೆ... ಅದಕ್ಕೆ ಒಂದು ಆಯೋಗವನ್ನು ನಾವು ನೇಮಕ ಮಾಡಿದ್ದೇವೆ. ಅದಕ್ಕೆ ಇದು ಸಹಾಯವಾಗುತ್ತದೆ. ಮಾನ್ಯ ಮರಿತಿಬ್ಬೇಗೌಡರು ಹಲವಾರು ವಿಚಾರಗಳನ್ನು ಶಿಕ್ಷಕರ ಬಗ್ಗೆ ಹೇಳಿದ್ದಾರೆ. ಈಗಾಗಲೆ ಡಾ॥ ಶಿವಯೋಗಿಸ್ವಾಮಿಯವರು, ಗಣೇಶರವರು ಬೆಳಿಗ್ಗೆ ಬಂದು ಅದರ ಬಗ್ಗೆ ನನ್ನ ಜೊತೆಯಲ್ಲಿ ಚರ್ಚೆಯನ್ನು ಮಾಡಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡಿ ಒಂದು concrete proposal ನ್ನು ತೆಗೆದುಕೊಂಡು ಬರುತ್ತೇನೆ. ತಾವು ಹೇಳಿದ ಹಲವಾರು ವಿಚಾರಗಳನ್ನು ನನ್ನ ಗಮನದಲ್ಲಿ ಇಟ್ಟುಕೊಂಡಿದ್ದೇನೆ. ಅವುಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇನೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬೆಂಗಳೂರು

ವಿಶ್ವವಿದ್ಯಾನಿಲಯವನ್ನು division ಮಾಡುವ ಬಗ್ಗೆ ಈಗಾಗಲೇ ನಿರ್ಣಯ ತೆಗೆದುಕೊಂಡು ಡಿವಿಜಿಯವರ ಹೆಸರಿನಲ್ಲಿ ಹೊಸ ವಿಶ್ವವಿದ್ಯಾನಿಲಯ ಮಾಡುವ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಪರಮಶಿವಯ್ಯನವರ ವರದಿ ಪ್ರಕಾರ ಎತ್ತಿನ ಹೊಳೆ ಯೋಜನೆಯನ್ನು ಈಗಾಗಲೇ ನಾನು ಘೋಷಣೆ ಮಾಡಿದ್ದೇನೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ತಾಲ್ಲೂಕುಗಳ ರಚನೆ ಬಗ್ಗೆ ಹೇಳಿದ್ದಾರೆ, ಅದರ ಬಗ್ಗೆ ಈಗಾಗಲೇ ನಾನು ಉತ್ತರವನ್ನು ಕೊಟ್ಟಿದ್ದೇನೆ. ಎಲ್ಲೇಲಿ ಬೇಡಿಕೆ ಬಂದಿವೆ, ಕೆಲವು ವರದಿಯಲ್ಲಿ ಇವೆ, ಕೆಲವು ಇಲ್ಲ. ಎಲ್ಲವನ್ನು ಮಂಜೂರು ಮಾಡುವುದಿಲ್ಲ. ಯಾವವು ಅವಶ್ಯಕತೆ ಇವೆ, ಯಾವವು ವರದಿಯಲ್ಲಿವೆ ಅವುಗಳನ್ನು ನೋಡಿ ಅವುಗಳ ಬಗ್ಗೆ ನಾನು ತೀರ್ಮಾನ ತೆಗೆದುಕೊಳ್ಳುತ್ತೇನೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಗಳೆ, ಶ್ರೀಮತಿ ಭಾರತಿ ಶೆಟ್ಟಿಯವರು ಅವಿವಾಹಿತ ಮಹಿಳೆಯರಿಗೆ ಪಿಂಚಣಿ ಕೊಡಬೇಕೆಂದು ಹೇಳಿದ್ದಾರೆ. ಅವಿವಾಹಿತ ಮಹಿಳೆಯರು ಒಂದು ರೀತಿಯಲ್ಲಿ ವಿಧವೆಯರಿದ್ದ ಹಾಗೆ. ಮಕ್ಕಳು ಇಲ್ಲ ಗಂಡ ಇಲ್ಲ ಎಂದರೆ ಅವರನ್ನು ಯಾರು ನೋಡಿಕೊಳ್ಳುತ್ತಾರೆ.

**ಶ್ರೀ ಜಗದೀಶ್. ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು):–** ಅದು execute ಆಗದೆ ಇರುವುದರಿಂದ ಬಜೆಟ್‌ನಲ್ಲಿ ಘೋಷಣೆ ಮಾಡಲು ಆಗಿರುವುದಿಲ್ಲ. ಅದು ಹಿಂದುಳಿಯಲು ಏನು ಕಾರಣ ಎನ್ನುವುದನ್ನು ನಾನು ನೋಡುತ್ತೇನೆ. ಅದರ ಬಗ್ಗೆ ವಿಚಾರ ಮಾಡುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ:–** ನಾನು ತಹಸೀಲ್ದಾರ ಹತ್ತಿರ ಮಾತನಾಡಿತ್ತೇನೆ.

**ಸಭಾಪತಿಯವರು:–** ಇನ್ನು execute ಆಗಿರುವುದಿಲ್ಲ ನೋಡುತ್ತೇನೆ ಎಂದು ಹೇಳುತ್ತಿದ್ದಾರೆ.

**ಶ್ರೀ ಜಗದೀಶ್. ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು):– ಮಾನ್ಯ ಸಭಾಪತಿಗಳೆ,** ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಈ ರೀತಿ ಹಲವಾರು

ವಿಚಾರಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಈ ವಿಚಾರಗಳ ಬಗ್ಗೆ ನಾನು ಪರಿಶೀಲನೆ ಮಾಡಿ ಇನ್ನು ಏನು reforms ಮಾಡಬೇಕು ಎನ್ನುವುದನ್ನು ಯೋಚನೆ ಮಾಡುತ್ತೇನೆ. ಮಾನ್ಯ ರಾಜಶೇಖರನ್‌ರವರು ಬೆಳಗ್ಗೆ ಮಾತನಾಡುತ್ತಾ, ಅವರು appreciate ಮಾಡಿದ್ದಾರೆ. Administration ನಲ್ಲಿ ಎಲ್ಲಿ loopholes ಇವೆ ಅವರುಗಳನ್ನು ಸರಿ ಮಾಡಿ, ಆಡಳಿತ ಬಿಗಿ ಮಾಡುವ ಬಗ್ಗೆ ಹಲವಾರು ಉತ್ತಮವಾದ ಸಲಹೆ–ಸೂಚನೆಗಳನ್ನು ಕೊಟ್ಟಿದ್ದಾರೆ. ಆಡಳಿತ ಬಿಗಿ ಮಾಡಲು ಏನು ಮಾಡಬೇಕು ಆ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತೇನೆ.

**ಸಭಾಪತಿಯವರು:–** ಡಾ॥ ಹುಲಿನಾಯ್ಕರ್‌ರವರು ಒಂದೆರಡು ವಿಷಯಗಳನ್ನು ಹೇಳಿದ್ದಾರೆ.

**ಶ್ರೀ ಜಗದೀಶ್. ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು):– ಮಾನ್ಯ ಸಭಾಪತಿಗಳೆ,** ಮಾನ್ಯ ಹುಲಿನಾಯ್ಕರ್‌ರವರು ಕೊಟ್ಟಿರುವ ಸಲಹೆಗಳನ್ನು ನಾನು consider ಮಾಡುತ್ತೇನೆ. ಯಾವ ಶಾಸಕರ ಸಲಹೆಗಳನ್ನು ಕೊಟ್ಟಿದ್ದಾರೆ ಅವುಗಳನ್ನು ನಾನು ಬರೆದುಕೊಂಡಿದ್ದೇನೆ. ಬರುವಂತಹ ದಿನಗಳಲ್ಲಿ ಅವುಗಳನ್ನು ಸರಿಯಾಗಿ execute ಮಾಡುತ್ತೇನೆ. ಆದ್ದರಿಂದ ದಯಮಾಡಿ ಈ ಮಸೂದೆಗೆ ಸದನ ಅನುಮೋದನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಪುಟ್ಟಣ್ಣನವರು ಏನು ಹೇಳಿದ್ದಾರೆಂದರೆ, ಆ ವಿಚಾರದಲ್ಲಿ ತಾವು ಆಮೇಲೆ ಮಾಡಬಹುದು, ಆದರೆ ಈಗ ಮಾಡುತ್ತೇವೆ ಎನ್ನುವಂತಹ ಮಾತನ್ನು ಸ್ಪಷ್ಟವಾಗಿ ತಿಳಿಸಿದರೆ ಅದರಲ್ಲಿ ತಪ್ಪೇನೂ ಇಲ್ಲ.

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಇದರ ಬಗ್ಗೆ consider ಮಾಡಿದ್ದೇನೆ. ನಾನು ಈಗಾಗಲೇ ಹೇಳಿದ್ದೇನೆ. ಅವರು ಸಲಹೆ, ಸೂಚನೆಗಳ ಬಗ್ಗೆ ನಾನು ಚರ್ಚೆ ಮಾಡಿಕೊಂಡು ನಾನು ಆದಷ್ಟು ಬೇಗನೆ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ರಾಜ್ಯದ ಮುಖ್ಯಮಂತ್ರಿಗಳಾದಂತಹ ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರು ಒಳ್ಳೆಯ ಆಯವ್ಯಯವನ್ನೇನು ಕೊಟ್ಟಿದ್ದಾರೆ, ಅದಕ್ಕಾಗಿ ನಾನು ಅವರಿಗೆ ಮೊದಲು ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಹಾವೇರಿ ಜಿಲ್ಲೆಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಯವರು ಆಯವ್ಯಯದಲ್ಲಿ ಏನು ಅನುದಾನವನ್ನು ಮೀಸಲಿಟ್ಟಿದ್ದಾರೆ, ಅದಕ್ಕಾಗಿ ಆ ಜಿಲ್ಲೆಯ ಪರವಾಗಿ ಕೂಡ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮೇಲಾಗಿ ಹಾವೇರಿ ಜಿಲ್ಲೆಯಲ್ಲಿ ಸುಮಾರು ಇಪ್ಪತ್ತೈದು ಸಾವಿರ ಎಕರೆ ಜಮೀನಿಗೆ ತುಂತುರು ನೀರಾವರಿ ಸೌಲಭ್ಯವನ್ನು ಕಲ್ಪಿಸುವ ಮುಖಾಂತರ ಇಡೀ ರಾಷ್ಟ್ರದಲ್ಲಿಯೇ ಒಳ್ಳೆಯ ನೀರಾವರಿ ಕ್ಷೇತ್ರವನ್ನಾಗಿ ಮಾಡಿದ್ದಾರೆ. ಮುಂಗಾರು ಮತ್ತು ಹಿಂಗಾರು ಮಳೆಗಳು ಚೆನ್ನಾಗಿ ಬಿದ್ದರೆ ಆ ನೀರನ್ನು ತುಂತುರು ನೀರಾವರಿ ಮುಖಾಂತರ ಉಪಯೋಗಿಸಿಕೊಂಡು ರೈತರು ಒಳ್ಳೆಯ ರೀತಿಯಲ್ಲಿ ಜೀವನವನ್ನು ಸಾಗಿಸುವುದಕ್ಕೆ ಅವಕಾಶವಾಗುತ್ತದೆ. ಶಿಗ್ಗಾವಿ ತಾಲ್ಲೂಕಿನಲ್ಲಿ ಯಾವ ರೀತಿಯ ಕೃಷಿ ಪದ್ಧತಿಯನ್ನು ಅನುಸರಿಸಿದ್ದಾರೆ, ಅದನ್ನು ಇಡೀ ರಾಜ್ಯದಲ್ಲಿ ಅಳವಡಿಸಬೇಕೆಂದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ.

ಮಾನ್ಯ ಮುಖ್ಯಮಂತ್ರಿಗಳು ಈ ಸಾಲಿನ ಆಯವ್ಯಯದಲ್ಲಿ ಶಿಕ್ಷಣಕ್ಕೆ ಬಹಳಷ್ಟು ಒತ್ತನ್ನು ಕೊಟ್ಟಿದ್ದಾರೆ. ಶಿಕ್ಷಣಕ್ಕೆ ಸುಮಾರು 18,670 ಸಾವಿರ ಕೋಟಿ ರೂಪಾಯಿಗಳಷ್ಟು ಮೀಸಲಿಟ್ಟಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಳನ್ನರ್ಪಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಅನುದಾನಿತ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ಸರ್ಕಾರದ ವತಿಯಿಂದ ನೀಡಲಾಗುತ್ತಿರುವ ವಿಚಾರ ತಮಗೆಲ್ಲರಿಗೂ ಗೊತ್ತಿದೆ. ಆದರೆ ಅನುದಾನರಹಿತ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ನೀಡುತ್ತಿಲ್ಲ ಎನ್ನುವಂತಹ ವಿಚಾರ ನಾನು ಇತ್ತೀಚೆಗೆ ಅಂತಹ ಶಾಲೆಯೊಂದಕ್ಕೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ನನ್ನ ಗಮನಕ್ಕೆ ಬಂತು. ಆ ಬಗ್ಗೆ ಆ ಶಾಲೆಯ ಮಕ್ಕಳು ನನಗೆ ಒಂದು ಮನವಿ

ಪತ್ರವನ್ನು ಸಹ ಕೊಟ್ಟಿದ್ದಾರೆ. ಇದು ಕಣ್ಣಲ್ಲಿ ನೀರು ಬರುವಂತಹ ವಿಚಾರ. ಅದಕ್ಕಾಗಿ ಅನುದಾನರಹಿತ ಶಾಲೆಗಳ ವಿದ್ಯಾರ್ಥಿಗಳಿಗೂ ಕೂಡ ಮುಂದಿನ ಶೈಕ್ಷಣಿಕ ವರ್ಷದಿಂದ ಮಧ್ಯಾಹ್ನದ ಈ ಬಿಸಿಯೂಟದ ಕಾರ್ಯಕ್ರಮವನ್ನು ವಿಸ್ತರಿಸಬೇಕೆಂದು ಈ ಸಂದರ್ಭದಲ್ಲಿ ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ.

## 4) ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

**ಕಾರ್ಯದರ್ಶಿ:–** ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತೇನೆ.

1. ಕರ್ನಾಟಕ ಧನವಿನಿಯೋಗ ವಿಧೇಯಕ, 2013
2. ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 2013
3. ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2013
4. ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2013
5. ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ವಿಧೇಯಕ, 2013
6. ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕ, 2013
7. ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2013
8. ಮೈಸೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕ, 2013
9. ಕರ್ನಾಟಕ ಮೋಟಾರು ವಾಹನಗಳ ತೆರಿಗೆ(ತಿದ್ದುಪಡಿ) ವಿಧೇಯಕ, 2013

10. ಕರ್ನಾಟಕ ಕೆಲವು ಅಧಿನಿಯಮಗಳು ಮತ್ತು ಪ್ರಾದೇಶಿಕ ಕಾನೂನುಗಳನ್ನು ನಿರಸನಗೊಳಿಸುವ ವಿಧೇಯಕ, 2013

11. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ (ತಿದ್ದುಪಡಿ) ವಿಧೇಯಕ, 2013

12. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2013

**5) ಶಾಸನ ರಚನೆ**

**ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

**ಕರ್ನಾಟಕ ಧನವಿನಿಯೋಗ ವಿಧೇಯಕ, 2013**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ನೇ ಸಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:–** "ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 2013**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:–** "ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3 ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2013**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 11 ರವರೆಗೆ**

**ಸಭಾಪತಿಯವರು:–** "ಖಂಡ 2 ಮತ್ತು 11 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 11 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ

ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಶಾಸನ ರಚನೆ**

**ವಿಧೇಯಗಳನ್ನು ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2013**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:–** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3 ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಪೀಠಿಕೆ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ಪೀಠಿಕೆ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, "ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ವಿಧೇಯಕ, 2013**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ **ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) (ತಿದ್ದುಪಡಿ) ವಿಧೇಯಕವನ್ನು** ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರೀಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ಮತ್ತು 9ರವರೆಗೆ**

**ಸಭಾಪತಿಯವರು:-** "ಖಂಡ 2 ರಿಂದ 9ರವರೆಗೆ ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 9ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಪೀಠಿಕೆ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ಪೀಠಿಕೆ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, "ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ, 2013**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ಮತ್ತು 4**

**ಸಭಾಪತಿಯವರು:-** "ಖಂಡ 2 ರಿಂದ 4 ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 4 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಪೀಠಿಕೆ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ಪೀಠಿಕೆ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, "ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2013**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):–** ಸನ್ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ಮತ್ತು 4**

**ಸಭಾಪತಿಯವರು:–** "ಖಂಡ 2 ರಿಂದ 4 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 4 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಪೀಠಿಕೆ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ಪೀಠಿಕೆ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, "ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ

2013ರ ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

(7 ಘಂಟೆ)

## ಮೈಸೂರು ಅರಮನೆ (ಅರ್ಜನೆ ಮತ್ತು ವರ್ಗಾವಣೆ)(ತಿದ್ದುಪಡಿ) ವಿಧೇಯಕ 2013

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಮೈಸೂರು ಅರಮನೆ(ಅರ್ಜನೆ ಮತ್ತು ವರ್ಗಾವಣೆ)(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಮೈಸೂರು ಅರಮನೆ(ಅರ್ಜನೆ ಮತ್ತು ವರ್ಗಾವಣೆ)(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

ಖಂಡ 2

**ಸಭಾಪತಿಯವರು:–** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ಪ್ರಸ್ತಾವದ ಅಂಗೀಕಾರ**

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಮೈಸೂರು ಅರಮನೆ(ಅರ್ಜನೆ ಮತ್ತು ವರ್ಗಾವಣೆ)(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಮೈಸೂರು ಅರಮನೆ(ಅರ್ಜನೆ ಮತ್ತು ವರ್ಗಾವಣೆ)(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**ಕರ್ನಾಟಕ ಮೋಟಾರು ವಾಹನಗಳ ತೆರಿಗೆ(ತಿದ್ದುಪಡಿ) ವಿಧೇಯಕ, 2013**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ವಿ. ಸೋಮಣ್ಣ (ಸಭಾನಾಯಕರು) (ಶ್ರೀ ಆರ್. ಅಶೋಕ್, ಉಪಮುಖ್ಯಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

ಖಂಡ 2

**ಸಭಾಪತಿಯವರು:–** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ಪ್ರಸ್ತಾವದ ಅಂಗೀಕಾರ**

**ಶ್ರೀ ವಿ. ಸೋಮಣ್ಣ (ಸಭಾನಾಯಕರು) (ಶ್ರೀ ಆರ್. ಅಶೋಕ್, ಉಪಮುಖ್ಯಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**ಕರ್ನಾಟಕ ಕೆಲವು ಅಧಿನಿಯಮಗಳು ಮತ್ತು ಪ್ರಾದೇಶಿಕ ಕಾನೂನುಗಳನ್ನು ನಿರಶನಗೊಳಿಸುವ ವಿಧೇಯಕ, 2013**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ವಿ. ಸೋಮಣ್ಣ (ಸಭಾನಾಯಕರು) (ಶ್ರೀ ಎಸ್. ಸುರೇಶ್ ಕುಮಾರ್, ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಕೆಲವು ಅಧಿನಿಯಮಗಳು ಮತ್ತು ಪ್ರಾದೇಶಿಕ ಕಾನೂನುಗಳನ್ನು ನಿರಶನಗೊಳಿಸುವ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಕೆಲವು ಅಧಿನಿಯಮಗಳು ಮತ್ತು ಪ್ರಾದೇಶಿಕ ಕಾನೂನುಗಳನ್ನು ನಿರಶನಗೊಳಿಸುವ ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

ಖಂಡ 2 ರಿಂದ 4

**ಸಭಾಪತಿಯವರು:–** "ಖಂಡ 2 ರಿಂದ 4 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2ರಿಂದ 4 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ಪ್ರಸ್ತಾವದ ಅಂಗೀಕಾರ**

**ಶ್ರೀ ವಿ. ಸೋಮಣ್ಣ (ಸಭಾನಾಯಕರು) (ಶ್ರೀ ಆರ್. ಅಶೋಕ್, ಉಪಮುಖ್ಯಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಕೆಲವು ಅಧಿನಿಯಮಗಳು ಮತ್ತು ಪ್ರಾದೇಶಿಕ ಕಾನೂನುಗಳನ್ನು ನಿರಶನಗೊಳಿಸುವ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಕೆಲವು ಅಧಿನಿಯಮಗಳು ಮತ್ತು ಪ್ರಾದೇಶಿಕ ಕಾನೂನುಗಳನ್ನು ನಿರಶನಗೊಳಿಸುವ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

## ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ (ತಿದ್ದುಪಡಿ) ವಿಧೇಯಕ 2013

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ವಿ. ಸೋಮಣ್ಣ (ಸಭಾನಾಯಕರು) (ಶ್ರೀ ಎಸ್. ಸುರೇಶ್ ಕುಮಾರ್, ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

ಖಂಡ 2 **ಸಭಾಪತಿಯವರು:–** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ಪ್ರಸ್ತಾವದ ಅಂಗೀಕಾರ**

**ಶ್ರೀ ವಿ. ಸೋಮಣ್ಣ (ಸಭಾನಾಯಕರು) (ಶ್ರೀ ಆರ್. ಅಶೋಕ್, ಉಪಮುಖ್ಯಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ)(ತಿದ್ದುಪಡಿ) ವಿಧೇಯಕ 2013**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಎಸ್.ಕೆ. ಬೆಳ್ಳುಬ್ಬಿ (ಕೃಷಿ ಮಾರುಕಟ್ಟೆ, ಹಜ್ ಹಾಗೂ ವಕ್ಫ್ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ

ರೂಪದಲ್ಲಿರುವ 2013ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ)(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ)(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

ಖಂಡ 2 ರಿಂದ 5

**ಸಭಾಪತಿಯವರು:–** "ಖಂಡ 2 ರಿಂದ 5 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2ರಿಂದ 5 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ಪ್ರಸ್ತಾವದ ಅಂಗೀಕಾರ**

**ಶ್ರೀ ಎಸ್.ಕೆ. ಬೆಳ್ಳುಬ್ಬಿ (ಕೃಷಿ ಮಾರುಕಟ್ಟೆ, ಹಜ್ ಹಾಗೂ ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ)(ತಿದ್ದುಪಡಿ) ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ)(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

## 6. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿ:-** ಮಾನ್ಯ ಸಭಾಪತಿಗಳೆ, ತಮ್ಮ ಅನುಮತಿ ಮೇರೆಗೆ ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ "ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ವಿಧೇಯಕ-2013 ಸಭೆಯ ಮುಂದೆ ಇಡುತ್ತೇನೆ.

## ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ-2013

## ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

ಖಂಡ 2

**ಸಭಾಪತಿಯವರು:–** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 40 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

## 6.A. ಪ್ರಕಟಣೆ

**ಸಭಾಪತಿಯವರು:–**

ಮಾನ್ಯ ವಿಧಾನಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳಿಗೆ ಕರ್ನಾಟಕ ವಿಧಾನಸಭೆಯು ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 121ರ ಮೇರೆಗೆ ವಿಧಾನಸಭೆಯು ದಿನಾಂಕ:15–2–2013ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅನುಮೋದಿಸಿತೆಂದು ಸದನದ ಗಮನಕ್ಕೆ ತರಲಾಗಿದೆ.

1) ಗಾರ್ಡನ್ ಸಿಟಿ ವಿಶ್ವವಿದ್ಯಾಲಯ ವಿಧೇಯಕ–2013
2) ಶ್ರೀನಿವಾಸ ವಿಶ್ವವಿದ್ಯಾಲಯ ವಿಧೇಯಕ–2013
3) ವೈದೇಹಿ ವಿಶ್ವವಿದ್ಯಾಲಯ ವಿಧೇಯಕ–2013
4) ಜೆ.ಎಸ್.ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ ವಿಧೇಯಕ–2013

**ಸಭಾಪತಿಯವರು:–** ವಿಧಾನ ಪರಿಷತ್ತಿನ 121ನೇ ಅಧಿವೇಶನವನ್ನು ಮುಂದೂಡುವ ಪೂರ್ವದಲ್ಲಿ ಸದರಿ ಅಧಿವೇಶನದಲ್ಲಿ ನಡೆದ ಕಾರ್ಯಕಲಾಪಗಳ ವಿವರಗಳನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ನಿನ್ನೆ ಮಂತ್ರಿಗಳಿಂದ ಹೇಳಿಕೆ ಮಾಡಿಸುತ್ತೇನೆ ಎಂದು ನಿನ್ನೆ ಹೇಳಿದ್ದೀರಿ.

**ಸಭಾಪತಿಯವರು:–** ಅದರ ಬಗ್ಗೆ ನಿನ್ನೆ ನಾನು ruling ಕೊಟ್ಟಿದ್ದೇನೆ. ಅವರು ಏನು ಹೇಳುವ ಅವಶ್ಯಕತೆ ಇಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಸದನದಲ್ಲಿ ಹೇಳುತ್ತೇವೆ ಎಂದು ನಿನ್ನೆಯು ಹೇಳಲಾಗಿದೆ. ಇವತ್ತು ಬೆಳಗ್ಗೆಯು ಹೇಳಿದ್ದಾರೆ.

**ಸಭಾಪತಿಯವರು:–** ನಿನ್ನೆ ನಾನು ಅದರ ಬಗ್ಗೆ ruling ಕೊಟ್ಟಿದ್ದೇನೆ. ಮತ್ತೆ ಏಕೆ ಅದರ ಬಗ್ಗೆ ಚರ್ಚೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಈಶ್ವರಪ್ಪನವರು ಬಂದ ಮೇಲೆ ಹೇಳಿಕೆ ಮಾಡಿಸುತ್ತೇವೆ ಎಂದು ಅವರು ಹೇಳಿದ್ದಾರೆ. ನೀವು ಒಮ್ಮೆಗೆ ಸದನವನ್ನು .....

**ಸಭಾಪತಿಯವರು:–** ನಿನ್ನೆ ದಿವಸ ಈ ವಿಷಯವನ್ನು ಎತ್ತಿದಾಗ, ಕೆಲವು ಪ್ರಶ್ನೆಗಳನ್ನು ಎತ್ತಲಾಯಿತು. ಇದರಲ್ಲಿ ಏನು ತಪ್ಪು ಇಲ್ಲ, ಸರಿ ಇದೆ ಎಂದು ನಾನು ಸಭಾಪತಿ ಸ್ಥಾನದಿಂದ ruling ಕೊಟ್ಟಿದ್ದೇನೆ. ಈಗ ಅವರು ಕೇಳುತ್ತಿರುವುದು, ಸರ್ಕಾರ ಇಟ್ಟಿರುವ ವರದಿ ಆಧಾರದ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು. ಅದಕ್ಕೆ ಮಾತ್ರ ಉತ್ತರ ಹೇಳಿ.

**ಶ್ರೀ ಬಸವರಾಜ ಹೊರಟ್ಟಿ:–** 10,000 ಕೋಟಿ ರೂ.ಗಳ ಅವ್ಯವಹಾರವಾಗಿದೆ. ಅದರ ಬಗ್ಗೆ ಹೇಳಿಕೆ ಮಾಡುತ್ತೇವೆ ಎಂದು ಸರ್ಕಾರ ಹೇಳಿದೆ.

**ಸಭಾಪತಿಯವರು:–** ನನ್ನ rulingಗೆ ಏನು ಬೆಲೆ ಇಲ್ಲವೆ? ಅದು ಆಗುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಹೇಳಿಕೆ ಮಾಡಿಸುತ್ತೇನೆ ಎಂದು ತಾವು ನಿನ್ನೆ ruling ಕೊಟ್ಟಿದ್ದಿರಲ್ಲ.

**ಸಭಾಪತಿಯವರು:–** ಅದು ಆದ ಮೇಲೆ ruling ಕೊಟ್ಟಿದ್ದೇನೆ. ಏನು ಹೇಳಿಕೆ ಮಾಡಿಸಬೇಕು?

**ಶ್ರೀ ಬಸವರಾಜ ಹೊರಟ್ಟಿ:–** ಅವರು ಏನು ಹೇಳಿಕೆ ಕೊಡುತ್ತಾರೆ ನಮಗೇನು ಗೊತ್ತು. 10,000 ಕೋಟಿರೂಪಾಯಿಗಳ ಅವ್ಯವಹಾರವಾಗಿದೆ ಎಂದು ಆಡಳಿತ ಪಕ್ಷದ ಸದಸ್ಯರು ಹೇಳಿದ್ದಾರೆ. ಅದಕ್ಕೆ ಹೇಳಿಕೆ ಕೊಡಿಸುತ್ತೇವೆ ಎಂದು ಸಭಾನಾಯಕರು ಹೇಳಿದ್ದಾರೆ. ಅದರ ಪ್ರಕಾರ ಹೇಳಿಕೆಯನ್ನು ಕೊಡಿಸಿ.

**ಶ್ರೀ ಎಸ್.ಆರ್. ಪಾಟೀಲ್:–** 10,000 ಕೋಟಿ ರೂ.ಗಳ ದೊಡ್ಡ scandal ಆಗಿದೆ ಎಂದು ಆಡಳಿತ ಪಕ್ಷದ ಸದಸ್ಯರೆ ಹೇಳಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ (ಉಪಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಗಳೆ, ಸರ್ಕಾರಿ ಭೂಮಿಯನ್ನು ಖಾಸಗಿ ಭೂಮಿ ಎಂದು ಹೇಳುವಂತಹ ಪ್ರಕರಣ ಮೈಸೂರಿನಲ್ಲಿ ನಡೆದಿರುವ ಬಗ್ಗೆ ಆದೇಶವನ್ನು ಜಿಲ್ಲಾಧಿಕಾರಿಗಳು ಕೊಟ್ಟಿರುವುದು ನಿಜ. ಅದು ತಪ್ಪು ಎನ್ನುವ ವಿಚಾರವನ್ನು ಅವತ್ತೆ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಮದುಸೂದನ್‌ರವರು ಪತ್ರಿಕಾ ಗೋಷ್ಠಿಯಲ್ಲಿ ಹೇಳಿದ ಹಿನ್ನೆಲೆಯಲ್ಲಿ, ತಕ್ಷಣವೇ ನಾನು ಜಿಲ್ಲಾಧಿಕಾರಿಗಳನ್ನು ಕಡತ ಸಹಿತ ಬರುವಂತೆ ಕರೆದು ಚರ್ಚೆ ಮಾಡಿದಾಗ, ಮಾಡಿರುವುದು ತಪ್ಪು ಎನ್ನುವುದನ್ನು ಅವರೇ ಒಪ್ಪಿಕೊಂಡರು. ತಪ್ಪಾಗಿದೆ ಎಂದು ಅವರಿಂದಲೇ ಬರೆಯಿಸಿ ಅದನ್ನು cancel ಕೂಡಾ ಮಾಡಿಸಿದ್ದೆ. ಜೊತೆಗೆ ಇದರ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೂ ನಾನು ಪತ್ರ ಬರೆದು, ಇದರ ಬಗ್ಗೆ ತನಿಖೆಯಾಗಬೇಕು ಎಂದು ತಿಳಿಸಿದ್ದೇನೆ. ಅದರ ಪ್ರಕಾರ ಅವರು ತನಿಖೆಯನ್ನು ಮಾಡಿಸಿ ವರದಿ ಕೊಟ್ಟಿದ್ದಾರೆ. ನಿನ್ನೆ ಬೆಳಗ್ಗೆ ತಾನೆ ತನಿಖಾ ವರದಿ ನನಗೆ ಬಂದಿದೆ. ಅದನ್ನು ನಾನು ಪೂರ್ಣವಾಗಿ ಗಮನಿಸುತ್ತೇನೆ. ಇದರಲ್ಲಿ ಜಿಲ್ಲಾಧಿಕಾರಿಗಳನ್ನು ಸೇರಿ ಮತ್ತೆ ಯಾರು ತಪ್ಪಿತಸ್ಥರು ಎನ್ನುವುದನ್ನು ಕಂಡು ಹಿಡಿದು ಒಬ್ಬರನ್ನು ಬಿಡದೆ, ಯಾವ ಪ್ರಭಾವಕ್ಕೂ ಮಣಿಯದೆ ತಪ್ಪಿತಸ್ಥರ ಮೇಲೆ ಖಂಡಿತವಾಗಿ ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:–** ಧನ್ಯವಾದಗಳು, ಈಗ ದಯಮಾಡಿ ಇದರ ಬಗ್ಗೆ ಚರ್ಚೆ ಬೇಡಿ. ಏನು ಅಂದರ ಬಗ್ಗೆ ಚರ್ಚೆ ಮಾಡುತ್ತೀರಾ?

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಅದರ ಹಿಂದೆ ಯಾರು ಇದ್ದಾರೆ ಅದನ್ನು ಪತ್ತೆ ಹಚ್ಚಿ ಅವರ ಮೇಲೆಯು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಮತ್ತೆ ಇದನ್ನು ಲೋಕಾಯುಕ್ತಕ್ಕೆ refer ಮಾಡಿಬಿಡಿ.

**ಸಭಾಪತಿಯವರು:–** ಇದರ ಮೇಲೆ ಚರ್ಚೆ ಮಾಡುತ್ತೀರಾ?

**ಶ್ರೀ ಎಸ್.ಆರ್. ಪಾಟೀಲ್:–** ತನಿಖೆ ಮಾಡಬೇಕಾಗುತ್ತದೆ, Who is going to enquire? Who is the authority to enquire? ಅದನ್ನು ಹೇಳಬೇಕಾಗುತ್ತದೆ.

**ಸಭಾಪತಿಯವರು:–** ಹೇಳುತ್ತಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಲೋಕಾಯುಕ್ತಕ್ಕೆ ಕೊಟ್ಟುಬಿಡಿ ನಮ್ಮದೇನು ಅಭ್ಯಂತರವಿಲ್ಲ.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:–** ಒಂದು ನಿಮಿಷ ಕುಳಿತುಕೊಳ್ಳಿ. ತಾವು ಎಲ್ಲಾ ಮಂತ್ರಿಗಳಾಗಿ ಕೆಲಸ ಮಾಡಿದವರು. ನಾನು ಹೇಳುವುದನ್ನು ಕೇಳಿ ಸ್ವಲ್ಪ. ನೀವು ಮಂತ್ರಿಗಳಾಗಿದ್ದಾಗ, ನಾವು ವಿರೋಧ ಪಕ್ಷದಲ್ಲಿದಾಗ, ನಾವು ಇದೇ ರೀತಿ ಯಾವುದಾದ್ದರು ಪ್ರಕರಣವನ್ನು ಲೋಕಾಯುಕ್ತಕ್ಕೆ ಕೊಡಿ ಎಂದು ಹೇಳಿದ ತಕ್ಷಣ ಕೊಟ್ಟುಬಿಟ್ಟದ್ದೀರಾ?

**ಶ್ರೀ ಬಸವರಾಜ ಹೊರಟ್ಟಿ:–** ನಿಮ್ಮ ಪಕ್ಷದ ಸದಸ್ಯರೆ 10,000 ಕೋಟಿ ರೂ.ಗಳ ಅವ್ಯವಹಾವಾಗಿದೆ ಎಂದು ಹೇಳಿದ್ದಾರೆ. ಅಲ್ಲಿ ಲೂಟಿಯಾಗಿದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ನಮ್ಮ ಶಾಸಕರು ಅಷ್ಟು ಪ್ರಮಾಣಿಕರಾಗಿದ್ದಾರೆ, ನೋಡಿ ಸಂತೋಷಪಡಿ. ಆಡಳಿತ ಪಕ್ಷದ ಸದಸ್ಯರು, ಯಾವುದೇ ಸರ್ಕಾರ ಅಧಿಕಾರ ಲೂಟಿ ಮಾಡಲು ಅವಕಾಶಕೊಡುವುದಿಲ್ಲ ಎನ್ನುವುದಕ್ಕೆ ಸಾಕ್ಷಿಯೇ ಭಾರತೀಯ ಜನತಾ ಪಾರ್ಟಿಯ ಶಾಸಕರು.

(ಗೊಂದಲ)

**ಸಭಾಪತಿಯವರು:–** ಮಂತ್ರಿಗಳು ಹೇಳುವುದನ್ನು ಕೇಳಿ. ಕೇಳಲೇ ತಯಾರಿಲ್ಲ ಎಂದರೆ ಹೇಗೆ?

**ಶ್ರೀ ಮರಿತಿಬ್ಬೇಗೌಡ:–** ನಿಮ್ಮ ಪಕ್ಷದ ಸದಸ್ಯರೆ ಆರೋಪ ಮಾಡಿದ್ದಾರೆ.

**ಸಭಾಪತಿಯವರು:–** ಮರಿತಿಬ್ಬೇಗೌಡರೆ ಕುಳಿತುಕೊಳ್ಳಿ. ಜಾಸ್ತಿಯಾಯಿತು ನಿಮ್ಮದು.

**ಶ್ರೀ ಕೆ.ಎಸ್. ಈಶ್ವರಪ್ಪ:–** ವಿರೋಧ ಪಕ್ಷದವರು ಮಾಡಬೇಕಾಗಿರುವ ಕೆಲಸವನ್ನು ಆಡಳಿತ ಪಕ್ಷದ ಶಾಸಕರು ಮಾಡಿದ್ದಾರೆ.

**Sri S.R. PATIL:-** Then you refer it to Lokayukta for detailed enquiry.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ವಿರೋಧ ಪಕ್ಷದ ನಾಯಕರು ಈ ರೀತಿ ಮಾಡಿದರೆ ನಾನೇನು ಮಾಡಲಿ? ಒಂದು ನಿಮಿಷ ತಡೆಯಲಿ. ನಿನ್ನೆ ವರದಿ ಬಂದಿದ್ದು, ಅದಿನ್ನು ನನ್ನ ತನಕ ಬಂದಿಲ್ಲ. ಆದರೆ ನನ್ನ ಗಮನಕ್ಕೆ ಬಂದಿದೆ. ಲೋಕಾಯುಕ್ತ ಅಥವಾ ಸಿಬಿಐಗೆ ಕೊಡಬೇಕು ಎಂದು ಆ ವರದಿಯನ್ನು ನೋಡಿ ನಿರ್ಧಾರ ಮಾಡಬೇಕು. ಸರ್ಕಾರ ರಚನೆ ಮಾಡಿರುವ ಅವರೇ ಹೇಳಲಿ. ಅವರು ಹೇಳಿದ ತಕ್ಷಣ ಲೋಕಾಯುಕ್ತ ಅಥವಾ ಸಿಬಿಐಗೆ ಕೊಡುವುದಕ್ಕೆ ಆಗುತ್ತದೆಯೇ? ದಯವಿಟ್ಟು ನನ್ನ ಮಾತನ್ನು ಕೇಳಬೇಕು. ಈ ವಿಚಾರವನ್ನು ಮೊದಲು ಯಾರೂ ಪ್ರಸ್ತಾಪ ಮಾಡಲಿಲ್ಲ.

(ಗೊಂದಲ)

ನನಗೆ ಅವರು ಮಾತನಾಡುವುದಕ್ಕೆ ಬಿಡದೇ ವಿರೋಧ ಪಕ್ಷಕ್ಕೆ ಫಿಟ್ ಎಂದು ತೋರಿಸುತ್ತಿದ್ದಾರೆ. ಆದರೆ ಸ್ಪಷ್ಟವಾಗಿ ನಮ್ಮ ಪಕ್ಷದ ಶಾಸಕರು..... ಮಾನ್ಯ ಸಭಾಪತಿಯವರೇ, ಸರ್ಕಾರಿ ಆಸ್ತಿಯನ್ನು ಯಾವುದೇ ಕಾರಣಕ್ಕೂ ಕಬಳಿಸುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು 24 ಗಂಟೆಗಳಲ್ಲಿ ಕಡತವನ್ನು ತರಿಸಿ ರದ್ದುಪಡಿಸಲಾಗಿದೆ. ರಾಜ್ಯದ ಇಹಿಹಾಸದಲ್ಲಿ ಇಂತಹ ಉದಾಹರಣೆ ಯಾವುದು ಇಲ್ಲ, ಆದರೆ ಇದನ್ನು ನಾವು ಮಾಡಿದ್ದೇವೆ. ಇದಾದ ನಂತರ ಅದರ ಬಗ್ಗೆ ತನಿಖೆಗೂ ಆದೇಶ ಮಾಡಿದ್ದು, ವರದಿ ನಿನ್ನೆ ಬಂದಿದೆ ಎಂದು ನನಗೆ ಸುದ್ದಿ ಸಿಕ್ಕಿದ್ದು, ಇನ್ನೂ ವರದಿ ನನಗೆ ತಲುಪಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಅದು ತಪ್ಪಲ್ಲವೇ?

**ಸಭಾಪತಿಯವರು:–** ಇದರಲ್ಲಿ ತಪ್ಪು ಅಥವಾ ತಕರಾರು ಏನು ಎಂದು ನನಗೆ ಗೊತ್ತಾಗಲಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ನಾನು ವರದಿ ಬಂದಿಲ್ಲ ಎಂದು ಹೇಳಿಲ್ಲ. ವರದಿ ಬಂದಿದೆ.

**ಶ್ರೀ ಬಸವರಾಜ ಹೊರಟ್ಟಿ:–** ದಯಮಾಡಿ ಮಾನ್ಯ ಸಚಿವರು ಮಾತನಾಡಿರುವುದನ್ನು ನೋಡಬೇಕು. ವರದಿ ಈಗ ಬಂದಿದೆ ಎಂದಿದ್ದಾರೆ. ನಿನ್ನೆ ಮಾತನಾಡುವಾಗ ಮಾನ್ಯ ಮಧುಸೂದನ್‌ರವರು ವರದಿ ತಂದಿದ್ದಾರೆ ಎಂದು ಹೇಳಿದ್ದಕ್ಕೆ ಪ್ರತಿಯಾಗಿ ಅವರು ಸರ್ಕಾರದ ರೀತಿ–ನೀತಿಗಳು ಇವೆ, ವರದಿ ಎಲ್ಲಿ ಮತ್ತು ಹೇಗೆ ಬರಬೇಕು, ಅವರ ಕಡೆ ಹೇಗೆ ಬಂದಿತು ಹಾಗೂ ಸದನದ ಆಸ್ತಿ ಎಂಬ ಪ್ರಶ್ನೆ ಬಂದಾಗ ಮಾನ್ಯ ಸಚಿವರ ಕಡೆ ಕೊಡಲಿ ಎಂದು ಹೇಳಿದೆವು. ಅದರಂತೆ ವರದಿ ಕೊಟ್ಟರು. 10 ಸಾವಿರ ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ ಎಂದು ಆಡಳಿತ ಪಕ್ಷದ ಸದಸ್ಯರು ಹೇಳಿದಾಗ......

**ಸಭಾಪತಿಯವರು:–** ಅದನ್ನು ವಿಚಾರಣೆ ಮಾಡುವುದು ಬೇಡವೆ? ಅದೇನು ತೀರ್ಪೆ?

**ಶ್ರೀ ಬಸವರಾಜ ಹೊರಟ್ಟಿ:–** ನಂತರ ಇದರ ಹಿಂದೆ ಅಧಿಕಾರಿಗಳು ಇರದೇ ಬೇರೆಯವರು ಇದ್ದಾರೆ, ಮಂತ್ರಿಗಳು ಇದ್ದಾರೆ ಎನ್ನುವ ಭಾವನೆಯನ್ನು ವ್ಯಕ್ತಪಡಿಸಿದರು. ಆದ್ದರಿಂದ ಅದನ್ನು ಮುಚ್ಚಿಕೊಳ್ಳುವುದಕ್ಕೆ ಹೋಗಬಾರದು ಎಂದೆಲ್ಲಾ ಆಯಿತು.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಮತ್ತೆ ಸ್ಪಷ್ಟ ಮಾಡುತ್ತೇನೆ, ಇದರಲ್ಲಿ ಯಾರಿದ್ದಾರೆ ಮತ್ತು ಯಾರಿಲ್ಲ ..... ಅವರೂ ಮಂತ್ರಿಗಳಾಗಿದ್ದವರು, ಆ ತನಿಖಾ ವರದಿ ಸಾಕಷ್ಟು ಇದೆ. ಅದನ್ನು ನೋಡಿದ ನಂತರ ಯಾರು ತಪ್ಪಿತಸ್ಥರು ಎಂಬುದನ್ನು .......

(ಗೊಂದಲ)

ಅದನ್ನು ನೋಡದೇ ಮಾಡುವುದಕ್ಕೆ ಆಗುತ್ತದೆಯೇ ಎಮಬುದನ್ನು ಸರ್ಕಾರ ಮಾಡಿರುವ ಅವರೂ ಹೇಳಲಿ. ನೋಡದೆ refer ಮಾಡುವುದಕ್ಕೆ ಆಗುತ್ತದೆಯೇ?

**ಶ್ರೀ ಎಸ್.ಆರ್. ಪಾಟೀಲ್:-** ನೋಡಿ ನಂತರ refer ಮಾಡಲಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಅದಕ್ಕೋಸ್ಕರ ಸ್ವಲ್ಪ ತಡೆಯಲಿ.

**ಶ್ರೀ ಎಸ್.ಆರ್. ಪಾಟೀಲ್:-** ನನಗೂ ಜವಾಬ್ದಾರಿ ಇದೆ, ನೋಡದೇ ರೆಫರ್ ಮಾಡಿ ಎಂದು ಹೇಳಿಲ್ಲ. You have a look at it and then refer it to the Lokayukta.

**ಶ್ರೀ ಕೆ.ಎಸ್. ಈಶ್ವರಪ್ಪ:-** ನಾನು ಜವಾಬ್ದಾರಿ ಇಲ್ಲ ಎಂದು ಹೇಳಲಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಆಳುವ ಪಕ್ಷದ ಶಾಸಕರು 10 ಸಾವಿರ ಕೋಟಿ ರೂಪಾಯಿಗಳ ಅವ್ಯವಹಾರ ಆಗಿದೆ ಎಂದು ಹೇಳಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಹತ್ತು ಸಾವಿರ ಕೋಟಿ ರೂಪಾಯಿಗಳಲ್ಲದೇ ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳ ಅವ್ಯವಹಾರ ಆಗಿರಬಹುದು. ನಾನು ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳ ಅವ್ಯವಹಾರ ಆಗಿದೆ ಎಂದು ಹೇಳುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳಲ್ಲದೇ ಇನ್ನೂ ಹೆಚ್ಚಿಗೆ ಆಗಿರಬಹುದು.

**ಶ್ರೀ ಕೆ.ಎಸ್. ಈಶ್ವರಪ್ಪ:-** ಆಗಿರಬಹುದು, ಅದು ಗೊತ್ತಿಲ್ಲ. ಆದ್ದರಿಂದ ಹೇಳುತ್ತಿದ್ದೇನೆ. 10 ಸಾವಿರ ಕೋಟಿ ರೂಪಾಯಿಗಳು ಎಂದರೆ ಅದೇ ತೀರ್ಮಾನವೇ?

**Sri S.R. PATIL:-** It is the biggest scandal. You produce the document and then refer into the Investigating Agency.

**ಶ್ರೀ ಕೆ.ಎಸ್. ಈಶ್ವರಪ್ಪ:-** ವಿಚಾರಣೆ ಮಾಡುವುದು ಬೇಡವೇ?

**ಶ್ರೀ ಎಸ್.ಆರ್. ಪಾಟೀಲ್:-** ಯಾರೋ ಒಬ್ಬರು ವಿಚಾರಣೆ ಮಾಡುತ್ತಾರೆ, ವಿಚಾರಣೆಯನ್ನು ಇವರು ಮಾಡುತ್ತಾರೆಯೇ?

**ಸಭಾಪತಿಯವರು:-** ಯಾರು ಮಾಡಬೇಕೆಂದು ಅವರು ತೀರ್ಮಾನ ಮಾಡಲಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಆ ವರದಿಯನ್ನು ನೋಡಿದರೆ ತಾನೇ ಗೊತ್ತಾಗುವುದು. ಅದನ್ನು ನೋಡುವುದು ಬೇಡವೇ?

(ಗೊಂದಲ)

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಲೋಕಾಯುಕ್ತಕ್ಕೆ ವರದಿಯನ್ನು ಕೊಟ್ಟಿದ್ದರೂ ಏನು ಕ್ರಮ ತೆಗೆದುಕೊಂಡಿಲ್ಲ. ಆದರೆ ಈ ವಿಚಾರದಲ್ಲಿ ಇನ್ನೂ ವರದಿ ಬಂದಿದೆ ಅಷ್ಟೇ.

**ಶ್ರೀ ಕೆ.ಎಸ್. ಈಶ್ವರಪ್ಪ:-** ನಾನು ಮತ್ತೊಮ್ಮೆ ಸ್ಪಷ್ಟ ಮಾಡುವುದೇನೆಂದರೆ, ಯಾವುದೇ ವ್ಯಕ್ತಿಗಳಿಗೆ, ಯಾವುದೇ ಸರ್ಕಾರಿ ಅಧಿಕಾರಿಗಳಿಗೆ ರಕ್ಷಣೆ ಮಾಡಲು ಈ ಸರ್ಕಾರ ಇಲ್ಲ.

**ಶ್ರೀ ಬಸವರಾಜ ಹೊರಟ್ಟಿ:-** ಅದರಲ್ಲಿ ರಾಜಕಾಣಿಗಳು ಇದ್ದಾರೆ ಎಂದು ಹೇಳಿರುವುದರಿಂದ ನಾವು ಕೇಳುತ್ತಿದ್ದೇವೆ.

**ಸಭಾಪತಿಯವರು:-** ಅವರು ಇದ್ದರೆ ಅವರ ಮೇಲೂ ಕ್ರಮ ಆಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ನಾನು ಪ್ರಾರಂಭದಲ್ಲಿ ಯಾರೇ ಇದ್ದರೂ ಎಂದು ಹೇಳಿದ್ದೇನೆ. ಅಂದರೆ ಅವರಿಗೆ ಕನ್ನಡ ಭಾಷೆ ಬರುತ್ತದೆ ಎಂದು ನಾನು ಭಾವಿಸುತ್ತೇನೆ. ಯಾರೇ ಇದ್ದರೂ ಎಂದರೆ ಅರ್ಥ ಏನು?

**ಶ್ರೀ ಬಸವರಾಜ ಹೊರಟ್ಟಿ:-** ನಾವು ಅವರಷ್ಟು ಬುದ್ಧಿವಂತರಲ್ಲ!.

**ಶ್ರೀ ಕೆ.ಎಸ್. ಈಶ್ವರಪ್ಪ:-** ಹೌದು, ಬಹಳ ದಡ್ಡರು, ಅದಕ್ಕೆ ಈ ಬದುಕು ಮಾಡುತ್ತಿದ್ದಾರೆ. ಮಾನ್ಯ ಸಭಾಪತಿಯವರೇ, ನಾವು ತುಂಬಾ ಸ್ಪಷ್ಟ

ಮತ್ತು ಸೀರಿಯಸ್ಸಾಗಿ ತೆಗೆದುಕೊಂಡಿರುವುದರಿಂದಲೇ ಮಾನ್ಯ ಸದಸ್ಯರು ಪ್ರಸ್ತಾಪ ಮಾಡುವುದಕ್ಕೆ ಮುಂಚೆಯೇ ಸರ್ಕಾರವು ವಿಚಾರಣೆಗೆ ಕಳುಹಿಸಿದೆ. ಅದರ ವರದಿಯು ನಿನ್ನೆ ಬಂದಿದೆ. ಅದನ್ನು ನೋಡುತ್ತೇವೆ. ನಂತರ ಈ ವಿಚಾರವನ್ನು ಲೋಕಾಯುಕ್ತಕ್ಕೆ ಕೊಡುವುದು ಸೂಕ್ತವೋ ಅಥವಾ ಸಿಬಿಐಗೆ ಕೊಡುವುದು ಸೂಕ್ತವೋ ಎಂಬ ಬಗ್ಗೆ ಗಮನಿಸುತ್ತೇನೆ. ಇದರಲ್ಲಿ ಖಂಡಿತವಾಗಿ ತಪ್ಪಿತಸ್ಥರನ್ನು ರಕ್ಷಣೆ ಮಾಡುವ ಪ್ರಶ್ನೆಯೇ ಇಲ್ಲ. ಇದರ ಬಗ್ಗೆ ಸದನಕ್ಕೆ ಆಶ್ವಾಸನೆ ಕೊಡುತ್ತೇನೆ.

## 7. ಸಾರಾಂಶ

**ಸಭಾಪತಿಯವರು:–** ಧನ್ಯವಾದಗಳು.

ವಿಧಾನ ಪರಿಷತ್ತಿನ 121ನೇ ಅಧಿವೇಶನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುವ ಪೂರ್ವದಲ್ಲಿ ಸದರಿ ಅಧಿವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನ ದಿನಾಂಕ: 04.02.2013 ರಿಂದ 15.02.2013ರವರೆಗೆ ಒಟ್ಟು 10 ದಿನಗಳು ನಡೆಸಲಾಗಿರುತ್ತದೆ.

ದಿನಾಂಕ: 04.02.2013 ರಂದು ಮಧ್ಯಾಹ್ನ 12.00 ಗಂಟೆಗೆ ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಭಾಷಣ ಮಾಡುವುದರೊಂದಿಗೆ ಕಾರ್ಯಕಲಾಪ ಪ್ರಾರಂಭಗೊಂಡಿತು. ರಾಜ್ಯಪಾಲರ ಭಾಷಣದ ನಂತರ ಮಧ್ಯಾಹ್ನ 12.39 ಗಂಟೆಗೆ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಕಾರ್ಯಕಲಾಪಗಳು ಪ್ರಾರಂಭವಾಯಿತು. ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಮಂಡಿಸಲಾಯಿತು. ದಿನಾಂಕ: 07.02.2013 ರಂದು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ಮಂಡಿಸಿದ ವಂದನಾರ್ಪಣಾ ನಿರ್ಣಯವನ್ನು ಸದನವು ಅಂಗೀಕರಿಸಿತು.

ಕಳೆದ ಅಧಿವೇಶನದ ನಂತರ ಮೃತರಾದ ಗಣ್ಯರುಗಳಿಗೆ ಸದನವು ತನ್ನ ಸಂತಪವನ್ನು ವ್ಯಕ್ತಪಡಿಸಿತು.

ದಿನಾಂಕ: 08.02.2013ರಂದು 2013–14ನೇ ಸಾಲಿನ ಆಯವ್ಯಯ ಅಂದಾಜು ಹಾಗೂ ರಾಜ್ಯದಲ್ಲಿ ಮೂರನೇ ಬಾರಿಗೆ ಪ್ರತ್ಯೇಕವಾಗಿ ಕೃಷಿ ಆಯವ್ಯಯ ಅಂದಾಜುಗಳನ್ನು ಸಭೆಯ ಮುಂದೆ ಮಂಡಿಸಲಾಗಿರುತ್ತದೆ. ಆಯವ್ಯಯ ಅಂದಾಜು ಹಾಗೂ ಕೃಷಿ ಆಯವ್ಯಯ ಅಂದಾಜುಗಳ ಮೇಲೆ ಚರ್ಚೆಯಾಗಿ ಸರ್ಕಾರದಿಂದ ಉತ್ತರಿಸಲಾಗಿರುತ್ತದೆ ಹಾಗೂ ಭಾರತ ಸಂವಿಧಾನದ 205(1)(ಎ)ನೆಯ ಅನುಚ್ಛೇದದ ಮೇರೆಗೆ 2012–13ನೇ ಸಾಲಿನ ಪೂರಕ ಅಂದಾಜುಗಳನ್ನು (ಮೂರನೇ ಮತ್ತು ಅಂತಿಮ ಕಂತನ್ನು) ಒಪ್ಪಿಸಲಾಯಿತು.

ದಿನಾಂಕ: 11.02.2013ರಮದು ಘನ ಸರ್ವೋಚ್ಛ ನ್ಯಾಯಾಲಯವು ಕಾವೇರಿ ನದಿ ನೀರಿನ ಬಿಡುಗಡೆ ಸಂಬಂಧದಲ್ಲಿ ನೀಡಿರುವ ಐತೀರ್ಪಿನ ಮೇಲೆ ಮೇಲ್ಮನವಿ ಸಲ್ಲಿಸಲು ಒತ್ತಾಯಿಸುವ ಕುರಿತು ನಿರ್ಣಯವನ್ನು ಸದನವು ಸರ್ವಾನುಮತದಿಂದ ಅಂಗೀಕರಿಸಿತು.

ಸಬೆಯ ಮುಂದಿಡಲಾಗುವ ಕಾಗದ ಪತ್ರಗಳ ಒಂದನೇ, ಎರಡನೇ ಮತ್ತು ಮೂರನೇ ಪಟ್ಟಿಗಳು, ಹಕ್ಕುಬಾಧ್ಯತಾ ಸಮಿತಿಯ 70ನೇ ಮತ್ತು 71ನೇ ವರದಿಗಳನ್ನು, ಕರ್ನಾಟಕ ವಿಧಾನ ಮಂಡಲದ ಅಧೀನ ಶಾಸನ ರಚನಾ ಸಮಿತಿಯ 40ನೇ ವರದಿಯನ್ನು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ (ಆರ್ಥಿಕ ಇಲಾಖೆಗೆ ಸಂಬಂಧಿಸಿದಂತೆ 1989–90 ರಿಂದ 2010–11ನೇ ಸಾಲಿನ ಆರ್ಥಿಕ ವರ್ಷಗಳ ಭಾರತದ ಲೆಕ್ಕ ನಿಯಂತ್ರಕರು ಮತ್ತು ಲೆಕ್ಕಪರಿಶೋಧಕರ ಧನವಿನಿಯೋಗ ಮತ್ತು ಲೆಕ್ಕ ಪತ್ರ ಮೇಲಿನ) ವರದಿಯನ್ನು ಹಾಗೂ ಖಾಸಗಿ ಸದಸ್ಯರುಗಳ ವಿಧೇಯಕ ಮತ್ತು ನಿರ್ಣಯಗಳ ಸಮಿತಿಯ ಮೊದಲನೇ ವರದಿಯನ್ನು ಸದನದಲ್ಲಿ ಮಂಡಿಸಲಾಯಿತು.

ಪ್ರಸಕ್ತ ಅಧಿವೇಶನ ಸಂದರ್ಭದಲ್ಲಿ ಸಾರ್ವಜನಿಕ ವಿಚಾರಗಳಿಗೆ ಸಂಬಂಧಿಸಿದಂತೆ ಆರು ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲಾಯಿತು.

ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು 31ನೇ ಮಾರ್ಚ್, 2012ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ (ಅ) ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು (ಆ) ಸಾಮಾನ್ಯ ಮತ್ತು ಸಾಮಾಜಿಕ ವಲಯ (ಇ) ರಾಜಸ್ವ ಸ್ವೀಕೃತಿಗಳು (ಈ) ಸಾರ್ವಜನಿಕ ವಲಯ ಉದ್ಯಮಗಳ ಮೇಲಿನ ಹಾಗೂ (ಉ) ಆರ್ಥಿಕ ವಲಯ ವರದಿಗಳನ್ನು ಮಂಡಿಸಲಾಯಿತು.

ಪ್ರಸ್ತುತ ಅಧಿವೇಶನದಲ್ಲಿ 327 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 71 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳಾಗಿ ಅಂಗೀಕರಿಸಿದ್ದು, 68 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು ಹಾಗೂ ಒಟ್ಟು 252 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪೈಕಿ, 219 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರವನ್ನು ಮಂಡಿಸಲಾಯಿತು.

ನಿಯಮ 72ರಡಿಯಲ್ಲಿ 75 ಸೂಚನೆಗಳನ್ನು ಸ್ವೀಕರಿಸಿ ಆ ಪೈಕಿ 08 ಸೂಚನೆಗಳನ್ನು ಸದನದಲ್ಲಿ ಚರ್ಚಿಸಿ ಉತ್ತರಿಸಲಾಗಿರುತ್ತದೆ. ನಿಯಮ 330 ರಡಿಯಲ್ಲಿ 42 ಸೂಚನೆಗಳನ್ನು ಸ್ವೀಕರಿಸಿ ಆ ಪೈಕಿ 02 ಸೂಚನೆಗಳನ್ನು ಸದನದಲ್ಲಿ ಚರ್ಚಿಸಿ ಉತ್ತರಿಸಲಾಗಿರುತ್ತದೆ. ಶೂನ್ಯ ವೇಳೆಯ 24 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, 14 ಸೂಚನೆಗಳಿಗೆ ಉತ್ತರಿಸಲಾಯಿತು.

ಪ್ರಸ್ತುತ ಅಧಿವೇಶನದಲ್ಲಿ 01 ನಿಲುವಳಿ ಸೂಚನೆಯನ್ನು ಸ್ವೀಕರಿಸಿದ್ದು ನಿಯಮ 68ಕ್ಕೆ ಪರಿವರ್ತಿಸಲಾಗಿರುತ್ತದೆ. ನಿಯಮ 68ರಡಿಯಲ್ಲಿ 01 ಸೂಚನೆಯನ್ನು ಸ್ವೀಕರಿಸಿದ್ದು ಚರ್ಚೆಗೆ ತೆಗೆದುಕೊಂಡಿರುವುದಿಲ್ಲ. ಹಕ್ಕುಚ್ಯುತಿ ಸೂಚನೆಯೊಂದನ್ನು ಸದನದಲ್ಲಿ ಮಂಡಿಸಲಾಯಿತು.

ವಿಧಾನ ಪರಿಷತ್ತಿನಲ್ಲಿ ಮಂಡಿಸಲಾದ 13 ವಿಧೇಯಕಗಳು ಮತ್ತು ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 14 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಅಂಗೀಕಾರವನ್ನು ನೀಡಿರುತ್ತದೆ.

ಮಾನ್ಯ ಮುಖ್ಯಮಂತ್ರಿಗಳಿಗೆ, ಸಭಾನಾಯಕರಿಗೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ, ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ

ಮಂತ್ರಿ ವರ್ಗದವರಿಗೆ, ವಿವಿಧ ಶಾಸಕಾಂಗ ಪಕ್ಷದ ನಾಯಕರುಗಳಿಗೆ, ಪತ್ರಿಕಾ ಹಾಗೂ ಮಾಧ್ಯಮಗಳ ವರದಿಗಾರರಿಗೆ ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ ಮತ್ತು ನೌಕರ ವರ್ಗದವರಿಗೆ ಮತ್ತು ಸರ್ಕಾರದ ಎಲ್ಲಾ ಅಧಿಕಾರಿ ನೌಕರ ವೃಂದದವರಿಗೆ, ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

(7.30 ಘಂಟೆ)

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):–** ಸನ್ಮಾನ್ಯ ಸಭಾಪತಿಯವರೇ, ಈ ದಿನ ಅಧಿವೇಶನದ ಕೊನೆಯ ದಿನವಾಗಿದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯಕಲಾಪಗಳು ದಿನಾಂಕ:04.02.2013ರಿಂದ ಇಲ್ಲಿಯವರೆಗೆ ಉತ್ತಮವಾಗಿ ಸುಗಮವಾಗಿ ನಡೆದು ಬಂದಿದೆ. ಅದಕ್ಕೆ ತಮ್ಮ ನೇತೃತ್ವವೇ ಕಾರಣವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಯಾವುದೇ ರೀತಿಯ ಸಂಘರ್ಷವಿಲ್ಲದೆ, ಪ್ರತಿ ಪಕ್ಷಗಳು ಸದನದ ಬಾವಿಗೆ ಹೋಗಿ ಧರಣಿ ಕುಳಿತ ಯಾವುದೇ ಘಟನೆಗಳು ನಡೆಯದೇ, ಎಲ್ಲ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ಶಾಂತ ರೀತಿಯಿಂದ ಸದನವನ್ನು ನಡೆಸಿಕೊಂಡು ಹೋಗುವುದಕ್ಕೆ ಸಹಕರಿಸಿದ್ದಾರೆ. ಟೀಕೆ ಮಾಡುವುದು ಪ್ರತಿ ಪಕ್ಷದವರ ಹಕ್ಕು, ಆಡಳಿತ ಪಕ್ಷ ಆ ಟೀಕೆಗಳಿಗೆ ಸ್ಪಂದಿಸಬೇಕಾಗುತ್ತದೆ. ಆಗ ಮಾತ್ರ ಉತ್ತಮವಾಗಿರುವಂತಹ ಚರ್ಚೆಗಳು ಸದನದಲ್ಲಿ ನಡೆಯುವುದಕ್ಕೆ ಸಾಧ್ಯವಿದೆ. ಈ ನಿಟ್ಟಿನಲ್ಲಿ ವಿಧಾನ ಪರಿಷತ್ತಿನ ಕಾರ್ಯಕಲಾಪಗಳು ನಡೆದಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಅದೇ ರೀತಿಯಲ್ಲಿ ವಿಧಾನಸಭೆಯಲ್ಲಿಯೂ ಸಹ ಧರಣಿ, ಸಂಘರ್ಷ ಯಾವುದೂ ಇಲ್ಲದೆ ಸದನದ ಕಾರ್ಯಕಲಾಪವು ಸುಗಮವಾಗಿ ನಡೆದಿವೆ. ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಂದ ಬಹಳ ರಚನಾತ್ಮಕವಾಗಿರುವಂತಹ ಸಲಹೆ ಸೂಚನೆಗಳು ಬಂದಿವೆ. ಆಡಳಿತ ಪಕ್ಷವಾಗಿ ನಾವು ಆ ಸಲಹೆ ಸೂಚನೆಗಳಿಗೆ ಸ್ಪಂದಿಸುವಂತಹ ಕೆಲಸವನ್ನು ಮಾಡಿದ್ದೇವೆ. ಒಬ್ಬ ಮುಖ್ಯಮಂತ್ರಿಯಾಗಿ ನಾನು ಮತ್ತು ನನ್ನ ಸಚಿವ ಸಂಪುಟದ ಎಲ್ಲ ಸದಸ್ಯರು ನಮ್ಮ ಇಲಾಖೆಗಳಿಗೆ ಸಂಬಂಧಪಟ್ಟ ವಿಚಾರಗಳು ಪ್ರಸ್ತಾಪವಾದಾಗ,

ಅದಕ್ಕೆ ಮೌಖಿಕವಾಗಿ ಸಮಪರ್ಕವಾದ ಉತ್ತರವನ್ನು ಕೊಡುವುದು ಮತ್ತು ಉತ್ತರಗಳನ್ನು ಮಂಡನೆ ಮಾಡುವ ಕೆಲಸವನ್ನು ಸಮರ್ಥವಾಗಿ ಮಾಡಿದ್ದೇವೆ. ವಿರೋಧ ಪಕ್ಷದ ಶಾಸಕರು ಇರಬಹುದು ಅಥವಾ ಆಡಳಿತ ಪಕ್ಷದ ಶಾಸಕರು ಇರಬಹುದು ಎಲ್ಲರೂ ಬಹಳಷ್ಟು ವಿಚಾರಗಳ ಮೇಲೆ ನಡೆದಂತಹ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ವಿಧಾನ ಪರಿಷತ್ತು 75 ಜನ ಸದಸ್ಯರನ್ನು ಒಳಗೊಂಡಿದೆ. ಅಷ್ಟೂ ಜನ ಸದಸ್ಯರು ಸದನದಲ್ಲಿ ನಡೆಯುವಂತಹ ಚರ್ಚೆಯಲ್ಲಿ ಭಾಗವಹಿಸಬೇಕೆನ್ನುವ ಸ್ಪರ್ಧೆ ಇಲ್ಲಿ ಇದೆ. ಶಿಕ್ಷಕರ ಕ್ಷೇತ್ರದಿಂದ ಆರಿಸಿ ಬಂದವರು, ಪದವೀಧರರ ಕ್ಷೇತ್ರದಿಂದ ಆರಿಸಿ ಬಂದವರು, ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು, ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು ಮತ್ತು ನಾಮ ನಿರ್ದೇಶಿತ ಸದಸ್ಯರುಗಳು ಇರುವಂತಹ ಈ ಮನೆ ಚಿಂತಕರ ಚಾವಡಿ ಆಗಿದೆ. ಆದ್ದರಿಂದ ಈ ಮನೆಯಲ್ಲಿ ಗುಣಮಟ್ಟದ ಮತ್ತು ವಿಮರ್ಶಾತ್ಮಕ ಚರ್ಚೆಗಳು ಆಗುವುದಕ್ಕೆ ಸಾಧ್ಯವಾಗಿದೆ. ಅದನ್ನು ನಾನು ಪ್ರಶಂಸಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ನಾನು ಈ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರವನ್ನು ವಹಿಸಿಕೊಂಡು ಮೊನ್ನೆ 12ನೇ ತಾರೀಖಿಗೆ ಏಳು ತಿಂಗಳು ಮುಗಿದು ಎಂಟನೇ ತಿಂಗಳಿಗೆ ಕಾಲಿಟ್ಟಿದ್ದೇನೆ. ಈ ಏಳು ತಿಂಗಳಿನಲ್ಲಿ ಮೂರು ವಿಧಾನ ಮಂಡಲದ ಅಧಿವೇಶನವನ್ನು ನಡೆಸಿದ್ದೇವೆ. ಮೊದಲು ಬೆಂಗಳೂರಿನಲ್ಲಿ ಅಧಿವೇಶನವನ್ನು ನಡೆಸಲಾಗಿತ್ತು, ನಂತರ ಬೆಳಗಾವಿಯಲ್ಲಿ ಎರಡನೆಯ ಬಾರಿ ಅಧಿವೇಶನವನ್ನು ನಡೆಸಲಾಯಿತು ಮತ್ತು ಮೂರನೆಯ ಅದಿವೇಶನ ಈ ಅಧಿವೇಶನ. ಈ ಮೂರು ಅಧಿವೇಶನಗಳಲ್ಲಿ ಭಾಗವಹಿಸವಂತಹ ಅವಕಾಶ ನನಗೆ ದೊರಕಿದೆ. ಆ ಮನೆಯ ಸಭಾಧ್ಯಕ್ಷರು ಮತ್ತು ಈ ಮನೆಯ ಸಭಾಪತಿಯವರು ಹಾಗೂ ಎರಡೂ ಸದನದ ಸದಸ್ಯರು ಉತ್ತಮ ರೀತಿಯಲ್ಲಿ ಸಹಕಾರವನ್ನು ನೀಡಿದ್ದಾರೆ. ಬಹಳ ಒಳ್ಳೆಯ ರೀತಿಯಲ್ಲಿ ಸದನ ನಡೆಯುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಬೆಳಗಾವಿಯಲ್ಲಿಯೂ ಸಹ ಬಹಳ ಉತ್ತಮ ರೀತಿಯಲ್ಲಿ ಅಧಿವೇಶನ ನಡೆಯಿತು. ಇದರಿಂದ ನಮ್ಮ ಸರ್ಕಾರ ಹೆಚ್ಚು ಉತ್ತಮ

ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲವಾಗಿದೆ. ಬಹುಶಃ ಐದು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಯಾವ ಅನುಭವವನ್ನು ಪಡೆದುಕೊಳ್ಳಬಹುದಾಗಿತ್ತು ಅಷ್ಟು ಅನುಭವವನ್ನು ನಾನು ಈ ಏಳು ತಿಂಗಳಿನಲ್ಲಿ ಪಡೆದುಕೊಂಡಿದ್ದೇನೆ ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ಎಲ್ಲ ರೀತಿಯ ವಿಷಮ ಸ್ಥಿತಿಗಳನ್ನು ನಾವು ಎದುರಿಸಿ, ಪಾರಾಗಿ ಬಂದಿದ್ದೇವೆ. ಕಾವೇರಿ ನದಿ ನೀರಿ ವಿಚಾರ ಬಂದಾಗ, ಮೊನ್ನೆ ಈ ಸದನದಲ್ಲಿ ತಾವುಗಳು ಸರ್ವಾನುಮತದಿಂದ ಅಂಗೀಕಾರ ಮಾಡಿ ಕೊಟ್ಟಂಥ ನಿರ್ಣಯವನ್ನು ಇಲ್ಲಿ ನೆನಪು ಮಾಡಿಕೊಳ್ಳುವುದಕ್ಕೆ ಬಯಸುತ್ತಿದ್ದೇನೆ. ವಿಷಮ ಪರಿಸ್ಥಿತಿಗಳು ಬಂದಾಗ ವಿರೋಧ ಪಕ್ಷದವರು ಮತ್ತು ಆಡಳಿತ ಪಕ್ಷದವರು ಯಾವ ರೀತಿ ಒಂದಾಗಿ ಕೆಲಸ ಮಾಡುಬೇಕು ಎನ್ನುವುದಕ್ಕೆ ಇದೊಂದು ನಿದರ್ಶನವಾಗಿದೆ. ಸರ್ವೋಚ್ಛ ನ್ಯಾಯಾಲಯವು ತಮಿಳುನಾಡಿಗೆ 2.44 ಟಿ.ಎಂ.ಸಿ. ನೀರನ್ನು ಬಿಡಬೇಕು ಎನ್ನುವ ಆದೇಶವನ್ನು ನೀಡಿದ್ದ ಹಿನ್ನೆಲೆಯಲ್ಲಿ ಪುನರ್ ಪರಿಶೀಲನಾ ಅರ್ಜಿಯನ್ನು ಹಾಕಬೇಕೆನ್ನುವ ತೀರ್ಮಾನವನ್ನು ತೆಗೆದುಕೊಂಡಾಗ, ಈ ಮನೆಯ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಜೆ.ಡಿ.(ಎಸ್) ಪಕ್ಷದ ಮಾನ್ಯ ಬಸವರಾಜ ಹೊರಟ್ಟಿಯವರು ಒಂದು ನಿರ್ಣಯವನ್ನು ತಂದಾಗ, ಇಡೀ ಸದನ ಒಂದಾಗಿ ಆ ನಿರ್ಣಯಕ್ಕೆ ತನ್ನ ಒಪ್ಪಿಗೆಯನ್ನು ಕೊಟ್ಟಿತು. ಪುನರ್ ಪರಿಶೀಲನಾ ಅರ್ಜಿಯನ್ನು ತೆದೆದು ನೋಡಿದರೆ ಅದರಲ್ಲಿ, 'ಬೆಂಗಳೂರು ನಗರ ಮತ್ತು ಇತರ ಪಟ್ಟಣಗಳಿಗೆ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಚರ್ಚೆ ಮಾಡಿ ಒಂದು ನಿರ್ಣಯವನ್ನು ಅಂಗೀಕಾರ ಮಾಡಿದ್ದರು. ಅದರ ಆಧಾರದ ಮೇಲೆ ಇವತ್ತು ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಲಾಗುತ್ತಿದೆ' ಎಂದು ಇದೆ. ಪುನರ್ ಪರಿಶೀಲನಾ ಅರ್ಜಿಗೆ ಆ ನಿರ್ಣಯ ಶಕ್ತಿ ಕೊಡುವಂತಹ ಕೆಲಸವನ್ನು ಮಾಡಿದೆ. ವಿಧಾನ ಪರಿಷತ್ತು ಮತ್ತು ವಿಧಾನ ಸಭೆ ಎರಡೂ ಸದನಗಳಲ್ಲಿ ನಡೆಯುವಂತಹ ಉತ್ತಮವಾಗಿರುವ ಚರ್ಚೆಗಳು ಪ್ರಜಾಪ್ರಭುತ್ವ ವ್ಯವಸ್ಥೆಗೆ ಶಕ್ತಿ ತುಂಬುವುದಕ್ಕೆ ಸಹಾಯಕವಾಗಿವೆ. ಎರಡೂ ಸದನಗಳಲ್ಲಿ ಆಯವ್ಯಯವನ್ನು ಮಂಡಿಸಿ, ಅದರ ಮೇಲೆ ಚರ್ಚೆ ಆಗಿ, ಸದಸ್ಯರಿಂದ

ಟೀಕೆ–ಟಿಪ್ಪಣಿಗಳು ಬಂದು, ಕೊನೆಗೂ ಆಯವ್ಯಯಕ್ಕೆ ಎರಡು ಸದನಗಳಲ್ಲಿ ಅನುಮತಿ ದೊರೆತಿದೆ. ಇದರಿಂದಾಗಿ ಮುಂದಿನ ದಿನಗಳಲ್ಲಿ ಆರ್ಥಿಕ ಕಾರ್ಯ ಚಟುವಟಿಕೆಗಳನ್ನು ಮತ್ತು ಅಭಿವೃದ್ಧಿ ಕಾರ್ಯಗಳನ್ನು ನಡೆಸುವುದಕ್ಕೆ ಅನುಕೂಲವಾಗಿದೆ. ಅದಕ್ಕಾಗಿ ಎಲ್ಲ ಸದಸ್ಯರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಇದು ಈ ಸರ್ಕಾರದ ಕೊನೆಯ ಅಧಿವೇಶನ ಎಂದು ಕೆಲವರು ತಿಳಿದುಕೊಂಡಿದ್ದಾರೆ. ಆದರೆ, ಅದು ತಪ್ಪು ಕಲ್ಪನೆ. ಇನ್ನೂ ಮೇ ತಿಂಗಳವರೆಗೆ ಸಮಯವಿದೆ. ಅಲ್ಲಿಯವರೆಗೆ ಮತ್ತೊಮ್ಮೆ ಸದನವನ್ನು ಕರೆಯಬಾರದೆಂದು ನಿಯಮವೇನು ಇಲ್ಲ. ತುರ್ತು ವಿಷಯಗಳು ಬಂದಾಗ ಅದರ ಮೇಲೆ ಚರ್ಚೆ ಮಾಡುವುದಕ್ಕೆ ಮತ್ತೊಮ್ಮೆ ಅಧಿವೇಶನವನ್ನು ಕರೆಯಬಹುದಾಗಿದೆ. ಆದ್ದರಿಂದ ಇದು ಈ ಸರ್ಕಾರದ ಕೊನೆಯ ಅಧಿವೇಶನವೆಂದು ಯಾರೂ ಭಾವಿಸಬಾರದು. ಅಧಿವೇಶನ ಸುಗಮವಾಗಿ ನಡೆಯುವುದಕ್ಕೆ ಸಹಕಾರವನ್ನು ನೀಡಿದ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ನಿರ್ದಿಷ್ಟವಾಗಿ ತಮಗೆ ವಿಶೇಷವಾಗಿ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ತಾವು ಬಹಳ ತಾಳ್ಮೆಯಿಂದ ಮತ್ತು ಸಹನೆಯಿಂದ ಈ ಸದನವನ್ನು ನಡೆಸಿದ್ದೀರಿ. ತಮಗೂ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಇದೇ ತಿಂಗಳ ನಾಲ್ಕರಿಂದ ಪ್ರಾರಂಭವಾಗಿರುವ ವಿಧಾನ ಮಂಡಲದ ಅಧಿವೇಶನ ಈ ದಿನ ಮುಕ್ತಾಯದ ಹಂತಕ್ಕೆ ಬಂದಿದೆ. ಈ ಸಂದರ್ಭದಲ್ಲಿ ತಾವು ಪೀಠಾಧಿಪತಿಗಳಾಗಿ ಅತ್ಯುತ್ತಮ ರೀತಿಯಿಂದ ಅಧಿವೇಶನವನ್ನು ನಡೆಸಿಕೊಂಡು ಹೋಗುವುದಕ್ಕೆ ಮಾರ್ಗದರ್ಶನವನ್ನು ನೀಡಿದ್ದೀರಿ. ಈ ಅಧಿವೇಶನದಲ್ಲಿ ವಿರೋಧ ಪಕ್ಷವು ಅಮೂಲ್ಯವಾಗಿರುವಂತಹ ಸಲಹೆ ಸೂಚನೆಗಳನ್ನು ನೀಡಿದೆ. ಆಯವ್ಯಯದ ಮೆಲೆ ಮತ್ತು ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವಂತಹ ಚರ್ಚೆಯಲ್ಲಿ ನಮ್ಮ ಪಕ್ಷ ಮತ್ತು ಜೆ.ಡಿ.(ಎಸ್) ಪಕ್ಷದ ಎಲ್ಲ ಸದಸ್ಯರು ಪ್ರಾಮಾಣಿಕತೆಯಿಂದ,

ಬದ್ಧತೆಯಿಂದ ಮತ್ತು ಸಮರ್ಥವಾಗಿ ಸಲಹೆಗಳನ್ನು ಮತ್ತು ಮಾರ್ಗದರ್ಶನವನ್ನು ಈ ಸರ್ಕಾರಕ್ಕೆ ನೀಡಿದೆ ಎಂದು ನಾನು ಭಾವಿಸುತ್ತೇನೆ. ವಿರೋಧ ಪಕ್ಷದವಾದ ನಾವು, 'ಮೈಸೂರಿನಲ್ಲಿ ಕಲ್ಲು ಹುಡುಕು'ವಂತಹ ಕೆಲಸವನ್ನು ಮಾಡಿಲ್ಲ. ಟೀಕೆಗಳನ್ನು ಮಾಡಿದ್ದರೂ ರಚನಾತ್ಮಕವಾದ ಟೀಕೆಗಳನ್ನು ಮಾಡಿದ್ದೇವೆ. ಎಲ್ಲಿ ಸರ್ಕಾರವನ್ನು ಎಚ್ಚರಿಸಬೇಕಾಗಿದೆ, ಅಂತಹ ಸಮಯದಲ್ಲಿ ಬದ್ಧತೆಯಿಂದ ಮತ್ತು ಪ್ರಾಮಾಣಿಕತೆಯಿಂದ ಸರ್ಕಾರಕ್ಕೆ ಸಲಹೆಗಳನ್ನು ಕೊಟ್ಟಿದ್ದೇವೆ ಮತ್ತು ಟೀಕೆಗಳನ್ನು ಮಾಡಿದ್ದೇವೆ. ಸರ್ಕಾರ ಸರಿ ದಾರಿಯಲ್ಲಿ ನಡೆಯಬೇಕು ಆ ಮೂಲಕ ರಾಜ್ಯದ ಜನತೆಗೆ ಜನಪರವಾಗಿರುವಂತಹ ಆಡಳಿತವನ್ನು ಕೊಡುವುದಕ್ಕೆ ಸಹಕಾರಿಯಾಗಬೇಕು ಎನ್ನುವ ನಿಟ್ಟಿನಲ್ಲಿ ಟೀಕೆ-ಟಿಪ್ಪಣಿಗಳನ್ನು ಮಾಡಿದ್ದೇವೆ. ಈಗಾಗಲೇ ಗೌರವಾನ್ವಿತ ಮುಖ್ಯಮಂತ್ರಿಗಳು ಹೇಳಿದಂತೆ ನಾಡಿನ ನೆಲ ಮತ್ತು ಜಲದ ಪ್ರಶ್ನೆ ಬಂದಾಗ, ಅದು ಆಳುವ ಪಕ್ಷದವರ ಜವಾಬ್ದಾರಿ ಎಂದು ನಾವು ಸುಮ್ಮನೆ ಕುಳಿತುಕೊಳ್ಳಲಿಲ್ಲ. ಒಂದು ಚರಿತಾರ್ಹವಾದ ನಿರ್ಣಯವನ್ನು ನಾನು ಮಂಡಿಸಿದೆ ಅದನ್ನು ಜೆ.ಡಿ.(ಎಸ್) ಪಕ್ಷದ ಸದಸ್ಯರಾದ ಮಾನ್ಯ ಬಸವರಾಜ ಹೊರಟ್ಟಿಯವರು ಅನುಮೋದಿಸಿದರು. ಇಡೀ ಸದನದ ಎಲ್ಲ ಸದಸ್ಯರು ಅದಕ್ಕೆ ತಮ್ಮ ಒಪ್ಪಿಗೆಯನ್ನು ನೀಡಿದರು.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ವಿರೋಧ ಪಕ್ಷದವರು ಮಂಡಿಸಿದ ನಿರ್ಣಯಕ್ಕೆ ಆಡಳಿತ ಪಕ್ಷದವರೂ ಸೇರಿದಂತೆ ಇಡೀ ಸದನ ಸರ್ವಾನುಮತದಿಂದ ತನ್ನ ಒಪ್ಪಿಗೆ ಸೂಚಿಸಿರುವುದು ನಿಜಕ್ಕೂ ಚರಿತಾರ್ಹವಾಗಿರುವ ಘಟನೆಯಾಗಿದೆ.

**ಶ್ರೀ ಎಸ್.ಆರ್. ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ತಾವು ಹೇಳಿದ ರೀತಿಯಲ್ಲಿ ನಿಜಕ್ಕೂ ಇದೊಂದು ಚರಿತಾರ್ಹ ಘಟನೆಯಾಗಿದೆ. ವಿರೋಧ ಪಕ್ಷದವರು ಮಂಡನೆ ಮಾಡಿದ ನಿರ್ಣಯಕ್ಕೆ ಆಡಳಿತ ಪಕ್ಷದವರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದು ಇದೆ ಮೊದಲ ಬಾರಿಯಾಗಿದೆ. ಆ ನಿರ್ಣಯದಲ್ಲಿ, ಕಾವೇರಿ ನದಿ ಕಣಿವೆಯ ರೈತರ ಪ್ರಶ್ನೆ ಮತ್ತು ಬೆಂಗಳೂರು ಪಟ್ಟಣ ಹಾಗೂ ಇತರ ಪಟ್ಟಣಗಳಿಗೆ ಕುಡಿಯುವ ನೀರನ್ನು ಒದಗಿಸುವ ಪ್ರಶ್ನೆ

ಅಡಕವಾಗಿತ್ತು. ಕಾವೇರಿ ನದಿ ನೀರಿನ ಬಗ್ಗೆ ನಿಜಕ್ಕೂ ನಮ್ಮ ಕಳಕಳಿ ಏನಿದೆ ಎನ್ನುವುದನ್ನು ಆ ನಿರ್ಣಯದ ಮೂಲಕ ನಾವು ಹೇಳಿದ್ದೇವೆ. ಆ ನಿರ್ಣಯ ಸರ್ವೋಚ್ಚ ನ್ಯಾಯಾಲಯದಲ್ಲಿ ಪುನರ್ ಪರಿಶೀಲನಾ ಅರ್ಜಿಯನ್ನು ಹಾಕುವುದಕ್ಕೆ ನಮ್ಮ ವಕೀಲರಿಗೆ ಅತ್ಯುತ್ತಮವಾಗಿರುವಂತಹ ತಳಹದಿ ಆಯಿತು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಒಟ್ಟಾರೆ ಹೇಳುವುದಾದರೆ, ವಿರೋಧ ಪಕ್ಷಗಳು ಬಹಳ ಸಮರ್ಥವಾಗಿ ನಾಡಿನ ಜನತೆಯ ಹಿತದೃಷ್ಟಿಯಿಂದ ರಚನಾತ್ಮಕವಾಗಿರುವಂತಹ ಸಲಹೆ ಸೂಚನೆಗಳನ್ನು ನೀಡುವ ಮೂಲಕ ಈ ಅಧಿವೇಶನ ಅತ್ಯಂತ ಯಶಸ್ವಿಯಾಗಿ ಕೊನೆಯ ಹಂತಕ್ಕೆ ಬಂದು ನಿಂತಿದೆ. ಈ ಯಶಸ್ಸಿಗೆ ತಾವು ಕಾರಣರಾಗಿದ್ದೀರಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಣ್ಣ-ಪುಟ್ಟ ಸಮಸ್ಯೆಗಳು ಇದ್ದೇ ಇರುತ್ತವೆ. ಅವುಗಳಿಗೆ ತಾವು ಸರಿಯಾದಂತಹ ರೀತಿಯಲ್ಲಿ ಮಾರ್ಗದರ್ಶನವನ್ನು ನೀಡಿ, ಸದನವನ್ನು ಉತ್ತಮ ರೀತಿಯಲ್ಲಿ ನಡೆಸುವ ನಿಟ್ಟಿನಲ್ಲಿ ವಿರೋಧ ಪಕ್ಷದವರಿಗೆ ಮತ್ತು ಆಳುವ ಪಕ್ಷದವರಿಗೆ ತಿಳುವಳಿಕೆ ನೀಡಿದ್ದೀರಿ. ಸಚಿವರು ಸದನದಲ್ಲಿ ಉಪಸ್ಥಿತರಿಲ್ಲದ ಅನೇಕ ಸಂದರ್ಭಗಳಲ್ಲಿ ಆಡಳಿತ ಪಕ್ಷದವರಿಗೂ ಸಹ ತಾವು ಚಾಟಿ ಏಟು ನೀಡಿದ್ದೀರಿ.

ಅಧಿಕಾರಿಗಳು ದೂರು ಉಳಿದಂಥ ಸಂದರ್ಭದಲ್ಲಿಯೂ ಸಹ ನೆನಪಿಸಿದಿರಿ. ನಮಗೂ ಕೂಡ ಭಾಷಣ ಮಾಡಿದ ನಂತರ ಯಾವ ರೀತಿಯಾಗಿ ನಡೆದುಕೊಳ್ಳಬೇಕು ಎನ್ನುವ ಮಾರ್ಗದರ್ಶನವನ್ನು ನೀಡಿದ್ದೀರಿ. ಅದಕ್ಕೆ ಇಷ್ಟು ಯಶಸ್ವಿಯಾಗಿ ಅಧಿವೇಶನ ನಡೆಯಲಿಕ್ಕೆ ತಾವು ದೊಡ್ಡದಾದಂಥ ಸಹಾಯ, ಸಹಕಾರ, ಮಾರ್ಗದರ್ಶನ ಮಾಡಿದ್ದಕ್ಕಾಗಿ ಮೊದಲು ನಿಮಗೆ ನಾನು ಹೃದಯಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಅದೇ ರೀತಿ ನಮ್ಮ ಉಪ ಸಭಾಪತಿಯವರು ಇಲ್ಲಿಯೇ ನನ್ನ ಪಕ್ಕದಲ್ಲಿದ್ದಾರೆ. ನಮ್ಮ ಸತ್ಸಂಪ್ರದಾಯದಂತೆ ಪ್ರತಿಪಕ್ಷ ಎಂದರೆ ನಾವು ಹಾಗೂ ಜೆಡಿ(ಎಸ್) ಪಕ್ಷದವರು ಜಂಟಿಯಾಗಿ ಅವರಿಗೂ ಕೂಡ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಪ್ರತಿಪಕ್ಷದಲ್ಲಿರುವಂಥ ಎಲ್ಲಾ ಶಾಸಕ ಮಿತ್ರರು ಬಹಳಷ್ಟು ಕ್ರಿಯಾಶೀಲವಾಗಿ, ಬದ್ಧತೆಯಿಂದ ಪ್ರತಿಪಕ್ಷದ ಜವಾಬ್ದಾರಿಯನ್ನು ಅತ್ಯಂತ

ಪ್ರಾಮಾಣಿಕತೆ, ದಕ್ಷತೆ, ನಿಷ್ಠೆಯಿಂದ ನಿರ್ವಹಿಸಲಿಕ್ಕೆ ಹೆಚ್ಚಿನ ಒಂದು ಹಾಜರಾತಿಯ ಮುಖಾಂತರ ಇವತ್ತು ಪ್ರತಿಪಕ್ಷ ಬಹಳ ಮಹತ್ತರವಾದಂಥ ಕಾರ್ಯವನ್ನು ಮಾಡಿದೆ. ಎಲ್ಲರೂ ಅತ್ಯುತ್ತಮವಾದ ರೀತಿಯಲ್ಲಿ ನೂರಕ್ಕೆ ನೂರರಷ್ಟು ಹಾಜರಾತಿಯನ್ನು ಕೊಡುವುದರಲ್ಲಿ ಪ್ರತಿಪಕ್ಷದ ಎಲ್ಲಾ ಶಾಸಕರು ಯಶಸ್ವಿಯಾಗಿದ್ದಾರೆ ಎನ್ನುವಂಥ ಮಾತನ್ನು ಹೇಳಿ, ಇವರೆಲ್ಲರಿಗೂ ನಮ್ಮ ಪಕ್ಷ ಹಾಗೂ ಜೆಡಿ(ಎಸ್) ಪಕ್ಷ, ಪ್ರತಿಪಕ್ಷದಲ್ಲಿರುವಂಥ ಎಲ್ಲಾ ಶಾಸಕ ಮಿತ್ರರಿಗೆ ನಾನು ಹೃದಯಪೂರ್ವಕವಾದ ಅಭಿನಂದನೆ, ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಅದಾದ ನಂತರ ನಮ್ಮ ಮುಖ್ಯಮಂತ್ರಿಗಳ ಬಗ್ಗೆ ಹೇಳುವುದಾದರೆ, ಅವರು ಬಹಳ ಸರಳ ಹಾಗೂ ಸಜ್ಜನಿಕೆಯ ವ್ಯಕ್ತಿ. ಅನೇಕ ಸಂದರ್ಭಗಳಲ್ಲಿ ಅಧಿವೇಶನ ನಡೆಯಲಾರದೆ, ರಾಜ್ಯದ ಜನರ ಸಮಸ್ಯೆಗಳನ್ನು ನಾವು ಚರ್ಚೆ ಮಾಡಲಾರದಂಥ ಸನ್ನಿವೇಶಗಳಿವೆ. ಮಾನ್ಯ ಬಸವರಾಜ ಹೊರಟ್ಟಿಯವರು ಮುಖ್ಯಮಂತ್ರಿಯವರ ಕಾಲ್ಗುಣದ ಬಗ್ಗೆ ಹೇಳಿದರು. ಆದರೆ ಶ್ರೀಮಾನ್ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾದಂಥ ಸಂದರ್ಭದಲ್ಲಿ....

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಯಾವ ರೀತಿ ಇದ್ದಾರೆಂದರೆ, ನೀವು ಏನು ಬೇಕಾದರೂ ಹೇಳಿ. ಅವರು ನಕ್ಕು ಸುಮ್ಮನೆ ಕುಳಿತುಕೊಂಡು ಬಿಡುತ್ತಾರೆ. ಅದೇ ಅವರ secret.

**Sri S.R. Patil:-** That is the secrecy. ಮಾನ್ಯ ಸಭಾಪತಿಯವರೇ, ನಮಗೆ ಬಹಳ ಮೆಚ್ಚುಗೆಯಾಗಿದೆ. ನಾವೂ ಸಹ ಬದ್ಧತೆಯಿಂದ ಕೆಲಸ ಮಾಡಲಿಕ್ಕೆ ಸಾಧ್ಯವಾಗಿದೆ. ನಮ್ಮ ಸಭಾನಾಯಕರು ಸಹ ಬಹಳ ಕ್ರಿಯಾಶೀಲವಾಗಿ ಅತ್ಯುತ್ತಮವಾದ ರೀತಿಯಿಂದ ಈ ಸದನವನ್ನು ನಡೆಸಿಕೊಂಡು ಹೋಗಲಿಕ್ಕೆ, ಆಳುವ ಪಕ್ಷ ಮತ್ತು ಪ್ರತಿಪಕ್ಷಗಳ ಮಧ್ಯದಲ್ಲಿ ಸಣ್ಣಪುಟ್ಟ ಘಟನೆಗಳಾದಾಗ ನೇರವಾಗಿ ನನ್ನ ಜೊತೆ ಮತ್ತು ಸದಸ್ಯರ ಜೊತೆಗೆ ತಮ್ಮ ಛೇಂಬರ್‌ನಲ್ಲಿ ಕುಳಿತು ಚರ್ಚೆ ಮಾಡಿ ಘರ್ಷಣೆಯಾಗಲಾರದಂತೆ ನೋಡಿಕೊಂಡಿದ್ದಾರೆ. ಘರ್ಷಣೆಯಾದರೂ ಕೂಡ ತ್ವರಿತವಾಗಿ ಶಮನ ಮಾಡಿ

ಮತ್ತೆ ಸದನದ ಕಲಾಪ ನಡೆಸಲಿಕ್ಕೆ ಮಾನ್ಯ ಸಭಾನಾಯಕರು ಸಹ ನಮಗೆ ಸಹಾಯವನ್ನು ಮಾಡಿದ್ದಾರೆ. ಅವರಿಗೂ ಸಹ ಅಭಿನಂದಿಸುತ್ತೇನೆ. ಅದೇ ರೀತಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೂ ಸಹ ನಾನು ಈ ಸಂದರ್ಭದಲ್ಲಿ ಅಭಿನಂದಿಸುತ್ತಿದ್ದೇನೆ. ಇಬ್ಬರು ಉಪ ಮಂತ್ರಿಗಳಿಗೆ ಹಾಗೂ ಎಲ್ಲಾ ಗೌರವಾನ್ವಿತ ಸಚಿವರುಗಳಿಗೆ, ವಿಶೇಷವಾಗಿ ಮಾನ್ಯ ಮಧುಸೂದನ್‌ರವರಿಗೆ ಮತ್ತು ಆಳುವ ಪಕ್ಷದ ಗೌರವಾನ್ವಿತ ಎಲ್ಲಾ ಸದಸ್ಯರಿಗೂ ನಾನು ಹೃದಯಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುವುದರ ಜೊತೆಗೆ ನಮ್ಮ ಅಧಿಕಾರಿ ಮಿತ್ರರಿಗೂ ಕೂಡ ಪ್ರತಿಪಕ್ಷದ ಪರವಾಗಿ ಅಭಿನಂದಿಸುತ್ತೇನೆ. ಎಲ್ಲದಕ್ಕಿಂತ ಮಿಗಿಲಾಗಿ ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾದ ಮಾಧ್ಯಮದ ಮಿತ್ರರಿಗೆ, ಅದು ದೂರದರ್ಶನ ಇರಬಹುದು, ಪ್ರಿಂಟ್ ಮೀಡಿಯಾ ಇರಬಹುದು, ಅವರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುವುದರ ಜೊತೆಗೆ ನಮ್ಮ ಕಾರ್ಯದರ್ಶಿಯವರಾದಿಯಾಗಿ ವಿಧಾನ ಮಂಡಲದ ಎಲ್ಲಾ ಅಧಿಕಾರಿ ಮಿತ್ರರಿಗೂ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ

**ಸಭಾಪತಿಯವರು:–** ಸದನವನ್ನು ಅನಿರ್ದಿಷ್ಟ ಕಾಲದವರೆವಿಗೂ ಮುಂದೂಡುತ್ತಿದ್ದೇನೆ.

**(ರಾಷ್ಟ್ರಗೀತೆಯೊಂದಿಗೆ ಸದನವನ್ನು ಮುಕ್ತಾಯಗೊಳಿಸಲಾಯಿತು)**

**(ಸದನವು ರಾತ್ರಿ 7 ಗಂಟೆ 44 ನಿಮಿಷಗಳಿಗೆ ಅನಿರ್ದಿಷ್ಟ ಕಾಲದವರೆವಿಗೂ ಮುಂದೂಡಲಾಯಿತು)**